*Pandit Teaches the Bible Series*

# Let's Read Hebrews!

## Kannada Edition

**Author: T. Pandit**

**Translator: Thabitha Joseph Jogal**

**Layout and editor of illustrations: Genie Cliff**

## About the book

This book is a college level textbook prepared a few years ago for a Bible college in South India.

It can also be used for Bible study groups in local churches and for individual students of the Bible. It was written it with the South Indian Christian context in mind.

T. Pandit has many years of experience as an educationist, a Bible teacher and a college principal, in India as well as in internationally. He is now retired.

Thabitha Joseph Jogal, translator and former lecturer in English, is based in Hubli-Dharwad in Karnataka.

Genie Cliff was formerly the administrator of Kannada Satyaveda College in Davangere.

July 2018

## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, **however**, object to to any republishing of this work in its entirety for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# ಇಬ್ರಿಯರಿಗೆ ಬರೆದ ಪತ್ರವನ್ನು ಓದೋಣ!

*ಮೊದಲನೆಯ ಕನ್ನಡ ಆವೃತ್ತಿ*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ತಬಿತಾ ಜೋಸೆಫ್ ಜೋಗಳ**

# Let's Read Hebrews! (Kannada Edition)

*by* **T. Pandit**

T. Pandit has many years of experience as an educationist, a Bible teacher and a college principal. He has been closely involved with Kannada Satyaveda College since its beginning in 2006.

This book is translated into Kannada by Thabitha Joseph Jogal from Hubli-Dharwad, who has worked as an English Lecturer for many years. Now she is involved in translating Christian literature and empowering women in prayer and the word of God.

Copyright © 2016 by Kannada Satyaveda College
Davangere, India
*e-mail:* ksc.ffpck@gmail.com
*Website:* www.ksc1.webs.com

*Illustrations*
**Mr Sarbasst Braian**

*Cover design, editing & layout*
**Genie Cliff** ⓓJLF.inc

This book has been produced in
few copies for private use.
It is not for sale.

ಎಲ್ಲಾ ಸತ್ಯವೇದ ವಚನಗಳನ್ನು
ನ್ಯೂ ಇಂಡಿಯಾ ಬೈಬಲ್ ವರ್ಶನ್‌ನಿಂದ
ತೆಗೆದುಕೊಳ್ಳಲಾಗಿದೆ.

****

# ಮುನ್ನುಡಿ

ಈ ಮಹಾವಿದ್ಯಾಲಯ ಮಟ್ಟದ ಪಠ್ಯಪುಸ್ತಕವು ದಕ್ಷಿಣ ಭಾರತದಲ್ಲಿನ ಸತ್ಯವೇದ ಮಹಾವಿದ್ಯಾಲಯಗಳಿಗಾಗಿ ಸಿದ್ಧಮಾಡಲ್ಪಟ್ಟಿದೆ. ಈ ಪಠ್ಯಪುಸ್ತಕವು ಕನ್ನಡ ಭಾಷಾಂತರದ ಆವೃತ್ತಿಯಾಗಿದೆ. ಈ ಪಠ್ಯಪುಸ್ತಕವು ಇಂಗ್ಲಿಷ್ ಆವೃತ್ತಿಯಲ್ಲಿಯೂ ಲಭ್ಯವಿದೆ. ಈ ಪಠ್ಯಪುಸ್ತಕವು ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯಲ್ಲಿರುವ *ಕನ್ನಡ ಸತ್ಯವೇದ ಮಹಾವಿದ್ಯಾಲಯಕ್ಕಾಗಿ* ಸಿದ್ಧಮಾಡಲ್ಪಟ್ಟು, ಅದೇ ಮಹಾವಿದ್ಯಾಲಯದಲ್ಲಿ ಬಳಸಲಾಗುತ್ತಿದೆ.

ಹಾಗಾದರೆ ಇದು ಯಾವ ರೀತಿಯ ಪಠ್ಯಪುಸ್ತಕವಾಗಿದೆ?

1. ಇದು ವಾಚಕವಾದದ್ದು: ವಿದ್ಯಾರ್ಥಿಗಳು ಹಿಬ್ರಿಯರಿಗೆ ಬರೆದ ಪತ್ರವನ್ನು ತಿಳುವಳಿಕೆಯೊಂದಿಗೆ ಓದಬೇಕೆಂದು ಅಪೇಕ್ಷಿಸಲ್ಪಟ್ಟಿದೆ. ವಿದ್ಯಾರ್ಥಿಗಳು ತಾವು ಓದಿದಂತವುಗಳ ಕುರಿತು ಆಲೋಚಿಸಲು ಈ ಪುಸ್ತಕದಲ್ಲಿರುವ ಅನೇಕ ಪ್ರಶ್ನೆಗಳು ಅವರನ್ನು ಪ್ರೋತ್ಸಾಹಿಸುತ್ತವೆ.

2. ಇದು ಒಂದು ಪಠ್ಯಪುಸ್ತಕವಾಗಿದೆ: ಈ ಪಠ್ಯಪುಸ್ತಕವು ಪಾಶ್ಚಾತ್ಯ ಜಗತ್ತಿನ ಮತ್ತು ಉನ್ನತ ಶಿಕ್ಷಣದ ಜ್ಞಾನವನ್ನು ಹೊಂದದ ದಕ್ಷಿಣ ಭಾರತದಲ್ಲಿರುವ ಸತ್ಯವೇದದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಲ್ಪಟ್ಟಿದೆ.

3. ಈ ಪಠ್ಯಪುಸ್ತಕವು ಅನುಭವರಹಿತ ಮತ್ತು ಬಹುಶಃ ಅಸುರಕ್ಷಿತವುಳ್ಳ ಸತ್ಯವೇದ ಉಪದೇಶಕರನ್ನೂ ಸಹ ಗಮನದಲ್ಲಿರಿಸಿಕೊಂಡು ಬರೆಯಲ್ಪಟ್ಟಿದೆ: ನಾನು ನನ್ನ ಸ್ವಂತ ಪ್ರಶ್ನೆಗಳನ್ನು ಉತ್ತರಿಸಿದ್ದೇನೆ ಮತ್ತು ಸಾಕಷ್ಟು ವಿವರಣೆಯನ್ನು ಸಹ ನೀಡಿದ್ದೇನೆ. ಈ ಭಾಗವು ಉಪನ್ಯಾಸಕರಿಗೆ ಒಂದು ವಾರದ ಹಿಬ್ರಿಯರಿಗೆ ಬರೆದ ಪತ್ರ ಎಂಬ ತರಗತಿಗಾಗಿ ಸಿದ್ಧಗೊಳ್ಳಲು ಸಹಾಯಮಾಡುತ್ತವೆ.

4. ಇದು ಒಂದು ಕೈಪಿಡಿಯಾಗಿದೆ ಮತ್ತು ಸಂಪನ್ಮೂಲವಾಗಿದೆ: ಈ ಪಠ್ಯಪುಸ್ತಕವು ಸತ್ಯವೇದ ಮಹಾವಿದ್ಯಾಲಯದಿಂದ ಪದವೀದರರಾಗಿ ಹೊರಬಂದು ಹಲವು ವರ್ಷಗಳನ್ನು ಕಳೆದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರಾಗಿರುವವರಿಗೆ ಒಂದು ಸಂಪನ್ಮೂಲವಾಗುವ ರೀತಿಯಲ್ಲಿ ಬರೆಯಲ್ಪಟ್ಟಿದೆ.

5. ಇದು ಪಂಚಾಶತ್ತಮವಾದದ್ದು/ಸುವಾರ್ತಿಕವಾದದ್ದು: ಈ ಪುಸ್ತಕವು ಸಿದ್ಧಮಾಡಲ್ಪಟ್ಟ ಸತ್ಯವೇದ ಮಹಾವಿದ್ಯಾಲಯವೂ ಪೆಂತಕೋಸ್ತವಾದದ್ದು. ಸತ್ಯವೇದವು ಇಂದು ನಿಜವಾಗಲೂ ನಮಗೆ ದೇವರ ವಾಕ್ಯವಾಗಿದೆ ಎಂದು ಈ ಪುಸ್ತಕವು ಕಾಣುತ್ತದೆ.

ಈ ರೀತಿಯ ಪಠ್ಯಪುಸ್ತಕವನ್ನು ಸಿದ್ಧಗೊಳಿಸಲು ಸಂಪನ್ಮೂಲದ ಅವಶ್ಯಕತೆಯಿದೆ. ಖಂಡಿತವಾಗಲೂ ನಾನು (*ಎನ್.ಐ.ವಿ. ಸ್ಟಡಿ ಬೈಬಲ್‌*ನ್ನು ಒಳಗೊಂಡು) ಅನೇಕ ಸತ್ಯವೇದ ನಿಘಂಟುಗಳ, ಪ್ರಮಾಣಗ್ರಂಥಗಳ ಮತ್ತು ವ್ಯಾಖ್ಯಾನ ಗ್ರಂಥಗಳ ಸಲಹೆಯನ್ನು ಪಡೆದಿದ್ದೇನೆ. ನಾನು ನಿರ್ದಿಷ್ಟವಾಗಿ ರೇಮಂಡ್ ಬ್ರೌನ್‌ರವರು ಬರೆದಿರುವ ಮತ್ತು 'ಬೈಬಲ್ ಸ್ಪೀಕ್ಸ್ ಟುಡೆ' ಪಠ್ಯಪುಸ್ತಕ ಸರಣಿಯಲ್ಲಿ ಒಂದಾಗಿರುವ 'ದ ಮೆಸ್ಸೇಜ್ ಆಫ್ ಹೀಬ್ರೂಸ್' ಎಂಬ ಪುಸ್ತಕದ ಹಂಗಿನಲ್ಲಿದ್ದೇನೆ. ನಾನು ಬಳಸಿರುವ ಬಹುತೇಕ ಚಿತ್ರಣಗಳು ಇಂಟರ್‌ನೆಟ್‌ನಿಂದ ತೆಗೆದುಕೊಂಡದ್ದಾಗಿದೆ.

ಅಂತಿಮವಾಗಿ, ಈ ಮಹಾವಿದ್ಯಾಲಯ ಪಠ್ಯಪುಸ್ತಕವು ದಕ್ಷಿಣ ಭಾರತದ ಸುವಾರ್ತಿಕರು, ಸಭಾಪಾಲಕರುಗಳು ಮತ್ತು ಸತ್ಯವೇದ ಬೋಧಕರುಗಳಿಗೆ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ. ಅದು ಮಾತ್ರವಲ್ಲದೆ ದೇವರ ವಾಕ್ಯವನ್ನು ಪ್ರಾಮಾಣಿಕವಾಗಿ ಕಲಿಯಲು ಬಯಸುವ ಸಾಧಾರಣ ವಿದ್ಯಾರ್ಥಿಗೂ ಉಪಯೋಗಕರವಾಗಿರುವುದೆಂದು ನಾನು ನಿರೀಕ್ಷಿಸುತ್ತೇನೆ.

ಟಿ. ಪಂಡಿತ್

ಮೇ 2013

# ವಿಷಯಾನುಕ್ರಮಣಿಕೆ

## ಅಧ್ಯಯನಗಳು


| | |
|---|---|
| ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ | 09 |
| ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವದು | 14 |
| ಅಧ್ಯಯನ 1: ದೇವರು ತನ್ನ ಮಗನ ಮೂಲಕ ಮಾತನಾಡುತ್ತಾನೆ, 1:1–3 | 16 |
| ಅಧ್ಯಯನ 2: ದೇವದೂತರಿಗಿಂತ ಶ್ರೇಷ್ಠನು, 1:4–14 | 18 |
| ಅಧ್ಯಯನ 3: ‘ಆದ್ದರಿಂದ ದಾರಿಬಿಟ್ಟುಹೋಗದಂತೆ’, 2:1–4 | 21 |
| ಅಧ್ಯಯನ 4: ನಮ್ಮ ರಕ್ಷಣೆಯ ಜನಕ (ಕರ್ತೃ), 2:5–13 | 22 |
| ಅಧ್ಯಯನ 5: ಸೈತಾನನಿಂದ ನಮ್ಮನ್ನು ವಿಮೋಚಿಸುವಾತನು, 2:14–18 | 24 |
| ಅಧ್ಯಯನ 6: ನಿಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಿರಿ, 3:1–6 | 26 |
| ಅಧ್ಯಯನ 7: ಕೊನೆಯವರೆಗೆ ದೃಢವಾಗಿ, 3:7–4:13 | 28 |
| ಅಧ್ಯಯನ 8: ಶ್ರೇಷ್ಟ ಮಹಾಯಾಜಕನು, 4:14–5:10 | 30 |
| ಅಧ್ಯಯನ 9: ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ, 5:11–6:20 | 33 |
| ಅಧ್ಯಯನ 10: ಉತ್ತಮವಾದ ಯಾಜಕತ್ವ, 7:1–28 | 35 |
| ಅಧ್ಯಯನ 11: ಕ್ರಿಸ್ತನ ಪವಿತ್ರಾಲಯ ಮತ್ತು ಉತ್ತಮವಾದ ಒಡಂಬಡಿಕೆ, 8:1–13 | 37 |
| ಅಧ್ಯಯನ 12: ಎರಡು ದೇವದರ್ಶನ ಗುಡಾರಗಳು, 9:1–22 | 39 |
| ಅಧ್ಯಯನ 13: ಕ್ರಿಸ್ತನ ಪರಿಪೂರ್ಣವಾದ ಯಜ್ಞ, 9:23–10:18 | 42 |
| ಅಧ್ಯಯನ 14: ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ, 10:19–39 | 45 |
| ಅಧ್ಯಯನ 15: ತಮ್ಮಲ್ಲಿರುವ ನಂಬಿಕೆಯಿಂದಾಗಿ ಅವರೆಲ್ಲರೂ ಹೊಗಳಿಕೆಗೆ ಪಾತ್ರರಾದರು, 11:1–40 | 48 |
| ಅಧ್ಯಯನ 16: ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನಿಡೋಣ, 12:1–3 | 51 |
| ಅಧ್ಯಯನ 17: ಕರ್ತನ ಶಿಸ್ತುಪಾಲನೆ, 12:4–11 | 52 |
| ಅಧ್ಯಯನ 18: ಮುಂದೆ ಸಾಗಿರಿ, 12:12–17 | 54 |
| ಅಧ್ಯಯನ 19: ಎರಡು ಬೆಟ್ಟಗಳು, 12:18–29 | 56 |
| ಅಧ್ಯಯನ 20: ಪ್ರಬೋಧನೆಗಳು ಭಾಗ 1, 13:1–6 | 58 |

ಅಧ್ಯಯನ 21: ಪ್ರಬೋಧನೆಗಳು ಭಾಗ 2, 13:7–22 60

## ಉತ್ತರಗಳು

ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ ಭಾಗದ ಉತ್ತರಗಳು 65

ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು ಭಾಗದ ಉತ್ತರಗಳು 69

ಉತ್ತರಗಳು 1: ದೇವರು ತನ್ನ ಮಗನ ಮೂಲಕ ಮಾತನಾಡುತ್ತಾನೆ, 1:1–3 73

ಉತ್ತರಗಳು 2: ದೇವದೂತರಿಗಿಂತ ಶ್ರೇಷ್ಠನು, 1:4–14 76

ಉತ್ತರಗಳು 3: ‘ಆದ್ದರಿಂದ ದಾರಿಬಿಟ್ಟುಹೋಗದಂತೆ’, 2:1–4 79

ಉತ್ತರಗಳು 4: ನಮ್ಮ ರಕ್ಷಣೆಯ ಜನಕ (ಕರ್ತೃ), 2:5–13 81

ಉತ್ತರಗಳು 5: ಸೈತಾನನಿಂದ ನಮ್ಮನ್ನು ವಿಮೋಚಿಸುವಾತನು, 2:14–18 84

ಉತ್ತರಗಳು 6: ನಿಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಬೇಕು, 3:1–6 86

ಉತ್ತರಗಳು 7: ಕೊನೆಯವರೆಗೆ ದೃಢವಾಗಿ, 3:7–4:13 90

ಉತ್ತರಗಳು 8: ಶ್ರೇಷ್ಠ ಮಹಾಯಾಜಕನು, 4:14–5:10 93

ಉತ್ತರಗಳು 9: ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ, 5:11–6:20 97

ಉತ್ತರಗಳು 10: ಉತ್ತಮವಾದ ಯಾಜಕತ್ವ, 7:1–28 103

ಉತ್ತರಗಳು 11: ಕ್ರಿಸ್ತನ ಪವಿತ್ರಾಲಯ ಮತ್ತು ಉತ್ತಮವಾದ ಒಡಂಬಡಿಕೆ, 8:1–13 106

ಉತ್ತರಗಳು 12: ಎರಡು ದೇವದರ್ಶನ ಗುಡಾರಗಳು, 9:1–22 111

ಉತ್ತರಗಳು 13: ಕ್ರಿಸ್ತನ ಪರಿಪೂರ್ಣವಾದ ಯಜ್ಞ, 9:23–10:18 115

ಉತ್ತರಗಳು 14: ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ, 10:19–39 120

ಉತ್ತರಗಳು 15: ತಮ್ಮಲ್ಲಿರುವ ನಂಬಿಕೆಯಿಂದಾಗಿ ಅವರೆಲ್ಲರೂ ಹೊಗಳಿಕೆಗೆ ಪಾತ್ರರಾದರು, 11:1–40 123

ಉತ್ತರಗಳು 16: ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನಿಡೋಣ, 12:1–3 129

ಉತ್ತರಗಳು 17: ಕರ್ತನ ಶಿಸ್ತುಪಾಲನೆ, 12:4–11 131

ಉತ್ತರಗಳು 18: ಮುಂದೆ ಸಾಗಿರಿ, 12:12–17 133

ಉತ್ತರಗಳು 19: ಎರಡು ಬೆಟ್ಟಗಳು, 12:18–29 136

ಉತ್ತರಗಳು 20: ಪ್ರಬೋಧನೆಗಳು ಭಾಗ 1, 13:1–6 138
ಉತ್ತರಗಳು 21: ಪ್ರಬೋಧನೆಗಳು ಭಾಗ 2, 13:7–22 140

## ಶಿಕ್ಷಕರಿಗಾಗಿ

ಸಾಮಾನ್ಯ ಸಲಹೆಗಳು 144
ಮೊದಲನೆಯ ದಿನದ ಯೋಜನೆ 146
"ಸತ್ಯವೇದ ಅಧ್ಯಯನ/ಸಂದೇಶ/ಧ್ಯಾನ" ಭಾಗವನ್ನು ಹೇಗೆ ಉಪಯೋಗಿಸುವದು 148
"ಪರಿಚಯ..." ಮತ್ತು "ಓದುವದು..." ಎಂಬ ಭಾಗಗಳ ಯೋಜನೆ 149
ಎರಡನೆಯ ದಿನದ ಯೋಜನೆ 150
ಮೂರನೆಯ ದಿನದ ಯೋಜನೆ 151
ನಾಲ್ಕನೆಯ ದಿನದ ಯೋಜನೆ 152
ಐದನೆಯ ದಿನದ ಯೋಜನೆ 153
ಪರೀಕ್ಷಾ ಪತ್ರಿಕೆ 154
ಪದಸೂಚಿ 155

# ಅಧ್ಯಯನಗಳು

# ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ

## 1. ಒಂದು ವಿಭಿನ್ನವಾದ ಪುಸ್ತಕ

ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯು ಬಹಳ ವಿಭಿನ್ನವಾಗಿದೆ. ಅನೇಕ ಓದುಗರು ಇದನ್ನು ಓದಿ ತಿಳಿದುಕೊಳ್ಳಲು ಬಹಳ ಕಷ್ಟಪಡುತ್ತಾರೆ. ಕಠಿಣವಾಗಿರುವದಕ್ಕೆ ಉತ್ತಮವಾದ ಕಾರಣಗಳಿವೆ ಎಂದು ನಾನು ಭಾವಿಸುತ್ತೇನೆ:

a. ಇಬ್ರಿಯರಿಗೆ ಬರೆದ ಪತ್ರಿಕೆ ಹಳೆ ಒಡಂಬಡಿಕೆಯ ಅನೇಕ ಉಲ್ಲೇಖಗಳನ್ನು ಒಳಗೊಂಡಿದೆ. ಮೊದಲ ಓದುಗರು ಹಳೆ ಒಡಂಬಡಿಕೆಗೆ ಚಿರಪರಿಚಿತರಾಗಿದ್ದರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ; ಅದರಲ್ಲಿರುವ ಯಾಜಕತ್ವ ಮತ್ತು ಯಜ್ಞಗಳನ್ನು ಅರ್ಪಿಸುವ ವಿಧಾನಗಳು. ನಮ್ಮಲ್ಲಿ ಅನೇಕರಿಗೆ ಅದರ ಕುರಿತಾದ ಜ್ಞಾನವಿಲ್ಲ.


b. ಇಬ್ರಿಯ ಪತ್ರಿಕೆಯ ಗ್ರಂಥಕರ್ತನು ಬಹಳಷ್ಟು ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಉಪಯೋಗಿಸುತ್ತಾನೆ. ಆತನು ಈ ವ್ಯಾಖ್ಯಾನಗಳು ಅರ್ಥೈಸುವ ವಿಧಾನವು ನಮ್ಮನ್ನು ಗಲಿಬಿಲಿಗೆ ಒಳಪಡಿಸುತ್ತದೆ. ಅದನ್ನು ಆತನು ಹೇಗೆ ಮಾಡುತ್ತಾನೆ ಎಂಬುದನ್ನು "ಅಧ್ಯಯನ 2: ದೇವದೂತರಿಗಿಂತ ಶ್ರೇಷ್ಠನು" ಇದರಲ್ಲಿ ವಿವರಿಸಲಾಗಿದೆ.

c. ಬರವಣಿಗೆಯ ಶೈಲಿಯು ಸಂಪೂರ್ಣವಾಗಿ ಜ್ಞಾನದಿಂದ ಕೂಡಿದ್ದಾಗಿದೆ. ಅದು ಒಂದು ಪತ್ರಕ್ಕಿಂತ ಹೆಚ್ಚಾಗಿ ಒಂದು ಧರ್ಮೋಪದೇಶವಾಗಿದೆ. ಆದುದರಿಂದ ಈ ಪಠ್ಯವು ನಾವು ಸಾಮಾನ್ಯವಾಗಿ ಓದುವ ಪಠ್ಯಕ್ಕಿಂತ ಬಹಳಷ್ಟು ವಿಭಿನ್ನವಾಗಿದೆ.

### ಪ್ರಶ್ನೆಗಳು:

1. ನೀವು ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಈ ಮೊದಲು ಓದಿದ್ದೀರೋ?
2. ನಿಮಗೆ ಅದನ್ನು ಓದಿದಾಗ ಹೇಗನ್ನಿಸಿತು? ಸರಳವೆನಿಸಿತೋ ಅಥವಾ ಕಠಿಣವೆನಿಸಿತೋ? ಯಾಕೆ ವಿವರಿಸಿರಿ.
3. ಆಧುನಿಕ-ಕಾಲದ ವಿಶ್ವಾಸಿಗಳಿಗೆ ಇಬ್ರಿಯರಿಗೆ ಬರೆದ ಪತ್ರಿಕೆಯು ಯಾಕೆ ಕಠಿಣವಾಗಿ ತೋರುತ್ತದೆ ಎಂಬುದಕ್ಕೆ ನಿಮಗೆ ಇನ್ನು ಹೆಚ್ಚಿನ ಕಾರಣಗಳು ತಿಳಿದಿವೆಯೋ?

ಒಬ್ಬ ಚಿತ್ರಕಾರನ ದೃಷ್ಟಿಯಿಂದ ಹಳೆ ಒಡಂಬಡಿಕೆಯ ಯಜ್ಞದ ದೃಶ್ಯ



## 1. ಗ್ರಂಥಕರ್ತ

ಪುಸ್ತಕದ ಗ್ರಂಥಕರ್ತನ ಹೆಸರು ತಿಳಿದಿಲ್ಲ. ಇದರ ಅರ್ಥ ಗ್ರಂಥಕರ್ತನು ತನ್ನ ಹೆಸರನ್ನು ತಿಳಿಸಿಲ್ಲ. ಆದುದರಿಂದ ಯಾರೊಬ್ಬರಿಗೂ ಗ್ರಂಥಕರ್ತರು ಯಾರು ಎಂಬುದು ತಿಳಿದಿಲ್ಲ. ಆದಿ ಕ್ರೈಸ್ತ ಸಂಪ್ರದಾಯದಲ್ಲಿಯೂ ಸಹ ಈ ವಿಷಯದ ಕುರಿತು ಒಮ್ಮತವಿರಲಿಲ್ಲ.

ಆದರೆ ಪುಸ್ತಕದ ಗ್ರಂಥಕರ್ತನು ಯಾವ ವಿಧದ ವ್ಯಕ್ತಿಯಾಗಿರಬಹುದು ಎಂಬುದಕ್ಕೆ ಪುಸ್ತಕವು ತಾನೆ ನಮಗೆ ಕೆಲವು ಸುಳಿವುಗಳನ್ನು ನೀಡುತ್ತದೆ.

a. ಗ್ರಂಥಕರ್ತನು ಒಬ್ಬ ಪುರುಷನಾಗಿರಬಹುದು. ವಚನ 11:32 ರ ಗ್ರೀಕ್ ವ್ಯಾಕರಣದಿಂದ ಇದು ಸ್ಪಷ್ಟವಾಗುತ್ತದೆ. ಹಾಗಾಗಿ ಆ ಗ್ರಂಥಕರ್ತನು/ಳು ಪೌಲನ ಜೊತೆ ಸೇವಕಳು ಮತ್ತು ಆದಿ ಸಭೆಯ ನಾಯಕಿಯರಲ್ಲಿ ಒಬ್ಬಳಾದ ಪ್ರಿಸ್ಕಿಲ್ಲಳು ಆಗಿರಲಿಕ್ಕಿಲ್ಲ.

b. ಗ್ರಂಥಕರ್ತನಿಗೆ ಯೆಹೂದ್ಯ ಹಿನ್ನೆಲೆ ಇದ್ದಿರಬಹುದು. ಆತನು ಹಳೆ ಒಡಂಬಡಿಕೆಯ ಸಾಧನಗಳನ್ನು ಮತ್ತು ಉಲ್ಲೇಖಗಳನ್ನು ಉಪಯೋಗಿಸುವ ರೀತಿಯಿಂದ ಇದು ಸ್ಪಷ್ಟವಾಗುತ್ತದೆ. ಹಾಗಾಗಿ ಆ ಗ್ರಂಥಕರ್ತನು ಪೌಲನ ಜೊತೆ ಸೇವಕನಾದ ತೀತನು ಆಗಿರಲಿಕ್ಕಿಲ್ಲ, ಅವನು ಗ್ರೀಕನಾಗಿದ್ದನು ಮತ್ತು ಅವನ ತಂದೆತಾಯಿಗಳು ಅನ್ಯಜನರಾಗಿದ್ದರು.

c. ಗ್ರಂಥಕರ್ತನು ಬಹುಶಃ ಪೌಲನಾಗಿರಲಿಕ್ಕಿಲ್ಲ. ಪೌಲನು ಇತರ ಪತ್ರಗಳಲ್ಲಿ ಉಪಯೋಗಿಸಿದ ಶೈಲಿ ಮತ್ತು ಭಾಷೆಗಳಿಗಿಂತ ಈ ಪುಸ್ತಕ ಭಿನ್ನವಾಗಿದೆ.

d. ಲೇಖಕನು ಗ್ರೀಕ್ ಭಾಷೆಯನ್ನು ಉತ್ತಮವಾಗಿ ತಿಳಿದಿರುವವರಲ್ಲಿ ಒಬ್ಬನಾಗಿರಬಹುದು. ಈ ಪುಸ್ತಕದಲ್ಲಿರುವ ಗ್ರೀಕ್ ಶೈಲಿ ಮತ್ತು ಭಾಷೆ ಅತ್ಯುತ್ತಮವಾಗಿವೆ.

e. ಗ್ರಂಥಕರ್ತನು ಆದಿಸಭೆಯಲ್ಲಿ ಅಧಿಕಾರವನ್ನು ಹೊಂದಿದವನಾಗಿದ್ದಿರಬಹುದು. ಇಲ್ಲವಾದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯು ಹೊಸ ಒಡಂಬಡಿಕೆಯ ಅಧಿಕೃತ ಪುಸ್ತಕಗಳಲ್ಲಿ ಸೇರ್ಪಡೆಯಾಗುತ್ತಿರಲಿಲ್ಲ.

f. ಗ್ರಂಥಕರ್ತನು ಯೇಸುವನ್ನು ವೈಯಕ್ತಿಕವಾಗಿ ತಿಳಿದ ವ್ಯಕ್ತಿಯಾಗಿರಲಿಕ್ಕಿಲ್ಲ. ಇದು 2:3 ರಲ್ಲಿ ಸ್ಪಷ್ಟವಾಗುತ್ತದೆ. ಹಾಗಾಗಿ ಯೇಸುವಿನ ಹಾಗೂ ಸುವಾರ್ತೆಯ ಕುರಿತು ಗ್ರಂಥಕರ್ತನಿಗಿದ್ದ ಜ್ಞಾನವು ಶಿಷ್ಯರಿಂದ ಬಂದಿರಬಹುದು.

g. ಹಾಗಾದರೆ ಆತನು ಯಾರಾಗಿರಬಹುದು? ಬಹುಶಃ ಹೊಸ ಒಡಂಬಡಿಕೆಯ ಈ ನಾಲ್ಕು ವ್ಯಕ್ತಿಗಳಲ್ಲಿ ಒಬ್ಬನಾಗಿರಬಹುದು:

- ಬಾರ್ನಬ: ಈತನು ಯಾಜಕ ವರ್ಗದವರಾದ ಲೇವಿಯ ಗೋತ್ರಕ್ಕೆ ಸೇರಿದ ಯೆಹೂದ್ಯನಾಗಿದ್ದನು ಮತ್ತು ಆತನು ಸೈಪ್ರಸ್‌ಗೆ ಚದುರಿಹೋಗಿದ್ದ ಯೆಹೂದ್ಯರ ಗುಂಪಿನಿಂದ ಬಂದವನಾಗಿದ್ದನು (ಅ.ಕೃ.4:36; 11:22–26).

- ಅಪೋಲ್ಲೋಸ: ಈತನು ಅಲೆಕ್ಸಾಂದ್ರಿಯದಿಂದ ಬಂದವನಾಗಿರುವದರಿಂದ ಈತನೂ ಸಹ ಚದುರಿ ಹೋಗಿದ್ದ ಯೆಹೂದಿ ಜನಾಂಗದವನಾಗಿದ್ದನು. ಅದಲ್ಲದೆ ಈತನು

ವಿದ್ಯಾವಂತನಾಗಿದ್ದು ಹಳೆ ಒಡಂಬಡಿಕೆಯ ಆಳವಾದ ಜ್ಞಾನವನ್ನು ಹೊಂದಿದ್ದನು (ಅ.ಕೃ. 18:24–26).

- ಸೀಲನು/ಸಿಲ್ವಾನನು: ಈತನು ಪೌಲನ ನಿಕಟ ಜೊತೆ ಸೇವಕನಾಗುವದಕ್ಕಿಂತ ಮುಂಚೆ ಯೆರೂಸಲೇಮಿನ ಸಭೆಗೆ ಸೇರಿದವನಾಗಿದ್ದನು. ಆತನು ಒಬ್ಬ ರೋಮನ್ ನಾಗರೀಕನಾಗಿದ್ದರಿಂದ ಬಹುಶಃ ಚದುರಿ ಹೋದ ಯೆಹೂದಿ ಜನಾಂಗಕ್ಕೆ ಸೇರಿದವನಾಗಿದ್ದನು (ಅ.ಕೃ. 15:22, 32; 16:38; 1 ಥೆಸಲೋನಿಕ 1:1; 1 ಪೇತ್ರ 5:12).

- ತಿಮೋಥೆಯನು: ಈತನ ತಂದೆ ಗ್ರೀಕನು ಮತ್ತು ತಾಯಿ ಯೆಹೂದ್ಯಳಾಗಿದ್ದಳು. ಈತನೂ ಸಹ ಚದುರಿಹೋಗಿದ್ದ ಯೆಹೂದ್ಯರ ಗುಂಪಿನಿಂದ ಬಂದವನಾಗಿದ್ದನು. ಅವನು ಪೌಲನೊಂದಿಗೆ ಎರಡನೇ ಸುವಾರ್ತಾ ಪ್ರಯಾಣದಲ್ಲಿ ಜೊತೆಗೂಡಿದನು ಮತ್ತು ಅಂದಿನಿಂದ ಪೌಲನೊಂದಿಗೆ ಮತ್ತು ಅವನ ಸೇವೆಯೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದನು (ಅ.ಕೃ.16:1; 1 ಕೊರಿಂಥ 4:17; ಫಿಲಿಪ್ಪಿ 2:22; 1 ಥೆಸಲೋನಿಕ 3:2).

### ಪ್ರಶ್ನೆಗಳು:

4. ಇಬ್ರಿಯ ಗ್ರಂಥಕರ್ತನ ಕುರಿತು ಸತ್ಯವೇದ ಶಾಸ್ತ್ರಜ್ಞರುಗಳು ಯಾಕೆ ಒಮ್ಮತ ಸೂಚಿಸುವುದಿಲ್ಲ?
5. ಬಾರ್ನಬ, ಅಪೊಲ್ಲೋಸ, ಸೀಲ ಮತ್ತು ತಿಮೋಥೆಯರು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿಳಾಗಿದ್ದಾರೆ ಎಂಬುದಕ್ಕೆ ಕನಿಷ್ಟ ನಾಲ್ಕು ಕಾರಣಗಳನ್ನಾದರೂ ನೀಡಿರಿ?
6. ಯಾರಾಗಿರಬಹುದು ಎಂದು ನೀವು ಸ್ವತಃ ಸೂಚಿಸುತ್ತೀರಿ? ಆ ವ್ಯಕ್ತಿಯು ಇಬ್ರಿಯ ಪುಸ್ತಕದ ಗ್ರಂಥಕರ್ತನ ಸ್ಥಾನಕ್ಕೆ ಯಾಕೆ ಯೋಗ್ಯ ಅಭ್ಯರ್ಥಿಯಾಗಿದ್ದಾನೆಂದು ವಿವರಿಸಿರಿ?

## 2. ಓದುಗರು

ಇಬ್ರಿಯರಿಗೆ ಬರೆದ ಪತ್ರಿಕೆಯು ಯಾರನ್ನು ಉದ್ದೇಶಿಸಿ ಬರೆಯಲ್ಪಟ್ಟಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಯಾವುದೇ ವ್ಯಕ್ತಿಯ ಅಥವಾ ಸ್ಥಳದ ಹೆಸರನ್ನು ನೀಡಲಾಗಿಲ್ಲ. ಆದುದರಿಂದ ಮೊದಲ ಓದುಗರು ಯಾರು ಎಂಬುದು ನಮಗೆ ಖಚಿತವಾಗಿ ತಿಳಿದಿಲ್ಲ. ಆದರೆ ನಾವು ಪತ್ಯವನ್ನು ಅಧ್ಯಯನ ಮಾಡುತ್ತಿರುವ ಹಾಗೆ ಮೊದಲ ಓದುಗರು ಯಾರಾಗಿರಬಹುದು ಎಂಬ ಚಿತ್ರವನ್ನು ಕಲ್ಪಿಸಿಕೊಳ್ಳೋಣ:

- ಅವರು ಯೆಹೂದಿ ಹಿನ್ನೆಲೆಯುಳ್ಳ ಕ್ರೈಸ್ತರಾಗಿರಬಹುದು. ಆದುದರಿಂದಲೇ ಈ ಪತ್ರಕ್ಕೆ 'ಇಬ್ರಿಯರಿಗೆ' ಎಂಬ ಶೀರ್ಷಿಕೆಯನ್ನು ನೀಡಲಾಗಿದೆ. 'ಇಬ್ರಿಯ' ಎಂಬ ಪದವು ಅವರ ಯೆಹೂದಿ ರಾಷ್ಟ್ರೀಯತೆಯನ್ನು ಸೂಚಿಸುತ್ತದೆ.

- ಅವರು ಬಹುಶಃ ಚದುರಿಹೋದ ಯೆಹೂದ್ಯರಾಗಿದ್ದಿರಬಹುದು ಮತ್ತು ಗ್ರೀಕ್ ಭಾಷೆ ಅವರ ಮೊದಲ ಭಾಷೆಯಾಗಿದ್ದಿರಬಹುದು.

- ಅವರು ಬಹುಶಃ ರೋಮ ಪಟ್ಟಣದಲ್ಲಿ ವಾಸಿಸುತ್ತಿದ್ದಿರಬಹುದು. ಇಟಲಿಯ ವಿಶ್ವಾಸಿಗಳು ಯಾಕೆ ಅವರಿಗೆ ವಂದನೆಗಳನ್ನು ತಿಳಿಸಿದರು ಎಂಬುದನ್ನು ಇದು ವಿವರಿಸುತ್ತದೆ (13:24).

- ಅವರು ಹಿಂಸೆಯನ್ನು ಅನುಭವಿಸಿದ್ದಿರಬಹುದು; ಬಹುಶಃ ರೋಮ್ ಹಾಗೂ ಸುತ್ತಮುತ್ತಲಿನ ಪ್ರಾಂತಗಳನ್ನು ಆಳುತ್ತಿದ್ದ ನಿರೋ ಚಕ್ರವರ್ತಿಯ ಅಡಿಯಲ್ಲಿ ಸುಮಾರು ಕ್ರಿ.ಶ. 65 ರಲ್ಲಿ ನಡೆದ ಹಿಂಸೆಯನ್ನು ಅನುಭವಿಸಿದ್ದಿರಬಹುದು.

- ಅವರು ತಮ್ಮ ಕ್ರೈಸ್ತ ನಂಬಿಕೆಯನ್ನು ತೊರೆಯಬೇಕೆಂಬ ಶೋಧನೆಗೆ ಒಳಗಾದ ಕ್ರೈಸ್ತ ವಿಶ್ವಾಸಿಗಳಾಗಿದ್ದರು. ಇತರರು ಈಗಾಗಲೇ ತೊರೆದಿದ್ದರು. ಈ ಜನರು ತಮ್ಮ ಹಿಂದಿನ ಯೆಹೂದಿ ನಂಬಿಕೆಗೆ ಹಿಂತಿರುಗಿದರೆಂದು ತೋರುತ್ತದೆ.

**ಪ್ರಶ್ನೆಗಳು:**

7. ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಯಾರಿಗೆ ಸಂಬೋಧಿಸಲಾಗಿದೆ ಎಂದು ಯಾರಿಗೂ ಖಚಿತವಾಗಿ ಯಾಕೆ ತಿಳಿದಿಲ್ಲ?
8. 'ಇಬ್ರಿಯರಿಗೆ ಬರೆದ ಪತ್ರಿಕೆ'ಯ ಪದ ಬಳಕೆಯು ಏನನ್ನು ಉಲ್ಲೇಖಿಸುತ್ತದೆ?
9. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿಯೇ ಅದರ ಓದುಗರ ಕುರಿತಾಗಿ ನಾವು ಇನ್ನೂ ಏನನ್ನು ಊಹಿಸಬಹುದು?

## 3. ಇದು ಯಾವಾಗ ಬರೆಯಲ್ಪಟ್ಟಿತು?

ಸತ್ಯವೇದ ಶಾಸ್ತ್ರಜ್ಞರು ಪುಸ್ತಕವನ್ನು ಬರೆದ ದಿನಾಂಕದ ಕುರಿತು ಒಮ್ಮತ ಸೂಚಿಸುವುದಿಲ್ಲ. ಆದರೆ ಇದು ಬಹುಶಃ ಕ್ರಿ.ಶ. 70 ರಲ್ಲಿ ಯೆರೂಸಲೇಮಿನ ದೇವಾಲಯವು ನಾಶವಾದ ಸಂದರ್ಭಕ್ಕಿಂತ ಮುಂಚೆ ಬರೆಯಲ್ಪಟ್ಟಿರಬಹುದು. ದೇವಾಲಯದ ಶಾಸ್ತ್ರವಿಧಿಗಳ ಕುರಿತು ಉಲ್ಲೇಖಿಸುವಾಗ ಅವು ಈಗಲೂ ಕೂಡಾ ನಡೆಯುತ್ತಿವೆಯೋ ಎಂಬಂತೆ ಪುಸ್ತಕದಲ್ಲಿ ವರ್ತಮಾನ ಕಾಲವನ್ನು ಉಪಯೋಗಿಸಲಾಗಿದೆ. ಇದು ಗ್ರಂಥಕರ್ತನು ಪುಸ್ತಕವನ್ನು ಬರೆದಾಗ ದೇವಾಲಯವು ಇನ್ನೂ ಕಾರ್ಯರೂಪದಲ್ಲಿತ್ತು ಎಂಬುದನ್ನು ಸೂಚಿಸುತ್ತದೆ. ಆದರೆ ಈ ಪುಸ್ತಕವು ಕ್ರಿ.ಶ. 65 ರಲ್ಲಿ ರೋಮ್‌ನಲ್ಲಿನ ಕ್ರೈಸ್ತರು ನಿರೋ ಚಕ್ರವರ್ತಿಯ ಅಡಿಯಲ್ಲಿ ಹಿಂಸೆಯನ್ನು ಅನುಭವಿಸಿದ ಸಮಯಕ್ಕಿಂತ ಮುಂಚೆ ಬರೆದಿರುವುದು ಅಸಂಭವನೀಯವಾಗಿದೆ.

**ಪ್ರಶ್ನೆಗಳು:**

10. ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಕ್ರಿ.ಶ. 65 ಮತ್ತು ಕ್ರಿ. ಶ. 70 ರ ಮಧ್ಯದಲ್ಲಿ ಬರೆಯಲಾಯಿತು ಎನ್ನುವದು ಯಾಕೆ ಸಮಂಜಸವಾಗಿದೆ?

## 4. ಇದು ಯಾಕೆ ಬರೆಯಲ್ಪಟ್ಟಿತು?

ಈ ಪಾಠದಲ್ಲಿ ನಾವು ಈಗಾಗಲೇ ನೋಡಿರುವ ಸಂಗತಿಗಳಿಂದ ನಾವು ಈ ಪುಸ್ತಕವನ್ನು ಗ್ರಂಥಕರ್ತನು ಒಂದು ವಿಶಿಷ್ಟವಾದ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರಬಹುದೆಂದು ಹೇಳಬಹುದು. ಆತನು ಹಿಂಸೆಯ ಕಾಲದಲ್ಲಿ ತಮ್ಮ ನಂಬಿಕೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದ ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳನ್ನು ಬಲಪಡಿಸಲು ಬಯಸಿದ್ದನು. ಆತನು ಯೇಸುವಿನ ಸ್ಪಷ್ಟವಾದ ಸಿದ್ಧಾಂತವನ್ನು ಮತ್ತು ಯೇಸು ತನ್ನ ತ್ಯಾಗಪೂರ್ವಕವಾದ ಮರಣದ ಮೂಲಕ ನಮಗಾಗಿ ಏನನ್ನು ನೆರವೇರಿಸಿದ್ದಾನೆ ಎಂಬುದನ್ನು ಪ್ರಸ್ತುತಪಡಿಸುವುದರ ಮೂಲಕ ಬಲಪಡಿಸಲು ಬಯಸಿದನು. ಗ್ರಂಥಕರ್ತನು ಹಿಂದಿನ ಯಾಜಕ ವರ್ಗ ಮತ್ತು ಒಡಂಬಡಿಕೆಗಿಂತ ಯೇಸು ಮತ್ತು ಆತನ ಕಾರ್ಯಗಳು ಅತ್ಯಂತ ಶ್ರೇಷ್ಠವಾಗಿವೆ, ಯೆಹೂದಿ ಹಿನ್ನೆಲೆಯ ಜನರು ಹಳೆಯ ಯಾಜಕತ್ವ ಮತ್ತು ಒಡಂಬಡಿಕೆಯಿಂದ ರಕ್ಷಣೆಯನ್ನು ಹೊಂದಿದ್ದರು ಎಂಬುದನ್ನು ಎಚ್ಚರಿಕೆಯಿಂದ ತೋರಿಸುತ್ತಾನೆ. ಹಾಗಾಗಿ ಕನಿಷ್ಠವಾದದ್ದಕ್ಕಾಗಿ ಉತ್ತಮವಾದ ಒಡಂಬಡಿಕೆಯನ್ನು ತೊರೆದುಬಿಡುವದು ಅವರಿಗೆ ಮೂರ್ಖತನವಾಗಿತ್ತು (7:22).

## ಪ್ರಶ್ನೆಗಳು:

11. ಗ್ರಂಥಕರ್ತನು ಈ ಪುಸ್ತಕವನ್ನು ಏಕೆ ಬರೆದನು?

12. ತನ್ನ ಓದುಗರ ನಂಬಿಕೆಯನ್ನು ಬಲಪಡಿಸಲು ಗ್ರಂಥಕರ್ತನು ಹೇಗೆ ವಾದಮಾಡುತ್ತಾನೆ ಎಂಬುದನ್ನು ವಿವರಿಸಿರಿ?

## 5. ಪುಸ್ತಕದ ಪ್ರಧಾನ ವಿಷಯ

ನಾವು ಮೊದಲನೇ ಬಾರಿಗೆ ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವಾಗ ಎಲ್ಲ "ದೊಡ್ಡ" ಪದಗಳನ್ನು, "ಆಳವಾದ" ದೈವಶಾಸ್ತ್ರವನ್ನು ಮತ್ತು ಅಸಂಖ್ಯಾತ ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ನೋಡಿ ದಿಗ್ಭ್ರಾಂತರಾಗಬಹುದು. ಆದರೆ ಪುಸ್ತಕದ ಪ್ರಧಾನ ವಿಷಯವನ್ನು ಕೆಲವೇ ಪದಗಳಲ್ಲಿ ಸಂಕ್ಷಿಪ್ತಗೊಳಿಸುವದು ಸಾಧ್ಯವಿದೆ: ದೇವಕುಮಾರನಾದ ಯೇಸು ನಮಗೆ ತನ್ನ ಶ್ರೇಷ್ಠವಾದ ನಿತ್ಯತ್ವ ಮತ್ತು ರಕ್ಷಣೆಯನ್ನು ನೀಡಿದ ಪರಿಪೂರ್ಣನಾದ ಮಹಾಯಾಜಕನಾಗಿದ್ದಾನೆ.

## ಪ್ರಶ್ನೆಗಳು:

13. ಇಬ್ರಿಯರಿಗೆ ಬರೆದ ಪತ್ರಿಕೆಯ ಪ್ರಧಾನ ವಿಷಯವನ್ನು ತಿಳಿಸಿರಿ. ಕೇವಲ ನಿಮ್ಮ ಪಠ್ಯಪುಸ್ತಕದಿಂದ ಅಥವಾ ನಿಮ್ಮ ಟಿಪ್ಪಣಿಯಿಂದ ಉಲ್ಲೇಖಿಸಬೇಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.

14. ಈ ಪ್ರಧಾನ ವಿಷಯವು ಹೇಗೆ ಪುಸ್ತಕದ ಉದ್ದೇಶಕ್ಕೆ ಸೂಕ್ತವಾಗಿದೆ ಎಂಬುದನ್ನು ವಿವರಿಸಿರಿ.

## ಪರಿಚಯ

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನಾವು ವಿವಿಧ ವೇದಭಾಗಗಳನ್ನು ಹೆಚ್ಚು ವಿವರವಾಗಿ ಓದುವುದಕ್ಕಿಂತ ಮುಂಚೆ ನೀವು ಪುಸ್ತಕದ ಒಟ್ಟಾರೆ ಭಾವನೆಯನ್ನು ಹೊಂದುವದು ಪ್ರಾಮುಖ್ಯವಾಗಿದೆ – ಅದರ ಸಾಹಿತ್ಯ ಶೈಲಿ, ಅದರ ಪದಕೋಶ, ಇದರ ಪ್ರಧಾನ ವಿಷಯ, ಅದರ ವಾದ ಮಂಡಿಸುವ ಶೈಲಿ... ಇತ್ಯಾದಿ. ಇದನ್ನು ಸಾಧಿಸಲು ನೀವು ಪ್ರಾರಂಭದಿಂದ ಕೊನೆಯವರೆಗೆ ಒಂದು ಅಥವಾ ಎರಡು ಅವಧಿಗಳಲ್ಲಿ ಓದಿ ಮುಗಿಸುವುದು ಅವಶ್ಯವಾಗಿದೆ.

ಇಬ್ಬರು ಅಥವಾ ಮೂರು ಜನರ ಗುಂಪಿನಲ್ಲಿ ಕಾರ್ಯ ಮಾಡಿರಿ. ಇಡೀ ಪತ್ರಿಕೆಯನ್ನು ಪೂರ್ಣವಾಗಿ ಓದಿರಿ. ನೀವು ಅದನ್ನು ಮಾಡುತ್ತಿರುವಾಗ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿರಿ. ಆದರೆ ಎಲ್ಲಾ ವಿವರಗಳ ಕುರಿತು ಸಮಯ ಕಳೆಯಬೇಡಿರಿ ಮತ್ತು ನಿಮಗೆ ಅರ್ಥವಾಗದ ವಿಷಯಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಾ ತಟಸ್ಥರಾಗಬೇಡಿರಿ.

## ಪ್ರಶ್ನೆಗಳು

1. ಅಧ್ಯಾಯ 1–6 ರಲ್ಲಿ ಯೇಸುವನ್ನು ಹೇಗೆ 'ವಿವರಿಸಲಾಗಿದೆ' ಅಥವಾ 'ವರ್ಣಿಸಲಾಗಿದೆ'? ನಿಮ್ಮ ಉತ್ತರಗಳನ್ನು ಕೆಳಗಿನ ಸರಳ ಉಲ್ಲೇಖಗಳ ಮೂಲಕ ಕಂಡುಕೊಳ್ಳಿರಿ.
   a. 1:1–3
   b. 1:4–14
   c. 2:5–13
   d. 2:14–18
   e. 3:1–6
   f. 4:14–5:10
2. ಯೇಸು ನಮಗೋಸ್ಕರ ಏನು ಮಾಡಿದ್ದಾನೆ? ನಿಮ್ಮ ಉತ್ತರಗಳನ್ನು 7:1–10:18 ರಿಂದ ತೆಗೆದುಕೊಂಡ ಈ ಸರಳವಾದ ಉಲ್ಲೇಖಗಳ ಮೂಲಕ ಹುಡುಕಿರಿ.
   a. 7:1–8:5
   b. 8:6–9:14
   c. 9:15–22
   d. 9:23–10:18
3. ಯೇಸು ಮತ್ತು ಆತನ ಕಾರ್ಯಗಳಿಗೆ ನಮ್ಮ ಪ್ರತಿಕ್ರಿಯೆ ಏನಾಗಿರಬೇಕು? 10:19–13:25ರ ಆಧಾರದ ಮೇಲೆ ಒಂದು ಸರಳವಾದ ಪಟ್ಟಿಯನ್ನು ಮಾಡಿರಿ.
4. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಪದೇ ಪದೇ ಮುಂಚಿನ ಒಡಂಬಡಿಕೆಯ (ಮೋಶೆಯ ಒಡಂಬಡಿಕೆ, ಸೀನಾಯಿ ಒಡಂಬಡಿಕೆ) ಮತ್ತು ಹೊಸ ಒಡಂಬಡಿಕೆಯ ನಡುವಿನ

ವ್ಯತ್ಯಾಸವನ್ನು ತೋರಿಸುತ್ತಾನೆ. ಕೆಳಗಿನ ಉಲ್ಲೇಖಗಳನ್ನು ನೋಡಿರಿ ಮತ್ತು ಆತನು ತೋರಿಸಿರುವ ಕೆಲವು ವ್ಯತ್ಯಾಸಗಳನ್ನು ಗುರುತಿಸಿರಿ.

a. 5:2 ಮತ್ತು 7:26

b. 7:23–25

c. 9:13 ಮತ್ತು 7:27

d. 9.9 ಮತ್ತು 9:14

e. 10:3 ಮತ್ತು 9:28

f. 10:11–12

# ಅಧ್ಯಯನ 1: ದೇವರು ತನ್ನ ಮಗನ ಮೂಲಕ ಮಾತನಾಡುತ್ತಾನೆ, 1:1–3

## ಪರಿಚಯ

ಅನೇಕ ಸತ್ಯವೇದದ ಅನುವಾದಗಳು ಇಬ್ರಿಯರಿಗೆ ಬರೆದ ಗ್ರಂಥವನ್ನು "ಇಬ್ರಿಯರಿಗೆ ಬರೆದ ಪತ್ರಿಕೆ" ಎಂದು ಕರೆಯುತ್ತಾರೆ. ಆದರೆ ಈ ಗ್ರಂಥವು ಪತ್ರದಂತೆ ಪ್ರಾರಂಭಗೊಳ್ಳುವುದಿಲ್ಲ. ಇಲ್ಲಿ ಪತ್ರವನ್ನು ಕಳುಹಿಸಿದವನ ಕುರಿತಾಗಲಿ ಮತ್ತು ಅದನ್ನು ಯಾರಿಗಾಗಿ ಬರೆದದ್ದರ ಕುರಿತಾಗಲಿ ಯಾವ ಹೆಸರೂ ಪ್ರಸ್ತಾಪವಾಗಿಲ್ಲ. ನಾವು ಮೊದಲನೇ ಅಧ್ಯಾಯವನ್ನು ಓದುವಾಗ ಪಠ್ಯವು ಪತ್ರಕ್ಕಿಂತ ಹೆಚ್ಚಾಗಿ ಧರ್ಮೋಪದೇಶವೆಂದು ತೋರುತ್ತದೆ.

ಆದರೆ ಪ್ರಾರಂಭ ಹೀಗಿದ್ದಾಗ್ಯೂ, ಇಬ್ರಿಯರಿಗೆ ಬರೆದ ಗ್ರಂಥವು ಒಂದು ಪತ್ರವೆಂದು ಹೇಳುವದು ತಪ್ಪೇನಲ್ಲ. ಯಾಕೆಂದರೆ ಅದು ವಂದನೆ ಮತ್ತು ಸಂಕ್ಷಿಪ್ತ ಆಶೀರ್ವಾದಗಳೊಂದಿಗೆ ಕೊನೆಗೊಳ್ಳುತ್ತದೆ (13:24–25) ಮತ್ತು ಗ್ರಂಥಕರ್ತನು ತನ್ನ ಪುಸ್ತಕವು ಎಚ್ಚರಿಕೆಯ ಮಾತುಗಳುಳ್ಳ ಸಂಕ್ಷಿಪ್ತ ಪತ್ರವೆಂದು ಕರೆಯುವುದರ ಮೂಲಕ ತನ್ನ ಬರಹವನ್ನು ಮುಕ್ತಾಯಗೊಳಿಸುತ್ತಾನೆ (13:22).

ಗ್ರಂಥಕರ್ತನು ನೇರವಾಗಿ ವಿಷಯದೆಡೆಗೆ ಮುನ್ನುಗ್ಗುತ್ತಾ ಪುಸ್ತಕವನ್ನು ಪ್ರಾರಂಭಿಸುತ್ತಾನೆ. ಆ ವಿಷಯವು "ಯೇಸು." ಆದರೆ, ಆಸಕ್ತಿಕರವಾದ ವಿಷಯವೆಂದರೆ ಮೊದಲನೆ ಅಧ್ಯಾಯದಲ್ಲಿ ಯೇಸು ಎಂಬ ಹೆಸರನ್ನು ಎಲ್ಲೂ ತಿಳಿಸಿಲ್ಲ. ಈ ಪುಸ್ತಕದಲ್ಲಿ "ಕ್ರಿಸ್ತನು" ಎಂಬ ಆತನ ಅತೀ ಸಾಮಾನ್ಯವಾದ ಶೀರ್ಷಿಕೆಯನ್ನು ಸಹ ಉಪಯೋಗಿಸಿಲ್ಲ. ಬದಲಾಗಿ ಯೇಸುವನ್ನು "ಮಗನು" ಎಂದು ಗುರುತಿಸಲಾಗಿದೆ.

## ಓದಿರಿ

ಇಬ್ರಿಯ 1:1–3

## ಪ್ರಶ್ನೆಗಳು

1. ಮೊದಲು ದೇವರು ತನ್ನ ಜನರೊಟ್ಟಿಗೆ ಹೇಗೆ ಮಾತನಾಡಿದನು?
2. ಈಗ ಆತನು ತನ್ನ ಜನರೊಟ್ಟಿಗೆ ಹೇಗೆ ಮಾತನಾಡುತ್ತಾನೆ ("ಈ ಕೊನೆಯ ದಿನಗಳಲ್ಲಿ")?
3. ದೇವರು ಯಾವುದರ ಕುರಿತಾಗಿ ಮಾತನಾಡುತ್ತಾನೆ?
4. ಈ ಮೂರು ವಚನಗಳು ನಮಗೆ ಯೇಸು ಯಾರಾಗಿದ್ದಾನೆ ಎಂಬುದರ ಕುರಿತು ಎಂಟು ವಿಷಯಗಳನ್ನು ಬೋಧಿಸುತ್ತವೆ? ಅವುಗಳು ಯಾವುವು? ಅವುಗಳ ಅರ್ಥವೇನು ಎಂಬುದನ್ನು ಸಹ ವಿವರಿಸಲು ಪ್ರಯತ್ನಿಸಿರಿ (ಅಥವಾ ಅದರ ಪ್ರಾಮುಖ್ಯತೆಯೇನು).

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಮೇಲಿರುವ ಪ್ರಶ್ನೆ 4 ರ ಉತ್ತರವನ್ನು ಬಳಸಿಕೊಂಡು ಯೇಸುವಿನ ಕುರಿತು ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

# ಅಧ್ಯಯನ 2: ದೇವದೂತರಿಗಿಂತ ಶ್ರೇಷ್ಠನು, 1:4–14

## ಪರಿಚಯ

ಹಿಂದಿನ ಅಧ್ಯಯನದಲ್ಲಿ 'ಈ"ಕೊನೆಯ ದಿನಗಳಲ್ಲಿ'"ದೇವರು ತನ್ನ ಮಗನಾದ ಯೇಸುವಿನ ಮುಖಾಂತರ ಹೇಗೆ ಮಾತನಾಡುತ್ತಾನೆ ಎಂಬುದನ್ನು ನೋಡಿದೆವು. ಸುವಾರ್ತೆಗಳಲ್ಲಿ ಯೇಸು ತನ್ನ ಕುರಿತಾಗಿ ಅನೇಕಾವರ್ತಿ "ಮಗನು" ಎಂಬ ಶೀರ್ಷಿಕೆಯನ್ನು ಉಪಯೋಗಿಸುತ್ತಾನೆ. ಇದು ಕೀರ್ತನೆ 2:7ರಲ್ಲಿ ಬರುವ ಮೆಸ್ಸೀಯನ ಶೀರ್ಷಿಕೆಯನ್ನು ಆಧರಿಸಿದೆ ('ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ') ಮತ್ತು 2 ಸಮುವೇಲ 7:12–14 ರಲ್ಲಿ ಪ್ರವಾದಿಯಾದ ನಾತಾನನ ಮೂಲಕ ಅರಸನಾದ ದಾವೀದನಿಗೆ ಕಳುಹಿಸಿದ ಸಂದೇಶದಲ್ಲಿ ದಾವೀದನ ಸಂತಾನಕ್ಕೆ/ಮಗನಿಗೆ ಈ ವಾಗ್ದಾನವನ್ನು ಮಾಡುತ್ತಾನೆ (ಐತಿಹಾಸಿಕವಾಗಿ ಸೊಲೊಮೋನನನ್ನು, ಆದರೆ ಪ್ರವಾದನಾತ್ಮಕವಾಗಿ ಮೆಸ್ಸೀಯನನ್ನು ಉಲ್ಲೇಖಿಸುತ್ತಾನೆ); *ನಾನು ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗೆ ಮನೆಯನ್ನು ಕಟ್ಟುವನು. ನಾನು ಅವನ ರಾಜ್ಯದ ಸಿಂಹಾಸನವನ್ನು ಸದಾಕಾಲಕ್ಕೂ ಸ್ಥಿರಮಾಡುವೆನು, ನಾನು ಅವನಿಗೆ ತಂದೆಯಾಗಿರುವೆನು, ಅವನು ನನ್ನ ಮಗನಾಗಿರುವನು.*

ಈ ವೇದಭಾಗದಲ್ಲಿ, ಗ್ರಂಥಕರ್ತನು ಕ್ರಿಸ್ತನು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ ಎಂಬ ತನ್ನ ಬೋಧನೆಯನ್ನು ಬಲಪಡಿಸಲು ಮೇಲೆ ತಿಳಿಸಿರುವ (ಕೀರ್ತನೆ 2:7 ಮತ್ತು 2 ಸಮುವೇಲ 7:12–14) ಮೆಸ್ಸೀಯನ ಕುರಿತಾದ ಎರಡು ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ಉಲ್ಲೇಖಿಸುತ್ತಾನೆ.

ಹಳೆ ಒಡಂಬಡಿಕೆಯ ಪಠ್ಯಗಳ ಮೆಸ್ಸೀಯನ ಪ್ರವಾದನಾತ್ಮಕ ಬಳಕೆಯು ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತ ಹಾಗೂ ಯೆಹೂದ್ಯ ಬರಹಗಾರರಿಂದ ದೃಢವಾಗಿ ಸ್ಥಾಪಿತಗೊಂಡಿದೆ. ಆದರೆ ಕೆಲವು ಸನ್ನಿವೇಶಗಳಲ್ಲಿ, ಆಧುನಿಕ ಓದುಗರಾದ ನಮಗೆ ಹಳೆ ಒಡಂಬಡಿಕೆಯನ್ನು ಅವರು ಅರ್ಥವಿವರಿಸುವ ಅವರ ವಿಧಾನವು ಗೊಂದಲಮಯ ಮತ್ತು ವಿಚಿತ್ರವೆನಿಸುತ್ತದೆ. ಈ ಅಧ್ಯಯನದಲ್ಲಿ ನಾವು ಈ ಅಭ್ಯಾಸದ ಎರಡು "ವಿಚಿತ್ರವಾದ" ಉದಾಹರಣೆಗಳನ್ನು ಕಾಣುತ್ತೇವೆ, 1:8–9 ಮತ್ತು 1:10. ಇದು ಹೇಗೆ ಮಾಡಲ್ಪಟ್ಟಿದೆ ಎಂಬುದನ್ನು ನಾವು ನೋಡೋಣ ಮತ್ತು ಸ್ವತಃ ನಾವೇ ಈ ಅಭ್ಯಾಸವನ್ನು ಅನುಸರಿಸುವ ಅನುಮತಿಯನ್ನು ಹೊಂದಿಲ್ಲ.

ನಾವು ಹೊಸ ಒಡಂಬಡಿಕೆಯ ಪಠ್ಯದಲ್ಲಿರುವ ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಹಳೆ ಒಡಂಬಡಿಕೆಯ "ಮೂಲ" ಪಠ್ಯದೊಂದಿಗೆ ಹೋಲಿಸುವಾಗ ಅನೇಕಾವರ್ತಿ ಪದಗಳು ಭಿನ್ನವಾಗಿರುವದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಈ ವ್ಯತ್ಯಾಸಗಳು ಸಣ್ಣ ವ್ಯತ್ಯಾಸಗಳಾಗಿವೆ, ಆದರೆ ಕೆಲವೊಮ್ಮೆ ಅರ್ಥವು ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಇದಕ್ಕೆ ಕಾರಣವೆಂದರೆ ನಮ್ಮ ಸತ್ಯವೇದದಲ್ಲಿರುವ ಹಳೆ ಒಡಂಬಡಿಕೆಯ ಪುಸ್ತಕಗಳು ಇಬ್ರಿಯ ಸತ್ಯವೇದದಿಂದ ಅನುವಾದಿಸಲಾಗಿದೆ ('ಮೆಸೋರಟಿಕ್' ಎಂದು ಕರೆಯಲ್ಪಡುವ ಪಠ್ಯದಿಂದ) ಅದೇ ಸಮಯದಲ್ಲಿ ಹೊಸ ಒಡಂಬಡಿಕೆಯ ಲೇಖಕರು ಬಹುತೇಕವಾಗಿ ಹಳೆ ಒಡಂಬಡಿಕೆಯ ಪುಸ್ತಕಗಳ ಗ್ರೀಕ್ ಸೆಪ್ಟುವಾಜಿಂಟ್ ಅನುವಾದದಿಂದ ಉಲ್ಲೇಖಿಸುತ್ತಾರೆ.

## ಓದಿರಿ

ಇಬ್ರಿಯ 1:1–14



## ಪ್ರಶ್ನೆಗಳು

1. ಯಾವ ವಿಧದಲ್ಲಿ ಯೇಸು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ? ಪಟ್ಟಿ ಮಾಡಿರಿ. ನೀವು ಈ ವಚನಗಳಿಂದ ಕನಿಷ್ಠ ಆರು ಅಂಶಗಳನ್ನು ಕಂಡುಹಿಡಿಯಲು ಸಮರ್ಥರಾಗಬೇಕು.
2. ವಚನ 8 ರಲ್ಲಿ ಗ್ರಂಥಕರ್ತನು ಕೀರ್ತನೆ 45:6–7 ನ್ನು ಉಲ್ಲೇಖಿಸುತ್ತಾನೆ. ಈ ವಚನಗಳನ್ನು ನೋಡಿರಿ. ಇದನ್ನು ಕೀರ್ತನೆಗಾರನು ಯಾರ ಕುರಿತಾಗಿ ಬರೆಯುತ್ತಾನೆ? ಕೀರ್ತನೆಗಾರನ ಮಾತುಗಳನ್ನು ಇಬ್ರಿಯರಿಗೆ ಬರೆದ ಪತ್ರಿಕೆಯು ಹೇಗೆ ಅರ್ಥೈಸುತ್ತದೆ?
3. ವಚನ 8 ರಲ್ಲಿ ಗ್ರಂಥಕರ್ತನು ಕೀರ್ತನೆ 102:25–27 ನ್ನು ಉಲ್ಲೇಖಿಸುತ್ತಾನೆ. ಈ ವಚನಗಳನ್ನು ನೋಡಿರಿ. ಕೀರ್ತನೆಗಾರನು ಯಾರ ಕುರಿತಾಗಿ ಬರೆಯುತ್ತಾನೆ? ಕೀರ್ತನೆಗಾರನ ಮಾತುಗಳನ್ನು ಇಬ್ರಿಯರಿಗೆ ಬರೆದ ಪತ್ರಿಕೆಯು ಹೇಗೆ ಅರ್ಥೈಸುತ್ತದೆ?

## ಟಿಪ್ಪಣಿಗಳು

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯನ್ನು ಈ ಕೆಳಗಿನಂತೆ ಅರ್ಥಮಾಡಿಕೊಳ್ಳುತ್ತಾನೆ:

1. ಹಳೆ ಒಡಂಬಡಿಕೆಯು ಹೊಸ ಒಡಂಬಡಿಕೆಯ ಕ್ರೈಸ್ತ ವಿಶ್ವಾಸಿಗಳಿಗೆ ಸಹ ಸಮಂಜಸವಾಗಿದೆ. ಅದರ ಸಮಂಜಸತೆಯು ಕೇವಲ ಐತಿಹಾಸಿಕ ಸನ್ನಿವೇಶ ಅಥವಾ ಯೆಹೂದಿ ನಂಬಿಕೆಗೆ ಮಾತ್ರ ಸೀಮಿತವಾಗಿಲ್ಲ.
2. ಹಳೆ ಒಡಂಬಡಿಕೆಯ ಸಂದೇಶವು ದೇವರ ಭರವಸೆ, ನಂಬಿಗಸ್ತಿಕೆ ಮತ್ತು ಪ್ರೀತಿಯ ಕುರಿತು ಸಾಕ್ಷಿ ಹೇಳುತ್ತದೆ. ಹಳೆ ಒಡಂಬಡಿಕೆಯ ಅದೇ ದೇವರು ನಮಗೆ ರಕ್ಷಣೆಯನ್ನು ತರುವದಕ್ಕೆ ಯೇಸು ಕ್ರಿಸ್ತನಲ್ಲಿ ನರಾವತಾರವೆತ್ತಿದನು.
3. ಹಾಗಾಗಿ ಹಳೆ ಒಡಂಬಡಿಕೆಯ ಪ್ರಕಟನೆಯು ಇಂದಿಗೂ ಸಹ ಸಮಂಜಸವಾಗಿದೆ. ಈ ಕಾರಣದಿಂದ ಆತನು ಯೇಸು ಮತ್ತು ಆತನ ಕಾರ್ಯಗಳ ಕುರಿತಾದ ತನ್ನ ಬೋಧನೆಯನ್ನು ಬೆಂಬಲಿಸಲು ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಉಪಯೋಗಿಸುತ್ತಾನೆ.
4. ಆತನು ಹಳೆ ಒಡಂಬಡಿಕೆಯನ್ನು ಸಂಪೂರ್ಣವಾಗಿ ಕ್ರಿಸ್ತ ಕೇಂದ್ರಿಕೃತವಾಗಿ ಕಾಣುತ್ತಾನೆ. "ಎಲ್ಲವೂ ಯೇಸುವಿನ ಕುರಿತಾಗಿದೆ!"
5. ಇದರ ಪರಿಣಾಮವಾಗಿ, ಹಳೆ ಒಡಂಬಡಿಕೆಯನ್ನು ಆತನು ಸಾಂಕೇತಿಕವಾಗಿ ಅರ್ಥೈಸುತ್ತಾನೆ. ಆತನು ಕೆಲವೊಂದು ಪಠ್ಯಗಳಲ್ಲಿ ಆಳವಾದ ಹಂತವನ್ನು, ಆಳವಾದ ಸಂದೇಶವನ್ನು ಕಂಡುಕೊಳ್ಳುತ್ತಾನೆ. ಪಠ್ಯವು ವಾಸ್ತವಿಕವಾಗಿ ಮತ್ತು ಐತಿಹಾಸಿಕವಾಗಿ ಬೇರೊಬ್ಬರ (ಒಬ್ಬ

ಇಸ್ರಾಯೇಲರ ಅರಸನ ಅಥವಾ ಯೆಹೋವನ) ಕುರಿತಾಗಿದ್ದಾಗ್ಯೂ, ಈ ಆಳವಾದ ಸಂದೇಶವು ಮೆಸ್ಸೀಯನಾದ ಯೇಸುವಿನ ಕುರಿತಾಗಿದೆ.

6. ಹೇಗಿದ್ದರೂ (ನಮಗೊಂದು ಎಚ್ಚರಿಕೆಯಾಗಿ), ಈ ಆಳವಾದ ಹಂತವು ಹಾಗೂ ಈ ಆಳವಾದ ಸಂದೇಶವು ಗ್ರಂಥಕರ್ತನಿಗಿರುವ ದೈವೀಕ ಪ್ರೇರೇಪಣೆಯ ಪರಿಣಾಮವಾಗಿವೆ. ಹೊಸ ಒಡಂಬಡಿಕೆಯ ಲೇಖಕರು (ಸುವಾರ್ತೆಯ ಲೇಖಕರು, ಅಪೋಸ್ತಲರು, ಪೌಲನು ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು) ಹಳೆ ಒಡಂಬಡಿಕೆಯನ್ನು ಈ ರೀತಿಯಾಗಿ ಅರ್ಥೈಸಲು ಅನುಮತಿಸಲ್ಪಟ್ಟಿದ್ದರು – ಯಾಕೆಂದರೆ ಅವರು ಪವಿತ್ರಾತ್ಮನಿಂದ ಪ್ರೇರೆಪಿಸಲ್ಪಟ್ಟವರಾಗಿದ್ದರು ಮತ್ತು ಪವಿತ್ರಾತ್ಮನು ಹೊಸ ಒಡಂಬಡಿಕೆಯ ಅಧಿಕೃತ ಪುಸ್ತಕಗಳಲ್ಲಿ ಅವರ ಪುಸ್ತಕಗಳು ಸೇರ್ಪಡೆಯಾಗುವಂತೆ ನೋಡಿಕೊಂಡನು. ನಮಗೆ ಆ ಅವಕಾಶವಿಲ್ಲ. ಆದುದರಿಂದ ನಾವು ಹಳೆ ಒಡಂಬಡಿಕೆಯ ವೇದ ಭಾಗಗಳನ್ನು ಸಾಂಕೇತಿಕವಾಗಿ ಅರ್ಥೈಸುವದರಲ್ಲಿ ಹೊಸ ಒಡಂಬಡಿಕೆಯಲ್ಲಿ ಕಂಡುಬರುವಂತಹ ಅರ್ಥಕ್ಕೆ ಮಾತ್ರ ಸೀಮಿತಗೊಳಿಸಬೇಕು. ನಾವು ನಮ್ಮ ಸ್ವಂತದ್ದನ್ನು ಸೃಷ್ಟಿಸಲು ಅನುಮತಿಯನ್ನು ಹೊಂದಿಲ್ಲ.

7. ಆತನು ದೇವರ ಮತ್ತು ಮನುಷ್ಯರ ನಡುವಿನ ಮಧ್ಯವರ್ತಿಯಾಗಿದ್ದ (ದೇವದೂತರಿಗಿಂತ ಮಿಗಿಲಾಗಿದ್ದ) ಯೇಸುವಿನ ಶ್ರೇಷ್ಟತೆಯನ್ನು ಹಾಗೂ ಆತನ ದೈವಿಕತೆಯನ್ನು ಬಲಪಡಿಸಿದನು (ಗ್ರೀಕ್ ಸೆಪ್ಟುವಾಜಿಂಟ್ ಅನುವಾದದಿಂದ) ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಬಳಸಿದನು.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಮೇಲಿನ ಪ್ರಶ್ನೆ 1 ರ ನಿಮ್ಮ ಉತ್ತರವನ್ನು ಬಳಸಿಕೊಂಡು ಯೇಸು ದೇವದೂತರಿಗಿಂತ ಶ್ರೇಷ್ಠನು ಎಂಬುದರ ಕುರಿತು ಒಂದು ಧ್ಯಾನವನ್ನು ಸಿದ್ಧಪಡಿಸಿರಿ.

# ಅಧ್ಯಯನ 3: ‘ಆದ್ದರಿಂದ ದಾರಿ ಬಿಟ್ಟುಹೋಗದಂತೆ’, 2:1–4

## ಪರಿಚಯ

ಗ್ರಂಥಕರ್ತನು ಯೇಸುವಿನ ಕುರಿತಾದ ತನ್ನ ಬೋಧನೆಗೆ ಎಚ್ಚರಿಕೆಯನ್ನು ಈಗ ಸೇರಿಸುತ್ತಾ ಆತನು ತನ್ನ ಓದುಗರಿಗೆ ಸುವಾರ್ತೆಯ ಸಂದೇಶವನ್ನು (‘ನಾವು ಕೇಳಿದ ಸಂಗತಿಗಳನ್ನು’) ಎಚ್ಚರಿಕೆಯಿಂದ ಲಕ್ಷವಿಟ್ಟು ಕೇಳಬೇಕೆಂದು ಹೇಳುತ್ತಾನೆ ಆತನು ಕ್ರಿಸ್ತನ ಮತ್ತು ಕ್ರೂಜೆಯ ಮೇಲೆ ಆತನ ರಕ್ಷಣೆಯ ಕಾರ್ಯದ ಸಂದೇಶದಿಂದ ತಪ್ಪಿಹೋಗುವ ಪರಿಣಾಮದ ಕುರಿತು ಎಚ್ಚರಿಸುತ್ತಾನೆ.

## ಓದಿರಿ

ಇಬ್ರಿಯರಿಗೆ 2:1–4

## ಪ್ರಶ್ನೆಗಳು

1. ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರು ಯಾಕೆ ಲಕ್ಷವನ್ನು ಕೊಡಬೇಕು?
2. “ದೇವದೂತರಿಂದ ಹೇಳಲ್ಪಟ್ಟ ಸಂದೇಶದ” ಕುರಿತು ನಾವು ಏನನ್ನು ಕಲಿಯುತ್ತೇವೆ?
3. ದೇವರ ರಕ್ಷಣೆಯ ಸಂದೇಶದ ಕುರಿತು ನಾವು ಏನನ್ನು ತಿಳಿದುಕೊಳ್ಳುತ್ತೇವೆ?
4. ಈ ವೇದಭಾಗದಲ್ಲಿ ನಮಗಿರುವ ಸಂದೇಶವೇನು?
5. ‘ದಾರಿ ಬಿಟ್ಟುಹೋಗುವುದರ’ ಪರಿಣಾಮವೇನು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಮೇಲಿರುವ ಪ್ರಶ್ನೆ 3, 4 ಮತ್ತು 5 ರ ಉತ್ತರಗಳನ್ನು ಬಳಸಿಕೊಂಡು ದೇವರ ರಕ್ಷಣಾ ಸಂದೇಶದ ಕುರಿತು ಒಂದು ಪ್ರಸಂಗವನ್ನು ಸಿದ್ಧಪಡಿಸಿರಿ.

# ಅಧ್ಯಯನ 4: ನಮ್ಮ ರಕ್ಷಣೆಯ ಜನಕ, 2:5–13

## ಪರಿಚಯ

ಹಿಂದಿನ ಅಧ್ಯಯನವು (2:1–4) ವಿಶ್ವಾಸಿಗಳಿಗೆ ಸುವಾರ್ತೆಯ ಸಂದೇಶದಿಂದ ತಪ್ಪಿಹೋಗಬಾರದೆಂಬ ಎಚ್ಚರಿಕೆಯ ಉಪವಾಕ್ಯವಾಗಿದೆ. ಈಗ ಗ್ರಂಥಕರ್ತನು ಯೇಸುವಿನ ಕುರಿತಾದ ತನ್ನ ಬೋಧನೆಗೆ ಹಿಂತಿರುಗುತ್ತಾನೆ. ಈ ಹಿಂದೆ (ಅಧ್ಯಾಯ 1 ರಲ್ಲಿ) ಯೇಸು ಪ್ರವಾದಿ, ಯಾಜಕ ಮತ್ತು ಅರಸನು ಎಂಬುದಾಗಿ ನೋಡಿದೆವು. ಈ ವೇದಭಾಗದಲ್ಲಿ ಆತನು "ರಕ್ಷಣೆಯ ಜನಕ" ಸಹ ಆಗಿದ್ದಾನೆ ಎಂದು ನೋಡುತ್ತೇವೆ.

## ಟಿಪ್ಪಣಿಗಳು

1. "ಸ್ವಲ್ಪವೇ" ಎಂದು ಅನುವಾದಿಸಲ್ಪಟ್ಟ ಗ್ರೀಕ್ ಪದವು (ಕನ್ನಡ ಸತ್ಯವೇದದಲ್ಲಿಯೂ ಸಹ) ವಚನ 7 ಮತ್ತು 9 ರಲ್ಲಿ ಅನೇಕಾವರ್ತಿ ಸಮಯದ ಕುರಿತಾಗಿ ಉಪಯೋಗಿಸಲ್ಪಟ್ಟಿದೆ. ಈ ವೇದಭಾಗದಲ್ಲಿ ಇಬ್ರಿಯ ಗ್ರಂಥಕರ್ತನೂ ಸಹ ಇದೇ ರೀತಿಯಾಗಿ ಅರ್ಥಮಾಡಿಕೊಳ್ಳುತ್ತಾನೆ.
2. ವ 10 ರಲ್ಲಿ ಯೇಸುವಿನ ಕುರಿತಾಗಿ ಉಪಯೋಗಿಸಲ್ಪಟ್ಟ ಗ್ರೀಕ್ ಪದವು "ನಾಯಕ, ಮೂಲಕರ್ತ" ಎಂಬ ಅರ್ಥವನ್ನು ಸಹ ನೀಡುತ್ತದೆ (ಕನ್ನಡ NIBV ಯಲ್ಲಿ *ನಾಯಕ*, ಕನ್ನಡ JV ಯಲ್ಲಿ *ಕರ್ತನು*). ಅದೇ ಪದವನ್ನು 12:2ರಲ್ಲಿ ಕಾಣಬಹುದು.

## ಓದಿರಿ

ಇಬ್ರಿಯ 2:5–13

## ಪ್ರಶ್ನೆಗಳು

1. ವಚನ 5 ರಲ್ಲಿ ನಾವು ದೇವದೂತರ ಕುರಿತಾಗಿ ಏನನ್ನು ಕಲಿಯುತ್ತೇವೆ?
2. ನಾವು ವಚನ 5ರಲ್ಲಿ "ಮುಂದಣ ಸಾಮ್ರಾಜ್ಯ" ಎಂಬ ಹೇಳಿಕೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು (1:2 ರಲ್ಲಿರುವ "ಕೊನೆಯ ದಿವಸಗಳು" ಮತ್ತು 6:5 ರಲ್ಲಿರುವ "ಮುಂದಣ ಯುಗ" ದೊಂದಿಗೆ ಹೋಲಿಸಿರಿ)?
3. ವ 6–9 ರಲ್ಲಿ ನಾವು ಯೇಸುವಿನ ಕುರಿತಾಗಿ ಏನನ್ನು ಕಲಿಯುತ್ತೇವೆ?
4. ವ 10 ರಲ್ಲಿ ನಾವು ಯೇಸುವಿನ ಕುರಿತಾಗಿ ಏನನ್ನು ಕಲಿಯುತ್ತೇವೆ?
5. ವ 11–13 ರಲ್ಲಿ ನಾವು ಕ್ರೈಸ್ತ ವಿಶ್ವಾಸಿಗಳ ಕುರಿತಾಗಿ ಏನನ್ನು ಕಲಿಯುತ್ತೇವೆ?
6. ವ 11–13 ರಲ್ಲಿ ನಾವು ಯೇಸುವಿನ ಕುರಿತಾಗಿ ಏನನ್ನು ಕಲಿಯುತ್ತೇವೆ?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



ಮೇಲಿರುವ ಪ್ರಶ್ನೆ 4, 5 ಮತ್ತು 6 ರ ಉತ್ತರಗಳನ್ನು ಬಳಸಿಕೊಂಡು 'ಯೇಸು ನಮ್ಮ ರಕ್ಷಣೆಯ ಜನಕ' ಎಂಬ ಒಂದು ಪ್ರಸಂಗವನ್ನು ಸಿದ್ಧಪಡಿಸಿರಿ.

## ಗ್ರಂಥಾಲಯದ ಸಮಯ/ಮನೆಗೆಲಸಕ್ಕೆ ಸಲಹೆಗಳು – ಸೋಮವಾರ (ಈ ವಿಷಯದ ಮೊದಲನೇ ದಿನ)



1. "ಇಬ್ರಿಯರಿಗೆ ಓದುವದು" ಭಾಗವನ್ನು ಮುಗಿಸಿರಿ.
2. ಅಧ್ಯಯನ 1–4 ನ್ನು ಮುಗಿಸಿರಿ.
3. ನಿಮಗೆ ಸಮಯವಿದ್ದಲ್ಲಿ: "ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯದ ಉತ್ತರಗಳನ್ನು" ಓದಿರಿ.
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ಅಧ್ಯಯನ ಮಾಡಿರುವ ಯಾವುದಾದರೊಂದು ವೇದಭಾಗದ ಮೇಲೆ ಸತ್ಯವೇದ ಅಧ್ಯಯನ/ ಪ್ರಸಂಗ/ಧ್ಯಾನವನ್ನು ಸಿದ್ಧಪಡಿಸಿರಿ.

# ಅಧ್ಯಯನ 5: ಸೈತಾನನಿಂದ ನಮ್ಮನ್ನು ವಿಮೋಚಿಸುವಾತನು 2:14–18

## ಪರಿಚಯ

ಮಾನವ ಜೀವಿಗಳಿಗೆ ಪಾಪ ಮತ್ತು ಮರಣದಿಂದ ವಿಮೋಚನೆಯ ಅಗತ್ಯತೆಯಿದೆ. ನಮಗೆ ರಕ್ಷಣೆಯ ಅವಶ್ಯಕತೆಯಿದೆ. ದೇವರು ಮಾತ್ರ ನಮಗೆ ಈ ರಕ್ಷಣೆಯನ್ನು ಒದಗಿಸಲು ಸಾಧ್ಯ. ಅದನ್ನು ಮಾಡುವದಕ್ಕೆ ಆತನು ನಮ್ಮಲ್ಲಿ ಒಬ್ಬನಂತೆ ಆಗಬೇಕಾಯಿತು. ಆತನು ಯೇಸು ಕ್ರಿಸ್ತನಲ್ಲಿ ನರಾವತಾರವೆತ್ತಿದನು.

ಈ ವೇದಭಾಗವು ಮನುಷ್ಯನ ಸಮಸ್ಯೆಗಳನ್ನು ವಿವರಿಸುತ್ತದೆ ಮತ್ತು ಯೇಸು ಹೇಗೆ ಅವುಗಳಿಗೆ ಪರಿಹಾರವನ್ನು ಒದಗಿಸುತ್ತಾನೆ ಎಂಬುದನ್ನು ತೋರಿಸುತ್ತದೆ.

## ಓದಿರಿ

ಇಬ್ರಿಯರಿಗೆ 2:14–18

## ಪ್ರಶ್ನೆಗಳು

1. ಈ ವೇದ ಭಾಗದಲ್ಲಿ ನಾವು ದೇವದೂತರ ಕುರಿತಾಗಿ ಏನನ್ನು ಕಲಿಯುತ್ತೇವೆ?
2. ಮನುಷ್ಯನ ಮೂರು ವೈರಿಗಳು ಯಾರು, ಆತನನ್ನು ದಾಸತ್ವದಲ್ಲಿಡುವ ಮೂರು ಶಕ್ತಿಗಳು ಯಾವವು?
3. ಯೇಸು ಮನುಷ್ಯನಾಗುವುದು ಯಾಕೆ ಅವಶ್ಯವಾಗಿತ್ತು?
4. ಶ್ರೇಷ್ಠ ಮಹಾಯಾಜಕನಾಗಿ ಯೇಸುವಿನ ಕಾರ್ಯ ಏನಾಗಿತ್ತು?
5. ಯೇಸುವಿನ ಬರೋಣವು ಸೈತಾನನ ಅಂತ್ಯದ ಪ್ರಾರಂಭ ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಈ ವೇದಭಾಗದಲ್ಲಿ ಈ ಸತ್ಯವು ಹೇಗೆ ಕಂಡುಬರುತ್ತದೆ?
6. ಹಾಗಾದರೆ ಒಂದು ವೇಳೆ ಯೇಸು ಸೈತಾನನ ಮೇಲೆ ಜಯವನ್ನು ಈಗಾಗಲೇ ಸಾಧಿಸಿದ್ದರೆ, ಆತನು ಈಗಲೂ ಲೋಕದಲ್ಲಿ ಯಾಕೆ ಅಷ್ಟು ಕ್ರಿಯಾತ್ಮಕನಾಗಿದ್ದಾನೆ?
7. ಈ ವೇದಭಾಗವು ಬಹಳ ಸಮಾಧಾನಕರವಾದ ಟಿಪ್ಪಣಿಯೊಂದಿಗೆ ಕೊನೆಗೊಳ್ಳುತ್ತದೆ. ನರಾವತಾರಿಯಾಗುವುದರ ಮತ್ತು ಪ್ರಾಯಶ್ಚಿತ್ತದ ಕಾರ್ಯದ ಮೂಲಕ ಆತನು ನೆರವೇರಿಸಿರುವ ಕಾರ್ಯದಿಂದ, ಯೇಸು ನಮ್ಮ ದಿನನಿತ್ಯದ ಕ್ರಿಸ್ತೀಯ ಜೀವಿತದಲ್ಲಿ ನಮಗೆ ಸಹಾಯ ಮಾಡಲು ಶಕ್ತನಾಗಿದ್ದಾನೆ. ಹಾಗಾಗಿ ಯೇಸುವಿನ ವಿಮೋಚನೆಯ ಕಾರ್ಯವು ನಮ್ಮ ಜೀವಿತದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ ಎಂದು ಹೇಳಬಹುದು. ನಿಮ್ಮ ಸ್ವಂತ ಅನುಭವದಿಂದ ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಮೇಲಿರುವ ಪ್ರಶ್ನೆ 2 ರಿಂದ 7 ರ ಉತ್ತರಗಳನ್ನು ಬಳಸಿಕೊಂಡು "ಯೇಸು ನಮ್ಮನ್ನು ಸೈತಾನನಿಂದ ಬಿಡಿಸುತ್ತಾನೆ" ಎಂಬ ಒಂದು ಪ್ರಸಂಗವನ್ನು ಸಿದ್ಧಪಡಿಸಿರಿ.

## ಟಿಪ್ಪಣಿ

ವಚನ 17ರಲ್ಲಿ ಗ್ರಂಥಕರ್ತನು ಯೇಸುವಿನ ಕುರಿತಾಗಿ ಮೊದಲನೆಯ ಸಾರಿ "ಮಹಾಯಾಜಕನು" ಎಂಬ ಹೇಳಿಕೆವನ್ನು ವ್ಯಕ್ತಪಡಿಸುತ್ತಾನೆ. ಆತನು ಅರ್ಥವೇನೆಂದು ನಿಜವಾಗಿಯೂ ವಿವರಿಸದೇ ಅದನ್ನು ತಿಳಿಸುತ್ತಾನೆ. ಆದರೆ ಆತನು ಈ ಗ್ರಂಥದಲ್ಲಿ "ಶ್ರೇಷ್ಠ ಮಹಾಯಾಜಕನಾಗಿ" ಯೇಸು ನಮಗೋಸ್ಕರ ಏನನ್ನು ಮಾಡಿದ್ದಾನೆ ಎಂಬುದನ್ನು ವಿವರಿಸುತ್ತಾ ಈ ವಿಷಯಕ್ಕೆ ಪದೇ ಪದೇ ಹಿಂತಿರುಗುತ್ತಾನೆ (4:14)

ಪ್ರಾಚೀನ ಇಸ್ರಾಯೇಲಿನ ಮಹಾಯಾಜಕನು ಎಲ್ಲಾ ಯಾಜಕರ ಮುಖ್ಯಸ್ಥನಾಗಿದ್ದನು. ಆತನೊಬ್ಬನಿಗೆ ಮಾತ್ರ ದೇವರ ಪ್ರಸನ್ನತೆಯಿರುವ ಅತೀ ಪರಿಶುದ್ಧವಾದ ಸ್ಥಳದಲ್ಲಿ ಪ್ರವೇಶಿಸುವದಕ್ಕೆ ಅನುಮತಿಯಿತ್ತು (ಮೊದಲು ದೇವದರ್ಶನ ಗುಡಾರದಲ್ಲಿ ನಂತರ ಯೆರೂಸಲೇಮಿನ ದೇವಾಲಯದಲ್ಲಿ). ಆತನು ಇದನ್ನು ವರ್ಷಕ್ಕೆ ಒಂದಾವರ್ತಿ ಮಾತ್ರ ಪ್ರಾಯಶ್ಚಿತದ ದಿನದಂದು ಮಾಡಬಹುದಾಗಿತ್ತು.

ಹೊಸ ಒಡಂಬಡಿಕೆಯ ಯಾವ ಪುಸ್ತಕವೂ ಯೇಸುವಿನ ಕುರಿತಾಗಿ "ಮಹಾಯಾಜಕನ" ಈ ವರ್ಣನೆಯನ್ನು ಉಪಯೋಗಿಸುವದಿಲ್ಲ. ಆದುದರಿಂದ ಇದು ಇಬ್ರಿಯರಿಗೆ ಬರೆದ ಪತ್ರಿಕೆಯ ಒಂದು ವಿಶಿಷ್ಟವಾದ ಅಂಶವಾಗಿದೆ.

*ಯೆರೂಸಲೇಮಿನ ದೇವಾಲಯದ ಮಾದರಿಯ ಫೋಟೋ*



# ಅಧ್ಯಯನ 6: ನಿಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಿರಿ, 3:1–6

## ಪರಿಚಯ

ಅಧ್ಯಾಯ 1 ರಲ್ಲಿ, ಇಬ್ರಿಯರಿಗೆ ಬರೆದ ಪತ್ರಿಕೆಯು ಯೇಸುವನ್ನು ದೇವದೂತರೊಂದಿಗೆ ಹೋಲಿಸುತ್ತದೆ ಮತ್ತು ಆತನು ಅವರಿಗಿಂತ ಬಹಳ ಶ್ರೇಷ್ಠನಾಗಿದ್ದಾನೆ ಎಂಬುದನ್ನು ಕಂಡುಕೊಳ್ಳುತ್ತದೆ. ಈ ಅಧ್ಯಾಯದಲ್ಲಿ ಯೇಸುವನ್ನು ಮೋಶೆಯೊಂದಿಗೆ ಹೋಲಿಸಲಾಗಿದೆ ಮತ್ತು ಆತನು ಮೋಶೆಗಿಂತ ಬಹಳ ಶ್ರೇಷ್ಠನು ಎಂದು ಕಂಡುಕೊಳ್ಳುತ್ತದೆ. ಆದುದರಿಂದ ವಿಶ್ವಾಸಿಗಳು ತಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಬೇಕು. ಯೇಸು ಅವರಿಗಾಗಿ ಮಾಡಿದ ಸಂಗತಿಯ ಕುರಿತು ಅವರು ಆಲೋಚಿಸಬೇಕು.

## ಓದಿರಿ

ಇಬ್ರಿಯ 3:1–6

## ಪ್ರಶ್ನೆಗಳು

1. ಈ ವೇದಭಾಗದಲ್ಲಿ ವಿಶ್ವಾಸಿಗಳಿಗೆ ಏನು ಮಾಡಲು ಹೇಳಲಾಗಿದೆ? 2:1–4 ನ್ನು ಹೋಲಿಸಿರಿ. ನಿಮ್ಮ ಸಮಾರೋಪವೇನು?
2. ವ 1 ರಲ್ಲಿ ವಿಶ್ವಾಸಿಗಳನ್ನು ಹೇಗೆ ವರ್ಣಿಸಲಾಗಿದೆ? ಈ ವರ್ಣನೆಯ ಮಹತ್ವವನ್ನು ವಿವರಿಸಿರಿ?
3. ವ 1 ರಲ್ಲಿ ಯೇಸುವನ್ನು ಹೇಗೆ ವರ್ಣಿಸಲಾಗಿದೆ? ಈ ವರ್ಣನೆಯ ಮಹತ್ವವನ್ನು ವಿವರಿಸಿರಿ?
4. ವ 2–6 ರಲ್ಲಿ ಯೇಸು ಮತ್ತು ಮೋಶೆಯನ್ನು ಹೋಲಿಸಲಾಗಿದೆ. ಹೋಲಿಕೆಗಳಾವವು? ವ್ಯತ್ಯಾಸಗಳಾವವು? ಈ ಹೋಲಿಕೆಯ ಮೂಲಕ ಗ್ರಂಥಕರ್ತನು ಯಾವ ಅಂಶವನ್ನು ಸ್ಪಷ್ಟಪಡಿಸುತ್ತಾನೆ?
5. ಈ ವೇದಭಾಗದಲ್ಲಿರುವ ವಚನ 1–2ನ್ನು (ಅಲ್ಲಿ — ಗತಕಾಲವನ್ನು ಉಲ್ಲೇಖಿಸುತ್ತಾ– ಯೇಸು ಮಹಾಯಾಜಕನಾಗಿ ಮತ್ತು ಅಪೋಸ್ತಲನಾಗಿ ನೇಮಿಸಲ್ಪಟ್ಟದ್ದನ್ನು ಕಾಣುತ್ತೇವೆ) 1:2 ರೊಂದಿಗೆ ಹೋಲಿಸಿರಿ (ಅಲ್ಲಿ ಆತನ ಭವಿಷ್ಯತ್ತನ್ನು ಸೂಚಿಸುತ್ತಾ – ದೇವರು ಯೇಸುವನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು ಎಂಬುದನ್ನು ಕಾಣುತ್ತೇವೆ) ಮತ್ತು 5:1, 5 ರೊಂದಿಗೂ ಹೋಲಿಸಿರಿ (ಅಲ್ಲಿ ವರ್ತಮಾನವನ್ನು ಉಲ್ಲೇಖಿಸುತ್ತಾ – ದೇವರು ಯೇಸುವನ್ನು ಮಹಾಯಾಜಕನನ್ನಾಗಿ ನೇಮಿಸುವದನ್ನು ಕಾಣುತ್ತೇವೆ). ನಿಮ್ಮ ಸಮಾರೋಪಗಳೇನು?
6. ಈ ವೇದಭಾಗದಲ್ಲಿ (ಮತ್ತು ಈ ಪತ್ರಿಕೆಯ ಉಳಿದ ಭಾಗದಲ್ಲಿ) ನಾವು ವಿಶ್ವಾಸಿಗಳಿಗೆ ವಾಗ್ದಾನ ಮಾಡಲ್ಪಟ್ಟ ಭದ್ರತೆ ಹಾಗೂ ವಿಶ್ವಾಸಿಗಳು ಕೊನೆಯವರೆಗೂ ತಾಳಿಕೊಳ್ಳಬೇಕಾದ ಸಂಗತಿಯ ನಡುವೆ ಇರುವ ಸಮತೋಲವನ್ನು ಕಾಣುತ್ತೇವೆ. ಹೇಗೆ ವಿವರಿಸಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

"ವಿಶ್ವಾಸಿಗಳ ಭದ್ರತೆ" ಎಂಬುದರ ಕುರಿತು ಒಂದು ಧ್ಯಾನ ಅಧ್ಯಯನವನ್ನು ಸಿದ್ಧಪಡಿಸಿರಿ. ಮೇಲಿರುವ ಪ್ರಶ್ನೆ 6 ರ ಉತ್ತರವನ್ನು ಬಳಸಿಕೊಂಡು ನಾವು ಯಾಕೆ 'ನಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಬೇಕು' ಎಂಬುದನ್ನು ವಿವರಿಸುವ ಪ್ರಸಂಗವನ್ನು ಸಿದ್ಧಪಡಿಸಿರಿ.

# ಅಧ್ಯಯನ 7: ಕೊನೆಯವರೆಗೆ ದೃಢವಾಗಿ, 3:7–4:13

## ಪರಿಚಯ

ಈ ವೇದಭಾಗವು ಕೀರ್ತನೆ 95:7–11 ರ ಮೇಲೆ ಆಧರಿತವಾದ "ಸತ್ಯವೇದ ಅಧ್ಯಯನವಾಗಿದೆ." ಕೀರ್ತನೆ 95 ನ್ನು ಪ್ರತಿ ವಾರ ಸಬ್ಬತ್ ದಿನದ ಆರಾಧನೆಯಲ್ಲಿ ಯೆಹೂದ್ಯರ ದೇವಾಲಯಗಳಲ್ಲಿ ಓದಲಾಗುತಿತ್ತು. ಈ ಕೀರ್ತನೆಯ ಮೊದಲನೇ ಭಾಗವು "ಆರಾಧನೆಯ" ಮೇಲೆ ಕೇಂದ್ರಿಕೃತವಾಗಿದೆ. ಎರಡನೇ ಭಾಗವು "ದೇವರ ಕುರಿತು ಇರುವ ನಿಷ್ಠೆಯ" ಕುರಿತಾಗಿದೆ. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಎರಡನೇ ಭಾಗವನ್ನು ತನ್ನ ಓದುಗರಿಗೆ ತನ್ನ ಸಂದೇಶವನ್ನು ನೀಡುವದಕ್ಕೆ ಉಪಯೋಗಿಸುತ್ತಾನೆ. ಅವರು ದೇವರು ಅವರಿಗಾಗಿ ಇಟ್ಟಿರುವ ನಿತ್ಯತ್ವದ ಸಬ್ಬತ್ ವಿಶ್ರಾಂತಿಯನ್ನು ಪ್ರವೇಶಿಸಲು ದೇವರ ವಾಕ್ಯದಲ್ಲಿ (ಸುವಾರ್ತೆಯಲ್ಲಿ) ದೃಢವಾಗಿ ನಿಂತುಕೊಳ್ಳಬೇಕು.

ಕೀರ್ತನೆ 95 ನ್ನು ಗ್ರಂಥಕರ್ತನು ಹೇಗೆ ಅರ್ಥಮಾಡಿಕೊಳ್ಳುತ್ತಾನೆಂಬುದನ್ನು ಗಮನಿಸಿರಿ: ಈ ಕೀರ್ತನೆಯ ಮೂಲಕ ದೇವರು ತನ್ನ ಜನರೊಂದಿಗೆ, ಅಂದರೆ ತನ್ನ ಸಭೆಯೊಂದಿಗೆ ಈಗಲೂ ಮಾತನಾಡುತ್ತಾನೆ. ಈ ಹಳೆಯ ಕೀರ್ತನೆಯು ಈಗ ಕೆಲವು ಯೆಹೂದ್ಯ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಬಿಟ್ಟುಬಿಡುವ ಶೋಧನೆಗೆ ಒಳಗಾಗಿರುವಾಗ ಅವರ ಸನ್ನಿವೇಶಕ್ಕೂ ("ದೇವರಾತ್ಮನು ಹೇಳುವಂತೆ" 3:7) ಒಂದು ಸಂದೇಶವನ್ನು ಹೊಂದಿದೆ.

## ಓದಿರಿ

ಇಬ್ರಿಯ 3:7–4:13

## ಪ್ರಶ್ನೆಗಳು

1. ಈ ವೇದಭಾಗಕ್ಕೂ ಮತ್ತು ಹಿಂದಿನ ಭಾಗಕ್ಕೂ ಯಾವ ಸಂಬಂಧವಿದೆ? ವಿವರಿಸಿರಿ.
2. ಈ ಹೇಳಿಕೆಗಳು ಇಸ್ರಾಯೇಲ್ಯರ ಇತಿಹಾಸದ ಯಾವ ಲಕ್ಷಣಗಳನ್ನು ಉಲ್ಲೇಖಿಸುತ್ತವೆ:
   a. ದಂಗೆ (3:8, 15)
   b. ಅರಣ್ಯದಲ್ಲಿ ಪರೀಕ್ಷಿಸಿದ ಸಮಯ (3:8)
   c. ಆ ಸಂತತಿಯವರು (3:10)
   d. ದೇವರ ವಿಶ್ರಾಂತಿಯಲ್ಲಿ ಸೇರುವರು (3:11, 18)
3. ಈ ವೇದಭಾಗವನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು (ಕೆಳಗಿನವುಗಳನ್ನು ನೋಡಿರಿ). ಪ್ರತಿಯೊಂದು ಭಾಗದಲ್ಲಿ ಓದುಗರಿಗೆ ಇರುವ ಸಂದೇಶವೇನು?

a. ಗತಕಾಲದ ಓದುಗರಿಗೆ ದೇವರ ವಾಕ್ಯ (3:7–11)

b. ವರ್ತಮಾನ ಕಾಲದ ಓದುಗರಿಗೆ ದೇವರ ವಾಕ್ಯ (3:12–19)

c. ಭವಿಷ್ಯತ್ತಕಾಲದ ಓದುಗರಿಗೆ ದೇವರ ವಾಕ್ಯ (4:1–13)

4. 3:12–19 ರ ಆಧಾರದ ಮೇಲೆ ದೇವರ ವಾಕ್ಯದ ಕುರಿತು ನಾಲ್ಕು ಅಂಶಗಳನ್ನು ಮಾಡಿರಿ.

a. 3:7, 15; 4:7

b. 3:12; 4:12

c. 4:6, 11

d. 3:13

5. 4:12–13 ರ ಎರಡು ಭಾಗಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ವಿವರಿಸಿರಿ.

6. ಈ ವೇದಭಾಗದಲ್ಲಿ ‘ಈ ಹೊತ್ತು’ ಎಂಬ ಪದವು ಐದು ಬಾರಿ ಯಾಕೆ ಉಪಯೋಗಿಸಲ್ಪಟ್ಟಿದೆ ಎಂದು ನಿಮಗನ್ನಿಸುತ್ತದೆ?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಮೇಲಿರುವ ಪ್ರಶ್ನೆ 4–6 ರ ಉತ್ತರವನ್ನು ಬಳಸಿಕೊಂಡು ಕ್ರೈಸ್ತ ವಿಶ್ವಾಸಿಗಳಾದ ನಾವು ಇಂದು ದೇವರ ವಾಕ್ಯದೊಂದಿಗೆ ಮತ್ತು ಸುವಾರ್ತಾ ಸಂದೇಶದೊಂದಿಗೆ ಯಾವ ಸಂಬಂಧವನ್ನು ಹೊಂದಿದ್ದೇವೆ ಎಂಬುದರ ಕುರಿತು ಪ್ರಸಂಗಿಸಿರಿ. ಈ ಅಧ್ಯಯನವನ್ನು ಆಧರಿಸಿ ‘ದೇವರ ವಾಕ್ಯ’ ಎಂಬ ಸಂದೇಶವನ್ನು ಸಿದ್ಧಪಡಿಸಿರಿ.

# ಅಧ್ಯಯನ 8: ಶ್ರೇಷ್ಠ ಮಹಾಯಾಜಕನು 4:14–5:10

## ಪರಿಚಯ

ಹಿಂದಿನ ಅಧ್ಯಯನದಲ್ಲಿ ಗ್ರಂಥಕರ್ತನು ತನ್ನ ಓದುಗರು ದೇವರ ವಾಕ್ಯದಲ್ಲಿ ಮತ್ತು ಸುವಾರ್ತೆಯಲ್ಲಿ ದೃಢವಾಗಿ ನಿಲ್ಲಬೇಕೆಂದು ಎಚ್ಚರಿಸುತ್ತಾನೆ. ಆಗ ಮಾತ್ರ ಅವರು ಕೊನೆಯದಾಗಿ "ದೇವರ ವಿಶ್ರಾಂತಿ"ಯಲ್ಲಿ ಸೇರುವರು.

ದೇವರು ಪರಿಶುದ್ಧನಾದ ದೇವರಾಗಿದ್ದಾನೆ. ಆತನು ನಮ್ಮ ಹೃದಯ ಮನಸ್ಸುಗಳ ಕುರಿತಾಗಿ ಎಲ್ಲವನ್ನೂ ಬಲ್ಲವನಾಗಿದ್ದಾನೆ. ನಾವು ಪಾಪಿಗಳಾಗಿದ್ದೇವೆಂದು ಆತನು ತಿಳಿದಾತನಾಗಿದ್ದಾನೆ. ಆದುದರಿಂದ, ನಾವು ಆತನ ಮುಂದೆ ಅಪರಾಧಿಗಳಾಗಿ ನಿಲ್ಲುತ್ತೇವೆ. ಈ ಕಾರಣದಿಂದಾಗಿ ನಮಗೆ ನಮ್ಮ ಪಾಪಗಳನ್ನು ನಿರ್ವಹಿಸುವ, ಮತ್ತು ದೇವರ ನಿತ್ಯವಾದ ವಿಶ್ರಾಂತಿಯಲ್ಲಿ ಸೇರಲು ಶಕ್ತರನ್ನಾಗಿ ಮಾಡುವ "ಶ್ರೇಷ್ಠ ಮಹಾಯಾಜಕನ" ಅವಶ್ಯಕತೆಯಿದೆ.

## ಟಿಪ್ಪಣಿ

ಈ ಅಧ್ಯಯನದಲ್ಲಿ ಗ್ರಂಥಕರ್ತನು ಮೆಲ್ಕಿಜೆದೇಕನನ್ನು ಪರಿಚಯಿಸುತ್ತಾನೆ, ಹಳೆ ಒಡಂಬಡಿಕೆಯಲ್ಲಿ ಬರುವ ರಹಸ್ಯಮಯ ವ್ಯಕ್ತಿ. ಮೆಲ್ಕಿಜೆದೇಕನು ಸಾಲೇಮಿನ ಅರಸನಾಗಿದ್ದನು ಮತ್ತು ಪರಲೋಕ ಮತ್ತು ಭೂಲೋಕಗಳನ್ನು ಸೃಷ್ಟಿಸಿದ ಸರ್ವೋನ್ನತ ದೇವರ ಯಾಜಕನಾಗಿದ್ದನು. ಆತನ ಹೆಸರು "ನೀತಿಯ ಅರಸನು" ಎಂಬುದಾಗಿ. ಮೆಸಪೋಟೆಮಿಯಾದ ನಾಲ್ಕು ಅರಸುಗಳೊಂದಿಗೆ ಯುದ್ಧದಲ್ಲಿ ಗೆದ್ದು ಕೊಳ್ಳೆಹೊಡೆದ ಎಲ್ಲಾ ಸಂಪತ್ತನ್ನು ತನ್ನೊಂದಿಗೆ ಹೊತ್ತು ತರುತ್ತಿದ್ದ ಅಬ್ರಹಾಮನನ್ನು ಭೇಟಿಯಾಗಲು ಮೆಲ್ಕಿಜೆದೇಕನು ಬಂದನು. ಮೆಲ್ಕಿಜೆದೇಕನು ಅಬ್ರಹಾಮನಿಗೆ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಕೊಟ್ಟು ಅವನನ್ನು ಆಶೀರ್ವದಿಸಿದನು ಮತ್ತು ಅಬ್ರಹಾಮನು ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅಥವಾ ಎಲ್ಲವನ್ನು ಅವನಿಗೆ ಕೊಟ್ಟನು. ಇಬ್ರಿಯರಿಗೆ ಪುಸ್ತಕದಲ್ಲಿ ಮೆಲ್ಕಿಜೆದೇಕನನ್ನು ಯೇಸು ಕ್ರಿಸ್ತನ ಮಾದರಿ ಎಂದು ತಿಳಿದುಕೊಳ್ಳಲಾಗಿದೆ.

## ಓದಿರಿ

ಇಬ್ರಿಯರಿಗೆ 4:14–5:10

## ಪ್ರಶ್ನೆಗಳು

1. ಗ್ರೀಕ್ ಪಠ್ಯದಲ್ಲಿ (NIV ಯಲ್ಲಿ ಸಹ, ಆದರೆ ಕನ್ನಡ ಅನುವಾದದಲ್ಲಿ ಅಲ್ಲ) ಈ ವೇದಭಾಗವು ಆದುದರಿಂದ ಎಂಬ ಪದದಿಂದ ಪ್ರಾರಂಭವಾಗುತ್ತದೆ. ಏಕೆ? ಹಿಂದಿನ ವೇದಭಾಗಕ್ಕೆ ಇರುವ ಸಂಬಂಧವೇನು?

2. 4:14 ರ ಎರಡು ಭಾಗಗಳನ್ನು ವಿವರಿಸಿರಿ.

3. ಈ ಹೇಳಿಕೆಗಳ ಹಳೆ ಒಡಂಬಡಿಕೆಯ ಸನ್ನಿವೇಶವು ಏನಾಗಿರಬಹುದು?

    a. ಮಹಾಯಾಜಕ (4:14; 2:17 ಮತ್ತು 3:1 ರೊಂದಿಗೆ ಹೋಲಿಸಿರಿ)

    b. ಆಕಾಶಮಂಡಲಗಳನ್ನು ದಾಟಿಹೋದ (4:14)

    c. ಕೃಪಾಸನ (4:16)

4. ಮಹಾಯಾಜಕನ ಹುದ್ದೆಗೆ ಇರಬೇಕಾದ ಎರಡು ನಿರ್ದಿಷ್ಟವಾದ ಅರ್ಹತೆಗಳು ಯಾವವು (5:1, 4)?

5. ಈ ಹಳೆ ಒಡಂಬಡಿಕೆಯ ವೇದಭಾಗಗಳಲ್ಲಿ ಮೆಲ್ಕಿಜೆದೇಕನ ಕುರಿತು ನಿಮಗೆ ಸಿಕ್ಕುವ ಮಾಹಿತಿಯ ಟಿಪ್ಪಣಿಯನ್ನು ಮಾಡಿರಿ (ಸತ್ಯವೇದದಲ್ಲಿ ಸಿಕ್ಕುವ ಕೆಲವೆ ವಚನಗಳು ಇವಾಗಿವೆ, (ಇಬ್ರಿಯರಿಗೆ ಹೊರತುಪಡಿಸಿ) ಬೇರೆ ಎಲ್ಲಿಯೂ ಮೆಲ್ಕಿಜೆದೇಕನ ಕುರಿತು ಬರೆಯಲ್ಪಟ್ಟಿಲ್ಲ)

    a. ಆದಿಕಾಂಡ 14:17–20

    b. ಕೀರ್ತನೆ 110

6. ನೀವು 'ಮೆಲ್ಕಿಜೆದೇಕನ ತರದ' (5:6) ಎಂಬ ಈ ಹೇಳಿಕೆಯನ್ನು (ಹಿಂದಿನ ಪ್ರಶ್ನೆಯಲ್ಲಿ ಬರುವ ಹಳೆ ಒಡಂಬಡಿಕೆಯ ಉಲ್ಲೇಖಗಳಿಂದ) ಹೇಗೆ ಅರ್ಥಮಾಡಿಕೊಳ್ಳುವಿರಿ?

7. ಯೇಸುವಿನ 'ಯಾಜಕತ್ವದ' ನಾಲ್ಕು ಅಂಶಗಳನ್ನು ಈ ವಾಕ್ಯಭಾಗದಲ್ಲಿ ಕಾಣಬಹುದು. ಅವು ಯಾವವು ಮತ್ತು ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ವಿವರಿಸಿರಿ? ಅವುಗಳನ್ನು ಗುರುತಿಸಲು ಈ ಕೆಳಗಿನ ಉಲ್ಲೇಖಗಳನ್ನು ಉಪಯೋಗಿಸಿ.

    a. 4:14

    b. 4:15

    c. 5:4–5

    d. 5:9–10

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಈ ಅಧ್ಯಯನವನ್ನು ಆಧರಿಸಿ "ಯೇಸು ನಮ್ಮ ಶ್ರೇಷ್ಠ ಮಹಾಯಾಜಕನು" ಎಂಬ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

## ಗ್ರಂಥಾಲಯ/ಮನೆಗೆಲಸದ ಸಮಯಕ್ಕೆ ಸಲಹೆಗಳು – ಮಂಗಳವಾರ (ಈ ವಿಷಯದ ಎರಡನೇ ದಿನ)

1. ನೀವು ಈ ದಿವಸ ಮಾಡಿದ ಅಧ್ಯಯನದ ಮೇಲೆ ನಿಮ್ಮ ಕಾರ್ಯವನ್ನು ಪೂರ್ತಿಗೊಳಿಸಿರಿ (5–8).



2. ನಿಮ್ಮ ಹಿಂದಿನ ಅಧ್ಯಯನಗಳ ಟಿಪ್ಪಣಿಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ): ಅಧ್ಯಯನ 9 ನ್ನು ಓದಿರಿ (''ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ'').
4. ಒಂದು ವೇಳೆ ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ಯಾವುದಾದರು ವೇದಭಾಗದ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನ/ಧರ್ಮೋಪದೇಶ/ಧ್ಯಾನವನ್ನು ಸಿದ್ಧಪಡಿಸಿರಿ.

# ಅಧ್ಯಯನ 9: ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ, 5:11–6:20

## ಪರಿಚಯ

ಹಿಂದಿನ ಅಧ್ಯಯನವು ಯೇಸುವಿನ ಕುರಿತಾದ ಅದ್ಭುತವಾದ ವ್ಯಾಖ್ಯಾನದೊಂದಿಗೆ ಮುಕ್ತಾಯವಾಗಿದೆ; *ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾ ಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು* (5:10). ಗ್ರಂಥಕರ್ತನು ನಿಶ್ಚಯವಾಗಲೂ ನಂತರದಲ್ಲಿ ಯೇಸು ಮಹಾಯಾಜಕನು ಎಂಬ ತನ್ನ ಬೋಧನೆಗೆ ಹಿಂತಿರುಗುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ.

ಈ ವೇದಭಾಗದಲ್ಲಿ, ಹೇಗಿದ್ದರೂ, ಗ್ರಂಥಕರ್ತನು ತನ್ನ ಓದುಗರಿಗೆ ಇನ್ನೊಂದು ಎಚ್ಚರಿಕೆಯನ್ನು ನೀಡುತ್ತಾನೆ. ಅವರು ಪ್ರಾಥಮಿಕ ಬೋಧನೆಯನ್ನು ಹಿಂದಕ್ಕೆ ಬಿಟ್ಟು ತಮ್ಮ ರಕ್ಷಣಾ ನಂತರದ ಕ್ರಿಸ್ತೀಯ ಪ್ರಬುದ್ಧತೆಗಾಗಿ ತವಕಪಡಬೇಕು. ಆಗ ಮಾತ್ರ ದೇವರು ಅವರಿಗೆ ವಾಗ್ದಾನ ಮಾಡಿದ್ದನ್ನು ಅವರು ಹೊಂದಿಕೊಳ್ಳುವರು. ದೇವರು ತನ್ನ ವಾಗ್ದಾನಗಳಿಗೆ ನಂಬಿಗಸ್ತನಾಗಿದ್ದಾನೆ. ಈ ಕಾರಣದಿಂದಾಗಿ ವಿಶ್ವಾಸಿಗಳು ತಮ್ಮ ರಕ್ಷಣೆಗಾಗಿ ಯೇಸು ಮಹಾಯಾಜಕನಾಗಿ ಏನನ್ನು ಸಾಧಿಸಿದ್ದಾನೋ ಅದರಲ್ಲಿ ತಮ್ಮ ನಿರೀಕ್ಷೆಯನ್ನು ನೆಲಗೊಳಿಸಬಹುದು.

## ಓದಿರಿ

ಇಬ್ರಿಯರಿಗೆ 5:11–6:20

## ಪ್ರಶ್ನೆಗಳು

1. ಈ ವೇದಭಾಗವು "ಈ ವಿಷಯದಲ್ಲಿ ನಾವು ಹೇಳಬೇಕಾದದ್ದು ಎಷ್ಟೋ ಇದೆ" ಎಂಬ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ (5:11). "ಈ ವಿಷಯದಲ್ಲಿ" ಏನನ್ನು ಉಲ್ಲೇಖಿಸುತ್ತದೆ?
2. ಗ್ರಂಥಕರ್ತನು ತನ್ನ ಓದುಗರ ಆತ್ಮಿಕ ಅಪ್ರಬುದ್ಧತೆಯನ್ನು ವಿವರಿಸಲು ಯಾವ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ?
3. ಗ್ರಂಥಕರ್ತನು "ದೇವರ ಪುತ್ರನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಬಹಿರಂಗವಾಗಿ ಅವಮಾನಪಡಿಸುವರೂ" ಆಗಿರುವವರ ಕುರಿತಾಗಿ ತನ್ನ ನಿರಾಶೆಯನ್ನು ವಿವರಿಸಲು ಯಾವ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ?
4. 6:19 ರಲ್ಲಿರುವ ಚಿತ್ರಣವನ್ನು ವಿವರಿಸಿರಿ.

5. ಗ್ರಂಥಕರ್ತನ ಪ್ರಕಾರ ಕ್ರಿಸ್ತನ ಕುರಿತಾದ ಪ್ರಾಥಮಿಕ ಉಪದೇಶಗಳು ಯಾವವು? ಅವುಗಳ ಅರ್ಥವನ್ನು ವಿವರಿಸಿರಿ. ಈ ಪಟ್ಟಿಯ ಕುರಿತು ನಿಮ್ಮ ಅಭಿಪ್ರಾಯ ಏನು? ನೀವು ಏನನ್ನಾದರೂ ತೆಗೆದುಹಾಕಲು ಬಯಸುತ್ತೀರೋ? ಏನನ್ನು ಮತ್ತು ಏಕೆ? ನೀವು ಏನನ್ನಾದರೂ ಸೇರಿಸಲು ಬಯಸುತ್ತೀರೋ? ಏನನ್ನು ಮತ್ತು ಏಕೆ?

6. ಹೊಸ ಒಡಂಬಡಿಕೆಯಲ್ಲಿರುವ ಈ ವೇದಭಾಗವು ಅತ್ಯಂತ ಗಲಿಬಿಲಿಗೊಳಿಸುವ ಮತ್ತು ನಿರುತ್ಸಾಹಪಡಿಸುವ ವಚನಗಳನ್ನೊಳಗೊಂಡಿದೆ (6:4–8). ಖಂಡಿತವಾಗಲೂ ಅವುಗಳನ್ನು ಹೊಸ ಒಡಂಬಡಿಕೆಯ ಇನ್ನುಳಿದ ಬೋಧನೆಯ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕು. ಹಾಗಾದರೆ ನೀವು ಈ ವೇದಭಾಗವನ್ನು ಹೇಗೆ ಅರ್ಥೈಸುವಿರಿ?

7. 6:9–20 ರಲ್ಲಿ ನಾವು ದೇವರ ಕುರಿತಾಗಿ ಏನನ್ನು ಕಲಿಯುತ್ತೇವೆ? ಕೆಲವೊಂದು ಮುಖ್ಯಾಂಶಗಳನ್ನು ಗುರುತಿಸಲು ಪ್ರಯತ್ನಿಸಿ. ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿ ಸತ್ಯವೇದದಿಂದ ನಕಲು ಮಾಡಬೇಡಿರಿ.

8. ಈ ವೇದಭಾಗದಲ್ಲಿ ಸೇವೆಯಲ್ಲಿ ತೊಡಗಿರುವ ನಮಗೆ ಮಹತ್ವದ ಪಾಠಗಳಿವೆ. ನಿಮ್ಮ ಸಲಹೆಗಳೇನು? ಪಟ್ಟಿ ಮಾಡಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

1. 6:9–20 ನ್ನು ಆಧರಿಸಿ "ದೇವರು ನ್ಯಾಯವಂತನು, ಉದಾರ ಮನಸ್ಸುಳ್ಳವನು ಮತ್ತು ಭರವಸೆಗೆ ಯೋಗ್ಯನು" ಆಗಿದ್ದಾನೆ ಎಂಬ ಶೀರ್ಷಿಕೆಯುಳ್ಳ ಒಂದು ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಮೇಲಿರುವ ಪ್ರಶ್ನೆ 7 ರ ಉತ್ತರವನ್ನು ಬಳಸಿಕೊಳ್ಳಿರಿ.



2. "ಯೇಸುವಿನ ಕುರಿತಾದ ಪ್ರಾಥಮಿಕ ಉಪದೇಶಗಳು" ಎಂಬ ವಿಷಯದ ಮೇಲೆ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಮೇಲಿರುವ ಪ್ರಶ್ನೆ 5 ರ ಉತ್ತರವನ್ನು ಬಳಸಿಕೊಳ್ಳಿರಿ.

3. ನಿಮ್ಮ ಬಳಿಗೆ ಸಹಾಯವನ್ನು ಅಪೇಕ್ಷಿಸಿ ಬಂದ ಯೌವನಸ್ಥ ವಿಶ್ವಾಸಿಗಾಗಿ ಒಂದು ಸಮಾಲೋಚನೆಯ ಅವಧಿಯನ್ನು ಸಿದ್ಧಪಡಿಸಿರಿ. ಅವನು/ಅವಳು ಪಾಪ ಮಾಡಿ ಎಲ್ಲವನ್ನೂ ಕಳೆದುಕೊಂಡಿದ್ದೇವೆ ಎಂದು ಭಾವಿಸುತ್ತಾರೆ (ಇಬ್ರಿಯ 6:4–6 ರ ಆಧಾರದ ಮೇಲೆ). ಈ ವಿಶ್ವಾಸಿಯನ್ನು ಉತ್ತೇಜಿಸಲು ಮತ್ತು ಸಹಾಯಮಾಡಲು ಮೇಲಿರುವ ಪ್ರಶ್ನೆ 6 ರ ಉತ್ತರವನ್ನು ಬಳಸಿಕೊಳ್ಳಿರಿ.

# ಅಧ್ಯಯನ 10: ಉತ್ತಮವಾದ ಯಾಜಕತ್ವ, 7:1–28

## ಪರಿಚಯ

ಇಬ್ರಿಯರಿಗೆ ಬರೆದ ಪತ್ರಿಕೆಯ 7 ನೇ ಅಧ್ಯಾಯದಲ್ಲಿ, ಹೊಸ ಒಡಂಬಡಿಕೆಯಲ್ಲಿ ಬರುವ ಯೇಸುವಿನಲ್ಲಿರುವ ಯಾಜಕತ್ವವು ಹಿಂದಿನ ಒಡಂಬಡಿಕೆಯ ಯಾಜಕತ್ವವನ್ನು ಮೀರಿಸುತ್ತದೆ ಎಂಬುದನ್ನು ರುಜುವಾತುಪಡಿಸಲು ಮೆಲ್ಕಿಜೆದೇಕನನ್ನು ಉಪಯೋಗಿಸುತ್ತಾನೆ.

## ಟಿಪ್ಪಣಿ

ರಹಸ್ಯಮಯವಾದ ಮೆಲ್ಕಿಜೆದೇಕನು ಹಳೆ ಒಡಂಬಡಿಕೆಯಲ್ಲಿ ಎರಡನೇ ಸಾರಿ ಕೀರ್ತನೆ 110:4 ರಲ್ಲಿ ಕಾಣಿಸಿಕೊಳ್ಳುತ್ತಾನೆ: *ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು.*

ಹೊಸ ಒಡಂಬಡಿಕೆಯ ಸಮಯದಲ್ಲಿ ಕೀರ್ತನೆ 110 ನ್ನು ಮೆಸ್ಸೀಯನ ಕುರಿತಾದ ಕೀರ್ತನೆ ಎಂದು ಯೆಹೂದ್ಯರು ಪರಿಗಣಿಸುತ್ತಿದ್ದರು. ಯೇಸು ವಚನ 1 ನ್ನು ತನಗೆ ಅನ್ವಯಿಸಿಕೊಳ್ಳುತ್ತಾನೆ: *(ಯೇಸು) ಅವರಿಗೆ ಹೇಳಿದನು, "ಹಾಗಾದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮಪ್ರೇರಿತನಾಗಿ ಆತನನ್ನು ಒಡೆಯನು ಅನ್ನುವದು ಹೇಗೆ?"* ಮತ್ತಾಯ 22:43–44; ಹೋಲಿಸಿರಿ ಮಾರ್ಕ 16:36–37; ಲೂಕ 20:42–43. ಪೇತ್ರನು ಸಹ ಈ ವಚನವನ್ನು ಪಂಚಾಶತ್ತಮ ದಿನದ ತನ್ನ ಪ್ರಸಂಗದಲ್ಲಿ ಉಲ್ಲೇಖಿಸುತ್ತಾನೆ: *ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನಂದರೆ "ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದೇ."*(ಅ.ಕೃ. 2:34–35)

ಅಧ್ಯಾಯ 7 ರಲ್ಲಿ ಇಬ್ರಿಯ ಗ್ರಂಥಕರ್ತನು ಕೀರ್ತನೆ 110 ವಚನ 4ನ್ನು ಉಲ್ಲೇಖಿಸುತ್ತಾನೆ. ಅವನು ಅಲ್ಲಿರುವ ಹೇಳಿಕೆಯನ್ನು ಮೆಸ್ಸೀಯನ ಕುರಿತಾದ ಪ್ರವಾದನೆಯಾಗಿ ಅರ್ಥಮಾಡಿಕೊಳ್ಳುತ್ತಾನೆ. *("ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು").* ಮೆಲ್ಕಿಜೆದೇಕನು ಯೇಸುವಿನಂತೆ "ಸದಾಕಾಲ" ಇರುವ ಯೇಸುವಿನ 'ಮಾದರಿ'.

## ಓದಿರಿ

ಇಬ್ರಿಯರಿಗೆ 7:1–28

## ಪ್ರಶ್ನೆಗಳು

1. ಈ ವೇದಭಾಗವು ಎರಡು ಯಾಜಕತ್ವಗಳ ಹೋಲಿಸುತ್ತದೆ. ಅವು ಯಾವವು?

2. ಇಬ್ರಿಯ ಭಾಷೆಯಲ್ಲಿ ಮೆಲ್ಕಿಜೆದೇಕ ಎಂಬ ಹೆಸರಿನ ಅರ್ಥ "ನೀತಿಯ ಅರಸನು" ಆದರೆ ಆತನನ್ನು ಏಕೆ "ಸಮಾಧಾನದ ಅರಸನು" ಎಂದೂ ಸಹ ಕರೆಯುತ್ತಾರೆ?

3. ವಚನ 3 ರಲ್ಲಿ ಗ್ರಂಥಕರ್ತನು ಮೆಲ್ಕಿಜೆದೇಕನ ಮತ್ತು ಯೇಸುವಿನ ನಡುವೆ ತರುವ ಸಮಾನತೆ ಏನು?

4. ವಚನ 4–10 ರ ಅಪ್ರಕಾರ ಮೆಲ್ಕಿಜೆದೇಕನು ಏಕೆ ಅಷ್ಟು ಶ್ರೇಷ್ಠನಾಗಿದ್ದಾನೆ?

5. "ಆರೋನನ ತರಹದವನಾಗಿರದೆ ಮೆಲ್ಕಿಜೆದೇಕನ ತರಹದ ಬೇರೊಬ್ಬ ಯಾಜಕನು ಬರುವದಕ್ಕೆ ಅವಶ್ಯವೇನಿತ್ತು?"(ವ. 11)

6. ಆರೋನನ ತರಹದ ಯಾಜಕತ್ವವು ಮಾತ್ರ ಅಪರಿಪೂರ್ಣವಾಗಿರಲಿಲ್ಲ, ಅದರಿಂದ ಬೇರ್ಪಡಿಸಲಾಗದ ಇನ್ನೊಂದು ಸಂಗತಿಯಿತ್ತು. ಅದು ಏನು ಮತ್ತು ಏಕೆ?

7. ಈ ಪುಸ್ತಕದಲ್ಲಿ ಮೆಲ್ಕಿಜೆದೇಕನ ಕಥೆಯನ್ನು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಉಪಯೋಗಿಸುವದರ ಮುಖ್ಯ ಉದ್ದೇಶವೇನು (1:4; 3:2–4 ರೊಂದಿಗೆ ಹೋಲಿಸಿರಿ)?

8. ಯಾಜಕತ್ವದ ಮತ್ತು ಧರ್ಮಶಾಸ್ತ್ರದ ಬದಲಾವಣೆಯ ಪರಿಣಾಮವೇನು (ವ 19)?

9. ಯೇಸುವಿನ ಯಾಜಕತ್ವವು ಹಳೆ ಒಡಂಬಡಿಕೆಯ ಲೇವಿಯರ ಯಾಜಕತ್ವಕ್ಕಿಂತ ಬಹಳಷ್ಟು ಶ್ರೇಷ್ಠವಾಗಿದೆ ಎಂಬುದಕ್ಕೆ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಮೂರು ಕಾರಣಗಳನ್ನು ಕೊಡುತ್ತಾನೆ. (ವ 20–28) ಅವು ಯಾವವು?

10. ಯೇಸುವಿನ ಯಾಜಕತ್ವವನ್ನು ವ 23–28 ರಲ್ಲಿ ವರ್ಣಿಸಲಾಗಿದೆ. ಅದರ ಮುಖ್ಯಾಂಶಗಳೇನು?

11. ವಚನ 20–28 ರಲ್ಲಿ ನಾವು ಯೇಸುವಿನ ಮೂರು 'ಭಾವಚಿತ್ರಗಳನ್ನು' ಕಾಣುತ್ತೇವೆ. ಅವು ಯಾವವು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನಕ್ಕೆ "ಶ್ರೇಷ್ಠ ಯಾಜಕತ್ವ" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 11: ಕ್ರಿಸ್ತನ ಪವಿತ್ರಾಲಯ ಮತ್ತು ಉತ್ತಮವಾದ ಒಡಂಬಡಿಕೆ, 8:1–13

## ಪರಿಚಯ

ಅಧ್ಯಾಯ 7 ರಲ್ಲಿ ನಾವು ಯೇಸುವಿನ ಯಾಜಕತ್ವವು ಗತಕಾಲದಲ್ಲಿದ್ದ ಆರೋನನ ಅಥವಾ ಲೇವಿಯರ ಯಾಜಕತ್ವವಕ್ಕಿಂತ ಶ್ರೇಷ್ಠವಾಗಿತ್ತು ಎಂಬುದನ್ನು ನೋಡಿದ್ದೇವೆ. ಅಧ್ಯಾಯ 8 ರಲ್ಲಿ, ಗತಕಾಲದ ಯಾಜಕತ್ವದ ಪವಿತ್ರಾಲಯವು ಯೇಸು ಕ್ರಿಸ್ತನ ಪರಲೋಕದ ಪವಿತ್ರಾಲಯದ ಪ್ರತಿರೂಪ ಮತ್ತು ಛಾಯೆಯಾಗಿತ್ತು ಎಂದು ವಿವರಿಸುತ್ತಾನೆ. ಅದೇ ಪ್ರಕಾರವಾಗಿ, ಯೇಸುವಿನ ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಶ್ರೇಷ್ಠವಾಗಿದೆ. ಅದು ಅಪ್ರಚಲಿತವಾದದ್ದು ಮತ್ತು ದಿನೇ ದಿನೇ ಹಳೆದಾಗುತ್ತಲಿದ್ದು ಅತೀ ಬೇಗನೆ ಕಣ್ಮರೆಯಾಗಲಿದೆ.

## ಓದಿರಿ

ಇಬ್ರಿಯ 8:1–13

## ಪ್ರಶ್ನೆಗಳು

1. ಈ ಅಧ್ಯಾಯದ ಎರಡು ವಿಭಾಗಗಳನ್ನು ಗುರುತಿಸಿ.
2. ಎರಡು ಪವಿತ್ರಾಲಯಗಳನ್ನು ಹೇಗೆ ವರ್ಣಿಸಲಾಗಿದೆ ಮತ್ತು ಭಿನ್ನವಾಗಿಸಲಾಗಿದೆ? ನಾಲ್ಕು ಮುಖ್ಯಾಂಶಗಳನ್ನು ಕಂಡುಹಿಡಿಯಿರಿ.
3. ಈ ಅಧ್ಯಾಯದ ಮೊದಲಿನ ಐದು ವಚನಗಳು ಪುನಃ ಯೇಸುವಿನ ಮೇಲೆ ಕೇಂದ್ರಿಕರಿಸಿವೆ. ಯೇಸುವಿನ ಈ ಎರಡು ಅಂಶಗಳ ಕುರಿತು ನಾವು ಏನನ್ನು ಕಲಿಯುತ್ತೇವೆ?

a. ಅವನು ಯಾರಾಗಿದ್ದಾನೆ

b. ಅವನು ಏನು ಮಾಡುತ್ತಾನೆ

4. ವ 6–9 ರಲ್ಲಿ ಹೊಸ ಒಡಂಬಡಿಕೆಯ ಅವಶ್ಯಕತೆಯ ಕುರಿತು ಯಾವ ಕಾರಣಗಳನ್ನು ನೀಡಲಾಗಿದೆ?
5. ಇಬ್ರಿಯ ಗ್ರಂಥಕರ್ತನು ಯೆರೆಮೀಯ 31:31–34 ನ್ನು ಉಲ್ಲೇಖಿಸುತ್ತಾನೆ, ಅದು ಹೊಸ ಒಡಂಬಡಿಕೆಯ ಕುರಿತಾದ ಪ್ರವಾದನೆಯಾಗಿದೆ. ಅದು ನಾಲ್ಕು "ವಾಗ್ದಾನಗಳನ್ನು" ಒಳಗೊಂಡಿದೆ (ಇಬ್ರಿಯ 8:6 ನ್ನು ಹೋಲಿಸಿರಿ). ಈ ವಾಗ್ದಾನಗಳು ಹೊಸ ಒಡಂಬಡಿಕೆಯನ್ನು ಹಳೆಯ ಸಿನಾಯಿ ಒಡಂಬಡಿಕೆಗಿಂತ ಶ್ರೇಷ್ಠವಾಗಿ ಮಾಡುತ್ತವೆ (ವ 10–12). ಅವು ಯಾವವು?
6. "ಒಡಂಬಡಿಕೆಯು" ಎರಡು ಪಂಗಡಗಳ ಮಧ್ಯದಲ್ಲಿರುವ ಒಂದು ಒಪ್ಪಂದವಾಗಿದೆ. ಹಾಗಿದ್ದಲ್ಲಿ ಹೊಸ ಒಡಂಬಡಿಕೆಯ ಕುರಿತು ಗಮನಾರ್ಹವಾದ ಸಂಗತಿ ಏನು (ವ. 8–12)?

7. ಸಾಧ್ಯವಾದಷ್ಟು ನಿಮ್ಮ ಪದಗಳನ್ನು ಉಪಯೋಗಿಸಿ ವ 13 ನ್ನು ವಿವರಿಸಿರಿ.

8. ಇಬ್ರಿಯರನ್ನು ಹೊರತುಪಡಿಸಿ, "ಹೊಸ ಒಡಂಬಡಿಕೆ" ಎಂಬ ಪದವನ್ನು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಉಪಯೋಗಿಸಲಾಗಿದೆ: ಲೂಕ 22:20; 1 ಕೊರಿಂಥ 11:25; ಮತ್ತು 2 ಕೊರಿಂಥ 3:6. ಈ ಉಲ್ಲೇಖಗಳನ್ನು ನೋಡಿರಿ. ಯಾವ ಸನ್ನಿವೇಶದಲ್ಲಿ "ಹೊಸ ಒಡಂಬಡಿಕೆ" ಎಂಬ ಪದವನ್ನು ಉಪಯೋಗಿಸಲಾಗಿದೆ.

9. ಗಲಾತ್ಯ 3:3–14 ನ್ನು ನೀವು "ಶ್ರೇಷ್ಠ ಒಡಂಬಡಿಕೆ" ಎಂಬ ಈ ಅಧ್ಯಯನದ ಬೆಳಕಿನಲ್ಲಿ ಹೇಗೆ ಅರ್ಥಮಾಡಿಕೊಳ್ಳುವಿರಿ?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

1. ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ "ಉತ್ತಮವಾದ ಒಡಂಬಡಿಕೆ" ಎಂಬ ಶೀರ್ಷಿಕೆಯನ್ನು ಕೊಡಬಹುದು.
2. ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ (ನಿರ್ದಿಷ್ಟವಾಗಿ ಪ್ರಶ್ನೆ 3 ರ ನಿಮ್ಮ ಉತ್ತರವನ್ನು ಆಧರಿಸಿ). ನಿಮ್ಮ ಅಧ್ಯಯನಕ್ಕೆ "ಯೇಸು ನಮ್ಮ ಮಹಾಯಾಜಕನು" ಎಂಬ ಶೀರ್ಷಿಕೆಯನ್ನು ಕೊಡಬಹುದು (ಇದು ನೀವು ಅಧ್ಯಯನ 8 ರಲ್ಲಿ ಸಿದ್ಧಪಡಿಸಿದ ಸತ್ಯವೇದ ಅಧ್ಯಯನಕ್ಕಿಂತ ಭಿನ್ನವಾದ ಅಧ್ಯಯನವಾಗಿರಬೇಕು, ಒಂದು ವೇಳೆ ಶೀರ್ಷಿಕೆ ಒಂದೇ ಆಗಿದ್ದರೂ ಸಹ).

# ಅಧ್ಯಯನ 12: ಎರಡು ದೇವದರ್ಶನ ಗುಡಾರಗಳು, 9:1–22

## ಪರಿಚಯ

ಭೂಲೋಕದ ಪವಿತ್ರಾಲಯದ ಆರಾಧನೆಯ ವರ್ಣನೆಯ ನಂತರ (ಮೊದಲು ದೇವದರ್ಶನ ಗುಡಾರ ಮತ್ತು ನಂತರ ಯೆರೂಸಲೇಮಿನ ದೇವಾಲಯ) ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹೆಚ್ಚು ಪರಿಪೂರ್ಣವಾದ ದೇವದರ್ಶನ ಗುಡಾರ ಮತ್ತು ಹೆಚ್ಚು ಪರಿಪೂರ್ಣವಾದ ಯಜ್ಞವನ್ನು ಒಳಗೊಂಡ ಹೊಸ ಕ್ರಮದ ಅಗತ್ಯತೆಯನ್ನು ವಿವರಿಸುತ್ತಾನೆ (ಹೊಸ ಒಡಂಬಡಿಕೆಯ ಮಧ್ಯಸ್ಥಗಾರನು ಕ್ರಿಸ್ತನು).

## ಟಿಪ್ಪಣಿ

ಹಳೆ ಒಡಂಬಡಿಕೆಯ ಯಜ್ಞದ ಪದ್ಧತಿಯಲ್ಲಿ ರಕ್ತವನ್ನು ಎರಡು ವಿಧದಲ್ಲಿ ಉಪಯೋಗಿಸಲಾಗುತಿತ್ತು:

1. (ಹಳೆ ಮತ್ತು ಹೊಸ) ಒಡಂಬಡಿಕೆಗಳು ರಕ್ತದ ಮೂಲಕ ಜಾರಿಗೆ ಬರುತ್ತಿತ್ತು (ಅಥವಾ ಸ್ಥಿರವಾಗುತ್ತಿತ್ತು ಅಥವಾ ಉದ್ಘಾಟಿತಗೊಳ್ಳುತ್ತಿತ್ತು). ಮೋಶೆಯು ಜನರ ಮೇಲೆ ರಕ್ತವನ್ನು ಚಿಮುಕಿಸುವಾಗ ಅವರು ಒಡಂಬಡಿಕೆಯ ಜನರಾಗುತ್ತಿದ್ದರು. ಯೇಸು ಕ್ರಿಸ್ತನು ಕೊನೆಯ ಭೋಜನದಲ್ಲಿ ಪಾತ್ರೆಯನ್ನು ತೆಗೆದುಕೊಂಡು ಹೀಗೆ ಹೇಳಿದಾಗ, *"ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ,"* ಹೊಸ ಒಡಂಬಡಿಕೆಯು ತಾನು ಕ್ರೂಜೆಯ ಮೇಲೆ ರಕ್ತವನ್ನು ಸುರಿಸುವ ಕ್ಷಣದಿಂದ ಜಾರಿಗೆ ಬರಲಿದೆ ಎಂದು ಘೋಷಿಸಿದನು.

2. ಪವಿತ್ರಾಲಯಗಳು ರಕ್ತದ ಮೂಲಕ ಶುದ್ಧೀಕರಿಸಲ್ಪಡುತ್ತಿದ್ದವು. ಹಳೆ ಒಡಂಬಡಿಕೆಯಲ್ಲಿ ರಕ್ತದ ಕೆಂಪು ಗುರುತು ಇಲ್ಲದೇ ಯಾವುದನ್ನೂ ಶುದ್ಧವೆಂದು ಪರಿಗಣಿಸಲಾಗುತ್ತಿರಲಿಲ್ಲ. ಆದುದರಿಂದ ಇಬ್ರಿಯ ಗ್ರಂಥಕರ್ತನು ಇದನ್ನು ಆತ್ಮಿಕ ಜೀವಿತದ ವಿಧವೆಂದು ತಿಳಿದುಕೊಳ್ಳುತ್ತಾನೆ. ಯೇಸುವಿನ ತ್ಯಾಗಪೂರ್ವಕವಾದ ಮರಣ, ಕ್ರಿಸ್ತನ ಸುರಿಸಲ್ಪಟ್ಟ ರಕ್ತ, ಇದು ಪಾಪಗಳ ಕ್ಷಮಾಪಣೆಗೆ ಇರುವ ಷರತ್ತಾಗಿದೆ.

## ಓದಿರಿ

ಇಬ್ರಿಯರಿಗೆ 9:1–22

## ಪ್ರಶ್ನೆಗಳು


1. ಈ ವೇದಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಅವು ಯಾವವು? ಮತ್ತು ಅವು ಏನನ್ನು ಕೇಂದ್ರಿಕರಿಸುತ್ತವೆ?
2. ಮೊದಲನೆಯ ಒಡಂಬಡಿಕೆಯ ದೇವದರ್ಶನ ಗುಡಾರದ ಮೂರು ಬಲಹೀನತೆಗಳನ್ನು ಗುರುತಿಸಿರಿ (ವ 6–10).
3. ವಚನ 11 ರಲ್ಲಿರುವ ಈ ಹೇಳಿಕೆಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
    a. ಈಗಾಗಲೇ ಇರುವ ಉತ್ತಮವಾದ ಸಂಗತಿಗಳು
    b. ಶ್ರೇಷ್ಠವಾದ ಮತ್ತು ಹೆಚ್ಚು ಪರಿಪೂರ್ಣವಾದ ದೇವದರ್ಶನ ಗುಡಾರ
    c. ಈ ಸೃಷ್ಟಿಯ ಭಾಗವಲ್ಲ
4. (ವ 12 ರಲ್ಲಿ) ಎರಡು ದೇವದರ್ಶನದ ಗುಡಾರಗಳು ಹೇಗೆ ಒಂದಕ್ಕೊಂದು ವ್ಯತ್ಯಾಸವಾಗಿ ಚಿತ್ರಿಸಲ್ಪಟ್ಟಿವೆ?
5. "ಉತ್ತಮವಾದ ಒಡಂಬಡಿಕೆಯ" ಪರಿಣಾಮಗಳನ್ನು ಹೇಗೆ ವರ್ಣಿಸುತ್ತೀರಿ? ಮೂರು ಮುಖ್ಯಾಂಶಗಳನ್ನು ಕಂಡುಹಿಡಿಯಲು ಪ್ರಯತ್ನಿಸಿರಿ (ವ 11–14).
6. ವಚನ 15 ನ್ನು ವಿವರಿಸಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.
7. ವಚನ 16–17 ರಲ್ಲಿ ನಾವು ಒಂದು ರೂಪಕಾಲಂಕಾರದ ಉದಾಹರಣೆಯನ್ನು ನೋಡುತ್ತೇವೆ. ಇದನ್ನು ಜೀವಿತದ ಯಾವ ಕ್ಷೇತ್ರದಿಂದ ತೆಗೆದುಕೊಳ್ಳಲಾಗಿದೆ? ಇದು ಯಾವ ಅರ್ಥವನ್ನು ಕೊಡುತ್ತದೆ?
8. ವಚನ 18–22 ರಲ್ಲಿ ಎರಡು ಹಳೆ ಒಡಂಬಡಿಕೆಯ ಚಿತ್ರಣಗಳಿವೆ, ಇವುಗಳನ್ನು "ರಕ್ತದಿಂದ" ಎಂಬ ಮುಖ್ಯ ಪದದೊಂದಿಗೆ ಕೊನೆಯ ವಚನದಲ್ಲಿ ಸಾರಾಂಶಗೊಳಿಸಲಾಗಿದೆ (ಗಮನಿಸಿ ಅಲ್ಲಿ ಒಂದಲ್ಲ ಎರಡು ಚಿತ್ರಣಗಳಿವೆ). ಆ ಎರಡು ಚಿತ್ರಣಗಳು ಯಾವವು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ "ಎರಡು ದೇವದರ್ಶನ ಗುಡಾರಗಳು" ಎಂಬ ಶೀರ್ಷಿಕೆಯನ್ನು ಕೊಡಬಹುದು.

*ಒಬ್ಬ ಚಿತ್ರಕಾರನ ದೃಷ್ಟಿಯಿಂದ ಇಸ್ರಾಯೇಲರ ದೇವದರ್ಶನ ಗುಡಾರದ ದೃಶ್ಯ*



# ಅಧ್ಯಯನ 13: ಕ್ರಿಸ್ತನ ಪರಿಪೂರ್ಣವಾದ ಯಜ್ಞ, 9:23–10:18

## ಪರಿಚಯ

ನಾವು ಈಗ ಈ ಪತ್ರಿಕೆಯ ಮಧ್ಯಭಾಗವಾದ (7:1–10:18) ರಲ್ಲಿರುವ ಗ್ರಂಥಕರ್ತನ ಐದು ಮುಖ್ಯವಿಷಯಗಳಲ್ಲಿ ಕೊನೆಯ ವಿಷಯಕ್ಕೆ ಬಂದಿದ್ದೇವೆ:

1. ಕ್ರಿಸ್ತನ ಶ್ರೇಷ್ಠ ಮಹಾಯಾಜಕತ್ವ (7:1–28)
2. ಪರಲೋಕದ ಪವಿತ್ರಾಲಯ (8:1–5)
3. ಉತ್ತಮವಾದ ಒಡಂಬಡಿಕೆಯ ಪ್ರಾರಂಭ (8:5–9:14)
4. ಕ್ರಿಸ್ತನ ನಿತ್ಯವಾದ ಬಳುವಳಿಯ ಮೂಲಕ ವಿಶ್ವಾಸಿಗಳ ಸ್ವಾಸ್ಥ್ಯ/ಬಾಧ್ಯತೆ (9:15–22)
5. ಕ್ರಿಸ್ತನ ಪರಿಪೂರ್ಣ ಬಲಿದಾನ (9:23–10:18)

## ಓದಿರಿ

ಇಬ್ರಿಯರಿಗೆ 9:23–10:18

## ಪ್ರಶ್ನೆಗಳು

1. ಕ್ರಿಸ್ತನು ತನ್ನ ಬಲಿದಾನದ ಮೂಲಕ ಏನನ್ನು ಶುದ್ಧೀರಿಸಿದನು (9:23)? ಈ ಹೇಳಿಕೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
2. ಕ್ರಿಸ್ತನು ತನ್ನ ಬಲಿದಾನವನ್ನು ಯಾವ ಪವಿತ್ರಾಲಯಕ್ಕೆ ತಂದನು? ಮತ್ತು ಅದರ ಮಹತ್ವವೇನು (9:24)?
3. *ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುತ್ತಾನೆ* ಎಂಬ 9:24 ರ ಎರಡನೇ ಭಾಗವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? "ಈಗ" ಎಂಬ ಪದದ ಮಹತ್ವವೇನು?
4. 9:25–26 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಭೂಲೋಕದ ಪವಿತ್ರಾಲಯದ ಮಹಾಯಾಜಕನ ತ್ಯಾಗಪೂರ್ವಕವಾದ ಸೇವೆಯನ್ನು ಕ್ರಿಸ್ತನ ಈ ತ್ಯಾಗಪೂರ್ವಕವಾದ ಸೇವೆಯೊಂದಿಗೆ ವಿರುದ್ಧವಾಗಿ ಚಿತ್ರಿಸುತ್ತಾನೆ. ಆತನ ಮೂರು ಅಂಶಗಳು ಯಾವವು?
5. 9:26 ರಲ್ಲಿರುವ "ಯುಗಗಳ ಸಮಾಪ್ತಿಯಲ್ಲೇ" ಎಂಬ ಹೇಳಿಕೆಯು ಏನನ್ನು ಉಲ್ಲೇಖಿಸುತ್ತದೆ?
6. ನಾವು ಯೇಸುವಿನ ಕುರಿತು 9:28 ರಲ್ಲಿ ಎರಡು ವಿಷಯಗಳನ್ನು ಕಲಿಯುತ್ತೇವೆ ಅವು ಯಾವವು?

7. 9:26 ಮತ್ತು 9:28 ರಲ್ಲಿ ಕ್ರಿಸ್ತನು ತನ್ನನ್ನು ತಾನು ಬಲಿಯಾಗಿ ಅರ್ಪಿಸಿದಾಗ ಪಾಪಕ್ಕೆ ಏನು ಮಾಡಿದನೆಂಬುದರ ಕುರಿತು ಕೆಲವು ಸಂಗತಿಗಳನ್ನು ನೋಡೂತ್ತೇವೆ: ಮೊದಲು ನಮ್ಮ "ಪಾಪ ನಿವಾರಣೆ ಮಾಡಿದನು", ನಂತರ ನಮ್ಮ "ಪಾಪಗಳನ್ನು ಹೊತ್ತುಕೊಂಡನು" ಎಂಬುದನ್ನು ನೋಡುತ್ತೇವೆ. ಈ ಎರಡು ಹೇಳೀಕೆಗಳ ನಡುವೆ ಇರುವ ವ್ಯತ್ಯಾಸವೇನು?

8. 10:1–4 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯ ಯಜ್ಞದ ಪದ್ಧತಿಗೆ ಒಂದು ಕಾರಣವನ್ನು ನೀಡುತ್ತಾನೆ. ಆ ಕಾರಣವೇನು?

9. 10:5–7 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಕೀರ್ತನೆ 40 ರಿಂದ ಒಂದು ಉಲ್ಲೇಖವನ್ನು ಕ್ರಿಸ್ತನು ಉಚ್ಚರಿಸಿದಂತೆ ಅರ್ಥಮಾಡಿಕೊಳ್ಳುತ್ತಾನೆ. (ವ 6–8; ಈ ಕೀರ್ತನೆಯನ್ನು ದಾವೀದನು ಬರೆದದ್ದು). ಆ ಪದಗಳು ಯೇಸುವಿನ ಕುರಿತಾದ ಪ್ರವಾದನೆಯಾದವು. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಪಠ್ಯವನ್ನು ಕೀರ್ತನೆಯಲ್ಲಿರುವ ಪಠ್ಯದೊಂದಿಗೆ ಹೋಲಿಸಿರಿ. ಮುಖ್ಯ ವ್ಯತ್ಯಾಸ ಯಾವುದು? ಈ ವ್ಯತ್ಯಾಸವನ್ನು ಹೇಗೆ ವಿವರಿಸಬಹುದು? ಈ ವ್ಯತ್ಯಾಸವು ಅರ್ಥೈಸುವವರಿಗೆ ಸಾಕಷ್ಟು ಸಮಸ್ಯೆಗೆ ಕಾರಣವಾಗಿದೆಯೋ? ಏಕೆ ಅಥವಾ ಏಕಿಲ್ಲ?

10. 10:11–12 ರಲ್ಲಿ ನಿಂತುಕೊಳ್ಳುವದರ ಮತ್ತು ಕುಳಿತುಕೊಳ್ಳುವದರ ನಡುವೆ ಒಂದು ವ್ಯತ್ಯಾಸವನ್ನು ಕಾಣುತ್ತೇವೆ. ಹೇಗೆ ಎಂಬುದನ್ನು ವಿವರಿಸಿರಿ?

11. ವಚನ 13–14 ರಲ್ಲಿರುವ ಹೇಳಿಕೆಗಳನ್ನು ವಿವರಿಸಿರಿ:

    a. "ಅಂದಿನಿಂದ"

    b. "ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಕಾದಿರುವನು" (ಕೀರ್ತನೆ 110:1 ರಲ್ಲಿರುವ ಉಲ್ಲೇಖ; ಇಬ್ರಿಯ 1:13 ರರೊಂದಿಗೆ ಹೋಲಿಸಿರಿ.)


    c. "ಪವಿತ್ರರಾಗುತ್ತಿರುವವರನ್ನು" (2:11 ನ್ನು ಹೋಲಿಸಿರಿ)

12. ಯಾರ ಬಾಯಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಯೆರೆಮೀಯ 31:31–34 ರಲ್ಲಿರುವ ಉಲ್ಲೇಖವನ್ನು ಹಾಕಿದನು (ಇಬ್ರಿಯ 10:16–18)? ಇದನ್ನು ಆತನು ವ್ಯಕ್ತಪಡಿಸುವ ರೀತಿಯಲ್ಲಿರುವ ಮಹತ್ವವೇನು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ "ಕ್ರಿಸ್ತನ ಪರಿಪೂರ್ಣವಾದ ಯಜ್ಞ" ಎಂಬ ಶೀರ್ಷಿಕೆಯನ್ನು ಕೊಡಬಹುದು.

## ಗ್ರಂಥಾಲಯ/ಮನೆಗೆಲಸದ ಸಮಯಕ್ಕೆ ಸಲಹೆಗಳು – ಬುಧವಾರ (ತರಗತಿಯ ಮೂರನೇ ದಿನ)



1. ನೀವು ಈ ದಿನ ಮಾಡಿದ ಅಧ್ಯಯನದ ಕಾರ್ಯಗಳನ್ನು ಪೂರ್ತಿಗೊಳಿಸಿರಿ. (10–13)
2. ಹಿಂದಿನ ಅಧ್ಯಯನದ ಟಿಪ್ಪಣಿಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ) ಅಧ್ಯಯನ 14 ನ್ನು ಮಾಡಿರಿ ("ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ")
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ವೇದಭಾಗಗಳ ಮೇಲೆ ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ ಸಿದ್ಧಪಡಿಸಿರಿ.

# ಅಧ್ಯಯನ 14: ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ, 10:19–39

## ಪರಿಚಯ

ಈಗ ನಾವು ಇಬ್ರಿಯರಿಗೆ ಬರೆದ ಪತ್ರಿಕೆಯ ಹೊಸ ವಿಭಾಗಕ್ಕೆ ಬಂದಿದ್ದೇವೆ. ಇದು "ಆದುದರಿಂದ ಸಹೋದರರೇ ಮತ್ತು ಸಹೋದರಿಯರೇ" ಎಂಬುದರೊಂದಿಗೆ ಪ್ರಾರಂಭವಾಗುತ್ತದೆ. ಆದುದರಿಂದ ಈಗ ಗ್ರಂಥಕರ್ತನು ವಿಶ್ವಾಸಿಗಳೆಡೆಗೆ (ತನ್ನ ಓದುಗರೆಡೆಗೆ) ಗಮನಹರಿಸುತ್ತಾನೆ ಮತ್ತು ಅವರಿಗೆ ಯೇಸುವಿನ ಮತ್ತು ಆತನ ಕಾರ್ಯಗಳ ಕುರಿತಾದ ತನ್ನ ಹಿಂದಿನ ಬೋಧನೆಯ ಪರಿಣಾಮಗಳನ್ನು ತಿಳಿಸುವಂತೆ ಮತ್ತು ಅವುಗಳನ್ನು ತಮ್ಮ ವೈಯಕ್ತಿಕ ಜೀವಿತದಲ್ಲಿ ಅಳವಡಿಸಿಕೊಳ್ಳುವಂತೆ ಕೇಳಿಕೊಳ್ಳುತ್ತಾನೆ. ಇದು "ಪ್ರೋತ್ಸಾಹದ ಮಾತಾಗಿದೆ" (13:22

ಹೊಸ ಒಡಂಬಡಿಕೆಯ ಎಲ್ಲಾ ಲೇಖಕರಂತೆ (ಮತ್ತು ಅವರಿಗಿಂತಲೂ ಮುಂಚೆ ಇದ್ದ ಹಳೆ ಒಡಂಬಡಿಕೆಯ ಪ್ರವಾದಿಗಳಂತೆ ಮತ್ತು ಯೇಸುವಿನಂತೆ) ಗ್ರಂಥಕರ್ತನು ಸಿದ್ಧಾಂತಗಳನ್ನು ಕಾರ್ಯಗಳೊಂದಿಗೆ ಜೋಡಿಸುತ್ತಾನೆ. ಅವರೆಲ್ಲರೂ ಸರಿಯಾದ ಬೋಧನೆಗೆ ಹೊಂದಾಣಿಕೆಯಾಗುವ ಸರಿಯಾದ ನಡತೆಯೂ ಇರಬೇಕೆಂದು ಒತ್ತಿ ಹೇಳಿದರು.

ಗ್ರಂಥಕರ್ತನು ತನ್ನ ಪುಸ್ತಕದ ಉಳಿದ ಭಾಗದಲ್ಲಿ ಹಿಂದಿನ ಅಧ್ಯಾಯಗಳ ಸೈದ್ಧಾಂತಿಕ ಬೋಧನೆಗಳನ್ನು ಬಳಸುವುದರ ಮೂಲಕ ತನ್ನ ಓದುಗರು ಅವರ ನಂಬಿಕೆಯ ಘೋಷಣೆಗೆ ಹೋಲುವ ಜೀವಿತವನ್ನು ಜೀವಿಸುವಂತೆ ಅವರನ್ನು ಪ್ರಬೋಧಿಸುತ್ತಾನೆ, ಪ್ರೋತ್ಸಾಹಿಸುತ್ತಾನೆ ಮತ್ತು ಎಚ್ಚರಿಸುತ್ತಾನೆ.

## ಓದಿರಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿರಿ

1. 10:19–22 ನ್ನು ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ ದೇವರ ಸಮೀಪಕ್ಕೆ ಬರುವಂತೆ ಪ್ರಬೋಧಿಸುತ್ತಾನೆ. ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

   1. ನಾವು ದೇವರ ಸಮೀಪಕ್ಕೆ ಏಕೆ ಬರಬೇಕು?
   2. ನಮಗೆ ದೇವರ ಸಮೀಪಕ್ಕೆ ಬರಲು ಹೇಗೆ ಸಾಧ್ಯ?
   3. "ತೆರೆ" ಏನನ್ನು ಉಲ್ಲೇಖಿಸುತ್ತದೆ?
   4. ನಾವು ದೇವರ ಸಮೀಪಕ್ಕೆ ಹೇಗೆ ಬರಬೇಕು?

2. 10:23–25 ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ ತಮ್ಮ ಅರಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂದು ಪ್ರಬೋಧಿಸುತ್ತಾನೆ. ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

   5. ಯೇಸುವಿನಲ್ಲಿ ನಮಗಿರುವ ಮೊದಲ ನಂಬಿಕೆಯನ್ನು ನಾವು ಏಕೆ ಸತತವಾಗಿ ಅರಿಕೆಮಾಡಬೇಕು?

6. ಕರ್ತನ ದಿನವು ಸಮೀಪಿಸುವುದನ್ನು ಕಾಣುವಾಗ, ವಿಶ್ವಾಸಿಗಳಾದ ನಾವು ಏನು ಮಾಡಬೇಕು?

3. 10:26–35 ನ್ನು ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ ಬೇಕೆಂದು ಪಾಪಮಾಡುವುದರ ಮೂಲಕ ತಮ್ಮ ನಂಬಿಕೆಯಿಂದ ಬಿದ್ದು ಹೋಗಬಾರದೆಂದು ಹಾಗೂ ಅದಕ್ಕೆ ಬದಲಾಗಿ ತಮ್ಮ ನಂಬಿಕೆಯಲ್ಲಿ ದೃಢವಾಗಿದ್ದು ತಾಳ್ಮೆಯಿಂದಿರಬೇಕೆಂದು ಪ್ರಬೋಧಿಸುತ್ತಾನೆ. ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

7. ವಚನಭ್ರಷ್ಟತೆಯ ಪಾಪ ಮಾಡಿದರೆ ಆಗುವ ಪರಿಣಾಮಗಳ ಮಹತ್ವವನ್ನು ವರ್ಣಿಸಲು ಗ್ರಂಥಕರ್ತನು ಯಾವ ಹೇಳಿಕೆಗಳನ್ನು ಉಪಯೋಗಿಸುತ್ತಾನೆ (ವ 26–31)?

8. ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರಿಗೆ ವಚನ 32–35 ಏಕೆ ಒಂದು ಪ್ರೋತ್ಸಾಹವಾಗಿದೆ ಎಂದು ನಾವು ಯಾಕೆ ಅರ್ಥಮಾಡಿಕೊಳ್ಳಬೇಕೆಂದು ವಿವರಿಸಿರಿ.

4. 10:36–39 ನ್ನು ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳು ತಾಳ್ಮೆಯುಳ್ಳವರಾಗಿ ತಮ್ಮ ನಂಬಿಕೆಯಿಂದ ಹಿಂಜರಿಯಬಾರದೆಂದು ಪ್ರಬೋಧಿಸುತ್ತಾನೆ. ನಂತರ ಕೆಳಗಿನ ಪ್ರಶ್ನೆಗೆ ಉತ್ತರಿಸಿರಿ.

9. ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವವರಿಗೆ ದೇವರು ಮಾಡಿದ ವಾಗ್ದಾನವೇನು?



## ಅವಲೋಕನ

ಈ ಪಾಠದಿಂದ ನೀವು ಕಲಿತಿರುವ ಪ್ರಾಮುಖ್ಯವಾದ ಸಂಗತಿಗಳು ಯಾವವು? ಏಕೆ ವಿವರಿಸಿರಿ. ಕೆಲವು ಅಂಶಗಳನ್ನು ಪಟ್ಟಿ ಮಾಡಲು ಸಮಯ ತೆಗೆದುಕೊಳ್ಳಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

1. ಮೇಲಿರುವ ಪ್ರಶ್ನೆ 1–4 ರ ಉತ್ತರವನ್ನು ಬಳಸಿಕೊಂಡು ಇಬ್ರಿಯ 10:19–22 ರ ಆಧಾರದ ಮೇಲೆ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಅದಕ್ಕೆ "ದೇವರ ಸಮೀಪಕ್ಕೆ ಬನ್ನಿರಿ' ಎಂಬ ಶೀರ್ಷಿಕೆಯನ್ನು ಕೊಡಬಹುದು.



2. ಮೇಲಿರುವ ಪ್ರಶ್ನೆ 5–6 ರ ಉತ್ತರವನ್ನು ಬಳಸಿಕೊಂಡು ಇಬ್ರಿಯ 10:23–25 ರ ಆಧಾರದ ಮೇಲೆ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಅದಕ್ಕೆ 'ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ' ಎಂಬ ಶೀರ್ಷಿಕೆಯನ್ನು ಕೊಡಬಹುದು.

3. ಮೇಲಿರುವ ಪ್ರಶ್ನೆ 7–8 ರ ಉತ್ತರವನ್ನು ಬಳಸಿಕೊಂಡು ಇಬ್ರಿಯ 10:26–35 ರ ಆಧಾರದ ಮೇಲೆ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಅದಕ್ಕೆ 'ನಿಮ್ಮ ವಿಶ್ವಾಸವನ್ನು ಬಿಟ್ಟುಬಿಡಬೇಡಿರಿ' ಎಂಬ ಶೀರ್ಷಿಕೆಯನ್ನು ಕೊಡಬಹುದು.

4. ಮೇಲಿರುವ ಪ್ರಶ್ನೆ 9 ರ ಉತ್ತರವನ್ನು ಬಳಸಿಕೊಂಡು ಇಬ್ರಿಯ 10:36–39 ರ ಆಧಾರದ ಮೇಲೆ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಅದಕ್ಕೆ ‘ದೃಢವಾಗಿ ನಿಲ್ಲಿರಿ’ ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 15: ತಮ್ಮಲ್ಲಿರುವ ನಂಬಿಕೆಯಿಂದಾಗಿ ಅವರೆಲ್ಲರೂ ಹೊಗಳಿಕೆಗೆ ಪಾತ್ರರಾದರು, 11:1–40

## ಪರಿಚಯ

ಈ ಅಧ್ಯಾಯವು ಅತ್ಯಂತ ಪ್ರಸಿದ್ಧವಾದ 'ನಂಬಿಕೆಯ' ವ್ಯಾಖ್ಯಾನದೊಂದಿಗೆ ಪ್ರಾರಂಭವಾಗುತ್ತದೆ. "ನಂಬಿಕೆಯು ನಾವು ನಿರೀಕ್ಷಿಸುವವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವದೂ ಆಗಿದೆ." (11:1) ನಂತರ ಈ ಅಧ್ಯಾಯವು ಹಳೆ ಒಡಂಬಡಿಕೆಯ ಕಾಲದ "ನಂಬಿಕೆಯ ನಾಯಕರುಗಳ" ಉದ್ದವಾದ ಪಟ್ಟಿಯೊಂದಿಗೆ ಮುಂದುವರೆಯುತ್ತದೆ. ಆದರೂ ಈ ಅಧ್ಯಾಯವನ್ನು 10:19–39 ರಲ್ಲಿ ಬರುವ ಪ್ರಬೋಧನೆಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಇದು ನಂಬಿಕೆಯ ಕುರಿತಾಗಿ ಸರ್ವಸಂಗತಿಗಳನ್ನು ಹೇಳುವುದಿಲ್ಲ.

## ಓದಿರಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿರಿ

1. ನಂಬಿಕೆಯ ಕುರಿತು 11:1–3 ನ್ನು ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ.
    1. ವಚನ 1 ನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ವಿವರಿಸಿರಿ.
    2. ಪೂರ್ವಜರು ಯಾವುದಕ್ಕೆ ಹೊಗಳಿಕೆಗೆ ಪಾತ್ರರಾಗಿದ್ದರು (ವ. 2)?
    3. ವಚನ 3 ರಲ್ಲಿರುವ ಗ್ರಂಥಕರ್ತನ ಅಂಶವನ್ನು ವಿವರಿಸಿರಿ.
2. ಮೂರು ನೀತಿವಂತ ಪುರುಷರ ಕುರಿತು 11:4–7 ರಲ್ಲಿ ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ:
    4. ಹೇಬೇಲನ ನಂಬಿಕೆಯ ಕುರಿತಾದ ಈ ಎರಡು ಹೇಳಿಕೆಗಳನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು:
        a. *ನಂಬಿಕೆಯಿಂದಲೇ ಹೇಬೇಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಟವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು*
        b. *ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ.*
    5. ಹನೋಕನು ದೇವರನ್ನು ಹೇಗೆ ಮೆಚ್ಚಿಸಿದನು?
    6. ನೋಹನು ತನ್ನ ನಂಬಿಕೆಯಿಂದಲೇ *ಲೋಕದವರನ್ನು ಖಂಡಿಸಿದನು* ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುತ್ತೀರಿ?
3. ಅಬ್ರಹಾಮ ಮತ್ತು ಅವನ ಕುಟುಂಬದ ಕುರಿತಾಗಿ 11:8–12 ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ.

7. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಈ ಮೊದಲು ಅಬ್ರಹಾಮನ ಕುರಿತಾಗಿ ಮೂರು ಸಾರಿ ಹೇಳಲ್ಪಟ್ಟಿದೆ. ಈ ಉಲ್ಲೇಖಗಳನ್ನು ನೋಡಿರಿ ಮತ್ತು ಆತನ ಕುರಿತಾಗಿ ಅಲ್ಲಿ ನಾವು ಏನನ್ನು ಕಲಿಯುತ್ತೇವೆ ಎಂಬುದರ ಸಾರಾಂಶವನ್ನು ಬರೆಯಿರಿ:

    a. ಇಬ್ರಿಯ 2:16

    b. ಇಬ್ರಿಯ 6:13–15

    c. ಇಬ್ರಿಯ 7:1–10

8. ಇಬ್ರಿಯ 11:8–12 ರಲ್ಲಿ ಗ್ರಂಥಕರ್ತನು ಅಬ್ರಹಾಮ ಮತ್ತು ಸಾರಳನ್ನು ನಂಬಿಕೆಯ ವಿವಿಧ ಅಂಶಗಳಿಗೆ ಉದಾಹರಣೆಯಾಗಿ ಉಪಯೋಗಿಸುತ್ತಾನೆ. ಈ ಅಂಶಗಳು ಯಾವವು?

4. ನಂಬಿಕೆಯ ಗುಣಲಕ್ಷಣಗಳ ಕುರಿತಾಗಿ 11:13–16 ನ್ನು ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ.

9. ನೀವು ಈ ವಚನಗಳಲ್ಲಿ ಚಿತ್ರಿಸಲಾಗಿರುವ ನಂಬಿಕೆಯ ಗುಣಲಕ್ಷಣಗಳನ್ನು ಹೇಗೆ ಅರ್ಥೈಸಿಕೊಳ್ಳುತ್ತೀರಿ?

5. ಎಲ್ಲಾ ರೀತಿಯ ಸನ್ನಿವೇಶಗಳಲ್ಲಿ ನಂಬಿಕೆ ಎಂಬುದರ ಕುರಿತು 11:17–18 ನ್ನು ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ:

10. ಅಬ್ರಹಾಮನು ದೇವರ ವಾಗ್ದಾನವನ್ನು ಹೊಂದಿದನು. ಈ ವಾಗ್ದಾನದಲ್ಲಿ ಬರುವ ನಂಬಿಕೆಯು ನಂತರದ ಸಂತತಿಯೊಂದಿಗೆ ಹೇಗೆ ಮುಂದುವರೆಯಿತು (ವ. 17–22)?

11. ಮೋಶೆಯು ಸಿನಾಯಿ ಬೆಟ್ಟದಲ್ಲಿ ಧರ್ಮಶಾಸ್ತ್ರವನ್ನು ಹೊಂದಿದನು ಮತ್ತು ಇಸ್ರಾಯೇಲ್ಯರನ್ನು ವಾಗ್ದಾನ ದೇಶಕ್ಕೆ ಮರಳಿ ನಡೆಸುವ ದೇವರ ಸೇವಕನಾದನು. ಆತನ ಕಥೆಯ ಮೂಲಕ ನಾವು ನಂಬಿಕೆಯ ಕುರಿತಾಗಿ ಏನನ್ನು ಕಲಿಯಬಹುದು (ವ. 23–29)?

12. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ನಂತರ ವಾಗ್ದಾನ ದೇಶಕ್ಕೆ ನೆಗೆಯುತ್ತಾನೆ. ಆತನು ನಂಬಿಕೆಯ ಯಾವ ಉದಾಹರಣೆಯನ್ನು ನೀಡುತ್ತಾನೆ (ವ 30–38)?

6. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು 11:39–30 ರಲ್ಲಿ ತನ್ನ ಮುಕ್ತಾಯದ ಮಾತುಗಳನ್ನು ನೀಡುತ್ತಾನೆ, ಅದನ್ನು ಓದಿರಿ; ನಂತರ ಈ ಪ್ರಶ್ನೆಗಳಿಗೆ ಉತ್ತರಿಸಿರಿ:

13. ಎಲ್ಲಾ 'ನಂಬಿಕೆಯ ನಾಯಕರುಗಳಲ್ಲಿ' ಸಾಮಾನ್ಯವಾಗಿ ಸಾಮಾನ್ಯವಾಗಿ ಕಂಡುಬರುವ ಸಂಗತಿಯೇನು?

14. ವಚನ 40 ನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು?



## ಅವಲೋಕನ

ಈ ಪಾಠದಿಂದ ನೀವು ಕಲಿತಿರುವ ಅತ್ಯಂತ ಪ್ರಾಮುಖ್ಯವಾದ ವಿಷಯಗಳು ಯಾವವು? ಯಾಕೆ ಎಂಬುದನ್ನು ವಿವರಿಸಿರಿ. ಕೆಲವು ಅಂಶಗಳನ್ನು ಪಟ್ಟಿ ಮಾಡಿಕೊಳ್ಳಲು ಸಮಯವನ್ನು ತೆಗೆದುಕೊಳ್ಳಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

1. ಮೇಲಿರುವ ಪ್ರಶ್ನೆ 8 ರ ಉತ್ತರವನ್ನು ಬಳಸಿಕೊಂಡು ಒಂದು ಧ್ಯಾನವನ್ನು ಸಿದ್ಧಪಡಿಸಿರಿ. ನಿಮ್ಮ ಧ್ಯಾನಕ್ಕೆ "ನಂಬಿಕೆ" ಎಂಬ ಶೀರ್ಷಿಕೆಯನ್ನು ಕೊಡಬಹುದು.
2. ಮೇಲಿರುವ ಪ್ರಶ್ನೆ 10 ರ ಉತ್ತರವನ್ನು ಬಳಸಿಕೊಂಡು ಒಂದು ಧ್ಯಾನವನ್ನು ಸಿದ್ಧಪಡಿಸಿರಿ. ನಿಮ್ಮ ಧ್ಯಾನಕ್ಕೆ "ಎಲ್ಲಾ ಸನ್ನಿವೇಶಗಳಲ್ಲಿ ನಂಬಿಕೆ" ಎಂಬ ಶೀರ್ಷಿಕೆಯನ್ನು ಕೊಡಬಹುದು.
3. ಮೇಲಿರುವ ಪ್ರಶ್ನೆ 9, 11 ಮತ್ತು 12 ರ ಉತ್ತರವನ್ನು ಬಳಸಿಕೊಂಡು ಒಂದು ಧ್ಯಾನವನ್ನು ಸಿದ್ಧಪಡಿಸಿರಿ. ನಿಮ್ಮ ಧ್ಯಾನಕ್ಕೆ "ನಂಬಿಕೆಯ ಗುಣಲಕ್ಷಣಗಳು" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 16: ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನಿಡೋಣ, 12:1–3

## ಪರಿಚಯ

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯ ನಂಬಿಕೆಯ ನಾಯಕರುಗಳ ಕಡೆಯಿಂದ ಈಗ – ಎಲ್ಲರಿಗಿಂತಲೂ ಶ್ರೇಷ್ಟವಾದ ಮಾದರಿಯಾದ – ಯೇಸುವಿನ ಬಾಧೆ ಮತ್ತು ಸಾಧನೆಗಳ ಕಡೆಗೆ ಗಮನವನ್ನು ಹರಿಸುತ್ತಾನೆ.

11 ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟ ವ್ಯಕ್ತಿಗಳ ಉದ್ದವಾದ ಪಟ್ಟಿಯು ನಮಗೆ ದೇವರ ನಂಬಿಗಸ್ತಿಕೆಯ ಕುರಿತಾಗಿ ಸಾಕ್ಷಿಯನ್ನು ಹೇಳುತ್ತದೆ. ಅವರ ಸಾಕ್ಷಿಯು ನಮಗೆ ಪ್ರೇರೇಪಣೆಯನ್ನು ನೀಡುತ್ತದೆ ಮತ್ತು ನಮಗೆ ಮಾದರಿಯಾಗಿದೆ. ಆದರೆ ಯೇಸು ಒಬ್ಬನೇ ನಮಗೆ ನಿಜವಾಗಿಯೂ ಸಹಾಯ ಮಾಡುತ್ತಾನೆ ಮತ್ತು ಬಲಪಡಿಸುತ್ತಾನೆ.

## ಪ್ರಶ್ನೆಗಳು

1. ಹಿಂದಿನ ಅಧ್ಯಾಯ ಮತ್ತು ಈ ವಾಕ್ಯಭಾಗದೊಂದಿಗಿರುವ ಸಂಬಂಧವನ್ನು ವಿವರಿಸಿರಿ.
2. ವಚನ 1 ರಲ್ಲಿ ಗ್ರಂಥಕರ್ತನು ಯಾವ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ? ನಿಮ್ಮ ಸ್ವಂತ ವಾಕ್ಯಗಳಲ್ಲಿ ಅದನ್ನು ವಿವರಿಸಿರಿ.
3. ಈ ವೇದಭಾಗದಲ್ಲಿ ನಾವು ಎರಡು ವಿಷಯಗಳನ್ನು ತೆಗೆದುಬಿಡಬೇಕೆಂದು ಹೇಳಲಾಗಿದೆ. ಅವು ಯಾವವು ಎಂಬುದನ್ನು ನಿಮ್ಮ ವಾಕ್ಯದಲ್ಲಿ ವಿವರಿಸಿರಿ.
4. ನಮಗೆ ಯಾಕೆ ಸ್ಥಿರಚಿತ್ತದ ಅವಶ್ಯಕತೆಯಿದೆ?
5. ವಚನ 2–3 ರಲ್ಲಿ ಯೇಸು ಇದನ್ನು ಹೇಗೆ ವರ್ಣಿಸಲ್ಪಟ್ಟಿದ್ದಾನೆ? ಪಟ್ಟಿ ಮಾಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ.
6. ನಾವು ಯಾಕೆ "ಯೇಸುವನ್ನು ಪರಿಗಣಿಸಬೇಕು" ಮತ್ತು ಆತನ ಮೇಲೆ "ದೃಷ್ಟಿಯನ್ನಿಡಬೇಕು"?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ ನೀವು "ಯೇಸುವಿನ ಮೇಲೆ ದೃಷ್ಟಿಯನ್ನಿಡೋಣ" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 17: ಕರ್ತನ ಶಿಸ್ತುಪಾಲನೆ, 12:4–11

## ಪರಿಚಯ

ಹಿಂದಿನ ವೇದಭಾಗದಲ್ಲಿ ನಾವು ಕ್ರೈಸ್ತರಾಗಿ ನಮ್ಮ ಜೀವಿತದ ಓಟವನ್ನು ಓಡುವಾಗ ಮನಗುಂದಿದವರಾಗಿ ಬೇಸರಗೊಳ್ಳದಂತೆ ಯೇಸುವಿನ ಮೇಲೆ ದೃಷ್ಟಿಯನ್ನಿಡಬೇಕೆಂಬ ಪ್ರಭೋದನೆಯನ್ನು ಹೊಂದಿದ್ದೇವೆ. ಈ ವೇದಭಾಗದಲ್ಲಿ ಕರ್ತನು ನಮ್ಮನ್ನು ಶಿಕ್ಷಿಸುವಾಗ ಮತ್ತು ಗದರಿಸುವಾಗ ನಾವು ಬೇಸರಗೊಳ್ಳಬಾರದೆಂದು ಹೇಳಲ್ಪಟ್ಟಿದ್ದೇವೆ. ಬದಲಾಗಿ ನಾವು ಕಷ್ಟಗಳನ್ನು ಮತ್ತು ಶೋಧನೆಗಳನ್ನು ದೇವರಿಗೆ ಮೆಚ್ಚಿಕೆಯನ್ನು ತರುವ ರೀತಿಯಲ್ಲಿ ಮತ್ತು ನಾವು ಪ್ರಬುದ್ಧ ವಿಶ್ವಾಸಿಗಳಾಗಲು ಸಹಾಯಕವಾಗುವ ರೀತಿಯಲ್ಲಿ ಎದುರಿಸಬೇಕು.

## ಪ್ರಶ್ನೆಗಳು

1. ಈ ವಚನಗಳ (ವ 4–11) ಮಧ್ಯದಲ್ಲಿರುವ 'ಕರ್ತನ ಶಿಕ್ಷೆ' ಮತ್ತು ಹಿಂದಿನ 'ಯೇಸುವಿನ ಮೇಲೆ ದೃಷ್ಟಿಯನ್ನಿಡೋಣ' ಎಂಬುದರ ನಡುವಿನ ತಾರ್ಕಿಕವಾದ ಸಂಬಂಧವೇನು?

2. ಯೇಸು ತನ್ನ ಶಿಷ್ಯರಿಗೆ ಹೇಳಿದಂತೆಯೇ ಬಿದ್ದುಹೋಗಿರುವಂತ ಪಾಪಮಯವಾದ ಈ ಲೋಕದಲ್ಲಿ ಯೇಸುವಿನ ಹಿಂಬಾಲಕರಾದ ನಾವು ಕಷ್ಟಾನುಭವ, ಶೋಧನೆ ಮತ್ತು ಪರೀಕ್ಷೆಯನ್ನು ನಿರೀಕ್ಷಿಸಬೇಕು (ಮತ್ತಾಯ 10:22). ನಾವು ಸಹಿಸಬಹುದಾದ ಶೋಧನೆಯೇ ಹೊರತು ಬೇರ ಯಾವದೂ ನಮಗೆ ಸಂಭವಿಸುವದಿಲ್ಲ (1 ಕೊರಿಂಥ 10:13). ನಾವು ಕಠಿಣವಾದ ಅನುಭವಗಳನ್ನು ಅರ್ಥವಿಲ್ಲದ ವಿಪತ್ತುಗಳೆಂದು ಪರಿಗಣಿಸದಿರುವದು ಪ್ರಾಮುಖ್ಯವಾಗಿದೆ. ದೇವರು ಈ ಕಷ್ಟಗಳನ್ನು ನಮ್ಮನ್ನು ತಿದ್ದುವದಕ್ಕೆ ಮತ್ತು ಬೆಳೆಯಲು ಸಹಾಯವಾಗುವ ಮಾರ್ಗಗಳಾಗಿ ಉಪಯೋಗಿಸುತ್ತಾನೆ. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ವಿಪತ್ತುಗಳನ್ನು ಹೇಗೆ ಎದುರಿಸಬೇಕು ಎಂಬುದಕ್ಕೆ ಮೂರ ಸಲಹೆಗಳನ್ನು ನೀಡುತ್ತಾನೆ:

   ಮೊದಲನೆಯ ಸಲಹೆ: ದೇವರ ವಾಕ್ಯವನ್ನು ಜ್ಞಾಪಿಸಿಕೊಳ್ಳಬೇಕು (ವ 5–6), ಇಲ್ಲಿ ಜ್ಞಾನೋಕ್ತಿ 3:11–12 ನ್ನು ಉಲ್ಲೇಖಿಸುತ್ತಾನೆ. ಈ ವಚನಗಳಲ್ಲಿ ನಾವು "ಕರ್ತನ ಶಿಸ್ತುಪಾಲನೆಗೆ" ಮೂರು ವಿಧದಲ್ಲಿ ಪ್ರತಿಕ್ರಿಯಿಸಬಹುದು ಎಂಬುದನ್ನು ಕಾಣುತ್ತೇವೆ. ಅವು ಯಾವವು?

3. ಎರಡನೇ ಸಲಹೆ: ದೇವರ ಆರೈಕೆಯನ್ನು ಜ್ಞಾಪಿಸಿಕೊಳ್ಳಬೇಕು. ಯೇಸು ತನ್ನ ಮಕ್ಕಳನ್ನು ಶಿಸ್ತಿಗೆ ಒಳಪಡಿಸುವದರ ಮೂಲಕ ತನ್ನ ಆರೈಕೆಯನ್ನು ಹೇಗೆ ತೋರಿಸುತ್ತಾನೆ ಎಂಬುದನ್ನು ವಿವರಿಸಿರಿ?

4. ಮೂರನೇ ಸಲಹೆ: ದೇವರ ಉದ್ದೇಶವನ್ನು ಜ್ಞಾಪಿಸಿಕೊಳ್ಳಬೇಕು (ವ 10–11). ಈ ವಚನಗಳು ದೇವರು ತನ್ನ ಮಕ್ಕಳನ್ನು ಶಿಕ್ಷಿಸುವುದರ ಹಿಂದಿರುವ ಎರಡು ಉದ್ದೇಶಗಳನ್ನು ಒಳಗೊಂಡಿದೆ. ಅವು ಯಾವವು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

ಈ ಅಧ್ಯಯನವನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ ನೀವು "ಕಷ್ಟಗಳನ್ನು ಸಹಿಸಿಕೊಳ್ಳಿರಿ" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 18: ಮುಂದೆ ಸಾಗಿರಿ, 12:12–17

## ಪರಿಚಯ

‘ಶಿಸ್ತು ಕ್ರಮ, ಬಾಧೆ ಮತ್ತು ಕಷ್ಟದ ಸಿದ್ಧಾಂತಗಳನ್ನು’ ಮಂಡಿಸಿದ ನಂತರ ಗ್ರಂಥಕರ್ತನು ತನ್ನ ಓದುಗರಿಗೆ ತಮ್ಮ ಕ್ರಿಸ್ತೀಯ ಜೀವಿತದೊಂದಿಗೆ ಮುಂದೆ ಸಾಗಲು ಪ್ರಭೋಧಿಸುತ್ತಾನೆ.

## ಪ್ರಶ್ನೆಗಳು

1. ವಚನ 12 “ಆದುದರಿಂದ” ಎಂಬ ಪದದೊಂದಿಗೆ ಪ್ರಾರಂಭವಾಗುತ್ತದೆ. ಅದು ಏನನ್ನು ಸೂಚಿಸುತ್ತದೆ? ವಿವರಿಸಿರಿ.
2. ನಂತರ ಗ್ರಂಥಕರ್ತನು ಈ ಪ್ರಧಾನವಿಷಯವನ್ನು ಹಳೆ ಒಡಂಬಡಿಕೆಯ ಎರಡು ಉಲ್ಲೇಖಗಳೊಂದಿಗೆ ಪರಿಚಯಿಸುತ್ತಾನೆ (“ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಬಲಗೊಳಿಸಿರಿ,” ಯೆಶಾಯ 35:3; “ನೀನು ನಡೆಯುವ ದಾರಿಯನ್ನು ಸಮಮಾಡು” ಜ್ಞಾನೋಕ್ತಿ 4:26) ಈ ರೂಪಕಾಲಂಕಾರಗಳಿಂದ ಆತನು ಏನು ಹೇಳಲು ಬಯಸುತ್ತಿದ್ದಾನೆಂದು ನೀವು ಯೋಚಿಸುತ್ತೀರಿ?
3. ವಚನ 13 ರಲ್ಲಿರುವ ಎರಡು ಭಾಗಗಳ ನಡುವಿನ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
4. ವಚನ 14 ರಲ್ಲಿರುವ ಪ್ರಬೋಧನೆಯನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
5. ವಚನ 15 ರಲ್ಲಿ ಗ್ರಂಥಕರ್ತನು “ದೇವರ ಕೃಪೆ” ಮತ್ತು “ವಿಶ್ವಾಸಿಗಳ ಕಹಿಭಾವನೆ” ಎರಡರ ನಡುವೆ ರೂಪಿಸುವ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
6. ಈ ವೇದಭಾಗದಲ್ಲಿ ಉಳಿದ ವಚನಗಳು ಎರಡು ಪ್ರಬೋಧನೆಗಳನ್ನು ಒಳಗೊಂಡಿವೆ. ಅವು ಯಾವವು?

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ ನೀವು “ಮುಂದೆ ಸಾಗಿರಿ” ಎಂಬ ಶೀರ್ಷಿಕೆಯನ್ನು ಕೊಡಬಹುದು.

## ಗ್ರಂಥಾಲಯದ/ಮನೆಗೆಲಸದ ಸಮಯಕ್ಕೆ ಸಲಹೆಗಳು – ಗುರುವಾರ (ತರಗತಿಯ ನಾಲ್ಕನೇ ದಿವಸ)



1. ನೀವು ಈ ದಿನ ಮಾಡಿದ ಅಧ್ಯಯನದ ಕಾರ್ಯಗಳನ್ನು ಪೂರ್ತಿಗೊಳಿಸಿರಿ. (15–18)
2. ಹಿಂದಿನ ಅಧ್ಯಯನದ ಟಿಪ್ಪಣಿಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ); ಅಧ್ಯಯನ 19 ನ್ನು ಮುಗಿಸಿರಿ ("ಎರಡು ಬೆಟ್ಟಗಳು").
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ಅಧ್ಯಯನ ಮಾಡಿದ ವೇದಭಾಗಗಳಲ್ಲಿ ಒಂದರ ಮೇಲೆ ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ ಸಿದ್ಧಪಡಿಸಿರಿ.

# ಅಧ್ಯಯನ 19: ಎರಡು ಬೆಟ್ಟಗಳು, 12:18–29

## ಪರಿಚಯ

ಈ ವೇದಭಾಗದಲ್ಲಿ ಗ್ರಂಥಕರ್ತನು ತನ್ನ ಓದುಗರಿಗೆ ಮುಂದಕ್ಕೆ ಸಾಗುವುದು ಏಕೆ ಸಾಧ್ಯವಾಗಿದೆ ಎಂಬುದನ್ನು ವಿವರಿಸುತ್ತಾನೆ. ವಿಶ್ವಾಸಿಗಳು ಬಲಿಷ್ಠರಾಗಿ ಮತ್ತು ನೀತಿವಂತರಾಗಿ ಏಕೆ ನಡೆಯಬೇಕು, ಏಕೆ ಅವರು ಸಮಾಧಾನದಲ್ಲಿ ಮತ್ತು ಪರಿಶುದ್ಧರಾಗಿ ಜೀವಿಸಬೇಕು ಎಂಬುದಕ್ಕೆ ಕಾರಣಗಳಿವೆ.

## ಪ್ರಶ್ನೆಗಳು

1. ಈ ವೇದಭಾಗವು ಇಬ್ರಿಯರಿಗೆ ಬರೆದ ಪತ್ರಿಕೆಯ ವ್ಯತಿರಿಕ್ತ ಚಿತ್ರಣಗಳ ಕೊನೆಯ ಉದಹರಣೆಯನ್ನು ಒಳಗೊಂಡಿದೆ. ಹಿಂದಿನ ವ್ಯತಿರಿಕ್ತ ಚಿತ್ರಣಗಳನ್ನು ನೋಡಿರಿ ಮತ್ತು ಅವು ಯಾವುದರ ಕುರಿತಾಗಿವೆ ಎಂಬುದನ್ನು ಬರೆಯಿರಿ.
    a. 1:4–14
    b. 2:1–4
    c. 3:1–6
    d. 5:1–10
    e. 7:20–28
    f. 8:1–5
    g. 8:6–9:14
    h. 9:23–10:4
2. ಹಾಗಾದರೆ ಈ ವೇದಭಾಗದಲ್ಲಿ ಏನನ್ನು ವ್ಯತಿರಿಕ್ತವಾಗಿ ಬಿಂಬಿಸಲಾಗಿದೆ?
3. ಈ ವೇದಭಾಗದ ಮತ್ತು ಹಿಂದಿನ ವೇದಭಾಗದ ನಡುವಿನ ಸಂಬಂಧವನ್ನು ಹೇಗೆ ಅರ್ಥೈಸಿಕೊಳ್ಳುವಿರಿ?
4. ಈ ವೇದಭಾಗದಲ್ಲಿ ನಾವು ಸೇರಿರುವ ದೇವರ ರಾಜ್ಯದ ಒಂದು ವರ್ಣನೆಯನ್ನು ನೋಡುತ್ತೇವೆ. ಅದು ಇಲ್ಲಿ ವರ್ಣಿಸಲ್ಪಟ್ಟಿರುವಂತೆ ಅದರ ಗುಣಲಕ್ಷಣಗಳ ಒಂದು ಪಟ್ಟಿಯನ್ನು ಮಾಡಿರಿ.
5. ಈ ವೇದಭಾಗದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಯಾವ ಪ್ರಬೋಧನೆಯನ್ನು ನಮಗಾಗಿ ಇಟ್ಟಿದ್ದಾನೆ?

## ಅವಲೋಕನ



ಈ ಪಾಠದಿಂದ ನೀವು ಕಲಿತಿರುವ ಅತ್ಯಂತ ಮಹತ್ವದ ಸಂಗತಿಗಳು ಯಾವವು? ಏಕೆ ವಿವರಿಸಿರಿ. ಕೆಲವು ಅಂಶಗಳನ್ನು ಬರೆಯಲು ಸಮಯವನ್ನು ತೆಗೆದುಕೊಳ್ಳಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನಕ್ಕೆ "ನಮ್ಮ ಬೆಟ್ಟ" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 20: ಪ್ರಬೋಧನೆಗಳು ಭಾಗ 1, 13:1–6

## ಪರಿಚಯ

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ತನ್ನ ಓದುಗರು ಕ್ರಿಸ್ತೀಯ ನಂಬಿಕೆಯ, ಕ್ರಿಸ್ತೀಯ ಸಿದ್ಧಾಂತದ ಕುರಿತು ಸರಿಯಾದ ತಿಳುವಳಿಕೆಯನ್ನು ಹೊಂದಿದರೆ ಮಾತ್ರ ಸಾಲದು ಎಂಬುದನ್ನು ಅರಿತುಕೊಳ್ಳುವಂತೆ ಖಚಿತಪಡಿಸಿಕೊಳ್ಳುತ್ತಾನೆ. ಸಿದ್ಧಾಂತಗಳು ಜೀವಿತದ ಮೇಲೆ ಪರಿಣಾಮವನ್ನು ಬೀರಬೇಕು. ಆದುದರಿಂದ ಆತನು ತನ್ನ ಪುಸ್ತಕವನ್ನು ನೀತಿಶಾಸ್ತ್ರ ಮತ್ತು ನೈತಿಕ ಪ್ರಬೋಧನೆಗಳ ಸರಣಿಗಳೊಂದಿಗೆ ಮುಕ್ತಾಯಗೊಳಿಸುತ್ತಾನೆ. ಈ ತರಗತಿಯ ಕೊನೆಯ ಎರಡು ಅಧ್ಯಯನಗಳಲ್ಲಿ ನಾವು ಈ ಪ್ರಬೋಧನೆಗಳನ್ನು ನೋಡೋಣ.

## ಪ್ರಶ್ನೆಗಳು

1. ಹಿಂದಿನ ಅಧ್ಯಾಯದ ಕೊನೆಯ ಭಾಗದ (12:28–29) ಮತ್ತು ಅಧ್ಯಾಯ 13 ರಲ್ಲಿರುವ ಪ್ರಬೋಧನೆಯ ನಡುವಿನ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
2. ವಚನ 1 ನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿವರಿಸಿರಿ.
3. ವಚನ 2–3 ರಲ್ಲಿ ನಾವು ಸಹೋದರ ಪ್ರೀತಿಯ ಯಾವ ಅಂಶಗಳನ್ನು ಕಾಣುತ್ತೇವೆ?
4. ಇಂದು ದಕ್ಷಿಣ ಭಾರತದಲ್ಲಿ ನಿಮ್ಮ ಸ್ವಂತ ಪರಿಸ್ಥಿತಿ ಏನಾಗಿದೆ? ಸಹೋದರ ಪ್ರೀತಿಯನ್ನು ವ್ಯಕ್ತಪಡಿಸುವದು ಯಾವ ವಿಧದಲ್ಲಿ ಪ್ರಾಮುಖ್ಯವಾಗಿದೆ? ಏಕೆ ಎಂಬುದನ್ನು ಸಹ ವಿವರಿಸಿರಿ.
5. ಮುಂದಿನ ಪ್ರಬೋಧನೆಯು ಲೈಂಗಿಕ ನೈತಿಕತೆಯ ಕುರಿತಾಗಿದೆ (ವ 4). ದಕ್ಷಿಣ ಭಾರತದ ಸಭೆಗಳಲ್ಲಿ ಇದು ಸಮಸ್ಯೆಯಾಗಿದೆಯೋ? ಏಕೆ – ಏಕಿಲ್ಲ ಎಂಬುದನ್ನು ವಿವರಿಸಿರಿ. ಉತ್ತಮವಾದ ಕ್ರಿಸ್ತೀಯ ದಾಂಪತ್ಯಕ್ಕೆ ವಿರುದ್ಧವಾಗಿ ಭಾರತದಲ್ಲಿ ಇಂದು ಇರುವ ಸಾಂಸ್ಕೃತಿಕ ಕೇಡುಗಳು ಯಾವವು?
6. ವಚನ 5–6 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ತನ್ನ ಮುಂದಿನ ಪ್ರಬೋಧನೆಯನ್ನು ಬಲಪಡಿಸುವುದಕ್ಕಾಗಿ ಹಳೆ ಒಡಂಬಡಿಕೆಯ ಎರಡು ಉಲ್ಲೇಖಗಳನ್ನು ಉಪಯೋಗಿಸುತ್ತಾನೆ: *(ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ, ಯೆಹೋಶುವ 1:5; ಯೆಹೋವನು ನನಗಿದ್ದಾನೆ; ಭಯಪಡೆನು; ಮನುಷ್ಯನು ನನಗೆ ಏನು ಮಾಡಾನು? ಕೀರ್ತನೆ 118:6).* ಹೇಗೆ ಎಂಬುದನ್ನು ವಿವರಿಸಿರಿ.




7. ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳಿಗೆ *ಹಣದ ಮೇಲಿನ ವ್ಯಾಮೋಹವು* ಒಂದು ಸಮಸ್ಯೆಯಾಗಿದೆ ಎಂದು ನೀವು ಭಾವಿಸುತ್ತೀರೋ? ವಿವರಿಸಿರಿ.
8. ಸಭಾಪಾಲಕರು ಮತ್ತು ಸತ್ಯವೇದ ಬೋಧಕರು ದಕ್ಷಿಣ ಭಾರತದ ಸಭೆಗಳಲ್ಲಿರುವ ವಿಶ್ವಾಸಿಗಳಿಗೆ *ತಮಗಿರುವದರಲ್ಲೇ ತೃಪ್ತಿಯಿಂದ ಇರಲಿಕ್ಕಾಗುವಂತೆ* ಸಹಾಯ ಮಾಡಲು ಏನು ಮಾಡಬೇಕು?



## ಅವಲೋಕನ

ಈ ಪಾಠದಿಂದ ನೀವು ಕಲಿತಿರುವ ಅತ್ಯಂತ ಪ್ರಾಮುಖ್ಯವಾದ ಸಂಗತಿಗಳು ಯಾವವು? ಏಕೆ ಎಂಬುದನ್ನು ವಿವರಿಸಿರಿ. ಕೆಲವು ಅಂಶಗಳನ್ನು ಪಟ್ಟಿ ಮಾಡಿಕೊಳ್ಳಲು ಸಮಯವನ್ನು ತೆಗೆದುಕೊಳ್ಳಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ



2–4 ನೇ ಪ್ರಶ್ನೆಯ ನಿಮ್ಮ ಉತ್ತರವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನಕ್ಕೆ "ಸಹೋದರ ಪ್ರೀತಿ" ಎಂಬ ಶೀರ್ಷಿಕೆಯನ್ನು ಕೊಡಬಹುದು.

# ಅಧ್ಯಯನ 21: ಪ್ರಬೋಧನೆಗಳು ಭಾಗ 2, 13:7–22

## ಪರಿಚಯ

ಈ ಅಧ್ಯಯನವು ಗ್ರಂಥಕರ್ತನು ಅಧ್ಯಾಯ 13 ರಲ್ಲಿ ಪ್ರಾರಂಭಿಸುವ ಪ್ರಬೋಧನೆಗಳ ಸರಣಿಯನ್ನು ಮುಕ್ತಾಯಗೊಳಿಸುತ್ತದೆ. ಅವುಗಳ ಕ್ರಿಸ್ತೀಯ ಜೀವಿತದ ವಿವಿಧ ಕ್ಷೇತ್ರಗಳ ಕುರಿತು ಮಾತನಾಡುತ್ತವೆ. ಉದಾಹರಣೆಗೆ:

1. ಸಭೆಯ ನಾಯಕರು ಮತ್ತು ವಿಶ್ವಾಸಿಗಳ ನಡುವೆ ಇರುವ ಸಂಬಂಧ
2. ವಿಚಿತ್ರ ಬೋಧನೆಗಳು.
3. ಕ್ರಿಸ್ತನನ್ನು ಅನುಸರಿಸುವಾಗ ಅಪಮಾನವನ್ನು ಸಹಿಸಿಕೊಳ್ಳುವದು.
4. ದೇವರನ್ನು ಮೆಚ್ಚಿಸುವಂತಹ ಯಜ್ಞಗಳು

ಇವುಗಳು ಮತ್ತು ಕ್ರಿಸ್ತೀಯ ಜೀವನ ಶೈಲಿಯ ಇತರ ಕ್ಷೇತ್ರಗಳು ಕ್ರಿಸ್ತೀಯ ನಂಬಿಕೆಯ ಸರಿಯಾದ ತಿಳುವಳಿಕೆಯ ಪರಿಣಾಮಗಳಾಗಿರಬೇಕು. ಅವುಗಳು ಬರಲಿಕ್ಕಿರುವ ಶಾಶ್ವತವಾದ ಪಟ್ಟಣ (ವ 12), ಅಂದರೆ, ಪರಲೋಕದ ಯೆರೂಸಲೇಮ್, ದೇವರ ರಾಜ್ಯಕ್ಕೆ ನಾವು ಸೇರಿದ್ದೇವೆ ಎಂಬುದನ್ನು ಪ್ರತಿಬಿಂಬಿಸುತ್ತವೆ.

## ಪ್ರಶ್ನೆಗಳು

1. "ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (13:8) ಎಂಬ ಚಿರಪರಿಚಿತವಾದ ವಚನದ ಸನ್ನಿವೇಶವನ್ನು ವಿವರಿಸಿರಿ.
2. 13:9 ರಲ್ಲಿ ಓದುಗರಿಗೆ ಎಚ್ಚರಿಕೆಯನ್ನು ನೀಡಿರುವ 'ವಿಚಿತ್ರವಾದ ವಿವಿಧ ಬೋಧನೆಗಳು' ಯಾವಾಗಿರಬಹುದು?
3. ವಚನ 10–12 ರಲ್ಲಿ ಇಬ್ರಿಯ ಗ್ರಂಥಕರ್ತನು ಯಾವ ಅಂಶವನ್ನು ಹೇಳುತ್ತಾನೆ?
4. "ಪಾಳೆಯದ ಆಚೆಗೆ ಹೊರಟು ಹೋಗೋಣ" (ವ 13) ಎಂಬ ಪ್ರಬೋಧನೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕು?
5. ವಚನ 15–16 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರನ್ನು ಎರಡು ವಿಧದ ಯಜ್ಞಗಳನ್ನು ಸಮರ್ಪಿಸಲು ಪ್ರಬೋಧಿಸಲಾಗಿದೆ. ಅವು ಯಾವವು?
6. ಅಧ್ಯಾಯ 13 ರಲ್ಲಿ ವಿಶ್ವಾಸಿಗಳು ತಮ್ಮ ಸಭಾ ನಾಯಕರೊಂದಿಗೆ ಎಂತಹ ಸಂಬಂಧವನ್ನು ಹೊಂದಿರಬೇಕು ಎಂಬುದರ ಕುರಿತಾಗಿ ಮೂರು ಪ್ರಬೋಧನೆಗಳಿವೆ. ಅವು ಯಾವವು?
7. ವಚನ 17–21 ರಲ್ಲಿ ಸಭಾಪಾಲಕರ ನಾಯಕತ್ವದ ಕುರಿತಾಗಿ ಏನನ್ನು ಕಲಿಯುತ್ತೇವೆ?

8. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು “ಈ ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಿರಿ” (ವ 22) ಎಂಬ ಬೇಡಿಕೆಯೊಂದಿಗೆ ಏನನ್ನು ಉಲ್ಲೇಖಿಸುತ್ತಿದ್ದಾನೆಂದು ನೀವು ಯೋಚಿಸುತ್ತೀರಿ?



## ಅವಲೋಕನ

ಈ ಪಾಠದಿಂದ ನೀವು ಕಲಿತಿರುವ ಅತ್ಯಂತ ಪ್ರಾಮುಖ್ಯವಾದ ಸಂಗತಿಗಳು ಯಾವವು? ಏಕೆ ಎಂಬುದನ್ನು ವಿವರಿಸಿರಿ. ಕೆಲವು ಅಂಶಗಳನ್ನು ಪಟ್ಟಿ ಮಾಡಿಕೊಳ್ಳಲು ಸಮಯವನ್ನು ತೆಗೆದುಕೊಳ್ಳಿರಿ.

## ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ

1. ಇಬ್ರಿಯ 13:7–9 ನ್ನು ಆಧರಿಸಿ ಸಭಾ ನಾಯಕರಿಗಾಗಿ “ಯೇಸು ನಮ್ಮೊಂದಿಗಿದ್ದಾನೆ” ಎಂಬ ಶೀರ್ಷಿಕೆಯುಳ್ಳ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಪ್ರಶ್ನೆ 1 ರ ನಿಮ್ಮ ಉತ್ತರವನ್ನು ಬಳಸಿಕೊಳ್ಳಿರಿ.



2. ಇಬ್ರಿಯ 13:13 ನ್ನು ಆಧರಿಸಿ ಸಭಾ ನಾಯಕರಿಗಾಗಿ “ಪಾಳೆಯದ ಆಚೆಗೆ ಯೇಸುವನ್ನು ಹಿಂಬಾಲಿಸೋಣ!” ಎಂಬ ಶೀರ್ಷಿಕೆಯುಳ್ಳ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಪ್ರಶ್ನೆ 4 ರ ನಿಮ್ಮ ಉತ್ತರವನ್ನು ಬಳಸಿಕೊಳ್ಳಿರಿ.
3. ಇಬ್ರಿಯ 13:15–16 ನ್ನು ಆಧರಿಸಿ “ದೇವರನ್ನು ಮೆಚ್ಚಿಸುವಂತಹ ಯಜ್ಞಗಳು” ಎಂಬ ಶೀರ್ಷಿಕೆಯುಳ್ಳ ಚಿಕ್ಕ ಧ್ಯಾನವನ್ನು ಸಿದ್ಧಪಡಿಸಿರಿ. ಪ್ರಶ್ನೆ 5 ರ ನಿಮ್ಮ ಉತ್ತರವನ್ನು ಬಳಸಿಕೊಳ್ಳಿರಿ.
4. ಪ್ರಶ್ನೆ 6–7 ರ ನಿಮ್ಮ ಉತ್ತರವನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನಿಮ್ಮ ಅಧ್ಯಯನಕ್ಕೆ “ಸಭಾಪಾಲಕರು ಮತ್ತು ವಿಶ್ವಾಸಿಗಳು” ಎಂಬ ಶೀರ್ಷಿಕೆಯನ್ನು ಕೊಡಿರಿ.



# ಉತ್ತರಗಳು

# ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ ಭಾಗದ ಉತ್ತರಗಳು

## ಬೋಧಕರಿಗೆ ಟಿಪ್ಪಣಿಗಳು

1. ಈ ಪರಿಚಯ ಭಾಗದ ಮೇಲೆ ಹೆಚ್ಚು ಸಮಯವನ್ನು ಕಳೆಯಬೇಡಿರಿ. ಮೊದಲನೆಯ ಪಾಠದ ಅರ್ಧದಷ್ಟು ಮಾತ್ರ ಓದಿದರೆ ಸಾಕು. ಆದರೆ ಮೂಲಭೂತ ವಿಷಯಗಳನ್ನು ಅರಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯವನ್ನು ಕೊಡಿರಿ.
2. ವಿದ್ಯಾರ್ಥಿಗಳಿಗೆ ಎಲ್ಲಾ ವಿವರಗಳನ್ನು ಬಾಯಿಪಾಠ ಮಾಡಿಸಬೇಡಿರಿ. ಅವರು ಈ ಪುಸ್ತಕದ ಅಧ್ಯಯನಕ್ಕಾಗಿ ಕೆಲವು ಸಂಗತಿಗಳನ್ನು ಸಾಮಾನ್ಯ ಹಿನ್ನೆಲೆಯಾಗಿ ಕಲಿತುಕೊಂಡರೆ ಸಾಕು. ಅವರು ಮುಂದೆ ಈ ಪಾಠವನ್ನು ಮರಳಿ ಓದಬಹುದು, ಬಹುಶಃ ಈ ವಿಷಯದ ಕೊನೆಯಲ್ಲಿ.
3. ನೀವು ವಿದ್ಯಾರ್ಥಿಗಳೊಂದಿಗೆ ಹಾಗೆಯೇ ಪರಸ್ಪರ ಸಂಭಾಷಿಸುತ್ತಿರುವಾಗಲೇ ಈ ಪರಿಚಯ ಭಾಗವನ್ನು ಪೂರ್ತಿಗೊಳಿಸಲು ಪ್ರಯತ್ನಿಸಿರಿ. ಇದರಿಂದಾಗಿ ವಿದ್ಯಾರ್ಥಿಗಳು ನಿಮ್ಮೊಂದಿಗಿನ ಸಂಭಾಷಣೆಯಲ್ಲಿ ಉತ್ತರಗಳನ್ನು ಕಂಡುಕೊಳ್ಳಲಿ. ಸದ್ಯಕ್ಕೆ ಉಪನ್ಯಾಸ ನೀಡಬೇಡಿರಿ ಅಥವಾ "ಬೋಧಿಸಬೇಡಿರಿ"!
4. ಗ್ರಂಥಾಲಯದ ಸಮಯದಲ್ಲಿ ಸಂಪೂರ್ಣ ಪರಿಚಯವನ್ನು ಮತ್ತೊಂದಾವರ್ತಿ ಓದಲು ವಿದ್ಯಾರ್ಥಿಗಳಿಗೆ ಹೇಳುವದರ ಮೂಲಕ ನೀವು ವಿದ್ಯಾರ್ಥಿಗಳು ಕಲಿತಿದ್ದನ್ನು ಬಲಪಡಿಸಬಹುದು.

## ಪ್ರಶ್ನೆಗಳಿಗೆ ಉತ್ತರಗಳು:

1. ನೀವು ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಈ ಮೊದಲು ಓದಿದ್ದೀರೋ?

   ಉತ್ತರ:

2. ನಿಮಗೆ ಅದು ಹೇಗನ್ನಿಸಿತು? ಸರಳವೆನಿಸಿತೋ ಅಥವಾ ಕಠಿಣವೆನಿಸಿತೋ? ಯಾಕೆ ವಿವರಿಸಿರಿ.

   ಉತ್ತರ:

3. ಆಧುನಿಕ ವಿಶ್ವಾಸಿಗಳಿಗೆ ಇಬ್ರಿಯರ ಪುಸ್ತಕ ಕಠಿಣವಾಗಿ ಯಾಕೆ ತೋರುತ್ತದೆ ಎಂಬುದಕ್ಕೆ ನಿಮಗೆ ಇನ್ನು ಹೆಚ್ಚಿನ ಕಾರಣಗಳಿವೆಯೋ?

   ಉತ್ತರ: ಇನ್ನೊಂದು ಕಾರಣ ಮೊದಲಿನ ಓದುಗರಿಗೆ ಮತ್ತು ನಮಗೆ ಇರುವ ಸಂಸ್ಕೃತಿಯ ಅಂತರವಾಗಿರಬಹುದು. ಅವರು ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳಾಗಿದ್ದರು, ಆದರೆ ನಮ್ಮಲ್ಲಿ ಅನೇಕರು ಹಿಂದೂ ಹಿನ್ನೆಲೆಯ ವಿಶ್ವಾಸಿಗಳಾಗಿದ್ದೇವೆ. ಆದುದರಿಂದ ಇಬ್ರಿಯ ಪತ್ರಿಕೆಯಲ್ಲಿ ಬಳಸಲಾಗಿರುವ ಭಾಷೆ ಮತ್ತು ವಿಷಯವು ನಮಗೆ ವಿಚಿತ್ರವಾಗಿ ಮತ್ತು ಪರಕೀಯವಾಗಿ ತೋರಬಹುದು. ಇನ್ನೊಂದು ಕಾರಣ ಯೆಹೂದ್ಯತ್ವ (ಬಲವಾದ ಏಕದೇವತಾವಾದ, ನೈತಿಕವಾಗಿ ಶ್ರೇಷ್ಟ) ಮತ್ತು ಹಿಂದೂತ್ವದ (ವಿಗ್ರಹಾರಾಧನೆ, ನೈತಿಕವಾಗಿ ಭ್ರಷ್ಟ) ನಡುವೆ ಇರುವ ಧಾರ್ಮಿಕ

ಅಂತರವಾಗಿರಬಹುದು. ಯೆಹೂದತ್ವವು ಅಂದಿನ ದಿನಗಳಲ್ಲಿ ಅನ್ಯಜನರಿಗೆ ಅತ್ಯಂತ ಬಲವಾದ ಆಕರ್ಷಣೆಯಾಗಿತ್ತು, ಇದೇ ಕಾರನದಿಂದ ಯೆಹೂದ್ಯ ಹಿನ್ನೆಲೆಯ ಕ್ರೈಸ್ತರು ಹಿಂಸೆಗೆ ಒಳಗಾದಾಗ ತಮ್ಮ ಯೆಹೂದ್ಯ ನಂಬಿಕೆಗೆ ಹಿಂತಿರುಗುವಂತೆ ಅವರಿಗೆ ಶೋಧನೆ ಇನ್ನೂ ಹೆಚ್ಚಾಯಿತು. ಹಿಂದೂ ಹಿನ್ನೆಲೆಯ ಕ್ರೈಸ್ತರಿಗೆ ಹಿಂಸೆಯಾಗುವಾಗ ಅವರು ತಮ್ಮ ಹಿಂದಿನ ವಿಗ್ರಹಾರಾಧನೆಗೆ ಮತ್ತು ಸಾಮಾಜಿಕ ಅಸಮಾನತೆಗೆ ಹಿಂತಿರುಗುವಂತೆ ಶೋಧನೆಯಾಗುವುದು ವಿರಳ.

4. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನ ಕುರಿತು ಸತ್ಯವೇದ ಶಾಸ್ತ್ರಜ್ಞರು ಯಾಕೆ ಒಮ್ಮತ ಸೂಚಿಸುವುದಿಲ್ಲ?

   ಉತ್ತರ: ಪುಸ್ತಕವು ಲೇಖಕನ ಹೆಸರನ್ನು ಉಲ್ಲೇಖಿಸುವದಿಲ್ಲ. ಆದಿಕ್ರೈಸ್ತರ ಐತಿಹಾಸಿಕ ದಾಖಲೆಗಳು ಸಹ ಈ ಸಮಸ್ಯೆಯನ್ನು ಬಗೆಹರಿಸುವದಿಲ್ಲ.

5. ಬಾರ್ನಬ, ಅಪೊಲ್ಲೋಸ, ಸೀಲ ಮತ್ತು ತಿಮೋಥೇಯ ಇಬ್ರಿಯ ಗ್ರಂಥಕರ್ತನ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿಗಳಾಗಿದ್ದಾರೆ ಎಂಬುದಕ್ಕೆ ಕನಿಷ್ಟ ನಾಲ್ಕು ಕಾರಣಗಳನ್ನಾದರೂ ನೀಡಿರಿ?

   ಉತ್ತರ:

   - ಅವರೆಲ್ಲರೂ ಪುರುಷರಾಗಿದ್ದರು
   - ಅವರೆಲ್ಲರಿಗೂ ಯೆಹೂದಿ ಹಿನ್ನೆಲೆ ಇತ್ತು.
   - ಅವರು ಚದುರಿ ಹೋಗಿದ್ದ ಯೆಹೂದಿ ಜನಾಂಗದ ಗ್ರೀಕ್ ಭಾಷೆಯನ್ನು ಮಾತನಾಡುವವರಾಗಿದ್ದರು.
   - ಅವರೆಲ್ಲರೂ ಗೌರವಾನ್ವಿತರಾಗಿದ್ದರು ಮತ್ತು ಆದಿ ಸಭೆಯಲ್ಲಿ ಚಿರಿಪರಿಚಿತ ವ್ಯಕ್ತಿಗಳಾಗಿದ್ದರು.
   - ಅವರಲ್ಲಿ ಯಾರೊಬ್ಬರೂ ಯೇಸುವಿನ ಜೀವಿತಕಾಲದಲ್ಲಿ ಆತನೊಂದಿಗಿದ್ದ ಜನಸಮೂಹಕ್ಕೆ ಸೇರಿದವರಾಗಿರಲಿಲ್ಲ.

6. ಗ್ರಂಥಕರ್ತನು ಯಾರಾಗಿರಬಹುದು ಎಂದು ನೀವು ಸಲಹೆ ನೀಡುತ್ತೀರಿ? ಆ ವ್ಯಕ್ತಿಯು ಇಬ್ರಿಯ ಪುಸ್ತಕದ ಗ್ರಂಥಕರ್ತನ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿಯಾಗಿದ್ದಾನೆ ಎಂಬುದಕ್ಕೆ ಕಾರಣ ಕೊಡಿರಿ?

   ಉತ್ತರ:

7. ಇಬ್ರಿಯರಿಗೆ ಬರೆದ ಪತ್ರಿಕೆ ಯಾರಿಗೆ ಸಂಬೋಧಿಸಲಾಗಿದೆ ಎಂದು ಯಾರಿಗೂ ಖಚಿತವಾಗಿ ತಿಳಿದಿಲ್ಲ ಏಕೆ?

   ಉತ್ತರ: ಪುಸ್ತಕದಲ್ಲಿ ಯಾರಿಗೆ ಸಂಬೋಧಿಸಲಾಗಿದೆ ಎಂಬುದನ್ನು ಉಲ್ಲೇಖಿಸಲಾಗಿಲ್ಲ.

8. 'ಇಬ್ರಿಯರಿಗೆ ಬರೆದ ಪತ್ರಿಕೆ' ಎಂಬ ಪದ ವಿನ್ಯಾಸ ಏನನ್ನು ಉಲ್ಲೇಖಿಸುತ್ತದೆ?

   ಉತ್ತರ: ಇದು ಯೆಹೂದಿ ಹಿನ್ನೆಲೆಯ ಜನರನ್ನು ಉಲ್ಲೇಖಿಸುತ್ತದೆ, ಇಬ್ರಿಯ ಭಾಷೆಯನ್ನು ಮಾತನಾಡುವ ಯೆಹೂದ್ಯರು ಎಂದೇನಲ್ಲ.

9. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಅದರ ಓದುಗರ ಕುರಿತಾಗಿ ನಾವು ಇನ್ನೂ ಏನನ್ನು ತರ್ಕಿಸಬಹುದು?

ಉತ್ತರ:

- ಅವರು ಚದುರಿ ಹೋಗಿದ್ದ ಯೆಹೂದ್ಯರಾಗಿದ್ದರು ಮತ್ತು ಬಹುಶಃ ಗ್ರೀಕ್ ಅವರ ಮೊದಲ ಭಾಷೆಯಾಗಿದ್ದಿರಬಹುದು.
- ಅವರು ಬಹುಶಃ ರೋಮ್ ಪಟ್ಟಣದಲ್ಲಿ ವಾಸಿಸುತ್ತಿದ್ದಿರಬಹುದು.
- ಅವರು ಹಿಂಸೆಯನ್ನು ಅನುಭವಿಸುತ್ತಿದ್ದವರಾಗಿರಬಹುದು.
- ಅವರು ಕ್ರೈಸ್ತ ನಂಬಿಕೆಯನ್ನು ಬಿಟ್ಟು ಯೆಹೂದಿ ಧರ್ಮಕ್ಕೆ ಹಿಂತಿರುಗುವ ಶೋಧನೆಗೆ ಒಳಗಾಗಿದ್ದಿರಬಹುದು.

10. ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಕ್ರಿ.ಶ. 65 ಮತ್ತು ಕ್ರಿ.ಶ. 70 ರ ಮಧ್ಯದಲ್ಲಿ ಬರೆದಿದೆ ಎನ್ನುವದು ಏಕೆ ಸಮಂಜಸವಾಗಿದೆ.

ಉತ್ತರ: ಕ್ರಿ.ಶ. 64 ರಲ್ಲಿ ರೋಮ್ ಪಟ್ಟಣದಲ್ಲಿ ಕಾಣಿಸಿಕೊಂಡ ಮಹಾ ಬೆಂಕಿಯ ನಂತರ (ನಿರೋ ಚಕ್ರವರ್ತಿಯ ಅಡಿಯಲ್ಲಿ ಸುಮಾರು ಕ್ರಿ.ಶ. 65 ಮತ್ತು 70 ರಲ್ಲಿ) ಸಂಭವಿಸಿದ ಹಿಂಸೆಗಳು ಈ ಪುಸ್ತಕದ ಐತಿಹಾಸಿಕ ಹಿನ್ನೆಲೆಯಾಗಿರಬಹುದು. ಈ ಪುಸ್ತಕದ ಧಾರ್ಮಿಕ ಹಿನ್ನೆಲೆಯು ಯೆರೂಸಲೇಮಿನ ದೇವಾಲಯದ ಯಜ್ಞಗಳ ಆರಾಧನೆಯಾಗಿರಬಹುದು. ಕ್ರಿ.ಶ. 70 ರಲ್ಲಿ ದೇವಾಲಯವು ರೋಮನ್ನರಿಂದ ನಾಶವಾಯಿತು. ಇದು ದೇವಾಲಯದ ಸಂಪ್ರದಾಯ ಮತ್ತು ಯಜ್ಞಗಳಿಗೆ ನಾಂದಿ ಹಾಡಿತು.

11. ಗ್ರಂಥಕರ್ತನು ಈ ಪುಸ್ತಕವನ್ನು ಏಕೆ ಬರೆದನು?

ಉತ್ತರ: ಆತನು ಹಿಂಸೆಗೆ ಒಳಗಾಗಿ ತಮ್ಮ ಹಿಂದಿನ ಯೆಹೂದಿ ನಂಬಿಕೆಗೆ ಹಿಂತಿರುಗುವ ಶೋಧನೆಗೆ ಒಳಗಾದ ತನ್ನ ಓದುಗರ ನಂಬಿಕೆಯನ್ನು ಬಲಪಡಿಸಲು ಬಯಸಿದ್ದನು.

12. ಗ್ರಂಥಕರ್ತನು ತನ್ನ ಓದುಗರ ನಂಬಿಕೆಯನ್ನು ಬಲಪಡಿಸಲು ಹೇಗೆ ವಾದಮಾಡುತ್ತಾನೆ ವಿವರಿಸಿರಿ?

ಉತ್ತರ: ಯೇಸು ಮತ್ತು ಆತನ ಯಾಜಕತ್ವ, ಆತನ ತ್ಯಾಗಪೂರ್ವಕವಾದ ಮರಣ ಮತ್ತು ಆತನ ಒಡಂಬಡಿಕೆ ಇವು ಯೆಹೂದ್ಯರ ಒಡಂಬಡಿಕೆಗಿಂತ ಬಹಳ ಶ್ರೇಷ್ಠ ಎಂಬುದು ಆತನ ಮುಖ್ಯವಾದ ವಾದವಾಗಿತ್ತು. ಅದರ ಪರಿಣಾಮವಾಗಿ ಆತನ ಓದುಗರು ಶ್ರೇಷ್ಠವಾದದ್ದನ್ನು (ತಮ್ಮ ಈಗಿನ ಕ್ರಿಸ್ತೀಯ ನಂಬಿಕೆಯನ್ನು) ಕನಿಷ್ಠವಾದ ಸಂಗತಿಗಾಗಿ (ಅವರ ಹಿಂದಿನ ಯೆಹೂದಿ ನಂಬಿಕೆಗಾಗಿ) ತೊರೆದರೆ ಅವರು ಮೂರ್ಖರಾಗುವರು.

13. ಇಬ್ರಿಯರಿಗೆ ಬರೆದ ಪತ್ರಿಕೆಯ ಪ್ರಧಾನ ವಿಷಯವನ್ನು ತಿಳಿಸಿರಿ. ಕೇವಲ ನಿಮ್ಮ ಪಠ್ಯಪುಸ್ತಕದಿಂದ ಅಥವಾ ನಿಮ್ಮ ಟಿಪ್ಪಣಿಯಿಂದ ಉಲ್ಲೇಖಿಸಬೇಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.

ಉತ್ತರ:

14. ಈ ಪ್ರಧಾನ ವಿಷಯವು ಹೇಗೆ ಪುಸ್ತಕದ ಉದ್ದೇಶಕ್ಕೆ ಹೊಂದಿಕೆಯಾಗಿದೆ ವಿವರಿಸಿರಿ.

ಉತ್ತರ: ಇಬ್ರಿಯರಿಗೆ ಬರೆದ ಪತ್ರಿಕೆ ನಿಜವಾಗಿ ಎಲ್ಲವೂ ಯೇಸುವಿನ ಮತ್ತು ಆತನನ್ನು ನಂಬುವ ಎಲ್ಲರಿಗೂ ನಿತ್ಯಜೀವವನ್ನು ಕೊಂಡುವಂತ ಆತನ ತ್ಯಾಗಪೂರ್ವಕವಾದ ಮರಣದ ಕುರಿತಾಗಿದೆ. (5:9)

# ಇಬ್ರಿಯರಿಗೆ ಬರೆದ ಪತ್ರಿಕೆ ಓದುವದು ಭಾಗದ ಉತ್ತರಗಳು

## ಬೋಧಕರಿಗೆ ಟಿಪ್ಪಣಿಗಳು

1. ಮೊದಲಿನ ಮೂರು ಪ್ರಶ್ನೆಗಳಿಗೆ ಉತ್ತರವನ್ನು "ಬೋಧಿಸಬೇಡಿರಿ"! ಅದು ವ್ಯರ್ಥವಾಗಿ ಸಮಯವನ್ನು ಕಳೆದಂತೆ. ಇದರಲ್ಲಿ ಹೆಚ್ಚಿನ ವಿಷಯಗಳನ್ನು ಕ್ರಮಾನುಸಾರವಾಗಿ ಮುಂದಿನ ಅಧ್ಯಯನಗಳಲ್ಲಿ ತೆಗೆದುಕೊಳ್ಳಲಾಗಿದೆ. ಆದುದರಿಂದ ವಿದ್ಯಾರ್ಥಿಗಳು ಉತ್ತರವನ್ನು ಸಮಂಜಸವಾಗಿ ಮತ್ತು ಉತ್ತಮವಾಗಿ ಬರೆದಿದ್ದಾರೋ ಇಲ್ಲವೋ ಎಂಬುದನ್ನು ಕೇವಲ ಪರಿಶೀಲಿಸಿರಿ. ಎಲ್ಲಾ ಅಂಶಗಳನ್ನು ಪರಿಗಣಿಸುವದು *ಬೇಡ!*
2. ಬದಲಾಗಿ ನೀವು ನಾಲ್ಕನೇ ಪ್ರಶ್ನೆಯ ಮೇಲೆ ಹೆಚ್ಚು ಸಮಯವನ್ನು ಕಳೆಯಬಹುದು. ಉತ್ತರಗಳನ್ನು ತರಗತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ನೋಡಿರಿ. ಯಾವುದಾದರೂ ತಪ್ಪು ಕಲ್ಪನೆಗಳಿದ್ದಲ್ಲಿ ಸ್ಪಷ್ಟಪಡಿಸಿರಿ.

## ಪ್ರಶ್ನೆಗಳಿಗೆ ಉತ್ತರಗಳು

ಇಬ್ಬರು ಅಥವಾ ಮೂವರ ಗುಂಪಿನಲ್ಲಿ ಕಾರ್ಯಮಾಡಿರಿ. ಪುಸ್ತಕವನ್ನು ಸಂಪೂರ್ಣವಾಗಿ ಓದಿರಿ. ನೀವು ಹೀಗೆ ಮಾಡುತ್ತಿರುವಾಗ ಈ ಮೂರು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿ:

1. ಅಧ್ಯಾಯ 1–6 ರಲ್ಲಿ ಯೇಸುವನ್ನು ಹೇಗೆ "ವಿವರಿಸಲಾಗಿದೆ" ಅಥವಾ "ವರ್ಣಿಸಲಾಗಿದೆ"? ನಿಮ್ಮ ಉತ್ತರಗಳನ್ನು ಕೆಳಗಿನ ಸರಳ ಉಲ್ಲೇಖಗಳ ಮೂಲಕ ಕಂಡುಕೊಳ್ಳಿರಿ.

   ಇದು ನನ್ನ ಸರಳವಾದ ಪಟ್ಟಿಯಾಗಿದೆ (ನೀವು ಇದನ್ನು ಬೇರೆ ರೀತಿಯಲ್ಲಿ ಮಾಡಿರಬಹುದು)

   a. ದೇವರ ಮಗ, ದೈವೀಕ ಕ್ರಿಸ್ತ, 1:1–3

   b. ದೇವದೂತರಿಗಿಂತ ಶ್ರೇಷ್ಠನು, 1:4–14

   c. ನಮ್ಮ ರಕ್ಷಣೆಯ ಜನಕ (ಕರ್ತೃ), 2:5–13

   d. ಸೈತಾನನ ಬಲದಿಂದ ನಮ್ಮನ್ನು ವಿಮೋಚಿಸುವಾತನು, 2:14–18

   e. ನಮ್ಮ ಪಾಪನಿವೇದನೆಯ ಜನಕ (ಕರ್ತೃ) ಮತ್ತು ಮಹಾಯಾಜಕ, 3:1–6

   f. ನಮ್ಮ ಶ್ರೇಷ್ಠ ಮಹಾಯಾಜಕನು, 4:14–5:10

2. ಯೇಸು ನಮಗೋಸ್ಕರ ಏನು ಮಾಡಿದ್ದಾನೆ? ನಿಮ್ಮ ಉತ್ತರಗಳನ್ನು 7:1–10:18 ರಿಂದ ತೆಗೆದುಕೊಂಡ ಈ ಸರಳವಾದ ಪಟ್ಟಿಯ ಮೂಲಕ ಹುಡುಕಿರಿ.

ಇದು ನನ್ನ ಸರಳವಾದ ಪಟ್ಟಿಯಾಗಿದೆ (ನೀವು ಇದನ್ನು ಬೇರೆ ರೀತಿಯಲ್ಲಿ ಮಾಡಿರಬಹುದು)

a. ಪರಿಪೂರ್ಣ ಮಹಾಯಾಜಕನಾಗಿ ಆತನು ನಮಗೆ ಪರಿಪೂರ್ಣವಾದ ರಕ್ಷಣೆಯನ್ನು ತಂದಿದ್ದಾನೆ. 7:1–8:5

b. ಆತನು ನಮಗೆ ಉತ್ತಮವಾದ ಒಡಂಬಡಿಕೆಯನ್ನು ತಂದಿದ್ದಾನೆ. 8:6–9:14

c. ಆತನು ನಮಗೆ ವಾಗ್ದಾನ ಮಾಡಿದ ನಿತ್ಯವಾದ ಬಾಧ್ಯತೆಯನ್ನು ಕೊಡುವವನಾಗಿದ್ದಾನೆ. 9:15–22

d. ಆತನು ನಮ್ಮ ಪಾಪಗಳಿಗಾಗಿ ಅಂತಿಮ ಯಜ್ಞವನ್ನು ಒದಗಿಸುವವನಾಗಿದ್ದಾನೆ. 9:23–10:18

3. (10:19–13:25 ರ ಆಧಾರದ ಮೇಲೆ) ಯೇಸು ಮತ್ತು ಆತನ ಕಾರ್ಯಗಳಿಗೆ ನಮ್ಮ ಪ್ರತಿಕ್ರಿಯೆ ಏನಾಗಿರಬೇಕು?

ಇದು ನನ್ನ ಸರಳವಾದ ಪಟ್ಟಿಯಾಗಿದೆ (ನೀವು ಇದನ್ನು ಬೇರೆ ರೀತಿಯಲ್ಲಿ ಮಾಡಿರಬಹುದು)

a. ನಾವು ಪ್ರಾಮಾಣಿಕವಾದ ಹೃದಯದಿಂದ ದೇವರ ಸಮೀಪಕ್ಕೆ ಬರಬೇಕು, 10:22

b. ನಾವು ಸಾರುವ ನಿರೀಕ್ಷೆಯನ್ನು ಬಿಟ್ಟುಹೋಗದಂತೆ ಗಟ್ಟಿಯಾಗಿ ಹಿಡಿದುಕೊಳ್ಳಬೇಕು, 10:23

c. ನಾವು ಒಬ್ಬರನ್ನೊಬ್ಬರು ಪ್ರೀತಿ ಮತ್ತು ಉತ್ತಮವಾದ ಕಾರ್ಯಗಳ ಮೂಲಕ ಉತ್ತೇಜಿಸಬೇಕು, 10:24

d. ನಾವು ಒಟ್ಟಾಗಿ ಸೇರಿಬರುವದನ್ನು ಬಿಟ್ಟುಬಿಡಬಾರದು, 10:25

e. ನಾವು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬೇಕು, 10:25

f. ನಾವು ಉದ್ದೇಶಪೂರ್ವಕವಾಗಿ ಪಾಪವನ್ನು ಮಾಡುತ್ತಲೇ ಇರಬಾರದು, 10:26

g. ನಾವು ನಮ್ಮ ಆತ್ಮವಿಶ್ವಾಸವನ್ನು ಬಿಟ್ಟುಬಿಡಬಾರದು. 10:35

h. ನಾವು ತಾಳ್ಮೆಯಿಂದ ಇರಬೇಕು, 10:35

i. 'ನಂಬಿಕೆಯ ನಾಯಕರಿಗಿದ್ದ' ನಂಬಿಕೆ ನಮ್ಮಲ್ಲಿಯೂ ಇರಬೇಕು, ಅಧ್ಯಾಯ 11

j. ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. 12:1

k. ನಾವು ಯೇಸುವಿನ ಮೇಲೆ ದೃಷ್ಟಿಯಿಡಬೇಕು, 12:2

l. ನಾವು ಶಿಕ್ಷಿತರಾಗುವುದಕ್ಕಾಗಿಯೇ ಶಿಕ್ಷೆಯನ್ನು ಅನುಭವಿಸುತ್ತಿದ್ದೇವೆ ಎಂದು ಸಹಿಸಿಕೊಳ್ಳಬೇಕು, 12:7

m. ನಾವು ನಮ್ಮ ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಬಲಪಡಿಸಿಕೊಳ್ಳಬೇಕು, 12:12

n. ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧರಾಗಿರುವುದಕ್ಕೂ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು, 12:14

o. ನಾವು ದೇವರ ಕೃಪೆಯನ್ನು ತಪ್ಪಿಸಿಕೊಳ್ಳಬಾರದು, 12:15

p. ನಾವು ದೇವರ ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು, 12:25

q. ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡಬೇಕು, 12:28

r. ನಾವು ಒಬ್ಬರನ್ನೊಬ್ಬರು ಸಹೋದರರಂತೆ ಪ್ರೀತಿಸುತ್ತಿರಬೇಕು, 13:1

s. ನಾವು ಅಪರಿಚಿತರನ್ನು ಸತ್ಕರಿಸುವದನ್ನು ಮರೆಯಬಾರದು, 13:2

t. ನಾವು ಸೆರೆಮನೆಯಲ್ಲಿದ್ದವರನ್ನು ಜ್ಞಾಪಿಸಿಕೊಳ್ಳಬೇಕು, 13:3

u. ನಾವು ದಾಂಪತ್ಯವನ್ನು ಮಾನ್ಯವೆಂದೆಣಿಸಬೇಕು, 13:4

v. ನಾವು ನಮ್ಮ ಜೀವಿತವನ್ನು ಹಣದಾಸೆಯಿಂದ ದೂರವಿರಿಸಿ ನಮಗಿರುವವುಗಳಲ್ಲಿ ತೃಪ್ತರಾಗಿರಬೇಕು, 13:5

w. ನಾವು ನಮ್ಮ ನಾಯಕರನ್ನು ಜ್ಞಾಪಿಸಿಕೊಳ್ಳಬೇಕು, 13:7

x. ನಾವು ನಾನಾ ವಿಧವಾದ ಅನ್ಯೋಪದೇಶಗಳ ಸೆಳವಿಗೆ ಸಿಕ್ಕಿಕೊಳ್ಳಬಾರದು, 13:9

y. ನಾವು ಯೇಸುವು ತಾಳಿಕೊಂಡಂತೆ ನಿಂದೆಯನ್ನು ತಾಳಿಕೊಳ್ಳಬೇಕು, 13:13

z. ನಾವು ಎಡಬಿಡದೆ ಆತನಿಗೆ ಸ್ತೋತ್ರಯಜ್ಞಗಳನ್ನು ಸಮರ್ಪಿಸಬೇಕು, 13:15

aa. ನಾವು ಪರೋಪಕಾರವನ್ನೂ ಧರ್ಮಮಾಡುವದನ್ನೂ ಮರೆಯಬಾರದು, 13:16

bb. ನಾವು ನಮ್ಮ ಸಭಾನಾಯಕರ ಮಾತನ್ನು ಕೇಳಬೇಕು, ಅವರಿಗೆ ಅಧೀನರಾಗಬೇಕು, 13:17

4. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತ ಆಗಾಗ್ಗೆ ಮುಂಚಿನ ಒಡಂಬಡಿಕೆಯ (ಮೋಶೆಯ ಒಡಂಬಡಿಕೆ, ಸಿನಾಯಿ ಒಡಂಬಡಿಕೆ) ಹಾಗೂ ಹೊಸ ಒಡಂಬಡಿಕೆಯ ನಡುವಿನ ವ್ಯತ್ಯಾಸವನ್ನು ತೋರಿಸುತ್ತಾನೆ. ಕೆಳಗಿನ ಉಲ್ಲೇಖಗಳನ್ನು ನೋಡಿರಿ ಮತ್ತು ಆತನು ತೋರಿಸಿರುವ ಕೆಲವು ಭಿನ್ನತೆಗಳನ್ನು ಗುರುತಿಸಿರಿ.

   a. 5:2 ಮತ್ತು 7:26: ಮೊದಲಿನ ಒಡಂಬಡಿಕೆಯ ಮಹಾಯಾಜಕನು ಬಲಹೀನತೆ ಮತ್ತು ಪಾಪಕ್ಕೆ ಅಧೀನನಾಗಿದ್ದನು. ಆದರೆ ಕ್ರಿಸ್ತನು ಪಾಪರಹಿತನು; ಪರಿಶುದ್ಧನು; ನಿರ್ದೋಷಿಯೂ ನಿಷ್ಕಳಂಕನೂ ಮತ್ತು ಮಹಿಮೆ ಹೊಂದಿದವನೂ ಆಗಿದ್ದಾನೆ.

b. 7:23–25: ಮೊದಲಿನ ಯಾಜಕತ್ವವು ಪರಿಪೂರ್ಣವಾಗಿರಲಿಲ್ಲ ಮತ್ತು ಮರಣಾಧೀನವಾದದ್ದಾಗಿದೆ. ಕ್ರಿಸ್ತನ ಯಾಜಕತ್ವ ಶಾಶ್ವತವಾದದ್ದು ಮತ್ತು ನಿತ್ಯವಾದದ್ದು ಮತ್ತು ರಕ್ಷಣೆಯನ್ನು ತರುವಂತದ್ದು.

c. 9:13 ಮತ್ತು 7:27: ಮೊದಲಿನ ಒಡಂಬಡಿಕೆಯ ಮಹಾಯಾಜಕನು ಆಡುಗಳ, ಹೋರಿಗಳ ರಕ್ತವನ್ನು ಅರ್ಪಿಸುತ್ತಿದ್ದನು. ಆದರೆ ಕ್ರಿಸ್ತನು ತನ್ನನ್ನೇ, ತನ್ನ ಸ್ವಂತ ರಕ್ತವನ್ನೇ ಅರ್ಪಿಸಿದನು,

d. 9.9 ಮತ್ತು 9:14: ಮೊದಲಿನ ಒಡಂಬಡಿಕೆಯಲ್ಲಿ ಅರ್ಪಿಸಿದ ಯಜ್ಞವು ಆರಾಧಕರಿಗೆ ಶುದ್ಧ ಮನಸಾಕ್ಷಿಯನ್ನು ನೀಡಲು ಸಮರ್ಥವಾಗಿರಲಿಲ್ಲ. ಕ್ರಿಸ್ತನ ಯಜ್ಞವು ಮರಣಕ್ಕೆ ನಡೆಸುವ ಕ್ರಿಯೆಗಳಿಂದ ನಮ್ಮ ಮನಸಾಕ್ಷಿಯನ್ನು ಶುದ್ಧಗೊಳಿಸುತ್ತದೆ.

e. 10:3 ಮತ್ತು 9:28: ಮೊದಲಿನ ಒಡಂಬಡಿಕೆಯ ಯಜ್ಞವು ಆರಾಧಕರಿಗೆ ಅವರ ಪಾಪಗಳನ್ನು ನಿರಂತರವಾಗಿ ಜ್ಞಾಪಕಮಾಡುವಂತದ್ದು. ಕ್ರಿಸ್ತನ ಯಜ್ಞವು ಪಾಪಗಳನ್ನು ತೊಳೆದು ತನ್ನನ್ನು ಹಿಂಬಾಲಿಸುವವರಿಗೆ ರಕ್ಷಣೆಯನ್ನು ತರುವಂತದ್ದಾಗಿದೆ.

f. 10:11–12: ಮೊದಲಿನ ಒಡಂಬಡಿಕೆಯ ಯಜ್ಞವು ನಿರಂತರವಾಗಿ ಪುನರಾವರ್ತಿಸಬೇಕಾಗಿತ್ತು ಮತ್ತು ಅದು ಪಾಪವನ್ನು ನಿರ್ಮೂಲ ಮಾಡಲಾಗಲಿಲ್ಲ. ಆದರೆ ಕ್ರಿಸ್ತನು ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಒಂದೇ ಒಂದು ಸಾರಿ ಯಜ್ಞವನ್ನು ಅರ್ಪಿಸಿದನು.

# ಉತ್ತರಗಳು 1: ದೇವರು ತನ್ನ ಮಗನ ಮೂಲಕ ಮಾತನಾಡುತ್ತಾನೆ, 1:1–3

## ಪ್ರಶ್ನೆಗಳಿಗೆ ಉತ್ತರಗಳು

1. ಮೊದಲು ದೇವರು ತನ್ನ ಜನರೊಟ್ಟಿಗೆ ಹೀಗೆ ಮಾತನಾಡಿದನು.

   a. ಆತನು ತನ್ನ ಪ್ರವಾದಿಗಳ ಮೂಲಕ ಮಾತನಾಡಿದನು. "ಪ್ರವಾದಿಗಳು" ಎಂಬ ಪದಪ್ರಯೋಗವು ಹಳೆ ಒಡಂಬಡಿಕೆಯ ಎಲ್ಲಾ ಬರಹಗಳನ್ನು ಉಲ್ಲೇಖಿಸುತ್ತದೆ, ಇಬ್ರಿಯ ಸತ್ಯವೇದ ಈ ಎಲ್ಲಾ ಭಾಗಗಳು; ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಬರಹಗಳು.

   b. ಆತನು ಅನೇಕಾವರ್ತಿ ಮಾತನಾಡಿದನು.

   c. ಆತನು ಅನೇಕ ವಿಧದಲ್ಲಿ ಮಾತನಾಡಿದನು.

2. ಈಗ ದೇವರು ತನ್ನ ಜನರೊಟ್ಟಿಗೆ ತನ್ನ ಮಗನ ಮೂಲಕ ಮಾತನಾಡುತ್ತಾನೆ. 'ಈ ಕೊನೆಯ ದಿನಗಳಲ್ಲಿ' ಎಂಬ ಪದಪ್ರಯೋಗವು ಸಂಪೂರ್ಣ ಹೊಸ ಒಡಂಬಡಿಕೆಯ ಅವಧಿಯನ್ನು ಉಲ್ಲೇಖಿಸುತ್ತದೆ, ಯೇಸು ಕ್ರಿಸ್ತನ ಮೊದಲನೇ ಮತ್ತು ಎರಡನೇ ಬರೋಣದ ಮಧ್ಯದ ಸಮಯದ ಕುರಿತು. ಆದುದರಿಂದ ಹಳೆ ಒಡಂಬಡಿಕೆಯ ಸಮಯದಲ್ಲಿ ದೇವರು ತನ್ನ ಜನರೊಟ್ಟಿಗೆ ಪ್ರವಾದಿಗಳ ಮೂಲಕ ಮಾತನಾಡಿದನು (ಹಳೆ ಒಡಂಬಡಿಕೆಯ ಗ್ರಂಥವನ್ನು ಉಲ್ಲೇಖಿಸುತ್ತಾನೆ). ಹೊಸ ಒಡಂಬಡಿಕೆಯ ಅವಧಿಯಲ್ಲಿ ದೇವರು ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ಮಾತನಾಡುತ್ತಾನೆ.

3. ದೇವರು ಯಾವುದರ ಕುರಿತಾಗಿ ಮಾತನಾಡುತ್ತಾನೆ?

   ಉತ್ತರ: 'ಈ ಕೊನೆಯ ದಿನಗಳಲ್ಲಿ' ತನ್ನ ಮಗನಾದ ಯೇಸುವಿನ ಮೂಲಕ ಮಾತ್ರ ದೇವರು ಮಾತನಾಡುವದಿಲ್ಲ. ಆತನು ದೇವರ ಸಂದೇಶವೂ ಸಹ ಆಗಿದ್ದಾನೆ. ಆತನು ದೇವರ ಬಲವಾದ 'ವಾಕ್ಯವಾಗಿದ್ದಾನೆ'. ಆದುದರಿಂದ ದೇವರ ಸಂದೇಶವು ಯೇಸುವಿನ ಮತ್ತು ಕ್ರೂಜೆಯ ಮೇಲೆ ಆತನ ವಿಮೋಚನೆಯ ಕಾರ್ಯದ ಕುರಿತಾದ ಸುವಾರ್ತೆಯಾಗಿದೆ.

4. ಈ ಮೂರು ವಚನಗಳು ನಮಗೆ ಯೇಸು ಯಾರಾಗಿದ್ದಾನೆ ಎಂಬುದರ ಕುರಿತು ಎಂಟು ವಿಷಯಗಳನ್ನು ಬೋಧಿಸುತ್ತವೆ:

   a. ದೇವರು ಆತನ ಮೂಲಕ ಮಾತನಾಡುತ್ತಾನೆ (ಹಳೆ ಒಡಂಬಡಿಕೆಯ ಪ್ರವಾದಿಗಳ ಮೂಲಕ ಮಾತನಾಡಿದಂತೆ): ನಾವು ಇಲ್ಲಿ ಹಳೆ ಮತ್ತು ಹೊಸ ಒಡಂಬಡಿಕೆಯ ನಡುವೆ ಮುಂದುವರೆಯುವಿಕೆ ಇರುವುದನ್ನು ಪ್ರಗತಿಯನ್ನು ನೋಡುತ್ತೇವೆ. ದೇವರು ಅಂದು ಮಾತನಾಡಿದನು; ಆತನು ಈಗಲೂ ಮಾತನಾಡುತ್ತಾನೆ. ಯೇಸು ಹಿಂದಿನದನ್ನು ತೆಗೆದು ಹಾಕಲು ಬರಲಿಲ್ಲ; ಆತನು ಹಿಂದಿನದನ್ನು ನೆರವೇರಿಸಲು ಬಂದನು. ಆತನ ಮೂಲಕ ದೇವರು ಸಂಪೂರ್ಣವಾಗಿ ಮತ್ತು ನಿರ್ದಿಷ್ಟವಾಗಿ ಮಾತನಾಡುತ್ತಾನೆ. ಯೇಸುವಿಗಿಂತ

ಮಿಗಿಲಾದ ಪ್ರಕಟನೆಯಿಲ್ಲ. ಯೇಸುವಿನೊಂದಿಗೆ 'ಕೊನೆಯ ದಿನಗಳು' ಬಂದವು. ಆತನಲ್ಲಿ ದೇವರ ಪ್ರವಾದನೆಗಳು ನೆರವೇರಿದವು.

b. ಆತನು ದೇವರ ಮಗನು: ಆತನು ಕೇವಲ ಒಬ್ಬ ಶ್ರೇಷ್ಠ ವ್ಯಕ್ತಿ, ಉತ್ತಮವಾದ ಬೋಧಕ, ಅದ್ಭುತಗಳನ್ನು ಮಾಡುವ ಶ್ರೇಷ್ಠ ಕಾರ್ಯಕರ್ತ ಅಥವಾ ಶ್ರೇಷ್ಠ ನಾಯಕ ಮಾತ್ರವಾಗಿರಲಿಲ್ಲ. ಇಲ್ಲ, ಆತನು ದೇವಕುಮಾರನಾಗಿದ್ದಾನೆ. ಈ ಪುಸ್ತಕದಲ್ಲಿ ಯೇಸುವಿನ ಪುತ್ರತ್ವವು ಪುನರಾವರ್ತಿತವಾದ ಪ್ರಧಾನ ವಿಷಯವಾಗಿದೆ. ನಾವು ಆತನನ್ನು ನಿರಾಕರಿಸಿದರೆ (10:29) ನಾವು ದೇವರು ನಮಗೋಸ್ಕರ ಇಟ್ಟಿರುವ ರಕ್ಷಣೆಯನ್ನು ನಿರಾಕರಿಸುವವರಾಗಿದ್ದೇವೆ.

c. ಆತನು ದೇವರು ನೇಮಿಸಿದ ಬಾಧ್ಯಸ್ತನಾಗಿದ್ದಾನೆ: ಆತನಲ್ಲಿ ಇಡೀ ಲೋಕಕ್ಕೆ ದೇವರು ಇಟ್ಟಿರುವ ಯೋಜನೆಯು ನೆರವೇರಲ್ಪಡುತ್ತದೆ. ಆತನು ಆಲ್ಫಾ ಮಾತ್ರವಲ್ಲ (ಮುಂದಿನ ಅಂಶವನ್ನು ನೋಡಿರಿ) ಆತನು ಓಮೇಗಾ, ಅಂದರೆ ಅಂತ್ಯ ಕೂಡಾ ಆಗಿದ್ದಾನೆ, ಎಲ್ಲವನ್ನೂ ಪರಿಪೂರ್ಣಗೊಳಿಸುವವನಾಗಿದ್ದಾನೆ.

d. ದೇವರು ವಿಶ್ವವನ್ನು ಆತನ ಮೂಲಕ ಸೃಷ್ಟಿಸಿದ್ದಾನೆ: ಆತನು ಆಲ್ಫಾ, ಅಂದರೆ ಎಲ್ಲಾದರ ಆದಿಯು. *ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ* (ಯೋಹಾನ 1:3).

e. ದೇವರು ತನ್ನ ಮಹಿಮೆಯನ್ನು ಆತನ ಮೂಲಕ ಪ್ರಕಟಿಸುತ್ತಾನೆ.: ಹಳೆ ಒಡಂಬಡಿಕೆಯಲ್ಲಿ, ತನ್ನ ಜನರ ಮಧ್ಯದಲ್ಲಿ ಗೋಚರವಾಗುವ ವೈಭವದ ಪ್ರಸನ್ನತೆಯಾಗಿತ್ತು (ಸೀನಾಯಿ ಬೆಟ್ಟದಲ್ಲಿ ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವು ಕೊಡಲ್ಪಡುವಾಗ; 'ದೇವದರ್ಶನ ಗುಡಾರದಲ್ಲಿ'; ಒಡಂಬಡಿಕೆಯ ಮಂಜೂಷದಲ್ಲಿ) ದೇವರ ಮಹಿಮೆಯು ಈ ಕೊನೆಯ ದಿನಗಳಲ್ಲಿ ಯೇಸುವಿನಲ್ಲಿ ಪ್ರಕಟವಾಗಿದೆ. ಆತನಲ್ಲಿ ದೇವರ ಎಲ್ಲಾ ವೈಭವವು ಸಂಪೂರ್ಣವಾಗಿ ಪ್ರಕಟವಾಗಿದೆ. ಆತನು ದೇವರೊಂದಿಗೆ ಒಂದಾಗಿದ್ದಾನೆ (ಕೆಳಗಿನ ಅಂಶವನ್ನು ಹೋಲಿಸಿರಿ).

f. ಆತನು ದೇವರ ವ್ಯಕ್ತಿತ್ವದ ನಿಖರವಾದ ಪ್ರತಿರೂಪವಾಗಿದ್ದಾನೆ: ದೇವರ ಎಲ್ಲಾ ಗುಣಲಕ್ಷಣಗಳು ಆತನಲ್ಲಿ ಗೋಚರವಾಗಿವೆ. ಆತನು ತಂದೆಗಿಂತ ವ್ಯತ್ಯಾಸವಾಗಿದ್ದಾನೆ (ಹಿಂದಿನ ಅಂಶವನ್ನು ಹೋಲಿಸಿರಿ).

g. ಆತನು ಎಲ್ಲವನ್ನೂ ಸಂರಕ್ಷಿಸುತ್ತಾನೆ: ಯೆಹೂದ್ಯರು ದೇವರು ಎಲ್ಲವನ್ನೂ ಸಂರಕ್ಷಿಸುವಾತನನ್ನಾಗಿ ನೋಡಿದರು. ಆದುದರಿಂದ, ತಮ್ಮ ನಂಬಿಕೆಯಲ್ಲಿ ಚಂಚಲರಾದ ಯೆಹೂದಿ ಕ್ರೈಸ್ತರಿಗೆ ಯೇಸುವಿನಲ್ಲಿ ಭರವಸವಿಡಲು ಪ್ರೋತ್ಸಾಹಿಸಲಾಯಿತು; ಅವರು ಆತನ ಕೈಗಳಲ್ಲಿದ್ದಾರೆ.

h. ಆತನು ರಕ್ಷಕನಾಗಿದ್ದಾನೆ (ನಮ್ಮ ಪಾಪಗಳನ್ನು ಶುದ್ಧಿಕರಿಸುವವನಾಗಿದ್ದಾನೆ): ಯೇಸು ತಾನೇ ಅದ್ವಿತೀಯ ಯಜ್ಞವಾಗಿದ್ದಾನೆ. ಇಬ್ರಿಯರಿಗೆ ಬರೆದ ಪತ್ರಿಕೆಯು ಮುಂದೆ ಈ ವಿಷಯದ ಕುರಿತು ವಿವರವಾಗಿ ಮಾತನಾಡುತ್ತದೆ. ಆತನು ಒಂದೇ ಸಾರಿ ತನ್ನ ಪ್ರಾಣವನ್ನು ಕೊಟ್ಟನು.

ಈಗ ಎಲ್ಲವೂ ಪರಿಪೂರ್ಣಗೊಂಡಿದೆ. ಆತನು ಹಳೆ ಒಡಂಬಡಿಕೆಯ ಯಜ್ಞ ಪದ್ಧತಿಯನ್ನು ಮುಕ್ತಾಯಗೊಳಿಸಿದನು. ಆತನನ್ನು ಬಿಟ್ಟರೆ ಬೇರೆ ರಕ್ಷಕನಿಲ್ಲ.

# ಉತ್ತರಗಳು 2: ದೇವದೂತರಿಗಿಂತ ಶ್ರೇಷ್ಠನು, 1:4–14

## ಟಿಪ್ಪಣಿ 1

ಜಟಿಲವಾದ ಸಮಯದಲ್ಲಿ ದೇವದೂತರು ಆತನ ಜನರಿಗೆ ಸಂದೇಶವಾಹಕರಾಗಿದ್ದರು. ಹಳೆ ಒಡಂಬಡಿಕೆಯಲ್ಲಿ ಮತ್ತು ಆದಿಸಭೆಯಲ್ಲಿಯೂ ಸಹ ಅವರು ದೇವರ ಮತ್ತು ಮನುಷ್ಯರ ಮಧ್ಯದಲ್ಲಿ ಮಧ್ಯಸ್ತಗಾರರಾಗಿ ಕಂಡುಬರುತ್ತಾರೆ. ಅವರು ಶ್ರೇಷ್ಠ ಮತ್ತು ಅದ್ಭುತವಾದ ಜೀವಿಗಳಾಗಿರಬಹುದು. ಆದರೆ ಯೇಸು ಅನೇಕ ವಿಧದಲ್ಲಿ ಅವರಿಗಿಂತ ಶ್ರೇಷ್ಠನಾಗಿದ್ದಾನೆ.

## ಪ್ರಶ್ನೆಗಳಿಗೆ ಉತ್ತರಗಳು

1. ಯೇಸು ಅನೇಕ ರೀತಿಯಲ್ಲಿ ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ:

   a. ಆತನ ಹೆಸರು ಶ್ರೇಷ್ಠವಾದ ಹೆಸರಾಗಿದೆ (ವ 4–5): ದೇವದೂತರು ಕೇವಲ ಸಂದೇಶವಾಹಕರು. ಆದರೆ ಯೇಸು ದೇವಕುಮಾರನು.

   b. ಆತನಿಗೆ ಉನ್ನತವಾದ ಸ್ಥಾನವಿದೆ (ವ 6): ದೇವದೂತರು ಯೇಸುವನ್ನು ಆರಾಧಿಸುತ್ತಾರೆ.

   c. ಆತನ ಸ್ವರೂಪವು ಉನ್ನತವಾಗಿದೆ (ವ 7–8) ದೇವದೂತರು ಯೇಸುವಿನ ಸೇವಕರಾಗಿದ್ದಾರೆ. ಆದರೆ ಆತನು ದೇವರಾಗಿದ್ದಾನೆ.

   d. ಆತನ ಪಾತ್ರವು ಉನ್ನತವಾಗಿದೆ (ವ 7–8): ದೇವದೂತರು ಸೇವಕರಾಗಿದ್ದಾರೆ. ಆತನು ರಾಜಾಧಿರಾಜನಾಗಿದ್ದಾನೆ.

   ಯೇಸು ಪ್ರವಾದಿಯಾಗಿದ್ದಾನೆ (ಆತನು ಮಾತನಾಡುವಾತನಾಗಿದ್ದಾನೆ 1:1), ಮತ್ತು ಯಾಜಕನಾಗಿದ್ದಾನೆ (ಆತನು ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ (1:3) ಎಂದು ಹಿಂದೆ ನಾವು ನೋಡಿದೆವು. ಈಗ ಆತನು ಅರಸನೂ ಸಹ ಆಗಿದ್ದಾನೆ ಎಂದು ನಾವು ಕಲಿಯುತ್ತೇವೆ.

   e. ಆತನ ಮಾದರಿಯು (ನೈತಿಕ ಮತ್ತು ನೀತಿಯುತ ಗುಣಲಕ್ಷಣಗಳು) ಶ್ರೇಷ್ಠವಾದದ್ದು (ವ 8–9); ಎಲ್ಲಾ ದೇವದೂತರು ಒಳ್ಳೆಯವರಲ್ಲ (ಕೆಲವರು ಬಿದ್ದುಹೋಗಿದ್ದಾರೆ). ಆದರೆ ಯೇಸು ನೀತಿವಂತನಾಗಿದ್ದಾನೆ (ಮಾನವ ಶೋಧನೆಗಳಿದ್ದಾಗ್ಯೂ)

   f. ಆತನ ಕಾರ್ಯವು ಶ್ರೇಷ್ಠವಾದದ್ದು (ವ 10–12); ದೇವದೂತರು ಸೃಷ್ಟಿಸಲ್ಪಟ್ಟ ಜೀವಿಗಳು. ಆದರೆ ಯೇಸು ಸೃಷ್ಟಿಕರ್ತನು.

   g. ಆತನ ಸಾಧನೆಯು ಶ್ರೇಷ್ಠವಾದದ್ದು (ವ 13ಅ); ದೇವದೂತರು ಸೇವೆ ಮಾಡುತ್ತಾರೆ ಆದರೆ ಯೇಸು ರಕ್ಷಿಸುತ್ತಾನೆ.

h. ಆತನ ನಿಯತಿಯು ಶ್ರೇಷ್ಠವಾದದ್ದು (ವ 13ಬ); ದೇವದೂತರರು ಸೇವಕರಿಗಿಂತ ಹೆಚ್ಚಾಗಲು ಸಾಧ್ಯವಿಲ್ಲ; ಆದರೆ ಯೇಸು ಎಂದೆಂದಿಗೂ ಸ್ತುತಿ ಮತ್ತು ಆರಾಧನೆಗೆ ಯೋಗ್ಯನು; *ಪ್ರತಿಯೊಬ್ಬರೂ ಆತನಿಗೆ ಅಡ್ಡಬಿದ್ದು ಆತನನ್ನು ಅರಿಕೆಮಾಡುವರು...* (ಫಿಲಿಪ್ಪಿ 2:10–11).

2. ವಚನ 8 ರಲ್ಲಿ ಗ್ರಂಥಕರ್ತನು ಕೀರ್ತನೆ 45:6–7 ಉಲ್ಲೇಖಿಸುತ್ತಾನೆ. ಕೀರ್ತನೆ 45 ಒಬ್ಬ ಅರಸನನ್ನು ಸಂಬೋಧಿಸುತ್ತದೆ, 6–7 ವಚನಗಳು ಸಹ; ಇಲ್ಲಿ "ದೇವರು" ಕರ್ತನಾದ ದೇವರನ್ನು ಉಲ್ಲೇಖಿಸುವದಿಲ್ಲ ಬದಲಾಗಿ ಭೂಲೋಕದಲ್ಲಿ ದೇವರ ಪ್ರತಿನಿಧಿಯಾಗಿರುವ ಅರಸನನ್ನು. ಇಬ್ರಿಯರಿಗೆ ಬರೆದ ಪತ್ರಿಕೆಯು ಕೀರ್ತನೆಗಾರನ ಮಾತುಗಳನ್ನು ಯೇಸುವಿಗೆ ಉಲ್ಲೇಖಿಸುವಂತೆ ಅರ್ಥೈಸುತ್ತದೆ, ಯೇಸು ಸಿಂಹಸನಾಸೀನನಾದ ದೇವರಾಗಿದ್ದಾನೆ. ಆದುದರಿಂದ ಆತನು ದೇವದೂತರಿಗಿಂತ ಶ್ರೇಷ್ಠನು ಎಂದು ಅದು ಘೋಷಿಸುತ್ತದೆ.

3. ವಚನ 8 ರಲ್ಲಿ ಗ್ರಂಥಕರ್ತನು ಕೀರ್ತನೆ 102:25–27 ಉಲ್ಲೇಖಿಸುತ್ತಾನೆ. ಕೀರ್ತನೆಗಾರನು ದೇವರು ಲೋಕವನ್ನು ಸೃಷ್ಟಿಸಿದ್ದರ ಕುರಿತಾಗಿ ಬರೆಯುತ್ತಾನೆ. ಇದು ವ. 25 ರಲ್ಲಿ ಬರುವ 'ನೀನು' ಎಂಬ ಪದದ ಹಿಂದಿನ ವಚನದ 'ಓ, ದೇವರೇ' ಎಂಬ ಪದವನ್ನು ಸೂಚಿಸುವ ಸನ್ನಿವೇಶದಿಂದ ಸ್ಪಷ್ಟವಾಗುತ್ತದೆ. ಯೇಸು ಸೃಷ್ಟಿಯ ಕಾರ್ಯದಲ್ಲಿ ಭಾಗಿಯಾಗಿದ್ದನು ದೇವದೂತರು ಅದರಲ್ಲಿ ಭಾಗಿಯಾಗಿರಲಿಲ್ಲ ಎಂಬುದನ್ನು ಇಬ್ರಿಯರಿಗೆ ಬರೆದ ಪತ್ರಿಕೆಯು ಸ್ಪಷ್ಟಪಡಿಸುತ್ತದೆ. ಆದುದರಿಂದ ಯೇಸು ದೇವದೂತರಿಗಿಂತ ಶ್ರೇಷ್ಠನು.

## ಟಿಪ್ಪಣಿ 2

ಹಳೆ ಒಡಂಬಡಿಕೆಯ ವೇದಭಾಗವನ್ನು ಇಬ್ರಿಯ ಗ್ರಂಥಕರ್ತನು ಈ ರೀತಿಯಾಗಿ ಅರ್ಥೈಸಲು ಹೇಗೆ ಸಾಧ್ಯ? ಇದು ಹಳೆ ಒಡಂಬಡಿಕೆಯನ್ನು ಉಪಯೋಗಿಸಲು ನಿಜವಾಗಿಯೂ ಸರಿಯಾದ ಮಾರ್ಗವಾಗಿದೆಯೋ?

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯನ್ನು ಕ್ರಿಸ್ತ ಕೇಂದ್ರಿತ ಪುಸ್ತಕ ಎಂದು ತಿಳಿದುಕೊಂಡಿದ್ದಾನೆ. ಹಳೆ ಒಡಂಬಡಿಕೆಯ ಲೇಖಕರು (ಅರಿತು ಅಥವಾ ಅರಿಯದೆ) ಯೇಸುವಿನ ಕುರಿತಾಗಿ ಬರೆದಿದ್ದಾರೆ. ಯೆಶಾಯ 53 ರಲ್ಲಿ ಬರುವ ಶ್ರಮೆಯ ಸೇವಕನನ್ನು ಯೇಸುವಿನ ಕುರಿತಾಗಿ "ನಿಜವಾಗಿಯೂ" ಉಲ್ಲೇಖಿಸಲಾಗಿದೆ ಎಂದು ಅರ್ಥೈಸುವುದನ್ನು ಹೋಲಿಸಿರಿ. ಅ. ಕೃ. 8:34–35 ರಲ್ಲಿ ಫಿಲಿಪ್ಪನು ಕಂಚುಕಿಗೆ ಯೆಶಾಯ 53 ಯೇಸುವಿನ ಕುರಿತಾದ ಪ್ರವಾದನೆಯಾಗಿದೆ ಎಂದು ವಿವರಿಸುತ್ತಿದ್ದಾನೆ.

ಆದುದರಿಂದ ಈ ವೇದಭಾಗದಲ್ಲಿ (1:4–14) ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಕೀರ್ತನೆ 45 ಮತ್ತು ಕೀರ್ತನೆ 102 ರಲ್ಲಿರುವ ವಚನಗಳನ್ನು 2 ಮತ್ತು 3 ನೇ ಪ್ರಶ್ನೆಯಲ್ಲಿ ಹೇಳಲಾದ "ನಿಜವಾಗಿಯೂ" ಯೇಸುವಿನ ಕುರಿತಾಗಿದೆ ಎಂದು ತಿಳಿದುಕೊಳ್ಳುತ್ತಾನೆ. ಆತನು ಹಳೆ ಒಡಂಬಡಿಕೆಯಲ್ಲಿ ಈಗಾಗಲೇ ಇರುವ ಸತ್ಯವನ್ನು ಹೊರತರುತ್ತಿದ್ದಾನೆ. ಆತನಿಗೆ ಹಳೆ ಒಡಂಬಡಿಕೆಯ ಪಠ್ಯದ ಕುರಿತಾಗಿ ಆಳವಾದ ಮತ್ತು ಪ್ರೇರೇಪಣೆಯನ್ನು ನೀಡುವಂತ ತಿಳುವಳಿಕೆ ಇದೆ. ಹಳೆ ಒಡಂಬಡಿಕೆಯ ಲೇಖಕರು ಈ ಸತ್ಯವನ್ನು ತಮಷ್ಟಕ್ಕೆ ತಾವೇ ತಿಳುದುಕೊಳ್ಳದೇ

ಹೋದಾಗ್ಯೂ, ಆತನು ಯೇಸುವನ್ನು ಹಳೆ ಒಡಂಬಡಿಕೆಯ ಪಠ್ಯಗಳಲ್ಲಿ ನೋಡುವಂತೆ ಪವಿತ್ರಾತ್ಮನಿಂದ ಪ್ರೇರೆಪಿಸಲ್ಪಟ್ಟಿದ್ದಾನೆ.

ಪರಿಣಾಮವಾಗಿ, ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ತನ್ನ ಓದುಗರಿಗೆ ಈ ಕೆಳಗಿನ ಸಂಗತಿಗಳನ್ನು ತೋರಿಸಲು ಹಳೆ ಒಡಂಬಡಿಕೆಯ ಉಲ್ಲೇಖಗಳನ್ನು ಉಪಯೋಗಿಸುತ್ತಾನೆ:

a. ಯೇಸು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ (ಅಧ್ಯಾಯ 1)

b. ಯೇಸು ತನ್ನ ಜನರೊಂದಿಗೆ ಒಂದಾಗಿದ್ದಾನೆ (ಅಧ್ಯಾಯ 2)

c. ದೇವರು ಯೇಸುವನ್ನು ಯಾಜಕತ್ವದ ಸೇವೆಗೆ ನೇಮಿಸಿದ್ದಾನೆ (ಅಧ್ಯಾಯ 5)

d. ಯೇಸುವಿನ ಯಾಜಕತ್ವದ ಸೇವೆ ನಿತ್ಯವಾದದ್ದು (ಅಧ್ಯಾಯ 7)

e. ತನ್ನ ತಂದೆಗೆ ಯೇಸುವಿನ ವಿಧೇಯತೆ (ಅಧ್ಯಾಯ 10)

ಯೇಸುವು ಸಹ ಹಳೆ ಒಡಂಬಡಿಕೆಯನ್ನು ಹೀಗೆಯೇ ಕಂಡನು. ತನ್ನ ಪುನರುತ್ಥಾನ ದಿನದ ಸಂಜೆಯಲ್ಲಿ ಯೇಸು ಯೆರೂಸಲೇಮಿನಿಂದ ಎಮ್ಮಾಹುವಿಗೆ ಪ್ರಯಾಣಿಸುತ್ತಿದ್ದ ತನ್ನ ಇಬ್ಬರು ಶಿಷ್ಯರೊಂದಿಗೆ ಹೋಗುತ್ತಿರುವಾಗ (ಲೂಕ 24:13–32) ಆತನು ಅವರಿಗೆ, *ಎಲಾ ಬುದ್ಧಿಯಿಲ್ಲದವರೇ, ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬುವದರಲ್ಲಿ ಮಂದ ಹೃದಯರೇ, ಕ್ರಿಸ್ತನು ಇಂಥ ಶ್ರಮಗಳನ್ನು ಅನುಭವಿಸಿ ತನ್ನ ಮಹಾಪದವಿಗೆ ಸೇರುವದು ಅಗತ್ಯವಾಗಿತ್ತಲ್ಲವೇ ಎಂದು ಹೇಳಿ ಮೋಶೆಯ ಮತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿದನು* (ವ 25–27).

ಹೊಸ ಒಡಂಬಡಿಕೆಯ ಇನ್ನಿತರ ಲೇಖಕರು ಕೆಲವೊಮ್ಮೆ (ಪ್ರವಾದನೆ, ಮೆಸ್ಸೀಯನ ಅಥವಾ ಮಾದರಿಯ) ಹಳೆ ಒಡಂಬಡಿಕೆಯ ಪಠ್ಯಗಳ ಈ ಆಳವಾದ ಅರ್ಥವಿವರಣೆಯನ್ನು ಬಳಸಿದರು.

ನಮ್ಮ ಕುರಿತಾಗಿ ಏನು? ಹಳೆ ಒಡಂಬಡಿಕೆಯ ಪಠ್ಯಗಳನ್ನು ಈ ರೀತಿಯಾಗಿ ನಾವು ಉಪಯೋಗಿಸುವದು ಸರಿಯೋ? ಇಲ್ಲ, ಸರಿಯಲ್ಲ. ಹೊಸ ಒಡಂಬಡಿಕೆಯ ಲೇಖಕರು ಪವಿತ್ರಾತ್ಮನಿಂದ ಪ್ರೇರಿತರಾಗಿ ಈ ಪಠ್ಯವನ್ನು ಬರೆದಿದ್ದಾರೆ. ನಾವು ಹಾಗೆ ಪ್ರೇರೇಪಿಸಲ್ಪಟ್ಟಿಲ್ಲ.

# ಉತ್ತರಗಳು 3: 'ಆದ್ದರಿಂದ ದಾರಿಬಿಟ್ಟುಹೋಗದಂತೆ', 2:1–4

## ಪ್ರಶ್ನೆಗಳಿಗೆ ಉತ್ತರಗಳು

1. ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರು ಗಮನವನ್ನು ನೀಡಬೇಕು ಯಾಕಂದರೆ, ಇದರಿಂದಾಗಿ ಅವರು ನಂಬಿಕೆಯಲ್ಲಿ ಬಿದ್ದುಹೋಗುವದಿಲ್ಲ.

2. "ದೇವದೂತರಿಂದ ಹೇಳಲ್ಪಟ್ಟ ಸಂದೇಶ" ಇದು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರ (ಧರ್ಮೋಪದೇಶಕಾಂಡ 33:2 ಹೋಲಿಸಿರಿ ಅಲ್ಲಿ "ಪರಿಶುದ್ಧ ಜೀವಿಗಳು" ಎಂಬುದರ ಬದಲಾಗಿ ದೇವದೂತರು ಎಂದು ಹೇಳಲ್ಪಟ್ಟಿದೆ, ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ನೀಡುವಾಗ ಅವರು ದೇವರೊಂದಿಗೆ ಇದ್ದರು, ಗಲಾತ್ಯ 3:19; ಅ.ಕೃ. 7:53 ಸಹ ನೋಡಿರಿ.) ಹಳೆ ಒಡಂಬಡಿಕೆಯ ಧರ್ಮಶಾಸ್ತ್ರ ಬಂಧನವಾಗಿತ್ತು ಅದನ್ನು ಉಲ್ಲಂಘಿಸುವದರ ಪರಿಣಾಮ ಶಿಕ್ಷೆ.

3. ದೇವರ ರಕ್ಷಣೆಯ ಸಂದೇಶದ ಕುರಿತು ನಾವು ಐದು ಅಂಶಗಳನ್ನು ತಿಳಿದುಕೊಳ್ಳಬಹುದು:

   a. ಇದು ಬಹಳ ಪ್ರಾಮುಖ್ಯವಾದದ್ದು (ವ 1). ನಾವು ಇದನ್ನು ಎಚ್ಚರಿಕೆಯಿಂದ ಗಮನಿಸಬೇಕು. ಇಲ್ಲವಾದಲ್ಲಿ ನಾವು ನಮ್ಮ ನಂಬಿಕೆಯಿಂದ ಬಿದ್ದುಹೋಗುತ್ತೇವೆ. ಒಂದುವೇಳೆ ನಾವು ತಪ್ಪಿಹೋದರೆ ನಮ್ಮ ರಕ್ಷಣೆಯು ನಾಶವಾಗುತ್ತದೆ.

   b. ಅದಕ್ಕೆ ದೊಡ್ಡ ಬಲವಿದೆ (ವ 2–3). ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ಸಹ (ದೇವದೂತರ ಮೂಲಕ ಹೇಳಲ್ಪಟ್ಟ ದೇವರ ಸಂದೇಶ) ಕಟ್ಟುವಂತ ಬಲವನ್ನು ಹೊಂದಿದೆ. ಆದರೆ ರಕ್ಷಣೆಯ ಸಂದೇಶ ಅದಕ್ಕಿಂದ ಬಹಳ ಶ್ರೇಷ್ಠವಾಗಿದೆ. ನಮ್ಮ ನಿತ್ಯತ್ವದ ಭವಿಷ್ಯತ್ತು ಅದನ್ನು ಅವಲಂಬಿಸಿದೆ.

   c. ಇದು ಮೊದಲು ಕರ್ತನಾದ ಯೇಸುವಿನಿಂದ ಪ್ರಕಟಿಸಲ್ಪಟ್ಟಿತು (ವ 3) ನಂತರ ಸಾವಿರಾರು ಜನರಿಗೆ ಸುವಾರ್ತೆಯನ್ನು ಹರಡಿದ ಆತನ ಶಿಷ್ಯರಿಂದ. ಈ ಕಾರ್ಯವು ಇಂದು ನಮ್ಮಿಂದ ಮುಂದುವರೆಯಬೇಕು. ಇದು ನಮ್ಮ ಕೇಂದ್ರ ಬಿಂದುವಾಗಿರಬೇಕು, ಇಲ್ಲವಾದಲ್ಲಿ ನಾವು ನಮ್ಮಷ್ಟಕ್ಕೆ ಇದರಿಂದ ತಪ್ಪಿಹೋಗುತ್ತೇವೆ.

   d. ಇದನ್ನು ಕೇಳಿದವರಿಂದ ಇದು ದೃಢಪಡಿಸಲ್ಪಟ್ಟಿತು (ವ 3). ಅವರು ಅದನ್ನು ಸ್ವೀಕರಿಸುವದು ಮಾತ್ರವಲ್ಲ ಅವರು ಅದರ ಪರಿವರ್ತಿಸುವ ಬಲವನ್ನು ಸ್ವತಃ ವೈಯಕ್ತಿಕವಾಗಿ ಅನುಭವಿಸಿದರು. ನಾವು ಸತ್ಯವನ್ನು ಮತ್ತು ಸುವಾರ್ತೆಯ ಬಲವನ್ನು ನಮ್ಮ ಜೀವಿತದಲ್ಲಿ "ದೃಢಪಡಿಸಿದ್ದೇವೆಯೋ"?

   e. ಸೂಚಕಕಾರ್ಯಗಳನ್ನು, ಅದ್ಭುತಗಳನ್ನೂ ಮತ್ತು ಮಹತ್ಕಾರ್ಯಗಳನ್ನೂ ಮಾಡುವದರ ಮೂಲಕ ದೇವರು ತಾನೇ ಸುವಾರ್ತೆಯ ಸತ್ಯವನ್ನು ಸಾಕ್ಷೀಕರಿಸಿದನು. (ವ 4). ಆತ್ಮನ ಫಲಗಳು ಸಹ ವ್ಯಕ್ತವಾದವು.

4. ಈ ವೇದ ಭಾಗದಲ್ಲಿ ನಮಗಿರುವ ಸಂದೇಶ ಇದಾಗಿದೆ

a. ಯೆಹೂದಿ ವಿಶ್ವಾಸಿಗಳು ತಮ್ಮ ನಂಬಿಕೆಯಿಂದ ತಪ್ಪಿಹೋಗುವ ಅಪಾಯದಲ್ಲಿದ್ದರು. ಅದೇ ರೀತಿಯಲ್ಲಿ, ನಾವು ನಮ್ಮ ಜೀವಿತದಲ್ಲಿ ಸುವಾರ್ತೆಯ ಬಲವನ್ನು ಕಳೆದುಕೊಳ್ಳುವ ಅಪಾಯಲ್ಲಿದ್ದೇವೆ. ಆದುದರಿಂದ ಈ ವೇದಭಾಗದ ಸಂದೇಶವು ನಿಜವಾಗಿಯೂ ನಮಗೋಸ್ಕರ ಸಹ ಇದೆ.

b. ಈ ಸುವಾರ್ತೆಯು ಇತಿಹಾಸದಲ್ಲಿ ಬೇರೂರಲ್ಪಟ್ಟಿದೆ. ಯೇಸುವಿನ ಕುರಿತಾದ ಸುವಾರ್ತೆಯು ತತ್ವಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರವಲ್ಲ. ಯೇಸು ಐತಿಹಾಸಿಕ ಪುರುಷನಾಗಿದ್ದಾನೆ. ಆತನ ಜೀವಿತ, ಸೇವೆ, ಬೋಧನೆ, ಕಷ್ಟಾನುಭವ ಮತ್ತು ಮರಣ ಐತಿಹಾಸಿಕ ನಿಜಸಂಗತಿಗಳಾಗಿವೆ. ಆದುದರಿಂದ ಯೇಸುವಿನ ಕುರಿತಾದ ಸುವಾರ್ತೆ ಎಲ್ಲಾ ಸಮಯದಲ್ಲಿ ಮಾನವ ಜೀವಿಗಳಿಗೆ ಸಮಂಜಸವಾಗಿದೆ.

c. ಯೇಸುವಿನ ಕುರಿತಾದ ಸುವಾರ್ತೆ ಕೇವಲ ತತ್ವಜ್ಞಾನ ಮತ್ತು ಪದಗಳಲ್ಲ. ಸುವಾರ್ತೆಯ ಸಂದೇಶವನ್ನು ಸೂಚಕಕಾರ್ಯಗಳನ್ನು, ಅದ್ಭುತಗಳನ್ನೂ ಮತ್ತು ಮಹತ್ಕಾರ್ಯಗಳನ್ನೂ ಮಾಡುವದರ ಮೂಲಕ ದೇವರು ತಾನೇ ಸಾಕ್ಷೀಕರಿಸಿದ್ದಾನೆ. ಆದುದರಿಂದ ಈ ಸಂಗತಿಗಳು ಕ್ರಿಸ್ತೀಯ ಜೀವಿತದ ಯಥಾರ್ಥವಾದ ಭಾಗವಾಗಿವೆ. ಈ ಸಂಗತಿಗಳನ್ನು ನಾವು ನಮ್ಮ ಜೀವಿತದಲ್ಲಿ ಮತ್ತು ನಮ್ಮ ಸಭೆಯ ಜೀವಿತದಲ್ಲಿ ಕಂಡುಕೊಂಡಿದ್ದೇವೆಯೋ?

d. ಆತ್ಮಿಕ ಫಲಗಳನ್ನು ರುಜುವಾತುಪಡಿಸುವದು ಸಹ ಸುವಾರ್ತೆಯನ್ನು ಒಳಗೊಂಡಿದೆ. ನಾವು ಈ ಸಂಗತಿಗಳನ್ನು ನಮ್ಮ ಜೀವಿತದಲ್ಲಿ ಮತ್ತು ನಮ್ಮ ಸಭೆಯ ಜೀವಿತದಲ್ಲಿ ಕಂಡುಕೊಂಡಿದ್ದೇವೆಯೋ?

e. ನಾವು ಸುವಾರ್ತೆಯನ್ನು ಸ್ವೀಕರಿಸುವಾಗ, ನಮ್ಮ ಜೀವಿತವು ಪರಿವರ್ತನೆಯಾಗಬೇಕು. ಈ ಪರಿವರ್ತನೆ ನಮ್ಮ ಜೀವಿತದಲ್ಲಿ ಮತ್ತು ನಮ್ಮ ಸಭೆಯ ಜೀವಿತದಲ್ಲಿ ಸಾಕ್ಷಿಯಾಗಿದೆಯೋ?

f. ಯೇಸುವಿನ ಕುರಿತಾದ ಸುವಾರ್ತೆ ವಿಶಿಷ್ಟವಾಗಿದೆ. ಆತನು ಮಾತ್ರ ದೇವರ ಬಳಿಗೆ ಮತ್ತು ನಿತ್ಯಜೀವಕ್ಕೆ ಮಾರ್ಗವಾಗಿದ್ದಾನೆ. ನಾವು ನಿಜವಾಗಿ ಇದನ್ನು ನಂಬುತ್ತೇವೆಯೋ? ನಾವು ಸಾರುವ ಮತ್ತು ಬೋಧಿಸುವ ಸಮಯದಲ್ಲಿ ಈ ನಂಬಿಕೆಯನ್ನು ಅಭ್ಯಾಸ ಮಾಡುತ್ತೇವೋ? ಅಥವಾ ದೇವರ ಬಳಿಗೆ ಹೋಗಲು ಅನೇಕ ಮಾರ್ಗಗಳಿವೆ ಎಂಬ ರೀತಿಯಲ್ಲಿ ವರ್ತಿಸುತ್ತೇವೋ ಅಥವಾ ಮನುಷ್ಯನು ರಕ್ಷಣೆ ಹೊಂದಲು ಅನೇಕ ಮಾರ್ಗಗಳಿವೆ ಎಂಬ ರೀತಿಯಲ್ಲಿ ವರ್ತಿಸುತ್ತೇವೋ?

5. "ತಪ್ಪಿಹೋಗುವದರ" ಪರಿಣಾಮ "ನ್ಯಾಯವಾದ ಶಿಕ್ಷೆ" – ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ಅದನ್ನು ಉಲ್ಲಂಘಿಸುವವರಿಗೆ "ನ್ಯಾಯವಾದ ಶಿಕ್ಷೆ" ಯನ್ನು ನೀಡುವಂತೆ. ನಾವು ಯೇಸುವಿಗೆ ರಕ್ಷಣೆ ಮತ್ತು ನಿತ್ಯಜೀವದ ಕೊಡುಗೆಗಾಗಿ "ವಂದನೆಗಳನ್ನು" ಹೇಳದಿದ್ದರೆ, ನಾವು ನಮ್ಮ ನಿರ್ಧಾರದ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ; ನಾವು ಭವಿಷ್ಯತ್ತಿನಲ್ಲಿ ಆತನ ನಿತ್ಯವಾದ ರಾಜ್ಯದ ಭಾಗವಾಗುವದಿಲ್ಲ; ನಾವು ನಿತ್ಯಕಾಲಕ್ಕೂ ನಾಶವಾಗುತ್ತೇವೆ.

# ಉತ್ತರಗಳು 4: ನಮ್ಮ ರಕ್ಷಣೆಯ ಜನಕ (ಕರ್ತೃ), 2:5–13

## ಪ್ರಶ್ನೆಗಳಿಗೆ ಉತ್ತರಗಳು

1. ವಚನ 5 ರಲ್ಲಿ ನಾವು ದೇವದೂತರ ಕುರಿತಾಗಿ ಕಲಿಯುತ್ತೇವೆ:

   "ಮುಂದಣ ಸಾಮ್ರಾಜ್ಯ" (ಅಥವಾ ದೇವರ ರಾಜ್ಯ) ಕೆಲವು ಯೆಹೂದಿ ಗುಂಪುಗಳು ಯೋಚಿಸಿದಂತೆ ದೇವದೂತರಿಂದ ಆಳಲ್ಪಡುವದಿಲ್ಲ. ಇಲ್ಲ, ಆ ಗೌರವವು ದೇವರ ಮಗನಾದ, ಯೇಸುವಿಗೆ, ಅಂದರೆ ಮನುಷ್ಯನ ರೂಪವನ್ನು ತಾಳುವದರ ಮೂಲಕ 'ರಕ್ಷಣೆಯ ಕರ್ತೃವಾದನೋ' ಆತನಿಗೆ ಸಂಬಂಧಿಸಿದ್ದಾಗಿದೆ. ಇದು ಈ ವೇದಭಾಗದಿಂದ (ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಇತರ ವೇದಭಾಗಗಳಿಂದ) ಸ್ಪಷ್ಟವಾಗುತ್ತದೆ.

2. ನಾವು ವಚನ 5 ರಲ್ಲಿರುವ 'ಮುಂದಣ ಸಾಮ್ರಾಜ್ಯ' ಎಂಬ ಹೇಳಿಕೆಯು (ಮತ್ತು 1:2 ರಲ್ಲಿರುವ 'ಕೊನೆಯ ದಿವಸಗಳು' ಮತ್ತು 6:5 ರಲ್ಲಿರುವ 'ಮುಂದಣ ಯುಗ' ಎಂಬ ಹೇಳಿಕೆ) ದೇವರ ರಾಜ್ಯವನ್ನು ಉಲ್ಲೇಖಿಸುತ್ತದೆ. ಅಂದರೆ ಅದು ಯೇಸುವಿನ ಮೊದಲನೆಯ ಬರೋಣದೊಂದಿಗೆ ಬಂದ ಸಂಪೂರ್ಣವಾದ ಹೊಸ ಜಗತ್ತಾಗಿದೆ. ಮತ್ತು ಅದು ಆತನ ಎರಡನೆಯ ಬರೋಣದಲ್ಲಿ ಅದು ಪರಿಪೂರ್ಣಗೊಳ್ಳುತ್ತದೆ.

3. ವ 6–9 ರಲ್ಲಿ ನಾವು ಯೇಸುವಿನ ಕುರಿತಾಗಿ ಇದನ್ನು ಕಲಿಯುತ್ತೇವೆ:

   a. ಗ್ರಂಥಕರ್ತನು ಕೀರ್ತನೆ 8 ರ ಭಾಗವನ್ನು ಉಲ್ಲೇಖಿಸುತ್ತಾನೆ ಮತ್ತು ಅದನ್ನು ಯೇಸುವಿನ ಕುರಿತಾದ ಪ್ರವಾದನೆ ಎಂದು ಅರ್ಥೈಸುತ್ತಾನೆ.

   b. ಯೇಸು (ದೈವೀಕ ವಾಕ್ಯವಾಗಿದ್ದಾನೆ, ಆತನ ಮೂಲಕ ಎಲ್ಲವೂ ಸೃಷ್ಟಿಸಲ್ಪಟ್ಟಿತು) ಮನುಷ್ಯರೂಪ ತಾಳಿದನು ("ಸ್ವಲ್ಪ ಸಮಯ" ಆತನು ದೇವದೂತರಿಗಿಂತ ಕಡಿಮೆಯಾಗಿ ಮಾಡಲ್ಪಟ್ಟನು)

   c. ಆತನು ಎಲ್ಲರಿಗಾಗಿ ಮರಣವನ್ನು ಅನುಭವಿಸಿದನು (ಈ ಮೂಲಕ ತನ್ನನ್ನು ನಂಬುವ ಎಲ್ಲರಿಗೂ ರಕ್ಷಣೆಯನ್ನು ಸಾಧಿಸಿದನು)

   d. ಅದರ ಪರಿಣಾಮವಾಗಿ ಆತನು ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿದನು.

   e. ಆತನು ಎಲ್ಲವನ್ನೂ ಆಳುವಾತನಾಗಿದ್ದಾನೆ, ಈ ವಾಸ್ತವಾಂಶವು ಇತಿಹಾಸದ ಈ ಅವಧಿಯಲ್ಲಿ ಸ್ಪಷ್ಟವಾಗಿರದೇ ಇದ್ದಾಗಲೂ ಸಹ ಆತನೇ ಆಳುವವನಾಗಿದ್ದಾನೆ.

4. ವ 10 ರಲ್ಲಿ ನಾವು ಯೇಸುವಿನ ಕುರಿತಾಗಿ ಇದನ್ನು ಕಲಿಯುತ್ತೇವೆ

   a. ಅನೇಕ ಜನರಿಗೆ ರಕ್ಷಣೆಯನ್ನು ತರುವುದಕ್ಕಾಗಿ ದೇವರಿಗೆ ಯೇಸುವಿಗಾಗಿ ಒಂದು ಯೋಜನೆಯಿತ್ತು ('ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವದರಲ್ಲಿ').

b. ದೇವರು, ಸರ್ವಶಕ್ತನಾದ ಸೃಷ್ಟಿಕರ್ತನು ಮತ್ತು ಸಂರಕ್ಷಿಸುವಾತನು (‘ಸಮಸ್ತವು ಯಾವನಿಗೋಸ್ಕರ ಮತ್ತು ಯಾವನಿಂದ ಉಂಟಾಯಿತು’) ಈ ಯೋಜನೆಯನ್ನು ತನ್ನ ಶ್ರೇಷ್ಠವಾದ ಜ್ಞಾನದಿಂದ ಸಿದ್ಧಿಗೆ ತಂದನು – (‘ಇದು ಯುಕ್ತವಾಗಿತ್ತು’...).

c. ಯೇಸು ರಕ್ಷಣೆಯ ‘ಕರ್ತೃ’ ಆಗಿದ್ದಾನೆ. ಆತನು ಕ್ರೂಜೆಯ ಮೇಲೆ ತನ್ನ ಮರಣದಿಂದಾಗಿ ನಮಗೆ ರಕ್ಷಣೆಯನ್ನು ಮಾತ್ರ ತರದೆ ಆತನು ರಕ್ಷಣೆಯ ಮಾರ್ಗಕ್ಕೆ ಬಾಗಿಲುಗಳನ್ನು ತೆರೆದು ಮತ್ತು ಅನೇಕ ಜನರನ್ನು ಪ್ರಭಾವದೆಡೆಗೆ ನಡೆಸಿದ್ದಾನೆ (ಆತನು ‘ಅನೇಕ ಮಕ್ಕಳನ್ನು ಪ್ರಭಾವದೆಡೆಗೆ ನಡೆಸಿದ್ದಾನೆ’). ಈ ವಚನದಲ್ಲಿ ನಾವು ರಕ್ಷಣೆಯ" ಎರಡನೇ ಅಂಶಕ್ಕೆ ಒತ್ತು ನೀಡುವದನ್ನು ನೋಡುತ್ತೇವೆ: ನಾವು ಯೇಸುವನ್ನು ನಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿರುವುದರಿಂದ ಇಲ್ಲಿ ಮತ್ತು ಇಂದು ರಕ್ಷಿಸಲ್ಪಟ್ಟಿದ್ದೇವೆ (ನಾವು ‘ದೇವರ ಮಕ್ಕಳಾಗಿದ್ದೇವೆ’); ಅದಲ್ಲದೆ ಆತನು ಮಹಿಮೆಯಿಂದ ತಿರುಗಿ ಬರುವಾಗ ನಮ್ಮ ಅಂತಿಮವಾದ ಮತ್ತು ನಿತ್ಯವಾದ ರಕ್ಷಣೆಯನ್ನು, ಅಂದರೆ ನಮ್ಮ ‘ಮಹಿಮೆಯನ್ನು’ ನಮಗೆ ಕೊಡುವನು.

d. ಕಷ್ಟಾನುಭವವು ಯೇಸುವನ್ನು ನಮ್ಮ ರಕ್ಷಣೆಯ ಪರಿಪೂರ್ಣ ಕರ್ತೃವನ್ನಾಗಿಸಿದೆ. ನಿಜವಾಗಿಯೂ, ಯೇಸು ಪಾಪರಹಿತನಾಗಿರುವದರಿಂದ ನೈತಿಕವಾಗಿ ಪರಿಪೂರ್ಣನಾಗಿದ್ದಾನೆ. ಹಾಗಾದರೆ ಈ ಹೇಳಿಕೆವನ್ನು ನಾವು ಹೇಗೆ ತಿಳಿದುಕೊಳ್ಳಬೇಕು?

‘ಪರಿಪೂರ್ಣ’ ಎಂಬುದಕ್ಕೆ ಗ್ರೀಕ್ ಪದ ಈ ಕೆಳಗಿನ ಹೆಚ್ಚಿನ ಅರ್ಥವನ್ನು ಹೊಂದಿದೆ ‘ಪರಿಪೂರ್ಣವಾಗಿಸುವದು, ನೆರವೇರಿಸುವದು’, ಕಷ್ಟಾನುಭವವು ಯೇಸುವನ್ನು ನಾಲ್ಕು ವಿಧದಲ್ಲಿ ‘ಪರಿಪೂರ್ಣನನ್ನಾಗಿಸಿದೆ’.

- ಮೊದಲನೆಯದಾಗಿ, ಆತನು ತನ್ನ ಕರೆಯುವಿಕೆಯಲ್ಲಿ ಪರಿಪೂರ್ಣನಾದನು; ಆತನು ತನ್ನ ತಂದೆಯ ಚಿತ್ತವನ್ನು ನೆರವೇರಿಸಲು ಸಮರ್ಪಿತನಾಗಿದ್ದನು (10:7, 9).

- ಎರಡನೆಯದಾಗಿ, ಆತನು ತನ್ನ ತಂದೆಯ ಚಿತ್ತಕ್ಕೆ ವಿಧೇಯನಾಗುವದರಲ್ಲಿ ಪರಿಪೂರ್ಣನಾದನು. ಪೌಲನು ವ್ಯಕ್ತಪಡಿಸುವಂತೆ: *ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು!* (ಫಿಲಿಪ್ಪಿ 2:4).

- ಮೂರನೆಯದಾಗಿ, ಆತನು ಮಾನವ ಕುಲದೊಂದಿಗೆ ತನ್ನನ್ನು ತಾನು ಗುರುತಿಸಿಕೊಳ್ಳುವದರಲ್ಲಿ ಪರಿಪೂರ್ಣನಾದನು (ಫಿಲಿಪ್ಪಿ 2:6–7 ರೊಂದಿಗೆ ಹೋಲಿಸಿರಿ).

- ನಾಲ್ಕನೆಯದಾಗಿ, ತನ್ನ ಸ್ವಂತ ಮರಣ ಮತ್ತು ಪುನರುತ್ಥಾನದ ಮೂಲಕ ಪಾಪದ ಮತ್ತು ಮರಣದ ಮೇಲೆ ಜಯವನ್ನು ಸಾಧಿಸುವದರಲ್ಲಿ ಪರಿಪೂರ್ಣನಾದನು.

ಲಿಯೋನ್ ಮೋರಿಸ್ (ರೇಮಂಡ್ ಬ್ರೌನ್ ಅವರಿಂದ ಉಲ್ಲೇಖಿಸಲ್ಪಟ್ಟದ್ದು): "ಕಷ್ಟಾನುಭವವು ಹೊಸ ಪರಿಪೂರ್ಣತೆಯನ್ನು ಪರಿಚಯಿಸುತ್ತದೆ, ಪರೀಕ್ಷೆಗೆ ಒಳಪಟ್ಟ ಪರಿಪೂರ್ಣತೆ. ಒಂದು ಮೊಗ್ಗಿನ ಪರಿಪೂರ್ಣತೆ ಇನ್ನೊಂದು ಹೂವಿನ ಪರಿಪೂರ್ಣತೆ.

ಅದೇರೀತಿಯಾಗಿ ನಿಜವಾಗಿ ಕಷ್ಟಾನುಭವದ ಅನುಭವವನ್ನು ಒಳಗೊಂಡಿರುವ ಪರಿಪೂರ್ಣತೆ ಇದು ಹಿಂದಿನ ಯಾವುದೇ ಪರಿಪೂರ್ಣತೆಯಲ್ಲಿ ಉಪಸ್ಥಿತಿವಿರುವದಿಲ್ಲ. ಇದು ಹಿಂದಿನ ಪರಿಪೂರ್ಣತೆಗೆ ಏನನ್ನಾದರೂ ಸೇರಿಸುತ್ತದೆ. ವಿಶ್ವಾಸಿಗಳಾದ ನಮಗೆ ಕಷ್ಟಾನುಭವದಲ್ಲಿ ಪರಿಪೂರ್ಣತೆಯಿದೆ.

5. ವ 11–13 ರಲ್ಲಿ ನಾವು ಕ್ರೈಸ್ತ ವಿಶ್ವಾಸಿಗಳ ಕುರಿತಾಗಿ ಇದನ್ನು ಕಲಿಯುತ್ತೇವೆ:

   a. ಯೇಸು ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ ('ನೀತಿನಿರ್ಣಯ') ನಾವು ಆತನನ್ನು ನಮ್ಮ ಸ್ವಂತ ರಕ್ಷಕನೆಂದು ಸ್ವೀಕರಿಸುವಾಗ ನಾವು ನೀತಿವಂತರಾಗುತ್ತೇವೆ (ವ 11). ನಾವು ಎಂದೆಂದಿಗೂ ಆತನವರಾಗುತ್ತೇವೆ.

   b. ನಾವು ಯೇಸುವಿನ ಸಹೋದರರು (ವ 12): ಆತನಂತೆ ನಾವು ಪ್ರತ್ಯೇಕಿಸಲ್ಪಟ್ಟವರು ("ಪರಿಶುದ್ಧರಾಗಿ ಮಾಡಲ್ಪಟ್ಟವರು") ಸೇವೆಗಾಗಿ (ಕೆಲವೊಂದು ಜನರು ಮತ್ತು ಪಾತ್ರೆಗಳು ಯೆರೂಸಲೇಮಿನ ದೇವಾಲಯದಲ್ಲಿ ಸೇವೆಗಾಗಿ ಪ್ರತ್ಯೇಕಿಸಲ್ಪಟ್ಟಂತೆ).

   c. ನಾವು ಯೇಸುವಿನ ಮಕ್ಕಳು (ವ 13); ನಾವು ಪರಿಶುದ್ಧತೆಯಲ್ಲಿ ಹೆಚ್ಚು ಹೆಚ್ಚಾಗಿ ಆತನಂತೆ ಆಗಬೇಕೆಂದು ಆತನು ನಿರೀಕ್ಷಿಸುತ್ತಾನೆ ("ಶುದ್ಧೀಕರಿಸುವಿಕೆ"). ಆತನು ತನ್ನ ತಂದೆಯ ಮುಂದೆ ನಮ್ಮನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವಂತೆ ಮಾಡುವವರೆಗೂ ನಾವು ಪರಿಶುದ್ಧರಾಗುತ್ತಿರಬೇಕು (ಎಫೆಸ. 6:27). ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಶುದ್ಧೀಕರಣವು ಪ್ರಾಮುಖ್ಯವಾಗಿ ಕಂಡುಬರುವ ವಿಷಯವಾಗಿದೆ.

6. ವ 11–13 ರಲ್ಲಿ ಯೇಸುವಿನ ಕುರಿತಾಗಿ ನಾವು ಇದನ್ನು ಕಲಿಯುತ್ತೇವೆ

   a. ಯೇಸು ಈ ಲೋಕಕ್ಕೆ ಬಂದಾಗ ಮಾನವಕುಲದೊಂದಿಗೆ ಸಂಪೂರ್ಣವಾಗಿ ತನ್ನನ್ನು ಗುರುತಿಸಿಕೊಂಡನು (ವ 11 'ಒಬ್ಬನೇ ತಂದೆ'; 'ಸಹೋದರರೆಂದು ಕರೆದನು') ಆತನು ನಮ್ಮಲ್ಲಿ ಒಬ್ಬನಾದನು.

   b. ಯೇಸು ತನ್ನ ವಿಶ್ವಾಸವನ್ನು ದೇವರ ಮೇಲೆ ಇಟ್ಟಿದ್ದನು (ವ 13); ಇದು ಯೆಶಾಯ 9:17 ರಲ್ಲಿ ಬರುವ ಉಲ್ಲೇಖವಾಗಿದೆ, ಅಲ್ಲಿ ಯಾಕೋಬನ ಮನೆತನದವರು ದೇವರ ಅಸಂತೋಷವನ್ನು ಅನುಭವಿಸುತ್ತಿರುವ ಸಮಯದಲ್ಲಿ ಪ್ರವಾದಿಯು ತನ್ನ ವಿಶ್ವಾಸವನ್ನು ಕರ್ತನ ಮೇಲೆ ಇಡುತ್ತಾನೆ. ಅದೇ ರೀತಿಯಾಗಿ ಯೇಸು ತಾನು ಕ್ರೂಜೆಯ ಮೇಲೆ ಕಷ್ಟಾನುಭವವನ್ನು ಅನುಭವಿಸುತ್ತಿರುವಾಗ ಮತ್ತು ಮರಣಹೊಂದಿದಾಗ ತನ್ನ ಜೀವಿತದ ಆ ಕತ್ತಲೆಯ ಕ್ಷಣಗಳಲ್ಲಿ ತನ್ನ ವಿಶ್ವಾಸವನ್ನು ಕರ್ತನ ಮೇಲೆ ಇಡುತ್ತಾನೆ.

   c. ವ 12 ರಲ್ಲಿ ಗ್ರಂಥಕರ್ತನು ಯೇಸುವನ್ನು ಕೀರ್ತನೆ 22:22 ರಂತೆ ಉಲ್ಲೇಖಿಸುತ್ತಾನೆ (ಮೆಸ್ಸೀಯನ ಕುರಿತಾದ ಕೀರ್ತನೆಗಳಲ್ಲಿ ಒಂದು) ಯೇಸು ದೇವರ ಗುಣಗಳನ್ನು (ಆತನ 'ಹೆಸರನ್ನು') ತನ್ನ ಹಿಂಬಾಲಕರಿಗೆ, ತನ್ನನ್ನು ನಂಬುವವರಿಗೆ ('ತನ್ನ ಸಹೋದರರಿಗೆ') ಪ್ರಕಟಿಸುತ್ತಾನೆ.

# ಉತ್ತರಗಳು 5: ಸೈತಾನನಿಂದ ನಮ್ಮನ್ನು ವಿಮೋಚಿಸುವಾತನು 2:14–18

## ಪ್ರಶ್ನೆಗಳಿಗೆ ಉತ್ತರಿಸಿರಿ

1. ಈ ವೇದಭಾಗದಲ್ಲಿ ನಾವು ದೇವದೂತರಿಗೆ ರಕ್ಷಣೆಯ ಅವಶ್ಯಕತೆಯಿಲ್ಲ ಎಂಬುದನ್ನು ಕಲಿಯುತ್ತೇವೆ. ಮನುಷ್ಯನಿಗೆ ("ಅಬ್ರಹಾಮನ ಸಂತತಿಗೆ") ರಕ್ಷಣೆಯ ಅವಶ್ಯಕತೆಯಿದೆ.
2. ಮನುಷ್ಯನ ಮೂರು ವೈರಿಗಳು, ಅಂದರೆ ಆತನನ್ನು ದಾಸತ್ವದಲ್ಲಿಡುವ ಮೂರು ಶಕ್ತಿಗಳು, ಪಾಪ ಮರಣ ಮತ್ತು ಸೈತಾನ ಆಗಿವೆ.
3. ಯೇಸು ಮನುಷ್ಯರೂಪವನ್ನು ಧರಿಸುವದು ಅವಶ್ಯವಾಗಿತ್ತು. ಮಾನವನ ದೇಹ ಮತ್ತು ರಕ್ತದ ಅನುಭವವನ್ನು ಮತ್ತು ಮರಣವನ್ನು ಅನುಭವಿಸುವದರ ಮೂಲಕ ಮಾತ್ರ ಮನುಷ್ಯನ ಮೂರು ವೈರಿಗಳಾದ, ಪಾಪ, ಮರಣ ಮತ್ತು ಸೈತಾನನ್ನು ನಾಶಮಾಡಬಹುದಾಗಿತ್ತು. ಮಾನವ ಜೀವಿತ ಪರಿಸ್ಥಿತಿಗಳ ಅನುಭವದಿಂದ ಮಾತ್ರ ಆತನು ತನ್ನ ಪಾಪರಹಿತತೆಯನ್ನು ಪ್ರಕಟಿಸಬಹುದಾಗಿತ್ತು (ಇಬ್ರಿಯ 4:15) ಮತ್ತು "ಕರುಣೆಯುಳ್ಳ ಮತ್ತು ನಂಬಿಗಸ್ತ ಮಹಾಯಾಜಕನಾಗಬಹುದಿತ್ತು".
4. ಒಬ್ಬ ಶ್ರೇಷ್ಠ ಮಹಾಯಾಜಕನಾಗಿ ಯೇಸುವಿನ ಕಾರ್ಯವು "ಜನರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಯಜ್ಞವನ್ನು ಸಲ್ಲಿಸುವದಾಗಿತ್ತು"
5. ಯೇಸುವಿನ ಬರೋಣವು ಸೈತಾನನ ಅಂತ್ಯದ ಪ್ರಾರಂಭ ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಈ ಸತ್ಯವನ್ನು ಈ ವೇದಭಾಗದಲ್ಲಿ ಕಾಣಬಹುದು:
    a. ಯೇಸುವಿನ ಜಯವು ಆತನ ನರಾವತಾರದಿಂದ ಪ್ರಾರಂಭವಾಯಿತು (ವ 14)
    b. ಅದು ಆತನ ಪಾಪರಹಿತ ಜೀವಿತದಿಂದ ಪ್ರಕಟವಾಯಿತು: ಆತನು ಶೋಧಿಸಲ್ಪಟ್ಟನು. ಯಾವ ಮನುಷ್ಯನೂ ಎಂದೂ ಅನುಭವಿಸದ ಬಾಧೆಯನ್ನು ಆತನು ಅನುಭವಿಸಿದನು (ವ 18).
    c. ಇದು ಜನರಿಗಾಗಿ ಆತನ ಪ್ರಾಯಶ್ಚಿತ್ತ ಯಜ್ಞದಲ್ಲಿ ನೆರವೇರಿತು (ವ 17).
6. ಹಾಗಾದರೆ, ಒಂದು ವೇಳೆ ಯೇಸು ಸೈತಾನನ ಮೇಲೆ ಜಯವನ್ನು ಈಗಾಗಲೇ ಸಾಧಿಸಿದ್ದರೆ, ಸೈತಾನನು ಈಗಲೂ ಲೋಕದಲ್ಲಿ ಯಾಕೆ ಇಷ್ಟೊಂದು ಚಟುವಟಿಕೆಯಿಂದ ಇದ್ದಾನೆ?

    ಉತ್ತರ: ನಾವು ಸೈತಾನನ್ನು ಕಟ್ಟಿ ಹಾಕಿದಂತ ಉಗ್ರವಾದ ನಾಯಿಗೆ ಹೋಲಿಸಹುದು. ಅವನು ಗುರ್ರೆನ್ನುತ್ತಾನೆ ಮತ್ತು ಬೊಗಳುತ್ತಾನೆ, ಆತನು ನಿಮ್ಮ ಮೇಲೆ ಜಿಗಿಯಲು ನೋಡುತ್ತಾನೆ ಮತ್ತು ನಿಮ್ಮ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸುತ್ತಾನೆ. ಆದರೆ ನೀವು ಆತನ ಕೈಗೆ ಸಿಲುಕದೇ ಹೋದರೆ ಆತನು ನಿಮಗೆ ನಿಜವಾಗಿಯೂ ಯಾವ ಕೇಡನ್ನು ಉಂಟುಮಾಡಲಾರನು. ಅದೇ ರೀತಿಯಲ್ಲಿ ಸೈತಾನನನ್ನು ಯೇಸು ಕ್ರೂಜೆಯ ಮೇಲೆ ಜಯಿಸಿದಾಗ ಆತನು 'ಕಟ್ಟಿ ಹಾಕಲ್ಪಟ್ಟನು' ಒಂದು ದಿನ ಆತನು ಶಾಶ್ವತವಾಗಿ ನಾಶವಾಗುವನು.

7. ಈ ವೇದಭಾಗವು ಅತ್ಯಂತ ಸಮಾಧಾನಕರವಾದ ಹೇಳಿಕೆಯೊಂದಿಗೆ ಕೊನೆಗೊಳ್ಳುತ್ತದೆ. ಆತನು ತನ್ನ ನರಾವತಾರದ ಹಾಗೂ ಪ್ರಾಯಶ್ಚಿತ್ತ ಕಾರ್ಯದ ಮೂಲಕ ನೆರವೇರಿಸಿರುವ ಕಾರ್ಯದ ನಿಮಿತ್ತ, ಯೇಸು ನಮ್ಮ ದಿನನಿತ್ಯದ ಕ್ರಿಸ್ತೀಯ ಜೀವಿತದಲ್ಲಿ ನಮಗೆ ಸಹಾಯ ಮಾಡಲು ಶಕ್ತನಾಗಿದ್ದಾನೆ. ಆದುದರಿಂದ ಯೇಸುವಿನ ವಿಮೋಚನೆಯ ಕಾರ್ಯವು ನಮ್ಮ ಜೀವಿತದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ ಎಂದು ಹೇಳಬಹುದು. ಇದರ ಕುರಿತಾಗಿ ಕೆಲವು ಉದಾಹರಣೆಗಳು ಇಲ್ಲಿವೆ:

    a. ಯೇಸು ನಮ್ಮ ಭಯವನ್ನು ತೆಗೆದುಹಾಕುತ್ತಾನೆ. ಇದರ ಕುರಿತಾಗಿ ನಿಮ್ಮ ಸ್ವಂತ ಅನುಭವದಿಂದ ಉದಾಹರಣೆಗಳನ್ನು ಕೊಡಿರಿ.

    b. ಯೇಸು ಆಗಾಗ್ಗೆ ತನ್ನ ಕರುಣೆ ಮತ್ತು ಕ್ಷಮಾಪಣೆಯನ್ನು ನಮಗೆ ತೋರಿಸುತ್ತಾನೆ. ಇದರ ಕುರಿತಾಗಿ ನಿಮ್ಮ ಸ್ವಂತ ಅನುಭವದಿಂದ ಉದಾಹರಣೆಗಳನ್ನು ಕೊಡಿರಿ.

    c. ಯೇಸು ನಮಗೆ ನಂಬಿಗಸ್ತನಾಗಿದ್ದಾನೆ. ಇದರ ಕುರಿತಾಗಿ ನಿಮ್ಮ ಸ್ವಂತ ಅನುಭವದಿಂದ ಉದಾಹರಣೆಗಳನ್ನು ಕೊಡಿರಿ.

    d. ಯೇಸು ನಮ್ಮ ಕಷ್ಟಾನುಭವದಲ್ಲಿ ಭಾಗಿಯಾಗುತ್ತಾನೆ. ಇದರ ಕುರಿತಾಗಿ ನಿಮ್ಮ ಸ್ವಂತ ಅನುಭವದಿಂದ ಉದಾಹರಣೆಗಳನ್ನು ಕೊಡಿರಿ.

    e. ಯೇಸು ನಮಗೆ ಬಲವನ್ನು ಒದಗಿಸುತ್ತಾನೆ. ಇದರ ಕುರಿತಾಗಿ ನಿಮ್ಮ ಸ್ವಂತ ಅನುಭವದಿಂದ ಒಂದು ಉದಾಹರಣೆಯನ್ನು ಕೊಡಿರಿ.



# ಉತ್ತರಗಳು 6: ನಿಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಿರಿ, 3:1–6

## ಪ್ರಶ್ನೆಗಳಿಗೆ ಉತ್ತರಿಸಿರಿ

1. ಈ ವೇದಭಾಗದಲ್ಲಿ ವಿಶ್ವಾಸಿಗಳಿಗೆ ಏನು ಮಾಡಲು ಹೇಳಲಾಗಿದೆ? 2:1–4 ನ್ನು ಹೋಲಿಸಿರಿ. ನಿಮ್ಮ ಸಮಾರೋಪಗಳೇನು?

   ಉತ್ತರ: ವಿಶ್ವಾಸಿಗಳು ತಮ್ಮ ಯೋಚನೆಗಳನ್ನು ಯೇಸುವಿನ ಮೇಲೆ ನೆಲೆಗೊಳಿಸಬೇಕೆಂದು ಹೇಳಲಾಗಿದೆ (12:2 ನ್ನು ಸಹ ನೋಡಿರಿ, ಅಲ್ಲಿ ನಾವು ಇದೇ ರೀತಿಯ ಪದಬಳಕೆಯನ್ನು ಕಾಣಬಹುದು). ಆದ್ದರಿಂದ ಇದು ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳಿಗೆ ಯೇಸು ಅವರಿಗಾಗಿ ಏನು ಮಾಡಿದ್ದಾನೆ ಎಂಬುದನ್ನು ಪರ್ಯಾಲೋಚಿಸಲು ಒಂದು ಪ್ರಬೋಧನೆಯಾಗಿದೆ.

   ನಾವು 2:1–4ರಲ್ಲಿ ಈ ಹಿಂದೆ ಮಾಡಿದ ಪ್ರಬೋಧನೆಯನ್ನು ಕಾಣುತ್ತೇವೆ. ಅಲ್ಲಿ ಅವರು ತಮ್ಮ ನಂಬಿಕೆಯಲ್ಲಿ ತಪ್ಪಿಹೋಗದಂತೆ ಸುವಾರ್ತೆಗೆ ಸೂಕ್ಷ್ಮ ಗಮನ ನೀಡಬೇಕೆಂದು ತಿಳಿಸಲಾಗಿದೆ.

   ವೇದಭಾಗದ ಕೊನೆಯಲ್ಲಿ ಗ್ರಂಥಕರ್ತನು ವಿಶ್ವಾಸಿಗಳು ತಮ್ಮ ಧೈರ್ಯ ಮತ್ತು ನಿರೀಕ್ಷೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂದು ಪ್ರೋತ್ಸಾಹಿಸುತ್ತಾನೆ.

2. ವಚನ 1 ರಲ್ಲಿ ವಿಶ್ವಾಸಿಗಳನ್ನು ಹೇಗೆ ವರ್ಣಿಸಲಾಗಿದೆ? ಈ ವರ್ಣನೆಯ ಮಹತ್ವವನ್ನು ವಿವರಿಸಿರಿ.

   ಉತ್ತರ:

   a. ಅವರನ್ನು 'ಸಹೋದರರು' ಎಂದು ವರ್ಣಿಸಲಾಗಿದೆ. ಅವರು ಕ್ರಿಸ್ತನಲ್ಲಿ ಒಂದೇ ಕುಟುಂಬವಾಗಿದ್ದಾರೆಂದು ಈ ಪದವು ತಿಳಿಸುತ್ತದೆ. ಯೇಸು ತಾನೇ ಅವರನ್ನು ತನ್ನ ಸಹೋದರರೆಂದು ಒಪ್ಪಿಕೊಳ್ಳುತ್ತಾನೆ (2:11). ಅವರು ಆತನೊಂದಿಗೆ ಒಂದಾಗಿದ್ದಾರೆ.

   b. ಅವರನ್ನು 'ಪರಿಶುದ್ಧರು' (ಕನ್ನಡ JV ಯಲ್ಲಿ 'ದೇವಜನರಾದ' ಎಂದು ವರ್ಣಿಸಲಾಗಿದೆ). ಇದು ಅವರ ಸ್ವಹೇಳಿಕೆವನ್ನು ತೋರಿಸುತ್ತದೆ. ಅವರು ಆತನು ಕ್ರೂಜೆಯ ಮೇಲೆ ಮಾಡಿದ ಪ್ರಾಯಶ್ಚಿತ್ತದ ಮೂಲಕ ಪರಿಶುದ್ಧರಾಗಿ ಮಾಡಲ್ಪಟ್ಟಿದ್ದಾರೆ ಮತ್ತು ಅವರ ಜೀವಿತದಲ್ಲಿ ನಿರಂತರವಾದ ಆತನ ಕಾರ್ಯದಿಂದಾಗಿ ಶುದ್ಧೀಕರಿಸಲ್ಪಟ್ಟಿದ್ದಾರೆ (2:10–11).

   c. ಕೊನೆಯದಾಗಿ ಅವರು 'ಪರಲೋಕದ ಕರೆಯಲ್ಲಿ ಪಾಲುಗಾರರಾದ' ಜನರಾಗಿದ್ದಾರೆಂದು ವರ್ಣಿಸಲಾಗಿದೆ. ಈ ಹೇಳಿಕೆವು ಅವರ ಸೌಭಾಗ್ಯವನ್ನು ಸೂಚಿಸುತ್ತದೆ, ಅವರು ಯೇಸುವಿನೊಂದಿಗೆ ಆತನ ಪರಲೋಕದ ಕರೆಯ ಸೌಭಾಗ್ಯವನ್ನು ಹಂಚಿಕೊಳ್ಳುತ್ತಾರೆ. ನಾವು ಆತನ ಸೇವೆಯನ್ನು ಮಾಡುವುದಕ್ಕಾಗಿ ಪರಲೋಕದಿಂದ ಕರೆಯಲ್ಪಟ್ಟಿದ್ದೇವೆ. ಆದರೆ ನಾವು ಪರಲೋಕದಲ್ಲಿ ನಮಗಾಗಿ ಸಿದ್ಧಪಡಿಸಿರುವ ಮಹಿಮೆಯಲ್ಲಿ ಭಾಗಿಗಳಾಗಲೂ ಕರೆಯಲ್ಪಟ್ಟಿದ್ದೇವೆ.

3. ವಚನ 1 ರಲ್ಲಿ ಯೇಸುವನ್ನು ಹೇಗೆ ವರ್ಣಿಸಲಾಗಿದೆ? ಈ ವರ್ಣನೆಯ ಮಹತ್ವವನ್ನು ವಿವರಿಸಿರಿ.

ಉತ್ತರ: ಯೇಸುವನ್ನು ಎರಡು ಪದಗಳಲ್ಲಿ ವರ್ಣಿಸಲಾಗಿದೆ:

a. ಅಪೋಸ್ತಲನು (ಈ ಗ್ರೀಕ್ ಪದದ ಅರ್ಥವೇನೆಂದರೆ 'ಒಬ್ಬ ರಾಯಭಾರಿಯನ್ನು ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟ ವ್ಯಕ್ತಿ'): ಯೇಸು ಈ ಲೋಕದಲ್ಲಿ ದೇವರನ್ನು ಪ್ರತಿನಿಧಿಸುವುದಕ್ಕಾಗಿ ಕಳುಹಿಸಲ್ಪಟ್ಟನು. ಆತನು ದೇವರ ರಕ್ಷಣೆಯೆಂಬ ಕೊಡುಗೆಯನ್ನು ನೀಡುವುದಕ್ಕಾಗಿ ಮತ್ತು ತನ್ನ ಸ್ವಂತ ವ್ಯಕ್ತಿತ್ವದಲ್ಲಿ ಅದರ ಪ್ರತೀಕವಾಗಲು ಕಳುಹಿಸಲ್ಪಟ್ಟನು. ಆತನು 'ಮನೆಯನ್ನು' ಕಟ್ಟುವುದಕ್ಕಾಗಿ (ವ. 3–6) ವಿಶ್ವಾಸಿಗಳ ಅನ್ಯೋನ್ಯತೆಯನ್ನು ಸಭೆಯನ್ನು ಕಟ್ಟುವುದಕ್ಕಾಗಿ ಕಳುಹಿಸಲ್ಪಟ್ಟಿದ್ದಾನೆ (ಎಫೆಸೆ 2:19–22; 1 ತಿಮೋಥಿ 3:15 ನ್ನು ಹೋಲಿಸಿರಿ).

b. ನಮ್ಮ ಪಾಪದರಿಕೆಯ ಮಹಾಯಾಜಕನು: ಯೇಸು ನಮ್ಮ ಮಹಾಯಾಜಕನು, ಆತನು ನಮ್ಮ ರಕ್ಷಕನಾಗಿ ದೇವರ ಪ್ರಸನ್ನತೆಯನ್ನು ಪ್ರವೇಶಿಸಿದ್ದಾನೆ, ಆತನು ನಮ್ಮ ಮಧ್ಯಸ್ತಗಾರನು ಮತ್ತು ನಮ್ಮ ಸ್ನೇಹಿತನು.

c. 'ಅಪೋಸ್ತಲನು'" ಮತ್ತು 'ಮಹಾಯಾಜಕನು' ಎಂಬ ಪದಗಳು ಯೇಸುವನ್ನು ಮಾನವ ದೃಷ್ಟಿಕೋನದಲ್ಲಿ ವರ್ಣಿಸುತ್ತವೆ. ಇದು ಇಬ್ರಿಯರಿಗೆ ಬರೆದ ಪತ್ರಿಕೆಯ ಒಂದು ಪ್ರಾಮುಖ್ಯವಾದ ಗುಣಲಕ್ಷಣವಾಗಿದೆ –ನರಾವತಾರಿಯಾದ ಕ್ರಿಸ್ತನ ಮೇಲೆ ಕೇಂದ್ರಿಕರಿಸುವದು, ಆತನು 'ಮಾಂಸಧಾರಿಯಾದ ದೇವರು'. ಈ ಒಂದು ಕಾರಣದಿಂದಾಗಿ ಗ್ರಂಥಕರ್ತನು 'ಯೇಸು' ಎಂಬ ಆತನ 'ಮಾನವ' ಹೆಸರನ್ನು, ಈ ವೇದಭಾಗದಲ್ಲಿ ಮತ್ತು ಇನ್ನು ಅನೇಕ ವೇದಭಾಗಗಳಲ್ಲಿ ಉಪಯೋಗಿಸುತ್ತಾನೆ

4. ವ 2–6 ರಲ್ಲಿ ಯೇಸು ಮತ್ತು ಮೋಶೆಯನ್ನು ಹೋಲಿಸಲಾಗಿದೆ.

a. ಹೋಲಿಕೆಗಳು:

- ಇಬ್ಬರಿಗೂ ಪರಲೋಕದಿಂದ ಕರೆ ಇತ್ತು (ವಿಶ್ವಾಸಿಗಳಿಗೂ ಸಹ ಇರುವಂತದ್ದು)
- ತಮ್ಮನ್ನು ನೇಮಿಸಿದ ದೇವರಿಗೆ ಇಬ್ಬರೂ ನಂಬಿಗಸ್ತರಾಗಿದ್ದರು.
- ಇಬ್ಬರೂ ದೇವಜನರಿಗೆ ('ದೇವರ ಮನೆಯಲ್ಲಿ') ನಂಬಿಗಸ್ತರಾಗಿದ್ದರು.
- ಇಬ್ಬರೂ ಗೌರವಕ್ಕೆ ಯೋಗ್ಯರಾಗಿದ್ದರು.

b. ವ್ಯತ್ಯಾಸಗಳು:

- ಯೇಸು ಮೋಶೆಗಿಂತ ಹೆಚ್ಚಿನ ಗೌರವಕ್ಕೆ ಯೋಗ್ಯನಾಗಿದ್ದನು.

- ಮೋಶೆಯು ನಂಬಿಗಸ್ತ ಸೇವಕನಾಗಿದ್ದನು. ಆದರೆ ಯೇಸು ಮಗನಾಗಿದ್ದನು. ಇದರ ಅರ್ಥ ಮೋಶೆಯ ಸೇವೆ ಆತನ ಸಮಯಕ್ಕೆ ಮಾತ್ರ ಸೀಮಿತವಾಗಿತ್ತು ಆದರೆ ಯೇಸು ಯಾವಾಗಲೂ ಮಗನಾಗಿದ್ದಾನೆ, ಪ್ರಾರಂಭವೂ ಮತ್ತು ಅಂತ್ಯವೂ ಆಗಿದ್ದಾನೆ.
- ಮೋಶೆಯು ದೇವಜನರಿಗೆ ('ದೇವರ ಮನೆಯಲ್ಲಿ') ನಂಬಿಗಸ್ತ ಸೇವಕನಾಗಿದ್ದನು. ಆದರೆ ಯೇಸು ದೇವರ ಮನೆಯನ್ನು ಕಟ್ಟುವ ದೇವರಾಗಿದ್ದಾನೆ. ಆತನು ಮನೆಯ ಯಜಮಾನನಾಗಿದ್ದಾನೆ.
- ಮೋಶೆಯು ಭವಿಷ್ಯತ್ತಿನೆಡೆಗೆ ಸೂಚಿಸಿದನು, ಅದು ಯೇಸುವಿನಲ್ಲಿ ನೆರವೇರಿಸಲ್ಪಟ್ಟಿತು.

c. ಮೋಶೆ ಮತ್ತು ಯೇಸುವಿನ ಮಧ್ಯದಲ್ಲಿರುವ ಹೋಲಿಕೆಯ ಅಂಶ: ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳಿಗೆ ತಮ್ಮ ಹೊಸ ನಂಬಿಕೆಯನ್ನು (ಸುವಾರ್ತೆಯನ್ನು) ಬಿಟ್ಟು ತಮ್ಮ ಹಳೆ ನಂಬಿಕೆಗೆ (ಯೆಹೂದತ್ವಕ್ಕೆ) ಹಿಂತಿರುಗಬೇಕೆಂದು ಶೋಧನೆಯಾದಾಗ ಇಬ್ರಿಯರಿಗೆ ಬರೆದ ಪತ್ರಿಕೆಯು ಬರೆಯಲ್ಪಟ್ಟಿತು. ಈ ವೇದಭಾಗವು ಅವರು ಶ್ರೇಷ್ಠವಾದದ್ದನ್ನು, ಉತ್ತಮವಾದದ್ದನ್ನು ಮತ್ತು ಶಾಶ್ವತವಾದದ್ದನ್ನು (ಯೇಸುವನ್ನು) ತಾತ್ಕಾಲಿಕವಾದ ಮತ್ತು ಅಷ್ಟೊಂದು ಉತ್ತಮವಲ್ಲದ್ದಕ್ಕಾಗಿ ಬಿಟ್ಟುಬಿಡುವದು ಮೂರ್ಖತನವಾಗಿತ್ತು ಎಂದು ಸೂಚಿಸುತ್ತದೆ.

ಈ ವೇದಭಾಗದಲ್ಲಿ ಗ್ರಂಥಕರ್ತನು ಇನ್ನೊಂದು ಅಂಶದ, ಅಂದರೆ ಅನ್ಯೋನ್ಯತೆಯ ಕುರಿತಾದ ಕಾರ್ಯರೂಪದ ಸಮಸ್ಯೆಯ ಕುರಿತು ಹೇಳುತ್ತಾನೆ. ಈ ಹಿಂದೆ, ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳು ಯೆಹೂದಿ ಸಭಾಮಂದಿರಕ್ಕೆ ಸಂಬಂಧಿಸಿದವರಾಗಿದ್ದರು, ಅಂದರೆ ಅವರಿಗೆ ಒಂದು ನಿರ್ದಿಷ್ಟವಾದ ಗುರುತು ಇತ್ತು; ಅವರು ಗೌರವಾನ್ವಿತವಾದ 'ಸಹೋದರತ್ವಕ್ಕೆ' ಸೇರಿದವರಾಗಿದ್ದರು. ಆದರೆ ಈಗ ಸಭೆಯು ಹಿಂಸೆಯನ್ನು ಎದುರಿಸುತ್ತಿರುವದರಿಂದ ಅವರು ತಾವು ಕಳೆದುಹೋದೆವೆಂದು ಭಾವಿಸುತ್ತಿದ್ದರು. ಈ ವೇದಭಾಗವು ಅವರಿಗೆ ಮಗನಾದ ಕ್ರಿಸ್ತನಲ್ಲಿ, ಅವರು ಶಾಶ್ವತವಾಗಿ ನಿಲ್ಲುವ ಹೆಚ್ಚು ಗೌರವಾನ್ವಿತವಾದ 'ಮನೆಗೆ' (ದೇವರ ಮನೆಗೆ) ಸೇರಿದವರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ.

5. ಈ ವೇದಭಾಗದಲ್ಲಿ ವ 1–2 ನ್ನು (ಅಲ್ಲಿ ಗತಕಾಲವನ್ನು ಉಲ್ಲೇಖಿಸುತ್ತಾ, ಯೇಸು ಅಪೋಸ್ತಲನಾಗಿ ಮತ್ತು ಮಹಾಯಾಜಕನಾಗಿ ನೇಮಿಸಲ್ಪಟ್ಟದ್ದನ್ನು ಕಾಣುತ್ತೇವೆ) 1:2 ರೊಂದಿಗೆ ಹೋಲಿಸಿರಿ (ಅಲ್ಲಿ ದೇವರು ಯೇಸುವನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು – ಆತನ ಭವಿಷ್ಯದ ನಿಯತಿಯನ್ನು ಸೂಚಿಸುತ್ತಾನೆ) ಮತ್ತು 5:1, 5 ರೊಂದಿಗೆ ಹೋಲಿಸಿರಿ (ಅಲ್ಲಿ ದೇವರು ಯೇಸುವನ್ನು ಮಹಾಯಾಜಕನನ್ನಾಗಿ ನೇಮಿಸುವದನ್ನು ಕಾಣುತ್ತೇವೆ — ವರ್ತಮಾನ ಕಾಲವನ್ನು ಸೂಚಿಸುತ್ತದೆ.) ನಿಮ್ಮ ಸಮಾರೋಪಗಳೇನು?

ಉತ್ತರಗಳು: ಈ ಕೆಳಗಿನವುಗಳು ನನ್ನ ಕೆಲವು ಸಮಾರೋಪಗಳಾಗಿವೆ:

a. ನಮ್ಮ ರಕ್ಷಣೆಗಾಗಿ ದೇವರಿಗೆ ಒಂದು ದೀರ್ಘಾವಧಿ ಯೋಜನೆಯಿತ್ತು. ಒಂದು ದಿನ ನಮ್ಮ ರಕ್ಷಣೆಯು ಪರಿಪೂರ್ಣವಾಗುವಂತೆ ಆತನು ಯೋಜಿಸಿದ್ದಾನೆ.

b. ಯೇಸು ಪ್ರಾರಂಭದಿಂದ ಕೊನೆಯವರೆಗೆ ನಂಬಿಗಸ್ತನು ಮತ್ತು ವಿಧೇಯನು ಆಗಿದ್ದನು/ಆಗಿದ್ದಾನೆ.

c. ಯೇಸು ದೇವರ ಅಪೋಸ್ತಲನಾಗಿದ್ದಾನೆ (ರಾಯಭಾರಿ, ಪ್ರತಿನಿಧಿ) ಪ್ರಾರಂಭದಿಂದ ಕೊನೆಯವರೆಗೆ ನಿತ್ಯತ್ವದುದ್ದಕ್ಕೂ (ಆತನು ಅಲ್ಫಾ ಮತ್ತು ಓಮೇಗಾ) ಆಗಿದ್ದಾನೆ.

6. ಈ ವೇದಭಾಗದಲ್ಲಿ (ಮತ್ತು ಪುಸ್ತಕ ಉಳಿದ ಭಾಗದಲ್ಲಿ) ನಾವು ವಿಶ್ವಾಸಿಗಳಿಗೆ ವಾಗ್ದಾನ ಮಾಡಲ್ಪಟ್ಟ ಭದ್ರತೆಯ ಹಾಗೂ ವಿಶ್ವಾಸಿಗಳು ತಾಳಿಕೊಳ್ಳುವುದರ ಅಗತ್ಯತೆಯ ನಡುವೆ ಒಂದು ಸಮತೋಲವನ್ನು ಕಾಣುತ್ತೇವೆ. ಅದು ಈ ರೀತಿಯಾಗಿದೆ:

   a. ವಿಶ್ವಾಸಿಗಳು ತಮ್ಮ ಯೋಚನೆಗಳನ್ನು ತಮ್ಮ ಮಹಾಯಾಜಕನಾದ ಯೇಸುವಿನಲ್ಲಿ ನೆಲೆಗೊಳಿಸಿರುವವರೆಗೆ ಮತ್ತು ಆತನಲ್ಲಿರುವ ನಂಬಿಕೆಯನ್ನು ಮತ್ತು ಕ್ರೂಜೆಯ ಮೇಲೆ ಆತನ ತ್ಯಾಗಪೂರ್ವಕವಾದ ಮರಣವನ್ನು (ವ 1) ಅರಿಕೆ ಮಾಡುತ್ತಿರುವವರೆಗೆ ಸುರಕ್ಷಿತರಾಗಿರುತ್ತಾರೆ. ಕ್ರಿಸ್ತನು ನಂಬಿಗಸ್ತನು ಕರುಣಾಮಯನು ಆಗಿದ್ದಾನೆ (ವ 6; 2:17) ಆತನು ಅವರನ್ನು ತೊರೆದುಬಿಡುವದಿಲ್ಲ ಅಥವಾ ತಳ್ಳಿಬಿಡುವದಿಲ್ಲ.

   b. ವಿಶ್ವಾಸಿಗಳಿಗೆ ತಮ್ಮ ನಂಬಿಕೆಯಲ್ಲಿ ಮುಂದುವರೆಯುವದು ಮತ್ತು ಕೊನೆಯವರೆಗೆ ತಮ್ಮ ನಂಬಿಕೆಯಲ್ಲಿ ಧೃಢವಾಗಿ ನಿಲ್ಲುವದು ಅವಶ್ಯವಾಗಿದೆ. ಅವರು ಈ ನಿರೀಕ್ಷೆಯಲ್ಲಿ ನಿಲ್ಲುವವರೆಗೆ, ಅವರಿಗೆ ದೇವರ ಮನೆಯಲ್ಲಿ ಸ್ಥಾನವು ದೊರೆಯುತ್ತದೆ (ವ 9).



# ಉತ್ತರಗಳು 7: ಕೊನೆಯವರೆಗೆ ದೃಢವಾಗಿ, 3:7–4:13

## ಪ್ರಶ್ನೆಗಳಿಗೆ ಉತ್ತರಿಸಿರಿ

1. ಈ ವೇದಭಾಗಕ್ಕೂ ಮತ್ತು ಹಿಂದಿನ ಭಾಗಕ್ಕೂ ಇರುವ ಸಂಬಂಧವು ಇದಾಗಿದೆ:

   a. "ಆದುದರಿಂದ" ಎಂಬ ಪದವು ಭಾಷೆಯ ದೃಷ್ಟಿಕೋನದಲ್ಲಿ ಎರಡೂ ವೇದಭಾಗಗಳನ್ನು ಒಂದಕ್ಕೊಂದು ಸಂಬಂಧಿಸುವಂತೆ ಮಾಡುತ್ತದೆ.

   b. ಮೇಲಿನದನ್ನು ಹೊರತುಪಡಿಸಿ ಇನ್ನೊಂದು ಸಂಬಂಧವೂ ಸಹ ಇದೆ, ಅದು ಮೋಶೆಯ ಕುರಿತಾಗಿದೆ: ಮೊದಲನೆಯ ವೇದಭಾಗದಲ್ಲಿ ಮೋಶೆಯನ್ನು ಯೇಸುವಿನೊಂದಿಗೆ ಹೋಲಿಸಲಾಗಿದೆ. ಎರಡನೆಯ ವೇದಭಾಗದಲ್ಲಿ, ಮೋಶೆಯ ನಾಯಕತ್ವದಲ್ಲಿ ನಡೆದ ಸಂಗತಿಗಳನ್ನು ಉಪಯೋಗಿಸಿ ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರಿಗೆ ಮೂರು ಅಂಶಗಳನ್ನು ದೇವರ ವಾಕ್ಯದ ಕುರಿತಾಗಿ ತಿಳಿಸಲಾಗಿದೆ. ಆದರೆ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ತನ್ನ ಮೂರನೆಯ ಅಂಶವನ್ನು ಸ್ಪಷ್ಟಪಡಿಸುವುದಕ್ಕಾಗಿ ಕೀರ್ತನೆ 95:7–11 ರಲ್ಲಿ ಬರುವ ಈ ಸಂಗತಿಗಳ ಕುರಿತಾದ ಪಠ್ಯವನ್ನು ಹೇಗೆ ಉಪಯೋಗಿಸುತ್ತಾನೆ ಎಂಬುದನ್ನು ಗಮನಿಸಿ. (ಪಂಚಕಾಂಡದಲ್ಲಿ ಕಂಡುಬರುವ ಮೋಶೆಯ ಹಾಗೂ ಇಸ್ರಾಯೇಲ್ಯರ ಕುರಿತಾದ ಪಠ್ಯವನ್ನಲ್ಲ).

2. ಕೆಳಗಿನ ನಾಲ್ಕು ಹೇಳಿಕೆಗಳು ಇಸ್ರಾಯೇಲರ ಇತಿಹಾಸದ ಗುಣಲಕ್ಷಣಗಳನ್ನು ಉಲ್ಲೇಖಿಸುತ್ತವೆ.

   a. ದಂಗೆ (3:8, 15): ಯೆಹೋವನು 'ತನ್ನ ಅದ್ಭುತವಾದ ಹಸ್ತದಿಂದ' ಇಸ್ರಾಯೇಲನ್ನು ಈಜಿಪ್ಟಿನ ಬಂಧನದಿಂದ ಬಿಡಿಸಿದ ನಂತರ ಅವರು ದೇವರ ಮೇಲೆ ಇಟ್ಟಿದ್ದ ಅಪನಂಬಿಕೆ ಮತ್ತು ಅವಿಶ್ವಾಸವನ್ನು ಇದು ತೋರಿಸುತ್ತದೆ.

   b. ಅರಣ್ಯದಲ್ಲಿ ಪರೀಕ್ಷಿಸಿದ ಸಮಯ (3:8) ನಲವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಅಲೆದಾಡಿದ್ದು.

   c. ಆ ಸಂತತಿಯವರು (3:10): ಯೆಹೋವನ ಮೇಲೆ ನಂಬಿಕೆಯಿಡದೆ ಪಾಪ ಮಾಡಿದ್ದರ ನಿಮಿತ್ತ ಅರಣ್ಯದಲ್ಲಿ ಸಾಯಬೇಕಾಗಿ ಬಂದ ದಂಗೆಕೋರ ಸಂತತಿ.

   d. ದೇವರ ವಿಶ್ರಾಂತಿಯಲ್ಲಿ ಸೇರುವರು (3:11, 18): ಯೆಹೋಶುವನ ನಾಯಕತ್ವದ ಅಡಿಯಲ್ಲಿ ವಾಗ್ದಾನ ದೇಶವನ್ನು ಪ್ರವೇಶಿಸುವದು (4:8 ನ್ನು ಹೋಲಿಸಿರಿ, ಅಲ್ಲಿ ಯೆಹೋಶುವನ ಹೆಸರನ್ನು ತಿಳಿಸಲಾಗಿದೆ).

3. ಈ ವೇದಭಾಗವನ್ನು ಮೂರು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು. ಪ್ರತಿಯೊಂದು ಭಾಗದಲ್ಲಿ ಓದುಗರಿಗೆ ಇರುವ ಸಂದೇಶ ಇದಾಗಿದೆ:

   a. ಓದುಗರಿಗೆ ಗತಕಾಲದ ಕುರಿತು ದೇವರ ವಾಕ್ಯ (3:7–11): ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರು ಇಸ್ರಾಯೇಲ್ಯರು ಅರಣ್ಯದಲ್ಲಿ ಮಾಡಿದ ತಪ್ಪುಗಳನ್ನು ಪುನರಾವರ್ತಿಸದಂತೆ ಎಚ್ಚರಿಸಲಾಗಿದೆ. ಕೆಲವು ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ತೊರೆದು ಯೆಹೂದ್ಯತ್ವಕ್ಕೆ

ಹಿಂತಿರುಗುವ ಶೋಧನೆಗೆ ಒಳಗಾಗಿದ್ದಾರೆ. ಅವರು ಹಾಗೆ ಮಾಡಿದರೆ ದಂಗೆಯೆದ್ದ ಇಸ್ರಾಯೇಲ್ಯರಂತೆ ತಮ್ಮ "ಹೃದಯಗಳನ್ನು ಕಠಿಣಪಡಿಸಿಕೊಳ್ಳುವವರಾಗಿದ್ದಾರೆ" ಮತ್ತು ಅವರು ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

b. ಓದುಗರಿಗೆ ವರ್ತಮಾನ ಕಾಲದ ಕುರಿತು ದೇವರ ವಾಕ್ಯ (3:12–19)" ಇಬ್ರಿಯರಿಗೆ ಬರೆದ ಪತ್ರಿಕೆಯ ಪ್ರಾಚೀನಕಾಲದಲ್ಲಿ ಇಸ್ರಾಯೇಲ್ಯರ ಕೆಟ್ಟ ಮಾದರಿಯನ್ನು ಅನುಸರಿಸಬಾರದೆಂದು ಓದುಗರನ್ನು ಕೇಳಿಕೊಳ್ಳುತ್ತಿದೆ. 'ಸಹೋದರರೇ, ನೋಡಿಕೊಳ್ಳಿರಿ'; 'ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ'; 'ಮೊದಲಿಂದಿರುವ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ'; 'ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ'. 'ವಿಶ್ವಾಸಿಗಳು ಯಾವಾಗಲೂ "ವಿರೋಧಿಸುವ', 'ಪಾಪಮಾಡುವ', 'ಅವಿಧೇಯರಾಗುವ' ತಮ್ಮ ಗಮನವನ್ನು ಕಳೆದುಕೊಂಡು ತಮ್ಮ 'ಹೃದಯಗಳನ್ನು ಕಠಿಣಪಡಿಸಿಕೊಳ್ಳುವ' ಅಪಾಯದಲ್ಲಿರುತ್ತಾರೆ.

c. ಓದುಗರಿಗೆ ಭವಿಷ್ಯತ್ತುಕಾಲದ ಕುರಿತಾದ ದೇವರ ವಾಕ್ಯ (4:1–13) ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಓದುಗರಿಗೆ 'ವಿಶ್ರಾಂತಿ' ಎಂಬುದು ಯೆಹೋಶುವನ ನಾಯಕತ್ವದಲ್ಲಿ ಇಸ್ರಾಯೇಲಿನ ಗೋತ್ರಗಳು ಕಾನಾನ ದೇಶದಲ್ಲಿ ನೆಲೆಸಿದಾಗ ಭಾಗಶಃ ಮಾತ್ರ ನೆರವೇರಿತು. ಆತನು ಕೀರ್ತನೆ 95 ರಲ್ಲಿರುವ ಪಠ್ಯವನ್ನು ಬಳಸಿಕೊಂಡು ಈ ವಿಷಯವನ್ನು ಸ್ಪಷ್ಟಪಡಿಸುತ್ತಾನೆ. ಕೀರ್ತನೆಗಾರನು ದೇವರ ಮಾತುಗಳನ್ನು, ಅಂದರೆ 'ನನ್ನ ವಿಶ್ರಾಂತಿಯಲ್ಲಿ ನೀವು ಸೇರುವದೇ ಇಲ್ಲ', ಎಂದು ಉಲ್ಲೇಖಿಸುವಾಗ ದೇವರು ಭವಿಷ್ಯತ್ತಿನಲ್ಲಿ ನಮ್ಮ ವಿಶ್ರಾಂತಿಯ ಕುರಿತು ಯೋಜನೆಯನ್ನು ಹೊಂದಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರಿಗೆ ಅವರು ಎದುರುನೋಡುವ ವಿಶ್ರಾಂತಿ ಇದೆ. ಆದುದರಿಂದ ಎಲ್ಲಾ ವಿಶ್ವಾಸಿಗಳು ದೇವರ ನಿತ್ಯವಾದ ಪರಲೋಕದಲ್ಲಿರುವ ಆ ವಿಶ್ರಾಂತಿಯಲ್ಲಿ ಸೇರುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.

4. 3:12–19 ರ ಆಧಾರದ ಮೇಲೆ ದೇವರ ವಾಕ್ಯದ ಕುರಿತು ನಾಲ್ಕು ಅಂಶಗಳಿವೆ:

a. 3:7, 15; 4:7 ದೇವರ ವಾಕ್ಯವನ್ನು ಕೇಳುವದು ("ಆತನ ಸ್ವರವನ್ನು ಆಲಿಸುವದು")

b. 3:12: ದೇವರ ವಾಕ್ಯವನ್ನು ನಂಬುವದು (ಅಪನಂಬಿಕೆಯ ಹೃದಯವು ಇರಬಾರದು)

c. 4:6, 11: ದೇವರ ವಾಕ್ಯಕ್ಕೆ ವಿಧೇಯರಾಗುವದು (ಅವಿಧೇಯತೆಯ ಮಾದರಿಯನ್ನು ಅನುಸರಿಸಬಾರದು)

d. 3:13: ದೇವರ ವಾಕ್ಯವನ್ನು ಹಂಚುವದು (ಪ್ರತಿನಿತ್ಯ ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿರಿ/ಎಚ್ಚರಿಸಿರಿ)

5. 4:12–13 ರ ಎರಡು ಭಾಗಗಳನ್ನು ನನ್ನ ಸ್ವಂತ ವಾಕ್ಯದಲ್ಲಿ ಹೀಗೆ ವಿವರಿಸುತ್ತೇನೆ:

a. ವಚನ 12 ದೇವರ ವಾಕ್ಯದ ಕುರಿತಾಗಿದೆ. ಅದು ಜೀವಿಸುವಂತದ್ದು, ಕಾರ್ಯಮಾಡುವಂತದ್ದು ಮತ್ತು ಯಾವಾಗಲೂ ಸಮಂಜಸವಾದದ್ದು. ಯೆಶಾಯ 55:11

ರಲ್ಲಿ ದೇವರು ಹೀಗೆ ಹೇಳುತ್ತಾನೆ. 'ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು. ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ'. ಅದು ಮಾನವನ ಹೃದಯದಲ್ಲಿರುವ ರಹಸ್ಯವಾದ ಆಲೋಚನೆಗಳನ್ನು ಹಾಗೂ ಯೋಜನೆಗಳನ್ನು ಪರೀಕ್ಷಿಸುತ್ತದೆ.

b. ವಚನ 13 ದೇವರು ಎಲ್ಲವನ್ನೂ ನೋಡಲು, ಬಹಿರಂಗಪಡಿಸಲು ಮತ್ತು ಎಲ್ಲವನ್ನೂ ತನ್ನ ವಾಕ್ಯದ ಬೆಳಕಿನಲ್ಲಿ ನ್ಯಾಯತೀರಿಸಲು ತನ್ನ ವಾಕ್ಯವನ್ನು ಉಪಯೋಗಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ ಎಂಬುದರ ಕುರಿತಾಗಿದೆ.

6. ಈ ವೇದಭಾಗದಲ್ಲಿ 'ಈ ಹೊತ್ತು' ಎಂಬ ಪದವು ಐದು ಬಾರಿ ಉಪಯೋಗಿಸಲ್ಪಟ್ಟಿದೆ ಇದಕ್ಕೆ ಕಾರಣವೇನೆಂದರೆ (ಇನ್ನುಳಿದ ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ವಾಕ್ಯದ ಕುರಿತು ಇನ್ನೂ ಮೂರು ಉದಾಹರಣೆಗಳಿವೆ) ಬಹುಶಃ ಗ್ರಂಥಕರ್ತನು ತನ್ನ ಓದುಗರ ಈಗಿನ ಸನ್ನಿವೇಶದಲ್ಲಿ ದೇವರ ವಾಕ್ಯದ ಪ್ರಾಮುಖ್ಯತೆಗೆ ಒತ್ತುನೀಡಲು ಬಯಸುತ್ತಾನೆ. ದೇವರ ವಾಕ್ಯವು ಕೇವಲ ಗತಕಾಲದ ಸಂಗತಿಗಳನ್ನು ದಾಖಲಿಸುವದಿಲ್ಲ (ಉದಾಹರಣೆಗೆ ಮೋಶೆಯ ನಾಯಕತ್ವದಲ್ಲಿ ಇಸ್ರಾಯೇಲ ದೇಶದ ಇತಿಹಾಸವನ್ನಷ್ಟೇ ಅಲ್ಲ) ಅಲ್ಲದೇ ದೇವರ ವಾಕ್ಯವು ಭವಿಷ್ಯತ್ತಿನ ಕುರಿತಾದ ವಾಗ್ದಾನಗಳನ್ನಷ್ಟೇ ಒಳಗೊಂಡಿಲ್ಲ (ಉದಾಹರಣೆಗೆ ದೇವರ ನಿತ್ಯವಾದ ವಿಶ್ರಾಂತಿ). ಇಲ್ಲ ದೇವರ ವಾಕ್ಯವು ವರ್ತಮಾನಕಾಲದಲ್ಲೂ ಕಾರ್ಯನಿರತವಾಗಿದೆ ಮತ್ತು ಸಮಂಜಸವಾಗಿದೆ. "ಈಹೊತ್ತು" – ಮತ್ತು ಅದು ಯಾವಾಗಲೂ "ಈಹೊತ್ತು" ಆಗಿದೆ – ನಾವು ಯಾವಾಗಲೂ ದೇವರ ವಾಕ್ಯಕ್ಕೆ ಪ್ರತಿಕ್ರಿಯಿಸಬೇಕು. ನಾವು ಗತಕಾಲದ ದೇವರ ವಾಕ್ಯದಿಂದ ಕಲಿಯಬೇಕು. ನಾವು ಭವಿಷ್ಯತ್ತಿನಲ್ಲಿ ದೇವರ ವಾಗ್ದಾನಗಳಲ್ಲಿ ಆನಂದಿಸಬೇಕು. ಆದರೆ 'ಈ ಹೊತ್ತು' ನಾವು ದೇವರ ವಾಕ್ಯವನ್ನು ನಮ್ಮ ಜೀವಿತವನ್ನು ರೂಪಿಸಲು ಮತ್ತು ರಚಿಸಲು ಅನುಮತಿಸಬೇಕು. 'ಇದರಿಂದಾಗಿ ನಾವು ಈಗ ದೇವರನ್ನು ಮೆಚ್ಚಿಸಬಹುದು ಮತ್ತು ಸೇವೆಮಾಡಬಹುದು ಮತ್ತು ಇದರಿಂದಾಗಿ ನಾವು ಭವಿಷ್ಯತ್ತಿನಲ್ಲಿ'"ದೇವರ ನಿತ್ಯವಾದ ವಿಶ್ರಾಂತಿಗೆ" ಸಿದ್ಧತೆಯನ್ನು ಮಾಡಿಕೊಳ್ಳಬಹುದು. ಅದು ಇಂದು ನಾವು ಸುವಾರ್ತೆಯನ್ನು ಸಾರಬೇಕು, ಇದರಿಂದಾಗಿ ಜನಸಮೂಹವನ್ನು ದೇವರ ರಾಜ್ಯಕ್ಕಾಗಿ ಗೆದ್ದುಕೊಳ್ಳಬಹುದು ಮತ್ತು 'ದೇವರ ನಿತ್ಯ ವಿಶ್ರಾಂತಿಯನ್ನು' ನಮ್ಮೊಂದಿಗೆ ಅನುಭವಿಸಬಹುದು.

# ಉತ್ತರಗಳು 8: ಶ್ರೇಷ್ಠ ಮಹಾಯಾಜಕನು 4:14–5:10

## ಪ್ರಶ್ನೆಗಳಿಗೆ ಉತ್ತರಗಳು

1. ಗ್ರೀಕ್ ಪಠ್ಯ (NIV ಯಲ್ಲಿ ಸಹ, ಆದರೆ ಕನ್ನಡ ಅನುವಾದದಲ್ಲಿ ಅಲ್ಲ) ಈ ವೇದಭಾಗವು 'ಆದುದರಿಂದ' ಎಂಬ ಪದದಿಂದ ಪ್ರಾರಂಭವಾಗುತ್ತದೆ. ಏಕೆ? ಮೊದಲಿನ ವೇದಭಾಗಕ್ಕೆ ಇದು ಸಂಬಂಧವನ್ನು ಹೊಂದಿದೆ:

   a. "ಆದುದರಿಂದ" ಎಂಬ ಪದವು ಎರಡು ವಾಕ್ಯವೃಂದಗಳ ನಡುವೆ ಬಲವಾದ ಸಂಬಂಧವನ್ನು ಉಂಟುಮಾಡುತ್ತದೆ. ಎರಡನೆಯ ವಾಕ್ಯವೃಂದವು ಮೊದಲನೆಯ ವಾಕ್ಯವೃಂದದ ಪರಿಣಾಮವನ್ನು ಮಂಡಿಸುತ್ತದೆ, ಅಥವಾ ಮೊದಲನೆಯ ವಾಕ್ಯವೃಂದವು ಎರಡನೆಯ ವಾಕ್ಯವೃಂದದ ಕಾರಣವನ್ನು ತಿಳಿಸುತ್ತದೆ.

   b. ನಮ್ಮ ವಿಷಯದಲ್ಲಿ ಮೊದಲನೆಯ ವಾಕ್ಯವೃಂದವು ದೇವರ ವಾಕ್ಯವು ಹೇಗೆ ಮನುಷ್ಯನ ಆಳವಾದ ಯೋಚನೆಗಳನ್ನು ಮತ್ತು ಯೋಜನೆಗಳನ್ನು ಬಹಿರಂಗಪಡಿಸುತ್ತದೆ ಮತ್ತು ದೇವರು ಮನುಷ್ಯನ ಹೃದಯ ಮತ್ತು ಮನಸ್ಸುಗಳಲ್ಲಿರುವದನ್ನೆಲ್ಲಾ ಬಲ್ಲಾತನಾಗಿದ್ದಾನೆ ಎಂಬುದನ್ನು ತಿಳಿಸುತ್ತದೆ. "ಆದುದರಿಂದ" (ಅಥವಾ "ಆದಕಾರಣ" ಅಥವಾ "ಅದರ ಪರಿಣಾಮವಾಗಿ") ನಾವು ಪರಿಶುದ್ಧನಾದ ದೇವರ ಎದುರಿನಲ್ಲಿ ಅಪರಾಧಿಗಳಾಗಿ ನಿಲ್ಲುತ್ತೇವೆ ಮತ್ತು ನಮಗೆ "ಶ್ರೇಷ್ಠ ಮಹಾಯಾಜಕನ" ಅವಶ್ಯಕತೆಯಿದೆ, ಯೇಸುವಿನಂಥ ಮಹಾಯಾಜಕನ ಅವಶ್ಯಕತೆಯಿದೆ.

2. 4:14 ರಲ್ಲಿನ ಎರಡು ಭಾಗಗಳು ಹೀಗಿವೆ:

   a. ಮೊದಲನೆಯ ಭಾಗವು ನಂಬಿಕೆಯ ಹೇಳಿಕೆಯಾಗಿದೆ: *ಆಕಾಶಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿದ್ದಾನೆ.* ಯೇಸು ಮಾನವಕುಲಕ್ಕೆ ರಕ್ಷಣೆಯನ್ನು ತರುವ ತನ್ನ ಕಾರ್ಯವನ್ನು ಪೂರ್ತಿಗೊಳಿಸಿ ಈಗ ಆತನು ಪರಲೋಕದಲ್ಲಿರುವ ತಂದೆಯ ಬಳಿಗೆ ಹಿಂತಿರುಗಿದ್ದಾನೆ.

   b. ಎರಡನೆಯ ಭಾಗವು ನಂಬಿಕೆಯಲ್ಲಿ ದೃಢವಾಗಿ ನಿಲ್ಲುವದಕ್ಕೆ ಎಚ್ಚರಿಕೆಯಾಗಿದೆ: *ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ* (2:1 ಮತ್ತು 3:1 ರಲ್ಲಿರುವ ಹಿಂದಿನ ಪ್ರಬೋಧನೆಯನ್ನು ಹೋಲಿಸಿರಿ).

3. ಈ ಹೇಳಿಕೆಗಳ ಹಿಂದಿರುವ ಹಳೆ ಒಡಂಬಡಿಕೆಯ ಹಿನ್ನಲೆಯು ಏನಾಗಿರಬಹುದು?

   a. *ಮಹಾಯಾಜಕ* (4:14 ನ್ನು 2:17 ಮತ್ತು 3:1 ರೊಂದಿಗೆ ಹೋಲಿಸಿರಿ): ಅಭಿಷೇಕಿಸಲ್ಪಟ್ಟ ಮತ್ತು ಪ್ರತಿಷ್ಠಿಸಿದ ಆರೋನನ ವಂಶದ ಯಾಜಕನು (ಯಾಜಕಕಾಂಡ 16:32) ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸಲು ಅನುಮತಿಯನ್ನು ಹೊಂದಿರುವ ಏಕೈಕ ವ್ಯಕ್ತಿ ಆತನಾಗಿದ್ದನು (ಮುಂದಿನ ಅಂಶವನ್ನು ಸಹ ನೋಡಿರಿ).

b. *ಆಕಾಶಮಂಡಲಗಳನ್ನು ದಾಟಿಹೋದಾತನು* (4:14): ಹಳೆ ಒಡಂಬಡಿಕೆಯ ಹಿನ್ನೆಲೆಯು ಬಹುಶಃ ದೇವದರ್ಶನ ಗುಡಾರದಲ್ಲಿದ್ದ (ನಂತರ ಯೆರೂಸಲೇಮಿನ ದೇವಾಲಯದಲ್ಲಿದ್ದ) ಪರದೆಯಾಗಿತ್ತು, ಅದರ ಮೂಲಕ ಮಹಾಯಾಜಕನು ಜನರ ಮುಂದೆ ಅತೀ ಪರಿಶುದ್ಧ ಸ್ಥಳವನ್ನು ಪ್ರಾಯಶ್ಚಿತ್ತ ಯಜ್ಞವನ್ನು ಸಮರ್ಪಿಸುವ ದಿನದಂದು ಪ್ರವೇಶಿಸುತ್ತಿದ್ದನು, ಪ್ರಾಯಶ್ಚಿತ್ತ ಯಜ್ಞದ ರಕ್ತವನ್ನು ತನಗೆ, ತನ್ನ ಕುಟುಂಬಕ್ಕೆ ಎಲ್ಲಾ ಜನರಿಗಾಗಿ ತರುತ್ತಿದ್ದನು. (ಯಾಜಕಕಾಂಡ 16) ಆದರೆ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು "ಆಕಾಶಮಂಡಲವನ್ನು" (ಪರದೆಗೆ ಬದಲಾಗಿ) ಯೇಸು ತನ್ನ ಪರಲೋಕಾರೋಹಣದಿಂದ ತನ್ನ ನಿತ್ಯವಾದ ದೈವಿಕ ಮಹಿಮೆಯನ್ನು ಪ್ರವೇಶಿಸಿದನು ಎಂಬುದನ್ನು ಸಾರಲು ಉಪಯೋಗಿಸುತ್ತಾನೆ

c. *ಕೃಪಾಸನ* (4:16): ಹಳೆ ಒಡಂಬಡಿಕೆಯ ಹಿನ್ನೆಲೆ ಬಹುಶಃ "ಕೃಪಾಸನ" ವಾಗಿರಬಹುದು (NIV "ಪ್ರಾಯಶ್ಚಿತ್ತದ ಹೊದಿಕೆ" ವಿಮೋಚನಕಾಂಡ 25:17), ಅದು ಒಡಂಬಡಿಕೆಯ ಮಂಜೂಷದ ಮುಚ್ಚಳವಾಗಿದ್ದು ವಿಶೇಷವಾದ ರೀತಿಯಲ್ಲಿ ದೇವರ ಪ್ರಸನ್ನತೆಯ ಸಂಕೇತವಾಗಿತ್ತು. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಯೇಸು ನಮ್ಮ ಕರುಣೆಯುಳ್ಳ ಮತ್ತು ನಂಬಿಗಸ್ತ ಮಹಾಯಾಜಕನಾಗಿ ನೆರವೇರಿಸಿದ ಕಾರ್ಯದ ನಿಮಿತ್ತ ಅದು "ಕೃಪಾಸನವಾಯಿತು". ಇದರಿಂದಾಗಿ ಆತನನ್ನು ನಂಬುವ ಎಲ್ಲರಿಗೂ (ತಾವು ಹೊಂದಿರುವ ನಂಬಿಕೆಯಲ್ಲಿ ದೃಢವಾಗಿ ನಿಲ್ಲುತ್ತಾರೋ, 4:14) ದೇವರ ನ್ಯಾಯಾಸನವು ಕೃಪಾಸನವಾಗುತ್ತದೆ.

4. ಮಹಾಯಾಜಕನ ಹುದ್ದೆಗೆ ಇರಬೇಕಾದ ಎರಡು ನಿರ್ದಿಷ್ಟವಾದ ಅರ್ಹತೆಗಳು ಹೀಗಿವೆ (5:1, 4):

a. ಮಹಾಯಾಜಕನು ಪುರುಷನಾಗಿರಬೇಕು ("ಮನುಷ್ಯರ ಮಧ್ಯದಲ್ಲಿ ಆಯಲ್ಪಟ್ಟವನು" 5:1). ಅದು ನರಾವತಾರಕ್ಕೆ ಕಾರಣ; ಯೇಸು ಒಬ್ಬ 'ಶ್ರೇಷ್ಟ' (4:14) ಮಹಾಯಾಜಕನಾಗಲು, ಅಂದರೆ ಶ್ರೇಷ್ಟ ಯಜ್ಞವನ್ನು ಅರ್ಪಿಸುವುದರ ಮೂಲಕ ಹಳೆ ಒಡಂಬಡಿಕೆಯ ಯಜ್ಞದ ಪದ್ಧತಿಯನ್ನು ಕೊನೆಗೊಳಿಸುವಷ್ಟು (ಅಥವಾ ನೆರವೇರಿಸುವಷ್ಟು) ಶ್ರೇಷ್ಟ ಮಹಾಯಾಜಕನಾಗಲು ಮೊದಲು ನರನಾಗಬೇಕಿತ್ತು.

b. ಮಹಾಯಾಜಕನು ದೇವರಿಂದ ಕರೆಯಲ್ಪಟ್ಟವನಾಗಿರಬೇಕು (5:4; ವಿಮೋಚನಕಾಂಡ 28:1–3 ರೊಂದಿಗೆ ಹೋಲಿಸಿರಿ).

5. ಈ ಹಳೆ ಒಡಂಬಡಿಕೆಯ ಈ ಎರಡು ವೇದಭಾಗಗಳಲ್ಲಿ ಮೆಲ್ಕಿಜೆದೇಕನ ಕುರಿತಾಗಿ ಕೆಳಗಿನ ಮಾಹಿತಿಯನ್ನು ಕಾಣುತ್ತೇವೆ (ಸತ್ಯವೇದದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಹೊರತುಪಡಿಸಿ ಮೆಲ್ಕಿಜೆದೇಕನ ಕುರಿತು ಬರೆಯಲ್ಪಟ್ಟ ಏಕ ಮಾತ್ರ ಸ್ಥಳಗಳು ಇವಾಗಿವೆ):

a. ಆದಿಕಾಂಡ 14:17–20 ಮೆಲ್ಕಿಜೆದೇಕನು ಸಾಲೇಮಿನ ಅರಸನು ಮತ್ತು ಭೂಮ್ಯಾಕಾಶವನ್ನು ಸೃಷ್ಟಿಸಿದ ಉನ್ನತನಾದ ದೇವರ ಮಹಾಯಾಜಕನು. ಆತನು ಅಬ್ರಹಾಮನಿಗೆ ರೊಟ್ಟಿಯನ್ನು ದ್ರಾಕ್ಷಾರಸವನ್ನು ಕೊಟ್ಟು ಆಶೀರ್ವದಿಸಿದನು. ಅಬ್ರಹಾಮನು ಆತನಿಗೆ ತನಗಿರುವದರಲ್ಲೆಲ್ಲಾ ನೂರಕ್ಕೆ ಹತ್ತರಷ್ಟು ನೀಡಿದನು.

b. ಕೀರ್ತನೆ 110: ಇದು ಮೆಸ್ಸೀಯನ ಕುರಿತಾದ ದಾವೀದನ ಕೀರ್ತನೆಯಾಗಿದೆ, ಮೆಸ್ಸೀಯನು ನಿತ್ಯಕಾಲಕಕ್ಕೂ ಮೆಲ್ಕಿಜೆದೇಕನ ತರಹದ ಯಾಜಕನಾಗಿದ್ದಾನೆ ಎಂದು ಕರ್ತನು ವಾಗ್ದಾನ ಮಾಡುತ್ತಾನೆ (ಇಬ್ರಿಯ ಹೆಸರಿನ ಅರ್ಥ "ನೀತಿಯ ಅರಸನು", 7:2 ನ್ನು ನೋಡಿರಿ).

6. 'ಮೆಲ್ಕಿಜೆದೇಕನ ತರಹದ' (5:6) ಎಂಬ

7. ಹಿಂದಿನ ಪ್ರಶ್ನೆಯಲ್ಲಿ ಬರುವ ಹಳೆ ಒಡಂಬಡಿಕೆಯ ಉಲ್ಲೇಖದಿಂದ ನಾನು ಹೀಗೆ ತಿಳಿದುಕೊಂಡಿದ್ದೇನೆ.

   ಮೆಲ್ಕಿಜೆದೇಕನು ಅರಸನು ಮತ್ತು ಯಾಜಕನು ಆಗಿದ್ದಾನೆ. ಆತನು ಸಾಲೇಮಿನ ಅರಸನು ಮತ್ತು ಸರ್ವಶ್ರೇಷ್ಠನಾದ ದೇವರ ಯಾಜಕನು. ಹಳೆ ಒಡಂಬಡಿಕೆಯ ಮಹಾಯಾಜಕರುಗಳು ಲೇವಿ ಕುಲದರಾಗಿದ್ದರು ಮತ್ತು ಅವರು ಎಂದೂ ಅರಸರಾಗಿರಲಿಲ್ಲ. ಇಸ್ರಾಯೇಲಿನ ಅರಸರು ದಾವೀದನ ವಂಶಕ್ಕೆ ಸೇರಿದವರಾಗಿದ್ದರು, ಯೆಹೂದ ಕುಲಕ್ಕೆ ಸಂಬಂಧಿಸಿದ್ದರು, ಆದುದರಿಂದ ಅವರು ಎಂದಿಗೂ ಯಾಜಕರಾಗಿರುತ್ತಿರಲಿಲ್ಲ. ಆದರೆ ದೇವರ ಮೆಸ್ಸೀಯನು ಅರಸನು ಮತ್ತು ಯಾಜಕನಾಗಿದ್ದಾನೆ (ಜೆಕರ್ಯ6:12–13) ಆದುದರಿಂದ ಯೇಸು ಮೆಲ್ಕಿಜೆದೇಕನ ತರಹದ ಶ್ರೇಷ್ಠ ಮಹಾಯಾಜಕನಾಗಿದ್ದಾನೆ; ಆತನು (ದಾವೀದ ವಂಶದ) ಅರಸ ಮತ್ತು (ಮೆಲ್ಕಿಜೆದೇಕನ ತರಹದ) ಯಾಜಕ. ಇಬ್ರಿಯ 7 ರಲ್ಲಿ ನಾವು ಯೇಸುವಿನ ಕುರಿತಾದ ಇನ್ನೊಂದು 'ಮೆಲ್ಕಿಜೆದೇಕನ ತರಹದ' ಅಂಶವನ್ನು ಕಂಡುಕೊಳ್ಳುತ್ತೇವೆ; ಆತನು ಆದಿ ಮತ್ತು ಅಂತ್ಯ ಇಲ್ಲದವನು.

8. ಯೇಸುವಿನ "ಯಾಜಕತ್ವದ ನಾಲ್ಕು ಅಂಶಗಳನ್ನು ಈ ವಾಕ್ಯಭಾಗದಲ್ಲಿ ಕಾಣಬಹುದು. ಅವು ಈ ಕೆಳಗಿನಂತಿವೆ:

   a. 4:14: ಯೇಸುವಿನ ಯಾಜಕತ್ವವು ಜಯದ ಯಾಜಕತ್ವವಾಗಿದೆ. ಯೇಸು ಮಹಾಯಾಜಕನಾಗಿ ಹಳೆ ಒಡಂಬಡಿಕೆಯ ಯಾಜಕತ್ವದ ಉದ್ದೇಶವನ್ನು ಒಂದೇ ಸಾರಿ ಪೂರ್ತಿಗೊಳಿಸಿದನು. ಆತನು ದೇವದರ್ಶನದ ಗುಡಾರದ/ಯೆರೂಸಲೇಮಿನ ದೇವಾಲಯದ "ಪರದೆ" ಯ ಮೂಲಕ ಜನರ ಪಾಪಗಳಿಗೆ ಪ್ರಾಯಶ್ಚಿತ್ತ ಯಜ್ಞವನ್ನು ಸಮರ್ಪಿಸಲು ವರ್ಷಕ್ಕೆ ಒಂದು ಸಾರಿ ಹಾದು ಹೋಗುವದು ಮಾತ್ರವಲ್ಲ, ಆತನು "ಆಕಾಶಮಂಡಲದ" ಮೂಲಕ ದೇವರ ಕೃಪಾಸನದವರೆಗೆ ಹಾದು ಹೋಗುವದರ ಮೂಲಕ ತನ್ನನ್ನು ನಂಬುವವರಿಗೆ ಶಾಶ್ವತವಾದ ಪ್ರಾಯಶ್ಚಿತ್ತವನ್ನು ತಂದನು.

   b. 4:15: ಯೇಸುವಿನ ಯಾಜಕತ್ವವು ಅನುಕಂಪದ ಯಾಜಕತ್ವವಾಗಿದೆ. ಮಹಾಯಾಜಕನಾಗಿ ಯೇಸು ನಮ್ಮ ಮಾನವ ಸ್ಥಿತಿಯನ್ನು ಬಲ್ಲಾತನಾಗಿದ್ದಾನೆ. ಆದುದರಿಂದ – ಪಾಪರಹಿತನಾದ ಆತನು ನಮ್ಮ ನಿರ್ಬಲಾವಸ್ಥೆಯ ಕುರಿತು ಅನುತಾಪವಿಲ್ಲದವನಲ್ಲ. ಆದುದರಿಂದ ನಾವು ದೇವರನ್ನು ಧೈರ್ಯದಿಂದ ಸಂಧಿಸಿ ಕರುಣೆಯನ್ನು ಸ್ವೀಕರಿಸಿ ನಮ್ಮ ದಿನನಿತ್ಯ ಜೀವಿತಕ್ಕೆ ಬೇಕಾದ ಕೃಪೆಯನ್ನು ಹೊಂದಿಕೊಳ್ಳಬಹುದು.

   c. 5:4–5: ಯೇಸುವಿನ ಯಾಜಕತ್ವವು ಅಧೀನತೆಯುಳ್ಳ ಯಾಜಕತ್ವವಾಗಿದೆ. ಯೇಸು ದೇವರಿಂದ ನೇಮಿಸಲ್ಪಟ್ಟ ಮಹಾಯಾಜಕನು ಮಾತ್ರವಲ್ಲ. ಆತನು ದೇವರ ಯೋಜನೆಗೆ

ತನ್ನನ್ನು ತಾನು ಒಪ್ಪಿಸಿಕೊಡುವದರ ಮೂಲಕ ಸಂಪೂರ್ಣವಾಗಿ ದೇವರ ಮೇಲೆ ಅವಲಂಬಿತನಾಗಿ ನಮ್ಮ ಪಾಪಗಳಿಗಾಗಿ ಕಷ್ಟಾನುಭವವನ್ನು ಅನುಭವಿಸಿದನು. (5:7–8)

d. 5:9–10: ಯೇಸುವಿನ ಯಾಜಕತ್ವವು ಪರಿಣಾಮಕಾರಿಯಾದ ಯಾಜಕತ್ವವಾಗಿದೆ. ತನ್ನ ಕಷ್ಟಾನುಭವದ ಮೂಲಕ ಯೇಸು ನಮ್ಮ ರಕ್ಷಕನಾಗುವ ಸಂಪೂರ್ಣ ಅರ್ಹತೆಯುಳ್ಳ ಮಹಾಯಾಜಕನಾದನು. ಆದುದರಿಂದ ಆತನು ತನ್ನನ್ನು ನಂಬುವವರಿಗೆಲ್ಲಾ ನಿರಂತರವಾದ ರಕ್ಷಣೆಗೆ ಕಾರಣನಾದನು.

*ಹಳೆ ಒಡಂಬಡಿಕೆಯ ಮಹಾಯಾಜಕನ ಕಲಾತ್ಮಕವಾದ ಚಿತ್ರಣ*



# ಉತ್ತರಗಳು 9: ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ, 5:11–6:20

## ಪ್ರಶ್ನೆಗಳಿಗೆ ಉತ್ತರಗಳು

1. ಈ ವೇದಭಾಗವು ಈ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ: "ಈ ವಿಷಯದಲ್ಲಿ ನಾವು ಹೇಳಬೇಕಾದ ಮಾತು ಬಹಳ ಉಂಟು" (5:11) "ಈ ವಿಷಯದಲ್ಲಿ" ಅಂದರೆ ಯೇಸುವಿನ ಕುರಿತಾದ "ಮೆಲ್ಕಿಜೆದೇಕನ ತರಹದ ಶ್ರೇಷ್ಠ ಮಹಾಯಾಜನಕನು" ಎಂಬ ಬೋಧನೆಗಳನ್ನು ಉಲ್ಲೇಖಿಸುತ್ತದೆ. ಈ ವೇದಭಾಗದ ಕೊನೆಯಲ್ಲಿ, ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಮೆಲ್ಕಿಜೆದೇಕನೆಡೆಗೆ ಹಿಂತಿರುಗುತ್ತಾನೆ (6:20). ಆದುದರಿಂದ ಈ ವೇದಭಾಗವನ್ನು ಕೆಲವು ವಿಶ್ವಾಸಿಗಳ ಆತ್ಮಿಕ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆಯ ಕುರಿತಾದ 'ಸಭಾಪಾಲನಾ ಆವರಣ' ಎಂದು ತಿಳಿದುಕೊಳ್ಳಬಹುದು.

2. ಗ್ರಂಥಕರ್ತನು ತನ್ನ ಓದುಗರ ಆತ್ಮಿಕ ಅಪ್ರಬುದ್ಧತೆಯನ್ನು ವಿವರಿಸಲು ಆಹಾರದ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ (5;12–14): ಅಪ್ರಭುದ್ದ ವಿಶ್ವಾಸಿಗಳಿಗೆ ಹಾಲು ಮತ್ತು ಪ್ರಭುದ್ದ ವಿಶ್ವಾಸಿಗಳಿಗೆ ಗಟ್ಟಿಯಾದ ಆಹಾರ. ತನ್ನ ಓದುಗರು ಬಹಳ ಕಾಲದಿಂದ ಕ್ರೈಸ್ತರಾಗಿದ್ದಾಗ್ಯೂ ತಮ್ಮ ನಂಬಿಕೆಯನ್ನು ತಿಳಿದುಕೊಳ್ಳುವದರಲ್ಲಿ ಇನ್ನೂ ಅಪ್ರಭುದ್ದರಾಗಿದ್ದಾರೆಂದು ಆತನು ನಿರಾಶನಾಗಿದ್ದಾನೆ.

3. ಗ್ರಂಥಕರ್ತನು ಯೋಗ್ಯ ಮತ್ತು ಅಯೋಗ್ಯವಾದ ಹೊಲದ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ. (6:7–8) "ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವರೂ"(6:6) ಆಗಿರುವವರ ಕುರಿತಾಗಿ ತನ್ನ ನಿರಾಶೆಯನ್ನು ವಿವರಿಸಲು ಇದನ್ನು ಉಪಯೋಗಿಸುತ್ತಾನೆ. ದೇವರ ಆಶೀರ್ವಾದವನ್ನು ಹೊಂದಿದಾಗ್ಯೂ (ಮಳೆಯು ಹೊಲವನ್ನು ತಣಿಸುವ ಆಶೀರ್ವಾದದಂತೆ) ಅವರು ಉತ್ತಮವಾದ ಬೆಳೆಯನ್ನು ಕೊಡುವುದರ ಬದಲಾಗಿ ಮುಳ್ಳುಗಿಡಗಳನ್ನೂ ಕಳೆಗಳನ್ನೂ ಬೆಳೆಸುವ ಭೂಮಿಯಂತಿದ್ದಾರೆ. ಅಂತ್ಯದಲ್ಲಿ ಅಂತಹ ಭೂಮಿಯು ಸುಡಲ್ಪಡುತ್ತದೆ.


ಒಂದು ಮುಳ್ಳಿನ ಗಿಡ

ಇಲ್ಲಿರುವ ಅಳವಡಿಸಿಕೊಳ್ಳುವಿಕೆ – ದೇವರ ಆಶೀರ್ವಾದಗಳನ್ನು ಹೊಂದಿದಾಗ್ಯೂ ಯೇಸುವಿನ

ದೈವಿಕತೆಯನ್ನು ಅಲ್ಲಗಳೆಯುವದರಲ್ಲಿ (ಅಂದರೆ, ಆತನು ದೇವಕುಮಾರನು ಎಂಬುದನ್ನು ಅಲ್ಲಗಳೆಯುವದರಲ್ಲಿ) ನಿರತರಾಗಿರುವ ಜನರು ಮತ್ತು ಆತನ ರಕ್ಷಣೆಯನ್ನು ತಿರಸ್ಕರಿಸುತ್ತಲೇ ಇರುವವರು (ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ; ಇದೇ ರೀತಿಯಲ್ಲಿ ಯೆಹೂದ್ಯರು ಆತನನ್ನು "ಕ್ರೂಜೆಗೆ ಹಾಕು" ಎಂದು ಕೂಗುವದರ ಮೂಲಕ ತಿರಸ್ಕರಿಸಿದರು!) ನಿತ್ಯತ್ವಕ್ಕೂ ನಾಶವಾಗಿ ಹೋಗುವರು ("ಸುಡಲ್ಪಡುವರು").

4. 6:19 ರಲ್ಲಿರುವ ಕಲ್ಪನೆಯನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬೇಕು: ಲಂಗರು (ಚಿತ್ರವನ್ನು ನೋಡಿರಿ) ಹಡಗನ್ನು ಸುರಕ್ಷಿತ ಸ್ಥಾನದಲ್ಲಿ ನೆಲೆಗೊಳಿಸುತ್ತದೆ. ಅದೇ ರೀತಿಯಾಗಿ ಕ್ರಿಸ್ತನಲ್ಲಿರುವ ನಮ್ಮ ನಿರೀಕ್ಷೆಯು ನಮ್ಮ ಸುರಕ್ಷತೆಯ ಭರವಸೆಯನ್ನು ನೀಡುತ್ತದೆ. ಹಡಗಿನ ಲಂಗರು ಸಮುದ್ರದ ಆಳಕ್ಕೆ ಹೋಗುತ್ತದೆ. ಆದರೆ ನಂಬಿಕೆಯ ಲಂಗರು ಮೇಲಕ್ಕೆ ನಿಜವಾದ ಆಕಾಶಮಂಡಲದ ಪವಿತ್ರಸ್ಥಳಕ್ಕೆ ಹೋಗುತ್ತದೆ.



5. ಇವು ಗ್ರಂಥಕರ್ತನ ಪ್ರಕಾರ ಕ್ರಿಸ್ತನ ಕುರಿತಾದ ಆರು *ಪ್ರಾಥಮಿಕ ಬೋಧನೆಗಳಾಗಿವೆ* (ಆರು ಮೂಲಭೂತ ಸಿದ್ಧಾಂತಗಳು) (6:1–2):

   a. ನಿರ್ಜೀವಕರ್ಮಗಳ ಕುರಿತು ಪಶ್ಚಾತಾಪಪಡುವದು: ಮನಸ್ಸಿನ ಬದಲಾವಣೆ ಒಬ್ಬ ವ್ಯಕ್ತಿಯನ್ನು ತನ್ನ ಹಳೆಯ ಜೀವಿತದಿಂದ ತಿರುಗಿಕೊಳ್ಳುವಂತೆ ಮಾಡುತ್ತದೆ. (ಮಾರ್ಕ 1:4; 14–15; ಅ.ಕೃ. 2:8; 5:31) "ನಿರ್ಜೀವಕರ್ಮಗಳು" ಎಂಬ ಪದಪ್ರಯೋಗ ಬಹುಶಃ ಇಬ್ರಿಯರಿಗೆ ಬರೆದ ಪತ್ರಕೆಯ ಓದುಗರ ಯೆಹೂದಿ ಹಿನ್ನೆಲೆಯನ್ನು ಉಲ್ಲೇಖಿಸುತ್ತದೆ, ನಮ್ಮ ಆಧುನಿಕ ಸನ್ನಿವೇಶದಲ್ಲಿ, "ನಿಮ್ಮ ಹಳೆಯ ಪಾಪದ ಜೀವಿತ" ಎಂಬುದು ಬಹುಶಃ ಹೆಚ್ಚು ಸಮಂಜಸವಾಗಿದೆ.

   b. *ದೇವರಲ್ಲಿ ನಂಬಿಕೆ*: ದೇವರ ಕಡೆಗೆ ತಿರುಗಿಕೊಳ್ಳುವದು: ಇದು ಪಶ್ಚಾತಾಪಪಡುವದರ ಪ್ರತಿರೂಪವಾಗಿದೆ (ಮಾರ್ಕ 1:15; ಅ.ಕೃ. 3:19; 20:21)

   c. *ದೀಕ್ಷಾಸ್ನಾನದ ಕುರಿತಾದ ಉಪದೇಶ*: ಇದು ಆಗಿನ ಸಮಯದಲ್ಲಿದ್ದ ವಿವಿಧ ರೀತಿಯ (ಯೆಹೂದ್ಯ) ಶುದ್ಧಾಚಾರಗಳ ಮತ್ತು (ಸ್ನಾನಿಕನಾದ ಯೋಹಾನನ) ದೀಕ್ಷಾಸ್ನಾನಗಳ ಸನ್ನಿವೇಶದಲ್ಲಿ ದೀಕ್ಷಾಸ್ನಾನದ ಕುರಿತಾದ ಸರಿಯಾದ ಉಪದೇಶವನ್ನು ಉಲ್ಲೇಖಿಸುತ್ತದೆ. ಯೇಸು ತನ್ನ ಶಿಷ್ಯರಿಗೆ ದೀಕ್ಷಾಸ್ನಾನಮಾಡಿಸಲು ಮತ್ತು ಬೋಧಿಸಲು ಆಜ್ಞಾಪಿಸಿದ್ದಾನೆ (ಮತ್ತಾಯ 28:19).

d. ಇತರರ ಮೇಲೆ ಕೈಗಳನ್ನಿಡುವುದು (ಹಸ್ತಾರ್ಪಣೆ): ಇದು ಪವಿತ್ರಾತ್ಮನ ದೀಕ್ಷಾಸ್ನಾನದ ಕುರಿತು ಉಲ್ಲೇಖಿಸುತ್ತದೆಂದು ನಾನು ಭಾವಿಸುತ್ತೇನೆ ((ಅ. ಕೃ. 8:17; 19:6). ಇದು ಸೇವೆಗಾಗಿ ಒಬ್ಬರನ್ನು ನೇಮಿಸುವ ಕಾರ್ಯವನ್ನು ಸೂಚಿಸುತ್ತದೆ (ಅ. ಕೃ. 6:6, 13:3; 1 ತಿಮೋ. 4:14; 2 ತಿಮೋ. 1:6).ಈ ಎರಡು ಪರ್ಯಾಯಗಳಲ್ಲಿ ಮೊದಲನೆಯದು ಅತ್ಯಂತ ಪ್ರಾಥಮಿಕವಾದದ್ದು ಎಂಬುದು ನನ್ನ ವೈಯಕ್ತಿಕ ಅನಿಸಿಕೆ.

e. ಸತ್ತವರಿಗೆ ಪುನರುತ್ಥಾನ: ಕೊನೆಯ ದಿನದಲ್ಲಿ ನೀತಿವಂತರಿಗೆ ಮತ್ತು ಕೆಟ್ಟವರಿಗೂ ಪುನರುತ್ಥಾನ (ಯೋಹಾನ 5:25–29; ಅ.ಕೃ. 24:15).

f. ನಿತ್ಯವಾದ ನ್ಯಾಯತೀರ್ಪು (9:27 ರೊಂದಿಗೆ ಹೋಲಿಸಿರಿ): ಪುನರುತ್ಥಾನ ಮತ್ತು ನ್ಯಾಯತೀರ್ವಿಕೆ ಯೇಸುವಿನ ಬೋಧನೆಯಲ್ಲಿ ಮತ್ತು ಆದಿಸಭೆಯ ದೈವಶಾಸ್ತ್ರದಲ್ಲಿ ಸಂಬಂಧವನ್ನು ಹೊಂದಿವೆ (ಯೋಹಾನ 5:26–29; ಅ.ಕೃ. 17:31). ಕೊನೆಯ ದಿನದಲ್ಲಿನ ದೇವರ ನ್ಯಾಯತೀರ್ಪು ಎಲ್ಲಾ ಜನರ ಮೇಲೆ ನಿತ್ಯವಾದ ಪರಿಣಾಮವನ್ನುಂಟುಮಾಡುತ್ತದೆ.

ಆರು ಅಂಶಗಳ ಈ ಪಟ್ಟಿ ಸಾಕಾಗುವದಿಲ್ಲ ಎಂದು ನಾನು ಭಾವಿಸುತ್ತೇನೆ. ಬಹುಶಃ ಇಬ್ರಿಯರಿಗೆ ಬರೆದ ಪತ್ರಿಕೆ ಬರೆಯಲ್ಪಟ್ಟ ಸನ್ನಿವೇಶದಲ್ಲಿ ಯೆಹೂದಿ ಹಿನ್ನೆಲೆಯ ವಿಶ್ವಾಸಿಗಳು ತಮ್ಮ ಕ್ರಿಸ್ತೀಯ ನಂಬಿಕೆಯನ್ನು ಬಿಟ್ಟು ಬಿಡಲು ಪರಿಗಣಿಸಿದಾಗ ಈ ಪಟ್ಟಿಯನ್ನು ರೂಪಿಸಿರಬೇಕು. ನಾನು ಕನಿಷ್ಠ ಇನ್ನೂ ಮೂರು "ಮೂಲಭೂತ" ಬೋಧನೆಗಳನ್ನು ಸೇರಿಸಲು ಇಷ್ಟಪಡುತ್ತೇನೆ.

- ಯೇಸು ಯಾರಾಗಿದ್ದಾನೆ ಎಂಬ "ಸಿದ್ಧಾಂತ"
- ಕ್ರೂಜೆಯ ಮೇಲೆ ಆತನ ರಕ್ಷಣೆಯ ಕಾರ್ಯದ "ಸಿದ್ಧಾಂತ"
- ನಮ್ಮ ನಿತ್ಯವಾದ ನಿರೀಕ್ಷೆ/ಬಾಧ್ಯತೆಯ ಸಿದ್ಧಾಂತ: ಹೊಸ ಪರಲೋಕ ಮತ್ತು ಹೊಸ ಭೂಮಿಯ "ಸಿದ್ಧಾಂತ"

ನಿಜವಾಗಿಯೂ, ಇಬ್ರಿಯರಿಗೆ ಬರೆದ ಪತ್ರಿಕೆ ಈ ಮೂರು ಅಂಶಗಳನ್ನು ಬೇರೆ ಸ್ಥಳದಲ್ಲಿ ವಿವರಿಸುತ್ತದೆ. ಆದರೆ ಈ "ಸಿದ್ಧಾಂತಗಳ" ಸರಳ ಅವತರಣಿಕೆ, ನನ್ನ ಅಭಿಪ್ರಾಯದಲ್ಲಿ, "ಮೂಲ" ಕ್ರಿಸ್ತೀಯ ನಂಬಿಕೆಗೆ ಸಂಬಂಧಿಸಿದ್ದಾಗಿದೆ.

6. ಹೊಸ ಒಡಂಬಡಿಕೆಯಲ್ಲಿ ಈ ವೇದಭಾಗವು ಅತ್ಯಂತ ಗಲಿಬಿಲಿಗೊಳಿಸುವ ಮತ್ತು ನಿರುತ್ಸಾಹಪಡಿಸುವ ವಚನಗಳನ್ನೊಳಗೊಂಡಿದೆ (6:4–8). ಅವುಗಳನ್ನು ಹೊಸ ಒಡಂಬಡಿಕೆಯ ಇನ್ನುಳಿದ ಬೋಧನೆಯ ಅಡಿಯಲ್ಲಿ ತಿಳಿದುಕೊಳ್ಳಬೇಕು ನಿಜ. ನಾನು ಈ ವೇದಭಾಗವನ್ನು ಹೀಗೆ ಅರ್ಥಮಾಡಿಕೊಂಡಿದ್ದೇನೆ:

a. ವಿಶ್ವಾಸಿಗಳು ಸನ್ಮಾರ್ಗವನ್ನು ಬಿಡುವ ಸಂಗತಿಯು (ಅಥವಾ ಕ್ರಿಸ್ತೀಯ ನಂಬಿಕೆಯಿಂದ ಹಿಂಜಾರುವದು) ಆ ದಿನಗಳಲ್ಲಿ ಸಭೆಗಳಲ್ಲಿ ನಿಜವಾದ ಸಮಸ್ಯೆಯಾಗಿತ್ತು ಕೆಲವು

ವಿಮರ್ಷಕರು (6:6 ರಲ್ಲಿರುವ 'if' ಎಂಬ ಪದಪ್ರಯೋಗದ ಆಧಾರದ ಮೇಲೆ) ಹೇಳುವಂತೆ ಕೇವಲ ರೂಪಾಲಂಕಾರವಾಗಿರಲಿಲ್ಲ.

b. ನಿಜವಾದ ವಿಶ್ವಾಸಿಗಳು ಇಂದು ಸಹ ಸನ್ಮಾರ್ಗ ತಪ್ಪುವ ಸಾಧ್ಯತೆಗಳಿವೆ ಎಂದು ನಾನು ಭಾವಿಸುತ್ತೇನೆ. ಅದೇ ಪ್ರಕಾರ, ಭಾರತದ ಕೆಲವು ಕ್ರೈಸ್ತ ಗುಂಪಿನಲ್ಲಿರುವ 'ಒಮ್ಮೆ ರಕ್ಷಣೆಯನ್ನು ಹೊಂದಿದರೆ ಯಾವಾಗಲೂ ರಕ್ಷಣೆ ಹೊಂದಿದ್ದೇವೆ' ಎಂಬ ಬೋಧನೆ ಸಾಮಾನ್ಯವಾಗಿದೆ, ಇದು ಸುಳ್ಳು ಬೋಧನೆಯಾಗಿದೆ ಎಂದು ನಾನು ಭಾವಿಸುತ್ತೇನೆ.

c. 6:4–5 ಸನ್ಮಾರ್ಗ ತಪ್ಪಿದ ವಿಶ್ವಾಸಿಯು ದೇವರ ಕಡೆಗೆ ತಿರುಗಿಕೊಳ್ಳುವದು ಅಸಾಧ್ಯ ಎಂದು ಇಲ್ಲಿ ಅರ್ಥೈಸುತ್ತಿಲ್ಲ. ಅದು ಸಂಪೂರ್ಣವಾಗಿ ಸುವಾರ್ತೆಯ ವಿರುದ್ಧವಾಗಿ ಹೋಗುತ್ತದೆ. (ಯೋಹಾನ 3:16–18). ಯೇಸು ತನ್ನ ಶಿಷ್ಯರಿಗೆ 'ಏಳೆಪ್ಪತ್ತು ಸಾರಿ' (ಅಂದರೆ 'ಪ್ರತೀ ಸಾರಿ' ಎಂದರ್ಥ, ಮತ್ತಾಯ 18:21–22) ಕ್ಷಮಿಸಲು ಹೇಳಿದ್ದರೆ, ನಮ್ಮ ಪ್ರೀತಿಯುಳ್ಳ ದೇವರು ನಾವು ಪ್ರಾಮಾಣಿಕವಾಗಿ ಆತನೆಡೆಗೆ ತಿರುಗಿಕೊಂಡು ಮತ್ತು ಆತನ ಕ್ಷಮಾಪಣೆಯನ್ನು ಬೇಡುವುದಾದರೆ ನಮ್ಮನ್ನು ಎಷ್ಟು ಬಾರಿಯಾದರು ಕ್ಷಮಿಸುತ್ತಾನೆ ಎಂದು ನಮಗೆ ಗೊತ್ತಿದೆ.

d. 'ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನಪಡಿಸುವವರೂ ಆಗಿದ್ದಾರೆ'" (6:6) ಎಂಬ ಹೇಳಿಕೆಯ ಮೂಲಕ ಗ್ರಂಥಕರ್ತನು ಧರ್ಮಭ್ರಷ್ಟತೆಯಲ್ಲಿ ಮುಂದುವರೆಯುವ ಹಿಂಜಾರಿದವರ ಕುರಿತು ಉಲ್ಲೇಖಿಸುತ್ತಿದ್ದಾನೆ ಎಂಬುದು ಸ್ಪಷ್ಟವಾಗಿದೆ: ಅವರು ಪಶ್ಚಾತಾಪ ಪಡುವದಿಲ್ಲ. ಅವರು ಪ್ರಾಮಾಣಿಕವಾಗಿ ದೇವರ ಕಡೆಗೆ ತಿರುಗಿಕೊಳ್ಳುವದಿಲ್ಲ. ಅವರು ನಿಜವಾಗಿ ಯೇಸುವಿನ ದೈವತ್ವವನ್ನು ನಿರಾಕರಿಸುತ್ತಾರೆ ಮತ್ತು ಕ್ರೂಜೆಗೆ ಹಾಕಿದ ಸಮಯದಲ್ಲಿ ಆತನನ್ನು ಪರಿಹಾಸ್ಯಮಾಡಿದವರೊಂದಿಗೆ ಅವರು ಸೇರಿಕೊಳ್ಳುವವರಾಗಿದ್ದಾರೆ. ನಿಜವಾಗಿಯೂ, ಇಂತಹ ಜನರಿಗೆ ರಕ್ಷಣೆಯಾಗಲು ಸಾಧ್ಯವಿಲ್ಲ. ಯೇಸುವಿನಲ್ಲಿ ನಂಬಿಕೆಯಿಡುವವರು ಮಾತ್ರ ರಕ್ಷಣೆಯನ್ನು ಹೊಂದುತ್ತಾರೆ. ಯಾರು ಆತನನ್ನು ನಂಬಲು ನಿರಾಕರಿಸುತ್ತಾರೋ ಅವರು ನ್ಯಾಯತೀರ್ಪಿಗೆ ಒಳಗಾಗುತ್ತಾರೆ. ಇದನ್ನು ಯೇಸು 'ಪವಿತ್ರಾತ್ಮನನ್ನು ದೂಷಿಸುವದು' ಎಂದು ಕರೆಯುತ್ತಾನೆ. ಇದೊಂದೆ ಪಾಪ ಕ್ಷಮಿಸಲಾರದ ಪಾಪವಾಗಿದೆ (ಮಾರ್ಕ 3:19). ಈ ಪಾಪವು ಕ್ಷಮಿಸಲ್ಪಡದೇಯಿರುವದಕ್ಕೆ ಕಾರಣವೇನಂದರೆ ಇದು ಯೇಸುವನ್ನು ಹಾಗೂ ಆತನ ರಕ್ಷಣೆಯನ್ನು ಅಲ್ಲಗಳೆಯುತ್ತದೆ. ಯೇಸು ಸೈತಾನನಿಂದ ಬಂದಿದ್ದಾನೆ ಹೊರತು ದೇವರಿಂದಲ್ಲ ಎಂದು ಹೇಳುವುದು ಪವಿತ್ರಾತ್ಮನನ್ನು ದೂಷಿಸಿದಂತಾಗುತ್ತದೆ.

e. ಕೊನೆಯದಾಗಿ, ಭಾರತದಲ್ಲಿ (ಮತ್ತು ಉಳಿದ ದೇಶಗಳಲ್ಲಿ) ಅನೇಕ ಯೌವನಸ್ಥ ವಿಶ್ವಾಸಿಗಳು ಈ ವಚನಗಳೊಂದಿಗೆ ಹೋರಾಡುವುದು ಸೈತಾನನ ಕಾರ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಸೈತಾನನು ನಿರಂತರವಾಗಿ ದೇವರ ಕರುಣೆ ಮತ್ತು ಕ್ಷಮಾಪಣೆಯಲ್ಲಿ ಅಪನಂಬಿಕೆಯನ್ನು ಹುಟ್ಟಿಸುತ್ತಾನೆ. ಸೈತಾನನು ಜನರಿಗೆ ಅವರು ಸನ್ಮಾರ್ಗವನ್ನು ಬಿಟ್ಟರೆ ಅಥವಾ ಅವರು ಪಾಪ ಮಾಡಿದರೆ ನಿತ್ಯವಾಗಿ ನಾಶವಾಗಿದ್ದಾರೆಂದು ಯೋಚಿಸುವಂತೆ ಬಲೆಯನ್ನು ಹಾಕುತ್ತಾನೆ. ಆತನ ಮಾತಿಗೆ ಕಿವಿಗೊಡಬೇಡಿರಿ! ಸುವಾರ್ತೆಯಲ್ಲಿ ನಂಬಿಕೆಯಿಡಿರಿ ಮತ್ತು ದೇವರ ಕ್ಷಮಾಪಣೆಯಲ್ಲಿ ವಿಶ್ವಾಸವಿಡಿರಿ!

7. 6:9–20ರಲ್ಲಿ ನಾವು ದೇವರ ಕುರಿತಾಗಿ ಇದನ್ನು ಕಲಿಯುತ್ತೇವೆ. ನನ್ನ ಮೂರು ಮುಖ್ಯ ಅಂಶಗಳು ರೇಮಂಡ್ ಬ್ರೌನ್‌ರವರ ಹೇಳಿಕೆಯನ್ನು (ಪುಟ 117–122) ಆಧರಿಸಿವೆ:

   a. ದೇವರು ನ್ಯಾಯವಂತನಾಗಿದ್ದಾನೆ (6:9–10): ಹಿಂದಿನ ವಚನಗಳಲ್ಲಿ ನಾವು ದೇವರ ನ್ಯಾಯತೀರ್ವಿಕೆಯು ಮನುಷ್ಯನ ಆತ್ಮಿಕ ಉಲ್ಲಂಘನೆಯನ್ನು ಅಲಕ್ಷಿಸುವದಿಲ್ಲ ಎಂಬುದನ್ನು ಕಂಡಿದ್ದೇವೆ. ಈ ವಚನಗಳಲ್ಲಿ ನಾವು ದೇವರ ನ್ಯಾಯತೀರ್ವಿಕೆ ಮಾನವನ ಶ್ರದ್ಧಾಪೂರ್ವಕ ಸೇವೆಯನ್ನು, ದೇವರ ಮೇಲಿಟ್ಟಿರುವ ಪ್ರೀತಿಯನ್ನು ಮತ್ತು ತನ್ನ ಜನರಿಗೆ ಮಾಡುವ ಸಹಾಯವನ್ನು ಅಲಕ್ಷಿಸುವುದಿಲ್ಲ ಎಂಬುದನ್ನು ನೋಡುತ್ತೇವೆ.

   b. ದೇವರು ಉದಾರಿಯಾಗಿದ್ದಾನೆ: (6:11–15): ಆತನು ಅಬ್ರಹಾಮನನ್ನು ಹೇರಳವಾಗಿ ಆಶೀರ್ವದಿಸಿದಂತೆ, ಆತನು ತಮ್ಮ ನಂಬಿಕೆ ಮತ್ತು ನಿರೀಕ್ಷೆಯನ್ನು ಕಾಪಾಡಿಕೊಳ್ಳುವಂತಹ ವಿಶ್ವಾಸಿಗಳನ್ನು ಹೇರಳವಾಗಿ ಆಶೀರ್ವದಿಸುತ್ತಾನೆ.

   c. ದೇವರು ವಿಶ್ವಾಸಾರ್ಹನಾಗಿದ್ದಾನೆ (6:6–20): ದೇವರ ವಾಕ್ಯವು ವಿಶ್ವಾಸಕ್ಕೆ ಅರ್ಹವಾದದ್ದು; ಆತನು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ. ದೇವರ ಸ್ವಭಾವವು ವಿಶ್ವಾಸಾರ್ಹವಾಗಿದೆ; ಆತನ ಉದ್ದೇಶದ ಸ್ವರೂಪವು ಬದಲಾಗುವದಿಲ್ಲ. ದೇವರ ಮಗನು ಅವಲಂಬಿತನಾಗಿದ್ದಾನೆ; ನಮ್ಮ ನಿರೀಕ್ಷೆ ಆತನಲ್ಲಿ, ನಿತ್ಯಕಾಲಕ್ಕೂ ನಮ್ಮ ಯಾಜಕನಾಗಿದ್ದಾನೆ.

8. ಈ ವೇದಭಾಗದಲ್ಲಿ ಸೇವೆಯಲ್ಲಿ ತೊಡಗಿರುವ ನಮಗೆ ಮಹತ್ವದ ಪಾಠಗಳಿವೆ. ಇಲ್ಲಿ ರೇಮಂಡ್ ಬ್ರೌನ್‌ರವರ ಹೇಳಿಕೆಯ (ಪುಟ 122–124) ಆಧಾರದ ಮೇಲೆ ಒಂದು ಪಟ್ಟಿಯಿದೆ:


   a. ನಾವು ಪ್ರೋತ್ಸಾಹ ನೀಡುವದರಲ್ಲಿ ಉದಾರಿಗಳಾಗಿರಬೇಕು: ಸೇವೆಯಲ್ಲಿ ನಾವು ನಂಬಿಕೆಯಲ್ಲಿ ಬಲಹೀನರಾಗಿರುವ ಜನರು ಮತ್ತು ನಂಬಿಕೆಯಲ್ಲಿ ಪರಿಪಕ್ವತೆ ಇಲ್ಲದ ಜನರನ್ನು ಎದುರುಗೊಳ್ಳುತ್ತೇವೆ (ಕೆಲವರು ನಂಬಿಕೆಯಲ್ಲಿ ಹಿಂಜಾರುತ್ತಾರೆ). ಆದರೆ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನೊಂದಿಗೆ ನಾವು ಸಹ ಸೇರಿಕೊಂಡು 'ಉತ್ತಮವಾದ ಸಂಗತಿಗಳನ್ನು' ಮರೆತುಬಿಡಬಾರದು (6:9). ಸಭಾಪಾಲಕರಿಗೆ ಸಭೆಯನ್ನು ಸತತವಾಗಿ ಟೀಕಿಸುವ, ಗದರಿಸುವ, ಎಚ್ಚರಿಸುವ ಮತ್ತು ಪ್ರಬೋಧಿಸುವ ಅಪಾಯ ಯಾವಾಗಲೂ ಇರುತ್ತದೆ. ಆದರೆ ನಾವು ಪ್ರೋತ್ಸಾಹಿಸುವ ಸೇವೆಯನ್ನು ಎಂದಿಗೂ ಮರೆಯಬಾರದು.

   b. ನಾವು ನಮ್ಮ ಉಪದೇಶದಲ್ಲಿ ಸಮತೋಲನವನ್ನು ಹೊಂದಿರಬೇಕು: ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಕ್ರಿಸ್ತೀಯ ನಂಬಿಕೆಯನ್ನು ಸಮತೋಲನದಿಂದ ಮಂಡಿಸುವದರಲ್ಲಿ ಎಚ್ಚರಿಕೆಯನ್ನು ವಹಿಸುತ್ತಾನೆ. ಯಾವುದೇ ಸಭಾಪಾಲಕರು ಕ್ರಮವಾಗಿ ಒಂದೇ ಸಭಿಕರಿಗೆ ಉಪದೇಶಿಸುವಾಗ ಆತನು 'ದೇವರ ಸಂಪೂರ್ಣ ಚಿತ್ತವನ್ನು' ಪ್ರಕಟಿಸುವದನ್ನು ಖಚಿತಪಡಿಸಿಕೊಳ್ಳಬೇಕು (ಅ.ಕೃ 20:27). ಹಾಗೆ ಮಾಡಿದರೆ ಸತ್ಯವನ್ನು ಕೆಡಿಸದಂತೆ ಎಚ್ಚರವಾಗಿರಬಹುದು.

   c. ನಾವು ನಮ್ಮ ಜೀವಿತದ ಮೂಲಕ ಮಾದರಿಯಾಗಿರಬೇಕು: ಸ್ವಸ್ಥಬೋಧನೆ ಒಂದೇ ಸಾಲದು. ನಾವು ಕ್ರಿಸ್ತನನ್ನು ಅನುಕರಿಸುವವರಾಗಿರಬೇಕು (1 ಕೊರಿಂಥ 11:2; ಎಫೆಸ 5:1; 1

ಥೆಸಲೋನಿಕ 1:6; 1 ಪೇತ್ರ 2:21). ಈ ವೇದಭಾಗದಲ್ಲಿ ಗ್ರಂಥಕರ್ತನು ತನ್ನ ಓದುಗರಿಗೆ ಪರಿಶ್ರಮಿಗಳಾಗಿರಬೇಕು ಮೈಗಳ್ಳರಾಗಿರಬಾರದು ಎಂದು ಎಚ್ಚರಿಸುತ್ತಾನೆಅವರು 'ನಂಬಿಕೆಯಿಂದಲೂ ತಾಳ್ಮೆಯಿಂದಲೂ ವಾಗ್ದಾನಗಳನ್ನು ಬಾಧ್ಯವಾಗಿ ಹೊಂದುವವರನ್ನು ಅನುಸರಿಸುವವರಾಗಬೇಕೆಂದು' ಗ್ರಂಥಕರ್ತನು ಪ್ರಬೋಧಿಸುತ್ತಾನೆ (6:12) ಮತ್ತು ಆತನು ಅಬ್ರಹಾಮನ ತಾಳ್ಮೆಯನ್ನು ಉದಾಹರಣೆಯಾಗಿ ಉಪಯೋಗಿಸುತ್ತಾನೆ (6:15).

ಹೊಸ ಒಡಂಬಡಿಕೆಯ ಸಮಯದಲ್ಲಿ ರೊಟ್ಟಿಯು "ಗಟ್ಟಿಯಾದ ಆಹಾರವಾಗಿತ್ತು" (ಪ್ರಶ್ನೆ 2 ಕ್ಕೆ ಉತ್ತರ).



# ಉತ್ತರಗಳು 10: ಉತ್ತಮವಾದ ಯಾಜಕತ್ವ, 7:1–28

## ಪ್ರಶ್ನೆಗಳಿಗೆ ಉತ್ತರಗಳು:

1. ಈ ವೇದಭಾಗವು ಹಳೆ ಒಡಂಬಡಿಕೆಯ ಯಾಜಕತ್ವವನ್ನು (ಲೇವಿಯರ ಯಾಜಕತ್ವ ಅಥವಾ "ಆರೋನನ ಕ್ರಮದ" ಯಾಜಕತ್ವ) ಉತ್ತಮವಾದ ಒಡಂಬಡಿಕೆಯ ಯಾಜಕತ್ವದೊಂದಿಗೆ (ಯೇಸುವಿನ ಯಾಜಕತ್ವ) ಹೋಲಿಸುತ್ತದೆ.

2. ಹಿಬ್ರೂ ಭಾಷೆಯಲ್ಲಿ ಮೆಲ್ಕಿಜೆದೇಕ ಎಂಬ ಹೆಸರಿನ ಅರ್ಥ "ನೀತಿಯ ಅರಸನು" ಎಂಬುದಾಗಿ. ಆದರೆ ಆತನನ್ನು "ಸಮಾಧಾನದ ಅರಸನು" ಎಂದು ಸಹ ಕರೆಯುತ್ತಾರೆ. (ವ 2) ಯಾಕಂದರೆ ಆತನು "ಸಾಲೇಮಿನ ಅರಸನಾಗಿದ್ದನು" (ಅನೇಕ ಸತ್ಯವೇದ ತಜ್ಞರು ಇದು ಯೆರೂಸಲೇಮಿಗೆ ಇರುವ ಇನ್ನೊಂದು ಹೆಸರು ಎಂದು ಗುರುತಿಸುತ್ತಾರೆ) ಮತ್ತು ಹಿಬ್ರೂ ಭಾಷೆಯಲ್ಲಿ ಸಾಲೇಮ್/ಶಾಲೋಮ್ ಅಂದರೆ ಅದರ ಅರ್ಥ "ಸಮಾಧಾನ" ಎಂಬುದಾಗಿದೆ.

3. ವಚನ 3 ರಲ್ಲಿ ಗ್ರಂಥಕರ್ತನು ಮೆಲ್ಕಿಜೆದೇಕನ ಮತ್ತು ಯೇಸುವಿನ ನಡುವೆ ತರುವ ಸಮಾನತೆಯು ಹಳೆ ಒಡಂಬಡಿಕೆಯ ಎರಡು ಅಂಶಗಳನ್ನು ಆಧರಿಸಿದೆ:

   a. ಆದಿಕಾಂಡ 14 ರಲ್ಲಿ ಬರುವ ಮೆಲ್ಕಿಜೆದೇಕನ ಕಥೆಯಲ್ಲಿ ಆತನ ಕುಟುಂಬ, ಆತನ ಪೂರ್ವಜರು ಅಥವಾ ಆತನ ಸಂತತಿಯ ಕುರಿತು ಯಾವುದೇ ಮಾಹಿತಿಯಿಲ್ಲ. ಆದುದರಿಂದ ಆತನು ಯೇಸುವಿನಂತೆ "ಆದಿ ಮತ್ತು ಅಂತ್ಯ" ಇಲ್ಲದವನು. ಮೆಲ್ಕಿಜೆದೇಕನು ಅರಸನು ಮತ್ತು ಯಾಜಕನು ಎಂಬ ವಾಸ್ತವಾಂಶವನ್ನು ಕೀರ್ತನೆ 110 ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆ 7:11–14 ರಲ್ಲಿ ಆತನು ಮೆಸ್ಸೀಯನ "ವಿಧ" ಎಂದು ತೋರಿಸಲು ಉಪಯೋಗಿಸಲಾಗಿದೆ.

   b. ಕೀರ್ತನೆ 110:4 ರ ಉಲ್ಲೇಖವನ್ನು ("ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು") ಮೆಸ್ಸೀಯನ ಕುರಿತಾದ ಪ್ರವಾದನೆ ಎಂದು ಅರ್ಥಮಾಡಿಕೊಳ್ಳಲಾಗಿದೆ. "ಸದಾಕಾಲವೂ" ಇರುವಂತವನಾದ ಯೇಸುವಿನ 'ಮಾದರಿ'.

4. ವಚನ 4–10 ರ ಪ್ರಕಾರ ಮೆಲ್ಕಿಜೆದೇಕನು ಶ್ರೇಷ್ಠನಾಗಿದ್ದಾನೆ:

   a. ಅಬ್ರಹಾಮನು ಅವನಿಗೆ ದಶಮಾಂಶವನ್ನು ನೀಡಿದ್ದರ ನಿಮಿತ್ತ ಮೆಲ್ಕಿಜೆದೇಕನು ಅಬ್ರಹಾಮನಿಗಿಂತ ಹೆಚ್ಚಿನವನು ಎಂದು ತೋರಿಸುತ್ತದೆ (ವ. 4).

   b. ಮೆಲ್ಕಿಜೆದೇಕನು ಲೇವಿ ಕುಲಕ್ಕೆ ಸಂಬಂಧಿಸದಿದ್ದರೂ ದಶಮಾಂಶವನ್ನು ಸ್ವೀಕರಿಸಿದನು (ಹಳೆ ಒಡಂಬಡಿಕೆಯ ಪದ್ಧತಿಯಲ್ಲಿ ಈ ಕುಲವು ದಶಮಾಂಶವನ್ನು ಸ್ವೀಕರಿಸುತಿತ್ತು (ವ. 5–6).

   c. ಮೆಲ್ಕಿಜೆದೇಕನು ಅಬ್ರಹಾಮನನ್ನು ಆಶೀರ್ವದಿಸಿದ್ದರಿಂದ ಮತ್ತು ಆತನು ಅಬ್ರಹಾಮನಿಗಿಂತ ಹೆಚ್ಚಿನವನು ಎಂಬುದನ್ನು ಇದು ತೋರಿಸುತ್ತದೆ (ವ. 7).

d. ಮೆಲ್ಕಿಜೆದೇಕನ ಹುಟ್ಟು ಮತ್ತು ಸಾವುಗಳ ಕುರಿತು ಯಾವುದೇ ದಾಖಲೆ ಇಲ್ಲದಿರುವದರಿಂದ, ಆತನು "ಸದಾಕಾಲವೂ" ಇರುವಾತನಾಗಿದ್ದಾನೆ, ಆರೋನನ ಕ್ರಮದಲ್ಲಿದ್ದ ಯಾಜಕರಿಗೆ ಇದು ಸಾಧ್ಯವಿರಲಿಲ್ಲ (ವ 8).

e. ಲೇವಿಯರು ಸಹ ಮೆಲ್ಕಿಜೆದೇಕನಿಗೆ ದಶಮಾಂಶವನ್ನು ನೀಡಿದರು ಎಂದು ಹೇಳಲಾಗಿರುವದರಿಂದ (ಅಬ್ರಹಾಮನು ಲೇವಿಯರ ಪೂರ್ವಜನಾಗಿದ್ದನು ಆದುದರಿಂದ ಆತನು ಮೆಲ್ಕಿಜೆದೇಕನಿಗೆ ದಶಮಾಂಶವನ್ನು ನೀಡಿದಾಗ 'ಅವನಲ್ಲಿ ಲೇವಿಯನು ಅಡಕನಾಗಿದ್ದನು' (ವ 9–10).

5. 'ಆರೋನನ ತರಹದವನಾಗಿರದೆ ಮೆಲ್ಕಿಜೆದೇಕನ ತರಹದ ಬೇರೊಬ್ಬ ಯಾಜಕನು ಬರುವದು ಅವಶ್ಯವಾಗಿತ್ತು' (ವ. 11). ಯಾಕೆಂದರೆ ಹಳೆ ಒಡಂಬಡಿಕೆಯ ಯಾಜಕತ್ವದ ಪದ್ಧತಿಯು ಅಪರಿಪೂರ್ಣವಾಗಿತ್ತು ಹಾಗಾಗಿ ಆರೋನನ ತರಹದ ಯಾಜಕತ್ವಕ್ಕೆ ಬದಲಿ ವ್ಯವಸ್ಥೆಯ ಅವಶ್ಯಕತೆಯಿತ್ತು.

6. ಆರೋನನ ತರಹದ ಯಾಜಕತ್ವ ಮಾತ್ರವಲ್ಲ, ಹಳೆ ಒಡಂಬಡಿಕೆಯು ಸಹ ಅಪರಿಪೂರ್ಣವಾಗಿತ್ತು (ವ 12, 18–19). ಅವೆರಡನ್ನೂ ಪ್ರತ್ಯೇಕಿಸುವದು ಸಾಧ್ಯವಿರಲಿಲ್ಲ. ಲೇವಿಯರ ಯಾಜಕತ್ವದಂತೆ, ಧರ್ಮಶಾಸ್ತ್ರವು 'ಬಲಹೀನ ಮತ್ತು ನಿಷ್ಪ್ರಯೋಜಕವಾಗಿತ್ತು', ಯಾಕಂದರೆ ಅದು ಯಾವುದನ್ನೂ ಪರಿಪೂರ್ಣ ಮಾಡಲು ಸಾಧ್ಯವಿರಲಿಲ್ಲ.

7. ಈ ಪುಸ್ತಕದಲ್ಲಿ ಮೆಲ್ಕಿಜೆದೇಕನ ಕಥೆಯನ್ನು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಉಪಯೋಗಿಸುವದರ ಮುಖ್ಯ ಉದ್ದೇಶವು ಹಳೆ ಒಡಂಬಡಿಕೆಯ ಯಾಜಕತ್ವ ('ಆರೋನನ ತರಹದ ಯಾಜಕತ್ವ') ಮತ್ತು ಅದರೊಂದಿಗಿರುವ ಹಳೆ ಒಡಂಬಡಿಕೆಯ ಧರ್ಮಶಾಸ್ತ್ರಕ್ಕಿಂತ ಯೇಸುವಿನ ಶ್ರೇಷ್ಠತೆಗೆ ಒತ್ತು ನೀಡುವದಾಗಿದೆ. ಅಧ್ಯಾಯ 1–2 ನ್ನು ಹೋಲಿಸಿರಿ ಅಲ್ಲಿ ಆತನು ಮೋಶೆಗಿಂತ ಯೇಸುವಿನ ಶ್ರೇಷ್ಠತೆಯನ್ನು ತಿಳಿಸಿದ್ದಾನೆ.

8. ಯಾಜಕತ್ವ ಮತ್ತು ಧರ್ಮಶಾಸ್ತ್ರದ ಬದಲಾವಣೆಯ ಪರಿಣಾಮವು ಇದಾಗಿತ್ತು: ಹಳೆಯ ನಿರೀಕ್ಷೆಯು ಉತ್ತಮವಾದ ನಿರೀಕ್ಷೆಯಾಗಿ ಸ್ಥಾನಪಲ್ಲಟಗೊಳಿಸಲಾಗಿದೆ, ಇದರ ಮೂಲಕ ನಾವು ದೇವರ ಸಮೀಪಕ್ಕೆ ಬರಬಹುದು. (ವ 19)

9. ಯೇಸುವಿನ ಯಾಜಕತ್ವವು ಹಳೆ ಒಡಂಬಡಿಕೆಯ ಲೇವಿಯರ ಯಾಜಕತ್ವಕ್ಕಿಂತ ಬಹಳಷ್ಟು ಶ್ರೇಷ್ಠವಾಗಿದೆ ಎಂಬುದಕ್ಕೆ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಮೂರು ಕಾರಣಗಳನ್ನು ಕೊಡುತ್ತಾನೆ (ವ 20–28), ಅವು ಯಾವವೆಂದರೆ:

a. ಅದು ಪ್ರತಿಜ್ಞೆಯೊಂದಿಗೆ ಬಂತು (ವ 20–21): ಈ ಮಾಹಿತಿಯು ಈ ಅಧ್ಯಾಯದಲ್ಲಿ ಆಗಾಗ್ಗೆ ಉಲ್ಲೇಖಿಸಲಾದ ಕೀರ್ತನೆ 110:4 ರ ಮೂಲಕ ಬರುತ್ತದೆ; *ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ ಪಶ್ಚಾತ್ತಾಪಪಡುವದಿಲ್ಲ. 'ನೀನು ಸದಾಕಾಲವೂ ಯಾಜಕನಾಗಿದ್ದೀ'"* ಆದುದರಿಂದ ದೇವರು ಯೇಸುವಿನ ಯಾಜಕತ್ವವು ನಿತ್ಯವಾದದ್ದು ಮತ್ತು ಬದಲಾಗದೇ ಇರುವಂತದ್ದು ಎಂದು ದೇವರು ವಾಗ್ದಾನ ಮಾಡುತ್ತಾನೆ.

b. ಯೇಸು ಇದಕ್ಕೆ ಭರವಸೆಯಾಗಿದ್ದಾನೆ (ವ 22): ನಮ್ಮ ಅವಶ್ಯಕತೆಗಳನ್ನು ಯೇಸು ತಿಳಿದಾತನಾಗಿದ್ದಾನೆ ಯಾಕೆಂದರೆ ಆತನು ನಮ್ಮ ಮಾನವ ಪರಿಸ್ಥಿತಿಯನ್ನು ಹಂಚಿಕೊಂಡಿದ್ದಾನೆ, ಈಗ ದೇವರ ಸನ್ನಿಧಾನದಲ್ಲಿ ಕುಳಿತುಕೊಂಡಿದ್ದಾನೆ ಮತ್ತು ತನ್ನ ಉತ್ತಮವಾದ ಒಡಂಬಡಿಕೆಯ ಪ್ರಭಾವದ ಭರವಸೆಯನ್ನು ನೀಡುತ್ತಾನೆ.

c. ಇದಕ್ಕೆ ಉತ್ತಮನಾದ ಯಾಜಕನಿದ್ದಾನೆ (ವ 23–28): ಯೇಸು ನಮ್ಮ *ಅವಶ್ಯಕತೆಗಳನ್ನು* ಪೂರೈಸುವ ಮಹಾಯಾಜಕನಾಗಿದ್ದಾನೆ – *ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ, ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿದ್ದಾನೆ.*

10. ಯೇಸುವಿನ ಯಾಜಕತ್ವವನ್ನು ವ 23–28 ರಲ್ಲಿ ವರ್ಣಿಸಲಾಗಿದೆ. ಐದು ಮುಖ್ಯಾಂಶಗಳು ಹೀಗಿವೆ (ರೇಮಂಡ್ ಬ್ರೌನ್‌ರವರ ಹೇಳಿಕೆಯ ಆಧಾರದ ಮೇಲೆ):

a. ಅದು ಶಾಶ್ವತವಾದ ಯಾಜಕತ್ವ (ವ 23–24)

b. ಅದರ ರಕ್ಷಿಸುವ ಸಾಮರ್ಥ್ಯ (ಅದರ ಪರಿಣಾಮ) ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ (ವ 25). ಇಲ್ಲಿ ಉಪಯೋಗಿಸಲಾದ ಗ್ರೀಕ್ ಪದಪ್ರಯೋಗವು (ಕನ್ನಡ NIBV ಅನುವಾದದಲ್ಲಿದ್ದಂತೆ) 'ಸದಾಕಾಲವೂ' ಮತ್ತು (ಕನ್ನಡ JV ಅನುವಾದದಲ್ಲಿದ್ದಂತೆ) 'ಸಂಪೂರ್ಣವಾಗಿ' ಎಂಬ ಅರ್ಥವನ್ನು ಕೊಡುತ್ತದೆ.

c. ಇದು ನಿರಂತರವಾಗಿರುವ ಮತ್ತು ಪ್ರಸ್ತುತ ಸೇವೆಯಾಗಿದೆ (ವ 25). ಯೇಸು ಯಾವಾಗಲೂ ನಮಗಾಗಿ ವಿಜ್ಞಾಪನೆಗಳನ್ನು ಸಲ್ಲಿಸುತ್ತಾನೆ.

d. ಇದರಲ್ಲಿ ಪರಿಪೂರ್ಣವಾದ ಯಜ್ಞವಿದೆ (ವ 27–28): ಯೇಸು ತನ್ನನ್ನು ತಾನೇ ನಮ್ಮ ಪಾಪಗಳಿಗಾಗಿ ಒಂದೇ ಸಾರಿ ಸಮರ್ಪಿಸಿಕೊಂಡನು.

e. ಹಳೆ ಒಡಂಬಡಿಕೆಯ ಯಾಜಕತ್ವಕ್ಕೆ ಹೋಲಿಸುವಾಗ ಯೇಸು ತಾನೇ ಪಾಪರಹಿತನಾಗಿದ್ದಾನೆ (ವ 26).

11. ವಚನ 20–28 ರಲ್ಲಿ ನಾವು ಯೇಸುವಿನ ಮೂರು "'ಭಾವಚಿತ್ರಣಗಳನ್ನು' ಕಾಣುತ್ತೇವೆ. ಅವು ಯಾವವೆಂದರೆ:

a. ಉತ್ತಮ ಒಡಂಬಡಿಕೆಯ ಭರವಸೆಯನ್ನು ಕೊಡುವಾತನು (ವ 22)

b. ನಮ್ಮ ನಿತ್ಯವಾದ ಯಾಜಕನು (ವ 21, 24–25) ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಲು ಶಕ್ತನು ಮತ್ತು ಯಾವಾಗಲೂ ನಮಗೋಸ್ಕರ ವಿಜ್ಞಾಪನೆಗಳನ್ನು ಸಲ್ಲಿಸುವಾತನು.

c. ನಮ್ಮ ಶಾಶ್ವತವಾದ, ಪರಿಣಾಮಕಾರಿಯಾದ ಮತ್ತು ಪರಿಪೂರ್ಣವಾದ ಯಜ್ಞ (ವ 27).

# ಉತ್ತರಗಳು 11: ಕ್ರಿಸ್ತನ ದೇವದರ್ಶನ ಗುಡಾರ ಮತ್ತು ಉತ್ತಮವಾದ ಒಡಂಬಡಿಕೆ, 8:1–13

## ಪ್ರಶ್ನೆಗಳಿಗೆ ಉತ್ತರಗಳು

1. ಈ ಅಧ್ಯಾಯದ ಎರಡು ವಿಭಾಗಗಳು ಹೀಗಿವೆ:

   a. ಪರಲೋಕದಲ್ಲಿರುವ ದೇವಾಲಯ, ವ 1–5

   b. ಶ್ರೇಷ್ಠವಾದ ಒಡಂಬಡಿಕೆ, ವ 6–13

2. ಎರಡು ದೇವಾಲಯಗಳನ್ನು ಹೀಗೆ ವರ್ಣಿಸಲಾಗಿದೆ ಮತ್ತು ಭಿನ್ನವಾಗಿಸಲಾಗಿದೆ (ನಾಲ್ಕು ಮುಖ್ಯಾಂಶಗಳು):

   a. ದೇವದರ್ಶನ ಗುಡಾರದ ದೇವಾಲಯ (ಮತ್ತು ನಂತರದ ಯೆರೂಸಲೇಮಿನ ದೇವಾಲಯ):

      - ಇದು ಮನುಷ್ಯನಿಂದ ನಿರ್ಮಿತವಾಗಿದೆ (ವ 2)
      - ಇದು ನೈಜಸಂಗತಿಯ ಪ್ರತಿರೂಪವೂ ಛಾಯೆಯೂ ಆಗಿದೆ (ವ 5)
      - ಇದು ಭೂಲೋಕದಲ್ಲಿ ಸಿಕ್ಕುತ್ತದೆ (ವ 5)
      - ಇದು ಧರ್ಮಶಾಸ್ತ್ರದಲ್ಲಿ ಹೇಳಿದಂತೆ ಕಾಣಿಕೆಯನ್ನು ಸಮರ್ಪಿಸುವ ಮನುಷ್ಯನಿಂದ ಸೇವೆಯನ್ನು ಹೊಂದುತ್ತದೆ (ವ 4)

   b. ಯೇಸು ಸೇವೆ ಮಾಡುತ್ತಿರುವ ದೇವಾಲಯ

      - ಇದು ಕರ್ತನಿಂದ ನಿರ್ಮಿತವಾಗಿದೆ (ವ 2)
      - ಇದು ನೈಜಸಂಗತಿಯಾಗಿದೆ (ವ 5)
      - ಇದು ಪರಲೋಕದಲ್ಲಿ ಸಿಕ್ಕುತ್ತದೆ (ವ 1, 5)
      - ಇದು ತನ್ನನ್ನೇ ತಾನು ಸಮರ್ಪಿಸಿದ ಯೇಸುವಿನಿಂದ ಸೇವೆಯನ್ನು ಹೊಂದುತ್ತದೆ (ವ. 1–3).

3. ಈ ಅಧ್ಯಾಯದ ಮೊದಲಿನ ಐದು ವಚನಗಳು (8:1–5) ಮತ್ತೊಮ್ಮೆ ಯೇಸುವಿನ ಮೇಲೆ ಕೇಂದ್ರಿಕರಿಸಿವೆ. ಯೇಸುವಿನ ಈ ವಿಷಯದ ಕುರಿತು ನಾವು ಎರಡು ಅಂಶಗಳನ್ನು ಕಲಿಯುತ್ತೇವೆ:

   a. ಅವನು ಯಾರಾಗಿದ್ದಾನೆ: ಯೇಸು ಪರಲೋಕಕ್ಕೆ ಏರಿಹೋದ, ಉನ್ನತಸ್ಥಾನದಲ್ಲಿರುವ, ಮಹಿಮೆಯ ಮತ್ತು ಜಯವೀರನಾದ ಕರ್ತನಾಗಿದ್ದಾನೆ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಪದಪ್ರಯೋಗ "ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದ" ಇದರ ಅರ್ಥ ಆತನು ಇಂದು ಮತ್ತು ಎಂದೆಂದಿಗೂ ತನ್ನ ತಂದೆಯಾದ ದೇವರೊಂದಿಗೆ ಸರ್ವೋತ್ತಮ ಮತ್ತು ಅಧಿಕಾರದ ಸ್ಥಾನದಲ್ಲಿ ಇದ್ದಾನೆ.

ಆತನು ಪರಲೋಕದಲ್ಲಿ ‘ಮಹಾಯಾಜಕನಾಗಿದ್ದಾನೆ’, ಪರಲೋಕದ ‘ದೇವಾಲಯ’” ದೇವರ ನಿತ್ಯವಾದ ಸಾಮ್ರಾಜ್ಯವನ್ನು ಉಲ್ಲೇಖಿಸುತ್ತದೆ.

b. ಅವನು ಹಳೆ ಒಡಂಬಡಿಕೆಯ ಯಾಜಕರು ಮಾಡಿದಂತೆ ದೇವರ ನಿತ್ಯವಾದ ಸಾಮ್ರಾಜ್ಯದಲ್ಲಿ ‘ಮಹಾಯಾಜಕನಾಗಿ’ ಸೇವೆ ಮಾಡುವಾಗ ಏನು ಮಾಡುತ್ತಾನೆ:

- ಯಜ್ಞವನ್ನು ಅರ್ಪಿಸುತ್ತಾನೆ: ಯೇಸುವಿನ ಯಜ್ಞವು ಎಲ್ಲರಿಗೋಸ್ಕರ ಒಂದೇ ಸಾರಿ (7:27) ಕ್ರೂಜೆಯ ಮೇಲೆ ತನ್ನನ್ನು ತಾನು ಸಮರ್ಪಿಸುವುದರ ಮೂಲಕ ನೆರವೇರಿತು. ಆ ತ್ಯಾಗದ ಪರಿಣಾಮವಾಗಿ ಆತನನ್ನು ನಂಬುವರೆಲ್ಲರಿಗೂ ನಿತ್ಯಕಾಲಕ್ಕೂ ಇರುವ ಕ್ಷಮಾಪಣೆಯನ್ನು ತಂದನು.

- ಜನರಿಗಾಗಿ ಪ್ರಾರ್ಥಿಸುತ್ತಾನೆ: ಪರಲೋಕದ ದೇವಾಲಯದಲ್ಲಿರುವ ಮಹಿಮೆಯುಳ್ಳ ಯೇಸು ನಿರಂತರವಾಗಿ ನಮ್ಮ ಮಧ್ಯಸ್ತಗಾರನಾಗಿದ್ದಾನೆ (7:25). ಆತನು ತನ್ನ ಪವಿತ್ರಾತ್ಮನ ಮೂಲಕ ನಿರಂತರವಾಗಿ ನಮ್ಮೊಟ್ಟಿಗೆ ಇದ್ದಾನೆ, ನಮ್ಮನ್ನು ಬೆಂಬಲಿಸುತ್ತಾನೆ, ನಮ್ಮನ್ನು ಬಲಪಡಿಸುತ್ತಾನೆ, ನಮ್ಮೊಟ್ಟಿಗೆ ಮತ್ತು ನಮಗಾಗಿ ಬೇಡಿಕೊಳ್ಳುವವನಾಗಿದ್ದಾನೆ.

- ಜನರಿಗೆ ಮಾದರಿಯಾಗಿದ್ದಾನೆ: ಯೇಸು ನಮ್ಮ ಮಾದರಿಯಾಗಿದ್ದಾನೆ. ಆತನು ತನ್ನ ಇಹಲೋಕ ಜೀವಿತದಲ್ಲಿ ನಮ್ಮಂತೆಯೇ ಎಲ್ಲಾ ರೀತಿಯಿಂದ ಶೋಧನೆಗೆ ಗುರಿಯಾದನು, ಆದರೆ ಪಾಪ ಮಾತ್ರ ಮಾಡಲಿಲ್ಲ (4:15). ಆತನು ನೀತಿವಂತಿಕೆಯನ್ನು ಪ್ರೀತಿಸಿದನು ಮತ್ತು ಕೆಟ್ಟತನವನ್ನು ಹಗೆಮಾಡಿದನು (1:9). ಆತನು ನಮಗಾಗಿ ಮರಣವನ್ನು ಅನುಭವಿಸಿದನು (2:9). ಆತನು ಕಷ್ಟಾನುಭವದ ಮೂಲಕ ಪರಿಪೂರ್ಣನಾಗಿ ಮಾಡಲ್ಪಟ್ಟನು (2:10) ಮತ್ತು ತನ್ನ ಕಷ್ಟಾನುಭವದ ಮೂಲಕ ವಿಧೇಯತೆಯನ್ನು ಕಲಿತನು (5:8). ನಾವು ಪರಿಶುದ್ಧರಾಗಲಿಕ್ಕಾಗುವಂತೆ ಆತನು ಕಷ್ಟವನ್ನನುಭವಿಸಿದನು (13:12).

- ಬೋಧಿಸುತ್ತಾನೆ: ಯೇಸು ತನ್ನ ವಾಕ್ಯದ, ತನ್ನ ಮಾದರಿಯ ಮತ್ತು ಪವಿತ್ರಾತ್ಮನ ಪ್ರಸನ್ನತೆಯ ಮೂಲಕ ನಮಗೆ ಬೋಧಿಸುತ್ತಾನೆ (4:12).

- ಆದರೆ ಯೇಸುವಿನ ಸೇವೆಯು ಹಳೆಯ ಒಡಂಬಡಿಕೆಗಿಂತ ಶ್ರೇಷ್ಠವಾಗಿದೆ (8:6), ಯಾಕೆಂದರೆ ಹೊಸದಾದ ಒಡಂಬಡಿಕೆಯು ಹಳೆಯ ಒಡಂಬಡಿಕೆಗಿಂತ ಶ್ರೇಷ್ಠವಾಗಿದೆ. ಇದು ಅಧ್ಯಾಯ 8 ರ ಉಳಿದ ಭಾಗದ ವಿಷಯವಾಗಿದೆ.

4. ವ 6–9 ರಲ್ಲಿ ಹೊಸದಾದ ಒಡಂಬಡಿಕೆಯ ಅವಶ್ಯಕತೆಯ ಕುರಿತು ಈ ಕಾರಣಗಳನ್ನು ನೀಡಲಾಗಿದೆ:

a. ಮಧ್ಯಸ್ತಗಾರನು (ವ 6): ಸೀನಾಯಿ ಬೆಟ್ಟದ ಒಡಂಬಡಿಕೆಯ ಮಧ್ಯಸ್ತಗಾರನು ಮೋಶೆ, ಆತನು ಜನರಿಗೆ ದೇವರನ್ನು ಪ್ರತಿನಿಧಿಸಿದನು ಮತ್ತು ಜನರ ಪರವಾಗಿ ದೇವರನ್ನು ಬೇಡಿಕೊಂಡನು. ಹೊಸ ಒಡಂಬಡಿಕೆಯ ಮಧ್ಯಸ್ತಗಾರನು ಯೇಸು, “ಮೋಶೆಗಿಂತ ಯೇಸುವು ಹೆಚ್ಚಾದ ಮಾನಕ್ಕೆ ಯೋಗ್ಯನೆಂದೆಣಿಸಲ್ಪಟ್ಟಿದ್ದಾನೆ (3:3). ಆದರೆ ಯೇಸು

ಉತ್ತಮವಾದ ಒಡಂಬಡಿಕೆಯ "ಭರವಸೆ" ಸಹ ಆಗಿದ್ದಾನೆ (7:22 ಹಿಂದಿನ ಅಧ್ಯಯನವನ್ನು ನೋಡಿರಿ).

b. ಉತ್ತಮವಾದ ವಾಗ್ದಾನದ ಮೇಲೆ ಸ್ಥಾಪಿಸಿದ್ದಾನೆ (ವ 6); ಮುಂದಿನ ಪ್ರಶ್ನೆಯನ್ನು ನೋಡಿರಿ.

c. ಮೊದಲನೆಯದರಲ್ಲಿ ಕೊರತೆ ಕಂಡುಬಂದದ್ದರಿಂದ ಅದರ ಸ್ಥಳದಲ್ಲಿ ಇನ್ನೊಂದರ ಅವಶ್ಯಕತೆ ಉಂಟಾಯಿತು (ವ 7).

d. ಜನರು ಮೊದಲನೆಯದಕ್ಕೆ ನಂಬಿಗಸ್ತರಾಗದೇ ಹೋದದ್ದರಿಂದ ದೇವರು ಅವರಿಗೆ ವಿಮುಖನಾದನು – ಇದೇ ಮೊದಲನೆಯದರಲ್ಲಿದ್ದ ಕೊರತೆಯಾಗಿತ್ತು (ವ 9). ವಾಸ್ತವಿಕವಾಗಿ ಹೇಳಬೇಕಾದರೆ, ಜನರು ಸೀನಾಯಿ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಮತ್ತು ನಿಯಮಗಳನ್ನು ಸಹ ಪಾಲಿಸಲು ಅಸಮರ್ಥರಾಗಿದ್ದರು. ಆದುದರಿಂದ ಹೊಸದಾದ ಒಡಂಬಡಿಕೆಯ ಅವಶ್ಯಕತೆ ಬಂತು ಅದು ಜನರನ್ನು ನಂಬಿಗಸ್ತರಾಗಿರಲು ಸಾಧ್ಯಮಾಡಿಕೊಟ್ಟಿತು (ಮುಂದಿನ ಪ್ರಶ್ನೆಯನ್ನು ನೋಡಿರಿ).

5. ಇಬ್ರಿಯ ಗ್ರಂಥಕರ್ತನು ಯೆರೆಮೀಯ 31:31–34 ನ್ನು ಉಲ್ಲೇಖಿಸುತ್ತಾನೆ, ಅದು ಹೊಸದಾದ ಒಡಂಬಡಿಕೆಯ ಕುರಿತಾದ ಪ್ರವಾದನೆಯಾಗಿದೆ. ಅದು ನಾಲ್ಕು 'ವಾಗ್ದಾನಗಳನ್ನು' ಒಳಗೊಂಡಿದೆ (ಇಬ್ರಿಯ 8:6 ನ್ನು ಹೋಲಿಸಿರಿ). ಈ ವಾಗ್ದಾನಗಳು ಹೊಸದಾದ ಒಡಂಬಡಿಕೆಯನ್ನು ಹಳೆಯ ಒಡಂಬಡಿಕೆಗಿಂತ ಶ್ರೇಷ್ಠವಾಗಿ ಮಾಡುತ್ತವೆ (ವ 10–12):

a. ದೇವರ ಧರ್ಮಶಾಸ್ತ್ರವು ಕೇವಲ ಕಲ್ಲಿನ ಹಲಿಗೆಯ ಮೇಲಲ್ಲ ಜನರ ಹೃದಯ ಮತ್ತು ಮನಸ್ಸಿನಲ್ಲಿರುವುದು (ವ 10).

b. ದೇವರು ತನ್ನ ಜನರ ದೇವರಾಗಿರುವನು ಮತ್ತು ಆತನ ಜನರು ಆತನಿಗೆ ಸಂಬಂಧಿಸಿದವರಾಗಿದ್ದರು (10). ಆದುದರಿಂದ ಅವರು ಪರಸ್ಪರ ನಿಕಟವಾದ ಸಂಬಂಧವುಳ್ಳವರಾಗುವರು.

c. ದೇವಜನರು ನಿಜವಾಗಿಯೂ ಕರ್ತನನ್ನು ಅರಿತವರಾಗುವರು (ವ 11).

d. ಅದು ಕ್ಷಮೆಯನ್ನು ತರುವಂತದ್ದಾಗಿತ್ತು ಮತ್ತು ಜನರ ಪಾಪಗಳನ್ನು ಪುನಃ ಎಂದಿಗೂ ನೆನಪಿಗೆ ತರುವಂತದಲ್ಲ (ವ 12).

6. 'ಒಡಂಬಡಿಕೆಯು' ಎರಡು ಪಂಗಡಗಳ ಮಧ್ಯದಲ್ಲಿರುವ ಒಪ್ಪಂದವಾಗಿದೆ. ಆದುದರಿಂದ ಹೊಸದಾದ ಒಡಂಬಡಿಕೆಯ (ವ 8–12) ಕುರಿತು ಗಮನಾರ್ಹವಾದ ಸಂಗತಿಯೇನೆಂದರೆ, (ಹಳೆ ಒಡಂಬಡಿಕೆಯಲ್ಲಿ ಮಾಡಿದಂತೆಯೇ) ಅದರ ಮುಂದಾಳತ್ವವನ್ನು ದೇವರು ವಹಿಸಿದ್ದು ಮಾತ್ರವಲ್ಲದೆ, ಒಡಂಬಡಿಕೆಯಲ್ಲಿನ ಜನರ ಪಾತ್ರವನ್ನೂ ತಾನೇ ನೆರವೇರಿಸುವೆನೆಂದು ದೇವರು ವಾಗ್ದಾನ ಮಾಡುತ್ತಾನೆ: ಜನರು ತನ್ನ ಧರ್ಮಶಾಸ್ತವನ್ನು ನಿಶ್ಚಯವಾಗಿಯೂ ಅನುಸರಿಸುವಂತೆ ದೇವರು ಅವರ ಹೃದಯ ಮತ್ತು ಮನಸ್ಸಿನ ಮೇಲೆ ಬರೆಯುವನು. ಆತನು ಅವರ ದುಷ್ಕೃತ್ಯಗಳನ್ನೂ ಸಹ ಕ್ಷಮಿಸುವನು.

7. ವಚನ 13 ರಲ್ಲಿ ಇಬ್ರಿಯ ಗ್ರಂಥಕರ್ತನು (ಸಿನಾಯಿ ಒಡಂಬಡಿಕೆಯನ್ನು ಉಲ್ಲೇಖಿಸುತ್ತಾ) ಹಿಂದಿನ ಒಡಂಬಡಿಕೆಯನ್ನು ದೇವರು ಅಪ್ರಚಲಿತವಾಗಿ ಮಾಡಿದನು ಎಂದು ಹೇಳುತ್ತಾನೆ. ಇದರ

ಅರ್ಥ ಅದು ಕಾಲಾವಧಿಯನ್ನು ಮೀರಿದ್ದು ಅದರ "ಸ್ಥಳದಲ್ಲಿ ಹೊಸದಾದ" ಒಡಂಬಡಿಕೆಯನ್ನು ತರುವ ಅವಶ್ಯವಿದೆ. ಎರಡು ಪದಪ್ರಯೋಗಗಳ ಸೇರ್ಪಡೆಯನ್ನು ಈ ಸಂಗತಿಗೆ ಒತ್ತು ನೀಡಲು ಉಪಯೋಗಿಸಲಾಗಿದೆ. ಹಿಂದಿನ ಒಡಂಬಡಿಕೆಯು 'ಹಳೆಯದು'" ಮತ್ತು 'ಬೇಗನೇ ಕಾಣದಾಗುವಂತದ್ದು'.

ರೇಮಂಡ್ ಬ್ರೌನ್‌ರವರು ಹೊಸ ಒಡಂಬಡಿಕೆಯ ಕುರಿತು ಈ ಐದು ಅಂಶಗಳನ್ನು ತಿಳಿಸುತ್ತಾರೆ (ಪುಟ 150–151):

a. ಅದು ಸಂಧಾನವನ್ನು ತರುತ್ತದೆ: ಯೆರೆಮೀಯನ ಪ್ರವಾದನೆಯ ಸಮಯದಲ್ಲಿ, ಇಸ್ರಾಯೇಲ್ಯರು ನೂರಾರು ವರ್ಷಗಳವರೆಗೆ ಉತ್ತರ (ಇಸ್ರಾಯೇಲ) ಮತ್ತು ದಕ್ಷಿಣ (ಯೆಹೂದ) ಎಂದು ವಿಭಾಗವಾಗಿದ್ದರು. ಆದರೆ ಹೊಸದಾದ ಒಡಂಬಡಿಕೆಯು ಇಸ್ರಾಯೇಲ್ ಮತ್ತು ಯೆಹೂದ ಎರಡರ ಸಂಗಡಲೂ ಇದೆ ಎಂದು ದೇವರು ವಾಗ್ದಾನ ಮಾಡುತ್ತಾನೆ (ವ 8).

b. ಅದು ಆಂತರಂಗಕ್ಕೆ ಸಂಬಂಧಿಸಿದ್ದು (ಸಿನಾಯಿ ಒಡಂಬಡಿಕೆಯು ಬಹಿರಂಗವಾಗಿರುವಂತದ್ದು): ಹೊಸದು ನಮ್ಮೊಂದಿಗೆ ಇದೆ, ನಮ್ಮ ಅಂತರಂಗದಲ್ಲಿದೆ. ಪರಿಣಾಮವಾಗಿ, ದೇವಜನರು ಈಗ ಆತನ ಆಜ್ಞೆಗಳಿಗೆ ವಿಧೇಯರಾಗಲು ಶಕ್ತರಾಗಿದ್ದಾರೆ (ವ 10).

c. ಅದು ಜಾಗತೀಕವಾದದ್ದು: 'ಎಲ್ಲರೂ ನನ್ನನ್ನು ತಿಳಿದುಕೊಳ್ಳುವರು' (ವ 11). ಹಿಂದಿನ ಒಡಂಬಡಿಕೆಯು ಕೇವಲ ಯೆಹೂದ್ಯರಿಗೆ ಮಾತ್ರ ಸೀಮಿತವಾಗಿತ್ತು.

d. ಅದು ಔದಾರ್ಯತೆಯುಳ್ಳದ್ದು: 'ನಾನು ಅವರ ದುಷ್ಕೃತ್ಯಗಳನ್ನು ಕ್ಷಮಿಸುತ್ತೇನೆ' (ವ 12). ಹಿಂದಿನ ಒಡಂಬಡಿಕೆ ಎಲ್ಲರಿಗೂ ಕ್ಷಮೆಯನ್ನು ಒದಗಿಸಲಿಲ್ಲ.

e. ಅದು ಭರವಸೆಯುಳ್ಳದ್ದು: 'ಹೊಸದಾದ ಒಡಂಬಡಿಕೆಯು' ತನ್ನ ಬಲದಲ್ಲಿ ನಿರ್ಬಂಧವಿಲ್ಲದ್ದು, ಅವಧಿಯಲ್ಲಿ ನಿತ್ಯವಾದದ್ದು ಮತ್ತು ಪ್ರಯೋಜನೀಯತೆಯಲ್ಲಿ ಪೂರ್ಣವಾದದ್ದು. ದೇವರು ತನ್ನ ಜನರಿಗೆ ನಿಶ್ಚಿತವಾದ ವಾಗ್ದಾನಗಳನ್ನು ಮಾಡುತ್ತಾನೆ ಮತ್ತು ಅವರ ಪಾಪಗಳನ್ನು ಅಳಿಸಿ ಬಿಡುವುದಕ್ಕಾಗಿ ತನ್ನನ್ನು ತಾನು ಅದರ ಬಂಧನದಲ್ಲಿರಿಸಿಕೊಳ್ಳುತ್ತಾನೆ. ಆದುದರಿಂದ ಮನುಷ್ಯನು ಈಗ ಭರವಸದಿಂದಿರಬಹುದು.

8. ಇಬ್ರಿಯರನ್ನು ಹೊರತುಪಡಿಸಿ, 'ಹೊಸದಾದ ಒಡಂಬಡಿಕೆ' ಎಂಬ ಹೇಳಿಕೆವು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಉಪಯೋಗಿಸಲ್ಪಟ್ಟಿದೆ:

a. ಲೂಕ 22:20: ಯೇಸು ತನ್ನ ಶಿಷ್ಯರೊಂದಿಗೆ ಕೊನೆಯ ಭೋಜನವನ್ನು ಆಚರಿಸುತ್ತಿರುವ ಸನ್ನಿವೇಶವಾಗಿದೆ: *ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ."* ಪಾತ್ರೆಯು ಕ್ರೂಜೆಯ ಮೇಲಿನ ಯೇಸುವಿನ ಮರಣದ ಸಂಕೇತವಾಗಿದೆ.

b. 1 ಕೊರಿಂಥ 11:25: ಸಭೆಯಲ್ಲಿ 'ಪವಿತ್ರ ಭೋಜನದ' ಕುರಿತು ಪೌಲನ ಬೋಧನೆಯ ಸನ್ನಿವೇಶವಾಗಿದೆ. ಆತನು ಯೇಸುವನ್ನು ಉಲ್ಲೇಖಿಸುತ್ತಾನೆ (ಹಿಂದಿನ ಅಂಶವನ್ನು ನೋಡಿರಿ)

c. 2 ಕೊರಿಂಥ 3:6: ಸನ್ನಿವೇಶ ಕ್ರೈಸ್ತ ಸೇವೆ. ಇದು ಧರ್ಮಶಾಸ್ತ್ರದ್ದಲ್ಲ ಬದಲಾಗಿ ಪವಿತ್ರಾತ್ಮನ ಒಡಂಬಡಿಕೆಯ ಸೇವೆಯಾಗಿದೆ.

9. ಗಲಾತ್ಯ 3:3–14 ನ್ನು 'ಶ್ರೇಷ್ಠ ಒಡಂಬಡಿಕೆ' ಎಂಬ ಈ ಅಧ್ಯಯನದ ಬೆಳಕಿನಲ್ಲಿ ಹೀಗೆ ತಿಳಿದುಕೊಳ್ಳಬೇಕು:

   a. ಹಳೆ ಒಡಂಬಡಿಕೆಯಲ್ಲಿ ದೇವರು ನೋಹನೊಂದಿಗೆ (ಆದಿಕಾಂಡ 6:18; 9:9–17), ಅಬ್ರಹಾಮ/ಅಬ್ರಹಾಮನೊಂದಿಗೆ (ಆದಿಕಾಡ 15:18) ಸೀನಾಯಿ ಬೆಟ್ಟದಲ್ಲಿ ಮೋಶೆಯೊಂದಿಗೆ (ವಿಮೋಚನಕಾಂಡ 19:5) ಮತ್ತು ದಾವೀದನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡನು (2 ಸಮುವೇಲ 23:5).

   b. ಗಲಾತ್ಯ 3 ರಲ್ಲಿ, ಪೌಲನು ಇವುಗಳಲ್ಲಿ ಎರಡು ಒಡಂಬಡಿಕೆಗಳ ಕುರಿತಾಗಿ ಬರೆಯುತ್ತಾನೆ: ಒಂದು ಅಬ್ರಹಾಮ/ಅಬ್ರಹಾಮನೊಟ್ಟಿಗೆ (ವ 3–9, 14) ಮತ್ತು ಇನ್ನೊಂದು ಮೋಶೆಯೊಟ್ಟಿಗೆ (ವ 10–13)

   c. ಹೊಸದಾದ ಒಡಂಬಡಿಕೆ ('ಶ್ರೇಷ್ಠವಾದ ಒಡಂಬಡಿಕೆ') ಸೀನಾಯಿ ಒಡಂಬಡಿಕೆಯ ಸ್ಥಾನವನ್ನು ತೆಗೆದುಕೊಂಡಿತು. ಸಿನಾಯಿ ಒಡಂಬಡಿಕೆಯನ್ನು 'ಹಳತದು', 'ಹಳೆಯದ್ದು'" ಮತ್ತು 'ಬೇಗನೇ ಕಾಣದಾಗುವಂತದ್ದು' ಎಂದು ವರ್ಣಿಸಲಾಗಿದೆ. ಅಬ್ರಹಾಮನೊಂದಿಗೆ ದೇವರ ಒಡಂಬಡಿಕೆಯು ಇಂದಿಗೂ ಇದೆ (ಇಬ್ರಿಯ 6:13–18; ರೋಮಾ 4:13–22; ಎಫೆಸ 2:12).

# ಉತ್ತರಗಳು 12: ಎರಡು ದೇವದರ್ಶನ ಗುಡಾರಗಳು, 9:1–22

## ಪ್ರಶ್ನೆಗಳಿಗೆ ಉತ್ತರಗಳು:

1. ಈ ವೇದಭಾಗವನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು:

    a. ಮೊದಲಿನ ಒಡಂಬಡಿಕೆಯ ದೇವಾಲಯ, ವ 1–10

    b. ಹೊಸದಾದ ಒಡಂಬಡಿಕೆಯ ದೇವಾಲಯ, ವ 11–22

2. ಇವು ಮೊದಲನೆಯ ಒಡಂಬಡಿಕೆಯ (ಅಂದರೆ ಸಿನಾಯಿ ಒಡಂಬಡಿಕೆಯ) ದೇವದರ್ಶನ ಗುಡಾರದ ಮೂರು ಬಲಹೀನತೆಗಳು, (ವ 6–10):

    a. ಅತೀ ಪರಿಶುದ್ಧ ಸ್ಥಳದ ಪ್ರವೇಶಕ್ಕೆ ಪರಿಮಿತಿಯಿತ್ತು: ಅದನ್ನು ಮಹಾಯಾಜಕನು ಮತ್ತು ವರ್ಷದಲ್ಲಿ ಒಂದು ಬಾರಿ ಮಾತ್ರ ಪ್ರವೇಶಿಸಬಹುದಿತ್ತು (ಅಂದರೆ ಪ್ರಾಯಶ್ಚಿತ್ತ ಯಜ್ಞವನ್ನು ಸಮರ್ಪಿಸುವ ದಿನದಂದು), ವ 7

    b. ಇದರಲ್ಲಿ ಅರ್ಪಿಸುವ ಕಾಣಿಕೆ ಮತ್ತು ಯಜ್ಞಗಳು ಆರಾಧಕರ ಮನಸ್ಸಾಕ್ಷಿಯನ್ನು ಶುದ್ಧಿಸುತ್ತಿರಲಿಲ್ಲ (ವ 9), ಯಾಕೆಂದರೆ ಅನೇಕ ಪಾಪಗಳು ಕ್ಷಮಿಸಲ್ಪಡುತ್ತಿರಲಿಲ್ಲ.

    c. ಅದರ ಯಜ್ಞದ ಪದ್ಧತಿಯು ಸಾಂಪ್ರದಾಯಿಕ ಶುದ್ಧತೆಗೆ ಮಾತ್ರ ಸೀಮಿತವಾಗಿತ್ತು (ವ 10). ಉದ್ದೇಶಪೂರ್ವಕವಾಗಿ ಮಾಡಿದ ಪಾಪ ಮತ್ತು ಅಪರಾಧಗಳಿಗಾಗಿ ಯಾವುದೇ ಪ್ರಾಯಶ್ಚಿತ್ತ ಯಜ್ಞವು ಅರ್ಪಿಸಲಾಗುತ್ತಿರಲಿಲ್ಲ.

3. ವಚನ 11 ರಲ್ಲಿರುವ ಈ ಪದಪ್ರಯೋಗಗಳನ್ನು ಹೀಗೆ ವಿವರಿಸಬಹುದು:

    a. ಇಲ್ಲಿ ಈಗಾಗಲೇ ಇರುವ ಉತ್ತಮವಾದ ಸಂಗತಿಗಳು: ಈ ಪದಪ್ರಯೋಗವು ಹೊಸದಾದ ಒಡಂಬಡಿಕೆಯನ್ನು ಅದರ ಹೊಸ ಯಾಜಕತ್ವ, ಹೊಸ ದೇವದರ್ಶನಗುಡಾರ ಮತ್ತು ಕ್ರಿಸ್ತನು ಪರಿಚಯಿಸಿದ ಹೊಸ ಯಜ್ಞವನ್ನು ಉಲ್ಲೇಖಿಸುತ್ತದೆ.

    b. ಶ್ರೇಷ್ಠವಾದ ಮತ್ತು ಹೆಚ್ಚು ಪರಿಪೂರ್ಣವಾದ ದೇವದರ್ಶನ ಗುಡಾರ: ಈ ಪದಪ್ರಯೋಗವು ಉನ್ನತಸ್ಥಾನಕ್ಕೇರಿದ ಮತ್ತು ಮಹಿಮೆ ಹೊಂದಿದ ಯೇಸು ತಂದೆಯೊಡನೆ ಪರಲೋಕದಲ್ಲಿ ಇರುವದನ್ನು ಉಲ್ಲೇಖಿಸುತ್ತದೆ. ಇದು ಹೊಸ ಒಡಂಬಡಿಕೆಯ ದೇವದರ್ಶನ ಗುಡಾರವಾಗಿದೆ.

    c. ಇದು ಮಾನವ ನಿರ್ಮಿತವಲ್ಲ, ಸೃಷ್ಟಿಯ ಭಾಗವಲ್ಲ: ಈ ಪದಪ್ರಯೋಗವು ದೇವರ ಪ್ರಸನ್ನತೆಯಿರುವ ಹಾಗೂ ಯೇಸು ಮಹಾಯಾಜಕನಾಗಿರುವ ಪರಲೋಕದ ದೇವಾಲಯವನ್ನು ಉಲ್ಲೇಖಿಸುತ್ತದೆ. ಈ ದೇವಾಲಯವು ಮಾನವ ನಿರ್ಮಿತವಾದದ್ದಲ್ಲ ಮತ್ತು ಇದು ಈ ಸೃಷ್ಟಿಯ ಒಂದು ಭಾಗವೂ ಅಲ್ಲ. ದೇವದರ್ಶನ ಗುಡಾರವು ಇಹಲೋಕದ ದೇವದರ್ಶನ ಗುಡಾರಕ್ಕಿಂತ ಶ್ರೇಷ್ಠವಾದದ್ದು ಮತ್ತು ಹೆಚ್ಚು ಪರಿಪೂರ್ಣವಾದದ್ದು ಆಗಿದೆ.

4. ಎರಡು ದೇವದರ್ಶನದ ಗುಡಾರಗಳು ವ 12 ರಲ್ಲಿ ಹೀಗೆ ವಿಭಿನ್ನವಾಗಿವೆ, ಆದರೆ ಕೆಲವೊಂದು ಭಿನ್ನತೆಗಳನ್ನು ವ್ಯಕ್ತಪಡಿಸಿಲ್ಲವಾದರೂ ಅವುಗಲನ್ನು ಸೂಚಿಸಲಾಗಿದೆ:

   a. ಪ್ರವೇಶದ ಮಾರ್ಗ:

      - ಮೊದಲಿನ ದೇವದರ್ಶನ ಗುಡಾರ: ಪ್ರವೇಶಕ್ಕೆ ಇರುವ ಮಾರ್ಗ ಪ್ರಾಣಿಗಳ ಯಜ್ಞದ ರಕ್ತದ ಮೂಲಕ.
      - ಹೊಸ ದೇವದರ್ಶನ ಗುಡಾರ: ಪ್ರವೇಶಕ್ಕೆ ಮಾರ್ಗ ಯೇಸುವಿನ ರಕ್ತದ ಮೂಲಕ.

   b. ಪ್ರವೇಶಕ್ಕೆ ಅವಕಾಶಗಳು:

      - ಮೊದಲಿನ ದೇವದರ್ಶನ ಗುಡಾರ: ವರ್ಷಕ್ಕೆ ಒಂದು ಸಾರಿ ಮಾತ್ರ ಪ್ರಾಯಶ್ಚಿತ್ತ ಯಜ್ಞದ ದಿನದಂದು ಪ್ರವೇಶ
      - ಹೊಸ ದೇವದರ್ಶನ ಗುಡಾರ: ಯೇಸು ಅದನ್ನು ಒಂದೇ ಬಾರಿ ಪ್ರವೇಶಿಸಿದನು.

   c. ಮಹಾಯಾಜಕ:

      - ಮೊದಲಿನ ದೇವದರ್ಶನ ಗುಡಾರ: ಮಹಾಯಾಜಕನು ಲೇವಿ ಕುಲದವನು ಮತ್ತು ಆರೋನನ ಮನೆತನದವನು.
      - ಹೊಸ ದೇವದರ್ಶನ ಗುಡಾರ: ಯೇಸು ‘ಮೆಲ್ಕಿಜೆದೇಕನ ತರಹದ’ಮಹಾಯಾಜಕನು.

   d. ಯಜ್ಞ ಬಲಿ:

      - ಮೊದಲಿನ ದೇವದರ್ಶನ ಗುಡಾರ: ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುತ್ತಿದ್ದರು.
      - ಹೊಸ ದೇವದರ್ಶನ ಗುಡಾರ: ಯಜ್ಞದ ಕುರಿಯಾದ ಯೇಸು ತನ್ನ ಜೀವಿತವನ್ನೇ ಅರ್ಪಿಸಿದನು.

   e. ಯಜ್ಞದ ಕಾರ್ಯ ಸಮರ್ಥತೆ:

      - ಮೊದಲಿನ ದೇವದರ್ಶನ ಗುಡಾರ: ಇದರ ಯಜ್ಞವು ಮಿತಿಯಾದ ವಿಶಾಲತೆಯನ್ನು (ಮುಖ್ಯವಾಗಿ ಸಾಂಪ್ರದಾಯಿಕ ಶುದ್ಧತೆಗೆ ಸೀಮಿತವಾಗಿತ್ತು) ಮತ್ತು ಕಾಲಾವಧಿಯನ್ನು ಹೊಂದಿತ್ತು (ಪ್ರತಿ ವರ್ಷ ಪುನರಾವರ್ತನೆಯಾಗಬೇಕಿತ್ತು).
      - ಹೊಸ ದೇವದರ್ಶನ ಗುಡಾರ: ಇದರ ಯಜ್ಞ ಪರಿಪೂರ್ಣವಾಗಿತ್ತು; ಅದೂ ನಿತ್ಯಕಾಲಕ್ಕೂ ಯೋಗ್ಯವಾಗಿತ್ತು; ಇದು ವಿಮೋಚನೆಯನ್ನು ನೀಡುವಂತದ್ದಾಗಿತ್ತು; ಇದು ಪಾಪ ಮತ್ತು ಅಪರಾಧವನ್ನು ತೆಗೆದುಹಾಕುವಂತದ್ದಾಗಿತ್ತು; ಮತ್ತು ಇದು ಶುದ್ಧವಾದ ಮನಸಾಕ್ಷಿಯನ್ನು ನೀಡುವಂತದ್ದಾಗಿತ್ತು.

5. ‘ಉತ್ತಮವಾದ ಒಡಂಬಡಿಕೆ’ ಪರಿಣಾಮಗಳು ಮೂರು ಮುಖ್ಯಾಂಶಗಳಲ್ಲಿ (ವ 11–14); ರೇಮಂಡ್ ಬ್ರೌನ್‌ರವರಿಂದ (ಪುಟ 155–159):

   a. ಇದು ನಮಗಾಗಿ ವಿಮೋಚನೆಯನ್ನು ನೀಡುತ್ತದೆ, ವ 12

   b. ಇದು ನಮ್ಮ ಮನಸಾಕ್ಷಿಯನ್ನು ಶುದ್ಧಪಡಿಸುತ್ತದೆ, ವ14

   c. ಅದು ನಮ್ಮ ಸೇವೆಯನ್ನು ಶುದ್ಧೀಕರಿಸುತ್ತದೆ, ವ 14

6. ವಚನ 15 ನ್ನು ಹೀಗೆ ವಿವರಿಸಬಹುದು:

   a. ‘ಈ ಕಾರಣಕ್ಕಾಗಿ’ ಎಂಬುದು ಹಿಂದಿನ ಪ್ರಶ್ನೆಯಲ್ಲಿ ಹೇಳಿದ ಮೂರು ಕಾರಣಗಳನ್ನು ಉಲ್ಲೇಖಿಸುತ್ತದೆ.

   b. “ಕ್ರಿಸ್ತನು ಹೊಸ ಒಡಂಬಡಿಕೆಯ ಮಧ್ಯಸ್ತಗಾರನು” ಎಂಬುದರ ಅರ್ಥ ಈ ಎರಡು ಸಂಗತಿಗಳಾಗಿವೆ.

      - ಮೊದಲನೆಯದು, ಕ್ರೂಜೆಯ ಮೇಲೆ ಆತನ ಮರಣದ ಮೂಲಕ ಹೊಸ ಒಡಂಬಡಿಕೆಯು ಸ್ಥಾಪಿತವಾಯಿತು (ಲೂಕ 22:20; ಇಬ್ರಿಯ 9:12).

      - ಎರಡನೆಯದು, ಆತನು ಆ ಉತ್ತಮವಾದ ಒಡಂಬಡಿಕೆಯ ‘ಹೊಣೆಗಾರನಾಗಿದ್ದಾನೆ’ (7:22).

   c. ‘ಹೊಸದಾದ ಒಡಂಬಡಿಕೆಯು’ ಮೊದಲನೆ ಒಡಂಬಡಿಕೆಯ (ಸೀನಾಯಿ ಒಡಂಬಡಿಕೆಯನ್ನು) ಸ್ಥಾನವನ್ನು ತೆಗೆದುಕೊಂಡಿದೆ. ಮುಂಚಿನದ್ದನ್ನು ದೇವರು ಹಳತಾಗಿಮಾಡಿದ್ದಾನೆ (8:13).

   d. ‘ಕರೆಯಲ್ಪಟ್ಟವರು’ ಎಂಬುದು ಯೇಸುವನ್ನು ಅಂಗೀಕರಿಸಿಕೊಂಡಿರುವ ಎಲ್ಲಾ ವಿಶ್ವಾಸಿಗಳನ್ನು ಉಲ್ಲೇಖಿಸುತ್ತದೆ.

   e. ‘ವಾಗ್ದಾನವಾದ ನಿತ್ಯಬಾಧ್ಯತೆಯನ್ನು ಸ್ವೀಕರಿಸುವಂತೆ’: ಎಲ್ಲಾ ವಿಶ್ವಾಸಿಗಳು ಹೊಂದಿಕೊಳ್ಳುವ ಬಾಧ್ಯತೆಯು ಏನೆಂದರೆ ದೇವರೊಂದಿಗೆ ಆತನ ಪರಲೋಕರಾಜ್ಯದಲ್ಲಿ ನಿತ್ಯವಾಗಿ ಜೀವಿಸುವುದು.

   f. ‘ಅವರನ್ನು ಪಾಪದಿಂದ ವಿಮೋಚಿಸಲು ಆತನು ಆಗಲೇ ಈಡಾಗಿ’: ಯೇಸುವಿನ ಮರಣವು ಎಲ್ಲಾ ವಿಶ್ವಾಸಿಗಳ ವಿಮೋಚನೆಗಾಗಿ ತೆತ್ತ ಬೆಲೆಯಾಗಿದೆ. ನಾವು ಯೇಸುವನ್ನು ನಮ್ಮ ಸ್ವಂತ ರಕ್ಷಕನೆಂದು ಅಂಗೀಕರಿಸುವಾಗ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ. ನಾವು ಪಾಪ ಮತ್ತು ಮರಣದ ಬಂಧನದಿಂದ ಮುಕ್ತರಾಗುತ್ತೇವೆ. (ರೋಮಾ 6:18, 22; 8:2; ಪ್ರಕಟನೆ 1:5)

   g. ಮೊದಲನೆಯ ಒಡಂಬಡಿಕೆಯ ‘ಅಧೀನತೆಯಲ್ಲಿ ಮಾಡಿದ ಪಾಪಗಳಿಂದ’: ಮೊದಲನೆಯ ಒಡಂಬಡಿಕೆಯು ಹಿಂದಿನ ಒಡಂಬಡಿಕೆಯನ್ನು (ಸೀನಾಯಿ ಒಡಂಬಡಿಕೆಯನ್ನು) ಉಲ್ಲೇಖಿಸುತ್ತದೆ, ಒಬ್ಬ ಮನುಷ್ಯನನ್ನು ಪಾಪದಿಂದ ಬಿಡುಗಡೆಗೊಳಿಸಲು ಅದಕ್ಕೆ ಸಾಧ್ಯವಾಗಲಿಲ್ಲ (9:10).

7. ವಚನ 16–17 ರಲ್ಲಿರುವ ರೂಪಕಾಲಂಕಾರದ ಉದಾಹರಣೆಯನ್ನು ಧರ್ಮಶಾಸ್ತ್ರದ ಕ್ಷೇತ್ರದಿಂದ ತೆಗೆದುಕೊಳ್ಳಲಾಗಿದೆ. ಇದು ಒಬ್ಬ ಮನುಷ್ಯನ ಮರಣಾನಂತರ ಆತನ ಆಸ್ತಿ ಏನಾಗುತ್ತದೆ ಎಂಬುದನ್ನು ನಿರ್ದೇಶಿಸುವ ಒಂದು ಕಾನೂನುಬದ್ಧವಾದ ದಸ್ತಾವೇಜಾಗಿದೆ. ಈ ಉದಾಹರಣೆಯ ಮುಖ್ಯ ಅಂಶವು ಯೇಸುವಿನ ಮರಣವು 'ವಾಗ್ದಾನವಾಗಿದ್ದ ನಿತ್ಯ ಬಾಧ್ಯತೆಯನ್ನು' (ವ 15) ಆತನ ವಾರಸುದಾರರಿಗೆ, ಅಂದರೆ ವಿಶ್ವಾಸಿಗಳಿಗೆ ಲಭ್ಯವಾಗುವಂತೆ ಮಾಡುತ್ತದೆ ಎಂಬುದಾಗಿದೆ. 'ಒಡಂಬಡಿಕೆ' ಎಂಬುದಕ್ಕೆ ಬಳಸಲಾಗಿರುವ ಗ್ರೀಕ್ ಪದವು 'ಮರಣಶಾಸನ' ಎಂಬ ಅರ್ಥವನ್ನು ಸಹ ಕೊಡುತ್ತದೆ.

8. ವಚನ 18–22 ರಲ್ಲಿ ಎರಡು ಹಳೆ ಒಡಂಬಡಿಕೆಯ ನಿದರ್ಶನಗಳಿವೆ ಇವುಗಳನ್ನು ಕೊನೆಯ ವಚನದಲ್ಲಿ ಸಂಕ್ಷಿಪ್ತಗೊಳಿಸಲಾಗಿದೆ, ಅಲ್ಲಿ ಕಂಡುಬರುವ ಮುಖ್ಯವಾದ ಪದವು 'ರಕ್ತದಿಂದ' ಎಂಬುದಾಗಿದೆ. (ಒಂದಲ್ಲ!) ಎರಡು ಉದಾಹರಣೆಗಳು ಯಾವವೆಂದರೆ:

   a. ಒಡಂಬಡಿಕೆಗಳು (ಹಳೆಯದು ಮತ್ತು ಹೊಸದು ಕೂಡಾ) ರಕ್ತದ ಮೂಲಕ ಕಾರ್ಯರೂಪದಲ್ಲಿ ತರಲಾಗಿದೆ (ಪ್ರಮಾಣಿಕರಿಸಲಾಗಿದೆ ಅಥವಾ ಪ್ರಾರಂಭಿಸಲಾಗಿದೆ) (ವ 18–20). ಮೋಶೆಯು ಜನರ ಮೇಲೆ ರಕ್ತವನ್ನು ಪ್ರೋಕ್ಷಿಸಿದಾಗ ಅವರು ಒಡಂಡಿಕೆಯ ಜನರಾದರು. (ವಿಮೋಚನಕಾಂಡ 24:6–8; ನ್ನು 1 ಪೇತ್ರ 1:2 ರೊಂದಿಗೆ ಹೋಲಿಸಿರಿ) ಯೇಸು ಕೊನೆಯ ಭೋಜನದಲ್ಲಿ ಪಾತ್ರೆಯನ್ನು ತೆಗೆದುಕೊಳ್ಳುವಾಗ ಆತನು ಹೇಳಿದ್ದು 'ಇದು ಒಡಂಬಡಿಕೆಯ ರಕ್ತ ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ' (ಮತ್ತಾಯ 26:28).

   b. ದೇವಾಲಯಗಳು ರಕ್ತದ ಮೂಲಕ ಶುದ್ಧೀಕರಿಸಲ್ಪಡುತ್ತಿತ್ತು (ವ21; ವಿಮೋಚನಕಾಂಡ 24:6; ಯಾಜಕಕಾಂಡ 8:15, 19; 16:14–16) ಹಳೆಯ ಒಡಂಬಡಿಕೆಯ ಅಡಿಯಲ್ಲಿ ಯಾವುದೂ ರಕ್ತದ ಗುರುತಿಲ್ಲದೇ ಶುದ್ಧವೆಂದು ಎಣಿಸಲ್ಪಡುತ್ತಿರಲಿಲ್ಲ. ಆದುದರಿಂದ ಇಬ್ರಿಯ ಗ್ರಂಥಕರ್ತನು ಇದನ್ನು ಆತ್ಮಿಕ ಜೀವಿತದ ವಿಧ ಎಂದು ತಿಳಿದುಕೊಳ್ಳುತ್ತಾನೆ. ಯೇಸುವಿನ ತ್ಯಾಗಪೂರ್ವಕವಾದ ಮರಣ, ಕ್ರಿಸ್ತನ ರಕ್ತದ ಸುರಿಯುವಿಕೆ, ಪಾಪಗಳ ಕ್ಷಮಾಪಣೆಯ ಶರತ್ತುಗಳಾಗಿವೆ (ವ 22).

ಆಧುನಿಕ ಲೋಕದಲ್ಲಿ "ಮರಣಶಾಸನ ಮತ್ತು ಉಯಿಲು" ಅತ್ಯಂತ ಪ್ರಾಮುಖ್ಯವಾದ ಕಾನೂನಿನ ದಸ್ತಾವೇಜಾಗಿದೆ.



# ಉತ್ತರಗಳು 13: ಕ್ರಿಸ್ತನ ಪರಿಪೂರ್ಣವಾದ ಬಲಿದಾನ, 9:23–10:18

## ಪ್ರಶ್ನೆಗಳಿಗೆ ಉತ್ತರಗಳು

1. ಕ್ರಿಸ್ತನು ತನ್ನ ಬಲಿದಾನದ ಮೂಲಕ "ಪರಲೋಕವಸ್ತುಗಳನ್ನು ಶುದ್ಧೀಕರಿಸಿದ್ದಾನೆ" (9:23) ಸತ್ಯವೇದ ತಜ್ಞರು ಈ ಪದಪ್ರಯೋಗವು ಏನನ್ನು ಉಲ್ಲೇಖಿಸುತ್ತದೆ ಮತ್ತು ಗ್ರಂಥಕರ್ತನು ಯಾಕೆ ಯಜ್ಞಗಳು ಎಂದು ಬಹುವಚನ ಉಪಯೋಗಿಸುತ್ತಾನೆ ಎಂಬುದಕ್ಕೆ ಅನೇಕ ಉತ್ತರಗಳನ್ನು ನೀಡಿದ್ದಾರೆ.

   ನಿಶ್ಚಯವಾಗಲೂ, "ದೇವರು ವಾಸಿಸುವ ಸ್ಥಳ" ಎಂಬ ಅರ್ಥದಲ್ಲಿ ಕ್ರಿಸ್ತನು ಪರಲೋಕವನ್ನು ಶುದ್ಧೀಕರಿಸುವ ಯಾವ ಅವಶ್ಯಕತೆಯಿರಲಿಲ್ಲ ಮತ್ತು ನಾವು ನೋಡುತ್ತೇವೆ ಯೇಸುವು ಒಂದೇ ಯಜ್ಞವನ್ನು ಅರ್ಪಿಸಿದನು ಎಂಬುದು ನಮಗೆ ಗೊತ್ತಿದೆ. ಅದು ಕ್ರೂಜೆಯ ಮೇಲೆ ತನ್ನ ಸ್ವಂತ ಶರೀರವನ್ನೇ. ನನಗೆ ಕೆಳಗಿನ ವಿವರಣೆಯು ಸೂಕ್ತವಾದ ಅರ್ಥವನ್ನು ಕೊಡುತ್ತದೆ ಎಂದು ಅನ್ನಿಸುತ್ತದೆ:

   "ಯಜ್ಞಗಳು" ಎಂಬ ಬಹುವಚನವನ್ನು ಉಪಯೋಗಿಸಿದ್ದಾರೆ ಯಾಕಂದರೆ ಯೆಹೂದ್ಯರ ಅನುಭವದಲ್ಲಿ ಭೂಲೋಕದ ದೇವಾಲಯದಲ್ಲಿ ವಿವಿಧ ಯಜ್ಞಗಳು ವಿವಿಧ ಸಂಗತಿಗಳನ್ನು ಶುದ್ಧೀಕರಿಸುತ್ತಿದ್ದವು. ಪರಲೋಕದಲ್ಲಿಯೂ ಸಹ ಅದೇ ರೀತಿಯಾಗಿ ಕ್ರಿಸ್ತನ ರಕ್ತದ ಮೂಲಕ ಯಾವ ಸಂಗತಿಯು ಶುದ್ಧೀಕರಿಸಲ್ಪಟ್ಟದ್ದನ್ನು ನಾವು ಕಾಣುತ್ತೇವೆ? ಸುವಾರ್ತೆಯ ಸಂದೇಶ (ಯೇಸುವಿನ ಮರಣ ಮತ್ತು ಪುನರುತ್ಥಾನದಿಂದ ಮಾತ್ರ "ಶುಭ ಸಂದೇಶವಾಯಿತು"), ಯೇಸು ಕ್ರಿಸ್ತನ ರಕ್ತವನ್ನು ಪ್ರತಿನಿಧಿಸುವ "ಹೊಸ ಒಡಂಬಡಿಕೆ" (ಲೂಕ 22:20); ಚಿಯೋನ್ ಪರ್ವತ ಪರಲೋಕದ ಯೆರೂಸಲೇಮ್, ಜೀವಿಸುವ ದೇವರು ವಾಸಿಸುವ ಪಟ್ಟಣ" (ಇಬ್ರಿಯ 12:22); "ಚೊಚ್ಚಲುಮಕ್ಕಳ ಸಭೆ"; "ದೇವರು ತನ್ನ ಸ್ವಂತ ರಕ್ತದಿಂದ ಕೊಂಡುಕೊಂಡ ಸಭೆ"; "ಕುರಿಮರಿಯ ಮದಲಗಿತ್ತಿ" (ಹಿಬ್ರಿಯ 12:23; ಅ. ಕೃ. 20:28; ಪ್ರಕಟನೆ 21:9). ಆದುದರಿಂದ ಇವೆಲ್ಲವುಗಳೂ ಯೇಸುವಿನ ಯಜ್ಞದ ಮೂಲಕ (ಗ್ರಂಥಕರ್ತನು ವ್ಯಕ್ತಪಡಿಸಿದಂತೆ "ಯಜ್ಞಗಳ") ಮೂಲಕ 'ಶುದ್ಧೀಕರಿಸಲ್ಪಟ್ಟಿವೆ' ಅಥವಾ 'ಪವಿತ್ರಗೊಳಿಸಲ್ಪಟ್ಟಿವೆ'.

2. ಕ್ರಿಸ್ತನು ತನ್ನ ಯಜ್ಞವನ್ನು ತಂದದ್ದು ನಿಜವಾದ ದೇವಾಲಯವಾದ ಅಕ್ಷರಶಃ 'ಪರಲೋಕದೊಳಗೇ ಆಗಿತ್ತು' (ಅದು ಪರಲೋಕದ ಮಾನವ–ನಿರ್ಮಿತವಾದ ಪ್ರತಿರೂಪವಾಗಿರಲಿಲ್ಲ, 9:24).

   ಇದರ ವೈಶಿಷ್ಟತೆ ಎಂದರೆ ಅದರ ಮೂಲಕ ಆತನು ಮೊದಲಿನ ಒಡಂಬಡಿಕೆಯ ಯಜ್ಞದ ಪದ್ಧತಿಯನ್ನು ಮುಕ್ತಾಯಗೊಳಿಸಿದನು (ಅಥವಾ ಪೂರ್ತಿಗೊಳಿಸಿದನು). ಹಳೆಯ ಪದ್ಧತಿಯಲ್ಲಿ ಯಜ್ಞವು ಮೇಲಿಂದ ಮೇಲೆ ಪುನರಾವರ್ತನೆಯಾಗುತಿತ್ತು; ಅವು ಪರಿಪೂರ್ಣವಾಗಿರಲಿಲ್ಲ; ಅವು ನಿಜವಾಗಿಯೂ ಪಾಪದ ಕ್ಷಮಾಪಣೆಯೊಂದಿಗೆ ವ್ಯವಹರಿಸಲಾಗಲಿಲ್ಲ.

3. 9:24 ರ ಎರಡನೇ ಭಾಗ: *ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುತ್ತಾನೆ.* ಇದು ಕ್ರಿಸ್ತನ ವಿಶಿಷ್ಟವಾದ ಯಜ್ಞದ ದೇವರ ಉದ್ದೇಶವು ಏಕಕಾಲಕ್ಕೆ ಅಥವಾ ಗತಕಾಲಕ್ಕೆ ಮಾತ್ರ ಒಳಪಟ್ಟಿಲ್ಲ ಎಂಬುದನ್ನು ಪ್ರಕಟಿಸುತ್ತದೆ. ಇದು ನಮಗೆ ಕ್ಷಮಾಪಣೆಯನ್ನು ತರಲು ಒಂದೇಬಾರಿ ಮಾಡಿದ ಕಾರ್ಯ ಮಾತ್ರವಲ್ಲ, ಕ್ರಿಸ್ತನು ಪರಲೋಕದ ದೇವಾಲಯವನ್ನು ನಮಗಾಗಿ ಮಧ್ಯವರ್ತಿಯಾಗಿ ಪ್ರಾರ್ಥಿಸಲು, ದೇವರ ಮುಂದೆ ನಮ್ಮ ಮಧ್ಯಸ್ತಗಾರನಾಗಿರಲು ಸಹ ಪ್ರವೇಶಿಸಿದನು. 'ಈಗ' ಎಂಬ ಪದದ ವಿಶಿಷ್ಟತೆ ಅದಾಗಿದೆ. ಬಿನ್ನಹಗಳನ್ನು ಸಲ್ಲಿಸುವ ಕ್ರಿಸ್ತನ ಮಧ್ಯವರ್ತಿಯ ಕಾರ್ಯವು ಸಭೆಯ ಯುಗದಲ್ಲಿ ಮುಂದುವರೆಯುತ್ತದೆ (ಯೇಸುವಿನ ಮೊದಲನೆಯ ಮತ್ತು ಎರಡನೆಯ ಬರೋಣದ ಅವಧಿಯ ಮಧ್ಯದಲ್ಲಿ). ಅದು 'ಈಗಲೂ' ಸಂಭವಿಸುತ್ತಿದೆ.

4. 9:25–26 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಭೂಲೋಕದ ದೇವಾಲಯದಲ್ಲಿ ಮಹಾಯಾಜಕನ ತ್ಯಾಗಪೂರ್ವಕವಾದ ಸೇವೆಯನ್ನು ಕ್ರಿಸ್ತನ ಈ ತ್ಯಾಗಪೂರ್ವಕವಾದ ಸೇವೆಯೊಂದಿಗೆ ವಿಭಿನ್ನವಾಗಿ ಚಿತ್ರಿಸುತ್ತಾನೆ. ಇವು ಆತನ ಮೂರು ಅಂಶಗಳಾಗಿವೆ :
    a. ಯಜ್ಞ: ಅದು ಆತನ ಸ್ವಂತ ರಕ್ತವಲ್ಲ (ಮಹಾಯಾಜಕನ) – ತನ್ನನ್ನು ತಾನೇ (ಕ್ರಿಸ್ತನು)
    b. ಪುನರಾವರ್ತನೆ: ಪ್ರತಿವರ್ಷ (ಮಹಾಯಾಜಕನು) – ಒಂದೇ ಸಾರಿ (ಕ್ರಿಸ್ತನು)
    c. ಉದ್ದೇಶ: ಪಾಪಗಳನ್ನು ಪರಿಹರಿಸಲಾಗಲಿಲ್ಲ (ಮಹಾಯಾಜಕನು) – ಪಾಪಗಳ ಪರಿಹಾರವಾಯಿತು (ಕ್ರಿಸ್ತನು)

5. 9:26 ರಲ್ಲಿರುವ 'ಯುಗಗಳ ಸಮಾಪ್ತಿಯಲ್ಲಿ' ಎಂಬ ಪದಪ್ರಯೋಗ ಯೇಸುವಿನ ಮೊದಲನೆಯ ಮತ್ತು ಎರಡನೆಯ ಬರೋಣದ ಮಧ್ಯದಲ್ಲಿರುವ ಅವಧಿಯನ್ನು ಉಲ್ಲೇಖಿಸುತ್ತದೆ. ಈ ಅವಧಿಯು ಸತ್ಯವೇದದಲ್ಲಿ 'ಯುಗದ ಸಮಾಪ್ತಿಯಾಗಿದೆ'. ಇದರಲ್ಲಿರುವ ಕ್ರಿಯಾಪದದ ಕಾಲವನ್ನು ಗಮನಿಸಿರಿ: ಕ್ರೂಜೆಯ ಮೇಲಿನ ತನ್ನ ಮರಣದ ಮೂಲಕ ಪಾಪದ ಬಲವನ್ನು ಮುಕ್ತಾಯಗೊಳಿಸಲು ಯೇಸು 'ಪ್ರತ್ಯಕ್ಷನಾದನು'.

6. ನಾವು ಯೇಸುವಿನ ಕುರಿತು 9:28 ರಲ್ಲಿ ಎರಡು ವಿಷಯಗಳನ್ನು ಕಲಿಯುತ್ತೇವೆ:
    a. ಆತನು ನಮ್ಮ ಪಾಪಗಳಿಗಾಗಿ ಸಾಯುವುದಕ್ಕಾಗಿ ಮೊದಲನೆಯ ಸಾರಿ ಬಂದನು (ಮತ್ತು ಅದರ ಮೂಲಕ ತನ್ನ ರಕ್ಷಣೆಯನ್ನು ನಮಗೆ ನೀಡಿದನು)
    b. ಆತನು ಎರಡನೆಯ ಸಾರಿ ನಮಗೆ ಅಂತಿಮ ರಕ್ಷಣೆಯನ್ನು ನೀಡಲು ಬರಲಿಕ್ಕಿದ್ದಾನೆ (ನಮ್ಮನ್ನು ಪ್ರಸ್ತುತ ಅಪರಿಪೂರ್ಣ ಜೀವಿತದಿಂದ ರಕ್ಷಿಸುವುದಕ್ಕಾಗಿ, ನಮ್ಮನ್ನು ಮಹಿಮೆಪಡಿಸಿ ನಮ್ಮನ್ನು ಪರಲೋಕದ ತನ್ನ ರಾಜ್ಯಕ್ಕೆ ಕೊಂಡೊಯ್ಯುವುದಕ್ಕಾಗಿ ಬರಲಿದ್ದಾನೆ).

7. 9:26 ಮತ್ತು 9:28 ರಲ್ಲಿ ಕ್ರಿಸ್ತನು ತನ್ನನ್ನು ತಾನು ಬಲಿಯಾಗಿ ಅರ್ಪಿಸಿದಾಗ ಪಾಪಕ್ಕೆ ಏನು ಮಾಡಿದನು ಎಂಬುದರ ಕುರಿತಾಗಿ ಬಳಸಲಾಗುವ ವಿವಿಧ ಪದಪ್ರಯೋಗಗಳನ್ನು ನೋಡುತ್ತೇವೆ: ಮೊದಲನೆಯದಾಗಿ, 'ಪಾಪನಿವಾರಣೆ ಮಾಡಿದನು' ನಂತರ 'ಪಾಪಗಳನ್ನು ಹೊತ್ತುಕೊಂಡನು'

ಎಂಬುದನ್ನು ಕಂಡುಕೊಳ್ಳುತ್ತೇವೆ. ಇವು ಈ ಎರಡು ಹೇಳಿಕೆಗಳ ನಡುವೆ ಇರುವ ವ್ಯತ್ಯಾಸಗಳು ಹೀಗಿವೆ:

a. ಮೊದಲನೆಯ ಪದಪ್ರಯೋಗ (ಪಾಪಗಳ ನಿವಾರಣೆ ಮಾಡಿದನು) ಇದು ಕಾನೂನಾತ್ಮಕ ಹೇಳಿಕೆಯಾಗಿದೆ: ಪಾಪವು ನಿರ್ಬಲವೆಂದು ಪ್ರಕಟಿಸಲಾಗಿದೆ. ಇದರ ಅರ್ಥ ನಮ್ಮ ಮೇಲಿರುವ ಪಾಪದ ಬಲವನ್ನು ರದ್ದುಗೊಳಿಸಲಾಗಿದೆ. ಕ್ರಿಸ್ತನಿಗೆ ಸಂಬಂಧಿಸಿದವರಾದ ನಮ್ಮ ಮೇಲೆ ಅದಕ್ಕೆ ಯಾವ ಅಧಿಕಾರವಿಲ್ಲ. ನಾವು ಕ್ರಿಸ್ತನಲ್ಲಿ ಪಾಪದ ದಾಸತ್ವದಿಂದ ಮುಕ್ತರಾಗಿದ್ದೇವೆ.

b. ಎರಡನೆಯ ಪ್ರದಪ್ರಯೋಗ (ಪಾಪಗಳನ್ನು ಹೊತ್ತುಕೊಳ್ಳುವದು): ಇದು ಧಾರ್ಮಿಕ ಹೇಳೀಕೆಯಾಗಿದೆ: ಮಹಾಯಾಜಕನು ಯಜ್ಞವೇದಿಗೆ ಹೊತ್ತುಕೊಂಡು ಹೋಗುವ ಹಾಗೆ, ಪಾಪವನ್ನು ಕಾಣಿಕೆಯಂತೆ ಹೊತ್ತುಕೊಂಡು ಹೋಗಲಾಯಿತು. ಇದರ ಅರ್ಥ ಪಾಪಕ್ಕೆ ತೆರಬೇಕಾದ ದಂಡವನ್ನು ನಮ್ಮಿಂದ ತೆಗೆಯಲಾಯಿತು. ಇದೇ ಅಭಿಪ್ರಾಯವನ್ನು 1ಪೇತ್ರ 2:24 ರಲ್ಲಿ ಸಹ ನೋಡಬಹುದು. *(ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡನು ಮರಣದ ಕಂಬವನ್ನು ಏರಿದನು)* ಹಳೆ ಒಡಂಬಡಿಕೆಯ ಹಿನ್ನೆಲೆ ದೋಷಪರಿಹಾರಕ ಯಜ್ಞದ ಹೋತವು ಇಸ್ರಾಯೇಲ್ಯರ ಎಲ್ಲಾ ದ್ರೋಹಗಳನ್ನು ಅಪರಾಧಗಳನ್ನು ಹೊತ್ತುಕೊಂಡು ಅರಣ್ಯಕ್ಕೆ ಕೊಂಡೊಯ್ಯುತಿತ್ತು (ಯಾಜಕಕಾಂಡ 16:21–22). ಯೆಶಾಯ 53 ರಲ್ಲಿರುವ ಸೇವಕನ ಗೀತೆಯಲ್ಲಿ 'ಆತನು ಬಹುಜನರ ಅಪರಾಧಗಳನ್ನು ಹೊತ್ತುಕೊಂಡನು' (ವ 12) ಎಂಬ ಹೇಳಿಕೆಯನ್ನು ಓದುತ್ತೇವೆ.

8. 10:1–4 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯ ಯಜ್ಞ ಪದ್ಧತಿಗೆ ಕಾರಣವನ್ನು ನೀಡುತ್ತಾನೆ:

   ಹಳೆ ಒಡಂಬಡಿಕೆಯ ಯಜ್ಞಗಳು 'ಪ್ರತಿ ವರ್ಷ ಆ ಯಜ್ಞಗಳಲ್ಲಿ ತಿರುಗಿ ಪಾಪಗಳ ಜ್ಞಾಪಕವಾಗುತ್ತಿತ್ತು' (ವ 3). ಈ ಯಜ್ಞಗಳು ಪಾಪವನ್ನು ನಿವಾರಿಸುತ್ತಿರಲಿಲ್ಲ (ವ 4; ಅಥವಾ ಪಾಪಗಳ ಮನಸಾಕ್ಷಿಯನ್ನು ತೆಗೆದುಹಾಕುತ್ತಿರಲಿಲ್ಲ, ವ 2) ಅವು ಬರಲಿಕ್ಕಿರುವ ಒಳ್ಳೆಯ ಸಂಗತಿಗಳ 'ನೆರಳಾಗಿದ್ದವು' (ವ 1), ಅಂದರೆ ಒಂದೇ ಸಾರಿ ಅರ್ಪಿಸಲ್ಪಟ್ಟ ಕ್ರಿಸ್ತನ ಪರಿಪೂರ್ಣ ಯಜ್ಞ. ಆದುದರಿಂದ ಹಳೆ ಒಡಂಬಡಿಕೆಯ ಯಜ್ಞದ ಪದ್ಧತಿಯು ಕ್ರಿಸ್ತನಿಗಾಗಿರುವ ವಿಧವಾಗಿತ್ತು; ಅದರ ನೆರವೇರಿಕೆಗಾಗಿ ಅದು ಕ್ರೂಜೆಯ ಮೇಲೆ ಯೇಸುವಿನ ಮರಣದೆಡೆಗೆ ಸೂಚಿಸುತಿತ್ತು.

9. 10:5–7 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಕೀರ್ತನೆ 40 ರಲ್ಲಿರುವ ಒಂದು ಉಲ್ಲೇಖವನ್ನು ಕಿಸ್ತನಿಂದ ಉಚ್ಚರಿಸಲ್ಪಟ್ಟಂತೆ ಅರ್ಥಮಾಡಿಕೊಳ್ಳುವುದನ್ನು ನಾವು ನೋಡುತ್ತೇವೆ: (ವ 6–8; ಈ ಕೀರ್ತನೆಯು ದಾವೀದನಿಂದ ಬರೆಯಲ್ಪಟ್ಟಿದೆ). ಆಗಿನಿಂದ ಈ ವಾಕ್ಯಗಳು ಯೇಸುವಿನ ಕುರಿತಾದ ಪ್ರವಾದನೆಯಾದವು.

   ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಪಠ್ಯವನ್ನು ಕೀರ್ತನೆಯಲ್ಲಿರುವ ಪಠ್ಯದೊಂದಿಗೆ ಹೋಲಿಸಿದಾಗ ನಾವು ಒಂದು ಮುಖ್ಯ ವ್ಯತ್ಯಾಸವನ್ನು ಕಾಣುತ್ತೇವೆ: ಕೀರ್ತನೆ 40:6 ರಲ್ಲಿ ಅದು

ಈ ರೀತಿಯಾಗಿ ಹೇಳುತ್ತದೆ, 'ನನ್ನ ಕಿವಿಗಳನ್ನು ನೀನು ತೆರೆದಿರುವೆ' (ಕೆಲವು ಇಂಗಿಷ್ ಆವೃತ್ತಿಗಳಲ್ಲಿ 'ಚುಚ್ಚಿದೆ' ಎಂಬುದಾಗಿದೆ). ಇಬ್ರಿಯ 10:5 ರಲ್ಲಿ ಹೀಗೆ ಹೇಳುತ್ತದೆ, 'ನನಗೆ ದೇಹವನ್ನು ಸಿದ್ಧಮಾಡಿಕೊಟ್ಟಿ'.

ಈ ವ್ಯತ್ಯಾಸವನ್ನು ಸುಲಭವಾಗಿ ವಿವರಿಸಬಹುದು: ಇಬ್ರಿಯ ಗ್ರಂಥಕರ್ತನು ಕೀರ್ತನೆ 40:8ನ್ನು ಹಳೆ ಒಡಂಬಡಿಕೆಯ ಗ್ರೀಕ್ ಅನುವಾದದಿಂದ (ಸೆಪ್ಟ್ಯುವಾಜಿಂಟ್‌ದಿಂದ) ಉಲ್ಲೇಖಿಸುತ್ತಾನೆ, ಅದೇ ಸಮಯದಲ್ಲಿ ನಮ್ಮ ಸತ್ಯವೇದವು ಹಳೆ ಒಡಂಬಡಿಕೆಯ ಇಬ್ರಿಯ ಭಾಷೆಯ ಅನುವಾದವಾಗಿದೆ.

ನನ್ನ ಅಭಿಪ್ರಾಯದಲ್ಲಿ ಈ ವ್ಯತ್ಯಾಸದಿಂದ ಅರ್ಥವಿವರಕರಿಗೆ ಹೆಚ್ಚು ಸಮಸ್ಯೆಯಾಗಲಿಕ್ಕಿಲ್ಲ. ಹಳೆ ಒಡಂಬಡಿಕೆಯ ನಿಯಮದಂತೆ ಒಬ್ಬನು ಶಾಶ್ವತ ದಾಸನಾಗಿರುವದಕ್ಕೆ ಒಪ್ಪಿಕೊಳ್ಳುವಾಗ ಆತನ ಕಿವಿಯನ್ನು ಮನೆಬಾಗಿಲಿಗೆ ಚುಚ್ಚುವದನ್ನು ಅಥವಾ 'ತೆರೆದಿರುವ ಮತ್ತು ಆಲಿಸುವ ಕಿವಿಯ' ಕುರಿತು ಹಿಬ್ರೂ ಆವೃತ್ತಿಯು ಉಲ್ಲೇಖಿಸಿರಬಹುದು. ಒಬ್ಬ ವ್ಯಕ್ತಿಯು ತನನ್ನು ಸಮರ್ಪಿಸಿಕೊಳ್ಳುವದು ಅಥವಾ ತನ್ನ ದೇಹವನ್ನು ನೀಡುವದು ಎಂಬುದಾಗಿ ಗ್ರೀಕ್ ಆವೃತ್ತಿಯು ಸೂಚಿಸುತ್ತದೆ. ಯೇಸುವಿನ ವಿಷಯದಲ್ಲಿ ಈ ಎಲ್ಲಾ ಸಂಗತಿಗಳು ಅಳವಡಿಸಲ್ಪಟ್ಟಿವೆ: ಆತನಿಗೆ ತೆರೆದಿರುವ, ದೇವರ ಧ್ವನಿಯನ್ನು ಆತನ ಚಿತ್ತವನ್ನೂ ಆಲಿಸುವ ಮತ್ತು ವಿಧೇಯವಾಗುವ ಕಿವಿಯಿತ್ತು; ಆತನು ಸ್ವ-ಇಚ್ಛೆಯಿಂದ 'ಗುಲಾಮನಾದನು'; ಮತ್ತು ಆತನು ಕ್ರೂಜೆಯ ಮೇಲೆ ನಮ್ಮ ಪಾಪಗಳಿಗಾಗಿ ಮರಣಹೊಂದುವಾಗ ತನ್ನ ದೇಹವನ್ನು ಸಮರ್ಪಿಸಿದನು. ಇಲ್ಲಿ ಮುಖ್ಯಾಂಶವೆಂದರೆ ಯೇಸು ಮಾನವ ಕುಲದ ರಕ್ಷಣೆಗಾಗಿ ತನ್ನ ತಂದೆಯ ಯೋಜನೆಗಳನ್ನು ನೆರವೇರಿಸಲು ಸಿದ್ಧನಾಗಿದ್ದನು: *ಇಗೋ ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ* (ಇಬ್ರಿಯ 10:9; ಗೆತ್ಸೆಮನೆ ತೋಟದಲ್ಲಿ ಯೇಸುವಿನ ಮಾತುಗಳೊಂದಿಗೆ ಹೋಲಿಸಿರಿ '*ನನ್ನ ಚಿತ್ತವಲ್ಲ ನಿನ್ನ ಚಿತ್ತವೇ ನೆರವೇರಲಿ*', ಲೂಕ 22:42)

10. 10:11-12 ರಲ್ಲಿ ನಿಂತುಕೊಳ್ಳುವದು ಮತ್ತು ಕುಳಿತುಕೊಳ್ಳುವದು ಎಂಬುದರ ನಡುವಿನ ವ್ಯತ್ಯಾಸವನ್ನು ನಾವು ಕಂಡುಕೊಳ್ಳುತ್ತೇವೆ:

    a. ಲೇವಿಯ ವಂಶದ ಮಹಾಯಾಜಕನು ಯಾವಾಗಲೂ ನಿಂತುಕೊಂಡಿರುತ್ತಿದ್ದನು ಯಾಕಂದರೆ ಆತನ ಕಾರ್ಯಗಳು ಎಮ್ದಿಗೂ ಮುಕ್ತಾಯಗೊಳ್ಳಲಿಲ್ಲ ('ಪದೇ ಪದೇ', 'ಎಂದಿಗೂ ಪಾಪವನ್ನು ತೆಗೆದುಹಾಕಲಾರದಂತಹ ಯಜ್ಞಗಳು').

    b. ಕ್ರಿಸ್ತನು ("ಯಾಜಕನು") "ಆತನು ದೇವರ ಬಲಪಾರ್ಶ್ವವದಲ್ಲಿ ಕುಳಿತುಕೊಂಡಿರುತ್ತಾನೆ". ಯಾಕಂದರೆ ಆತನು ಮಾಡಬೇಕಾದ ಕಾರ್ಯವನ್ನು ಮಾಡಿ ಪೂರೈಸಿದ್ದಾನೆ. ಆತನು ಪಾಪಪರಿಹಾರಕ್ಕಾಗಿ ಎಲ್ಲಾ ಸಮಯಕ್ಕೂ ಒಂದೇ ಸಾರಿ ಯಜ್ಞವನ್ನು ಅರ್ಪಿಸಿದ್ದಾನೆ (ಹೋಲಿಸಿರಿ 1:3, 7:27). ಆತನ ಕಾರ್ಯವು ಪರಿಪೂರ್ಣವಾಗಿದೆ.


11. ವಚನ 13-14 ರಲ್ಲಿರುವ ಹೇಳಿಕೆಗಳ ವಿವರಣೆ ಹೀಗಿದೆ:

    a. 'ಅಂದಿನಿಂದ': ಈ ಹೇಳಿಕೆಯು ಕ್ರೂಜೆಯ ಮೇಲೆ ಕ್ರಿಸ್ತನ ಸ್ವತಃ ಯಜ್ಞವನ್ನು ಉಲ್ಲೇಖಿಸುತ್ತದೆ ('ಸಭೆಯ ಯುಗದ' ಪ್ರಾರಂಭ).

b. ‘ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಕಾದಿರುವನು’ (ಕೀರ್ತನೆ 110:1 ರಲ್ಲಿರುವ ಉಲ್ಲೇಖವನ್ನು ಇಬ್ರಿಯ 1:13 ರೊಂದಿಗೆ ಹೋಲಿಸಿರಿ.): ಇದು ರೂಪಕಾಲಂಕಾರಿಕ ಪದವಿನ್ಯಾಸವಾಗಿದ್ದು“ ’ಆತನ ಎಲ್ಲಾ ವೈರಿಗಳ ಮೇಲೆ ಜಯವನ್ನು ಸಾಧಿಸುವವರೆಗೆ’ ಎಂಬ ಅರ್ಥವನ್ನು ಕೊಡುತ್ತದೆ ಮತ್ತು ಇದು ಯೇಸುವಿನ ಮೊದಲನೆಯ ಬರೋಣ ಮತ್ತು ಎರಡನೆಯ ಬರೋಣದ ಮಧ್ಯದಲ್ಲಿರುವ ಸಮಯವನ್ನು ಉಲ್ಲೇಖಿಸುತ್ತದೆ (‘ಸಭೆಯ ಯುಗದ’ ಕುರಿತು).

c. ‘ಪವಿತ್ರರಾಗುತ್ತಿರುವವರನ್ನು’ (2:11 ನ್ನು ಹೋಲಿಸಿರಿ): ಈ ಹೇಳಿಕೆಯು ವಿಶ್ವಾಸಿಗಳ ಶುದ್ಧೀಕರಣವು ನಿರಂತರವಾದ ಪ್ರಕ್ರಿಯೆ ಎಂಬುದನ್ನು ತೋರಿಸುತ್ತದೆ (2:11 ಹೋಲಿಸಿರಿ). 10:10 ರಲ್ಲಿ ನಾವು ವಿಶ್ವಾಸಿಗಳ ಪರಶುದ್ಧತೆಯ ಕುರಿತು ಇನ್ನೊಂದು ವಿಷಯವನ್ನು ನೋಡುತ್ತೇವೆ: ಶುದ್ಧೀಕರಣವು ಸಹ ಕ್ರೂಜೆಯ ಮೇಲೆ ಯೇಸುವಿನ ಮರಣದಿಂದಾಗಿ ನೆರವೇರಲ್ಪಟ್ಟ ಸಂಗತಿಯಾಗಿದೆ.

12. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಯೆರೆಮೀಯ 31:31–34 ರಿಂದ ಎರಡು ಉಲ್ಲೇಖಗಳನ್ನು ಪವಿತ್ರಾತ್ಮನ ಬಾಯಿಯಲ್ಲಿ ಇಡುತ್ತಾನೆ (ಇಬ್ರಿಯ 10:16–18). ಇದನ್ನು ಆತನು ವರ್ತಮಾನ ಕಾಲವನ್ನು ಉಪಯೋಗಿಸಿ ವ್ಯಕ್ತಪಡಿಸುವ ರೀತಿಯು ವಿಶಿಷ್ಟವಾಗಿದೆ: ಪವಿತ್ರಾತ್ಮನು ಕೇವಲ ಗತಕಾಲದಲ್ಲಿ ಮಾತ್ರ ದೇವಜನರೊಂದಿಗೆ ಮಾತನಾಡದೆ ಇಂದಿಗೂ ದೇವಜನರೊಂದಿಗೆ ಮಾತನಾಡುತ್ತಾನೆ. ಆತನಲ್ಲಿ ಯಾವಾಗಲೂ ದೇವಜನರಿಗಾಗಿ ಸಂದೇಶವಿದೆ. ತನ್ನ ಜನರೊಂದಿಗಿರುವ ದೇವರ ಒಡಂಬಡಿಕೆಯು ನಿರಂತರವಾದ ಒಡಂಬಡಿಕೆಯಾಗಿದೆ. ಯೇಸು ನಮಗೋಸ್ಕರ ಕ್ರೂಜೆಯಲ್ಲಿ ತನ್ನ ಜೀವಿತವನ್ನು ಸಮರ್ಪಿಸಿದಾಗ ದೇವರು ಪಾಪದ ಬಲವನ್ನು ಒಂದೇ ಸಾರಿ ತೆಗೆದು ಹಾಕಿದನು. ನಮ್ಮ ಪಾಪಗಳು ಪರಿಹಾರವಾಗಿವೆ ಮತ್ತು ಇನ್ನೂ *ಮುಂದೆ ಪಾಪಗಳಿಗಾಗಿ ಪ್ರಾಯಶ್ಚಿತ್ತ ಯಜ್ಞವಿಲ್ಲ* (ವ 18) ಮತ್ತು ದೇವರು ನಮ್ಮ ಪಾಪಗಳನ್ನು ಎಂದಿಗೂ ತನ್ನ ನೆನಪಿಗೆ ತಂದುಕೊಳ್ಳುವದಿಲ್ಲ (ವ 17). ಆದರೆ ನಮ್ಮ ಹೃದಯದಲ್ಲಿ ಬರೆಯಲ್ಪಟ್ಟ (ವ 16) ದೇವರ ಧರ್ಮಶಾಸ್ತ್ರದ ನಿಯಮಗಳ ಪ್ರಭಾವವು ನಾವು ಈ ಲೋಕದಲ್ಲಿ ಜೀವಿಸುವವರೆಗೆ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಈ ನಮ್ಮ ಜೀವಿತಗಳಲ್ಲಿ ನಿರಂತರವಾದ ಶುದ್ಧೀಕರಿಸುವಿಕೆಯ ಪ್ರಕ್ರಿಯೆಯು ಪವಿತ್ರಾತ್ಮನ ನಿರಂತರವಾದ ಕಾರ್ಯವಾಗಿದೆ.



# ಉತ್ತರಗಳು 14: ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ, 10:19–39

## ಪ್ರಶ್ನೆಗಳಿಗೆ ಉತ್ತರಗಳು

1. 10:19–22 ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ ದೇವರ ಸಮೀಪಕ್ಕೆ ಬರುವಂತೆ ಪ್ರಬೋಧಿಸುತ್ತಾನೆ. ಪ್ರಶ್ನೆಗಳಿಗೆ ಉತ್ತರಗಳು:
    1. ನಾವು ದೇವರ ಸಮೀಪಕ್ಕೆ ಬರಬೇಕು ಯಾಕೆಂದರೆ ನಾವು ಪರಲೋಕಕ್ಕೆ (ಅಂದರೆ ಪರಲೋಕದ ದೇವಾಲಯದ ಅತೀ ಪರಿಶುದ್ಧ ಸ್ಥಳಕ್ಕೆ) ಹೋಗಲು ಬಯಸುತ್ತೇವೆ.
    2. ನಮಗೆ ದೇವರ ಸಮೀಪಕ್ಕೆ ಬರಲು ಸಾಧ್ಯ: ಯಾಕಂದರೆ ಯೇಸು ನಮಗೇನು ಮಾಡಿದ್ದಾನೆ ಎನ್ನುವದರ ಕುರಿತು ವಿಶ್ವಾಸವನ್ನು ಹೊಂದಿರುವದರಿಂದ ಮತ್ತು ಆತನು ನಮ್ಮ ಶ್ರೇಷ್ಠ ಮಹಾಯಾಜಕನಾಗಿರುವದರಿಂದ.
    3. "ತೆರೆ" ಇಸ್ರಾಯೇಲ್ಯರ ದೇವದರ್ಶನ ಗುಡಾರದಲ್ಲಿರುವ (ನಂತರ ಯೆರೂಸಲೇಮಿನ ದೇವಾಲಯದಲ್ಲಿದ್ದ) ಪರಿಶುದ್ಧ ಸ್ಥಳ ಮತ್ತು ಅತೀ ಪರಿಶುದ್ಧ ಸ್ಥಳದ ಮಧ್ಯದಲ್ಲಿದ್ದ ಬೇರ್ಪಡಿಸುವಿಕೆಯನ್ನು ಉಲ್ಲೇಖಿಸುತ್ತದೆ. ಈ ತೆರೆಯು ಮೇಲಿನಿಂದ ಕೆಳಗೆ ಕ್ರೂಜೆಯ ಮೇಲೆ ಯೇಸುವಿನ ಮರಣದ ಸಮಯದಲ್ಲಿ ಹರಿದು ಎರಡು ಭಾಗವಾಯಿತು (ಮತ್ತಾಯ 27:51). ಯೇಸುವಿನ ಮರಣ (ಆತನ ದೇಹದ "ಹರಿಯುವಿಕೆ" ವ21) ನಮಗೆ ಪರಲೋಕದ ದೇವಾಲಯವನ್ನು ಪ್ರವೇಶಿಸಲು ಮಾರ್ಗವನ್ನು ತೆರೆಯಿತು.
    4. ನಮ್ಮ ನೀತಿನಿರ್ಣಯದ ಫಲವಾಗಿ (*ಅಪರಾಧ ಮನಸ್ಸಾಕ್ಷಿಯನ್ನು ಪ್ರೋಕ್ಷಿಸಲ್ಪಟ್ಟ ಹೃದಯದಿಂದಲೂ*) ನಾವು *ಯಥಾರ್ಥ ಹೃದಯದಿಂದಲೂ ನಂಬಿಕೆಯ ಪೂರ್ಣ ನಿಶ್ಚಯದಿಂದಲೂ* ದೇವರ ಸಮೀಪಕ್ಕೆ ಬರಬೇಕು ಮತ್ತು ನಾವು ದೀಕ್ಷಾಸ್ನಾನದ ಮೂಲಕ ಕ್ರಿಸ್ತನ ದೇಹದಲ್ಲಿ ಭಾಗಿಗಳಾಗಿರುವುದರಿಂದ (*ಶುದ್ಧ ನೀರಿನಿಂದ ತೊಳೆದ ದೇಹದಿಂದಲೂ*) ದೇವರ ಸಮೀಪಕ್ಕೆ ಬರಬೇಕು.
2. 10:23–25 ನ್ನು ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ ತಮ್ಮ ಅರಿಕೆ ಮಾಡುವ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂದು ಪ್ರಬೋಧಿಸುತ್ತಾನೆ. ಪ್ರಶ್ನೆಗಳಿಗೆ ಉತ್ತರಗಳು:
    5. ನಾವು ಯೇಸುವಿನಲ್ಲಿಟ್ಟ ಪ್ರಾರಂಭದ ನಂಬಿಕೆಯನ್ನು ಆತನು ನಂಬಿಗಸ್ತನಾಗಿರುವ ಕಾರನ ನಿರಂತರವಾಗಿ ಮುಂದುವರೆಸುತ್ತಾನೆ.
    6. ನಾವು ದೇವರ ದಿವಸ ಬರುವದನ್ನು ಕಾಣುವಾಗ, ವಿಶ್ವಾಸಿಗಳಾಗಿ ನಾವು ಮೂರು ಸಂಗತಿಗಳನ್ನು ಮಾಡಬೇಕು:

    a. *ಪ್ರೀತಿ ಮತ್ತು ಸತ್ಕಾರ್ಯಗಳನ್ನು ಮಾಡುವುದಕ್ಕಾಗಿ ಒಬ್ಬರನ್ನೊಬ್ಬರು ಉತ್ತೇಜಿಸಬೇಕು.*

    b. ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ನಂಬಿಗಸ್ತರಾಗಿರಬೇಕು.

c. ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬೇಕು.

3. 10:26–35 ನ್ನು ಓದಿರಿ, ಅಲ್ಲಿ ಗ್ರಂಥಕರ್ತನು ವಿಶ್ವಾಸಿಗಳಿಗೆ 'ಬೇಕೆಂದು ಪಾಪಮಾಡಿ' ತಮ್ಮ ನಂಬಿಕೆಯಿಂದ ಬಿದ್ದು ಹೋಗಬಾರದೆಂದು ಬದಲಾಗಿ ತಮ್ಮ ನಂಬಿಕೆಯಲ್ಲಿ ವಿಶ್ವಾಸವನ್ನು ಇಟ್ಟು ತಾಳ್ಮೆಯಿಂದ ಇರಬೇಕೆಂದು ಪ್ರಬೋಧಿಸುತ್ತಾನೆ. ಪ್ರಶ್ನೆಗಳಿಗೆ ಉತ್ತರಗಳು:

7. ಧರ್ಮಭ್ರಷ್ಟತೆಯ ಪಾಪ ಮಾಡಿದರೆ ಆಗುವ ಪರಿಣಾಮಗಳನ್ನು ವಿವರಿಸಲು ಗ್ರಂಥಕರ್ತನು ಈ ಹೇಳಿಕೆಗಳನ್ನು ಉಪಯೋಗಿಸುತ್ತಾನೆ (ವ 26–31):

a. ಧರ್ಮಭ್ರಷ್ಟತೆಯ ವಿವರಣೆ:

- ತಮ್ಮ ಕಾಲುಗಳ ಕೆಳಗೆ ದೇವ ಕುಮಾರನನ್ನು ತುಳಿದುಬಿಡುವದು.
- ತನ್ನನ್ನು ರಕ್ಷಿಸಿದ ಕ್ರಿಸ್ತನ ರಕ್ತವನ್ನು ಅಪರಿಶುದ್ಧವೆಂದು ಪರಿಗಣಿಸುವದು.
- ಕೃಪೆಯ ಆತ್ಮವನ್ನು ಅವಮಾನಮಾಡುವದು.

b. ಪರಿಣಾಮಗಳ ವಿವರಣೆ

c. ಮೋಶೆಯ ಧರ್ಮಶಾಸ್ತ್ರವನ್ನು ತಿರಸ್ಕರಿಸುವದಕ್ಕಿಂತ ಕೆಟ್ಟ ಪರಿಣಾಮಗಳು.

d. ಯೇಸುವಿನ ರಕ್ಷಣೆಯ ಬಲ ಮತ್ತು ಆತನ ತ್ಯಾಗಪೂರ್ವಕವಾದ ಮರಣ ವಿಫಲವಾಗುತ್ತದೆ ('ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಯಾವ ಯಜ್ಞವೂ ಉಳಿದಿಲ್ಲ')

e. ದೇವರ ನ್ಯಾಯತೀರ್ಪಿನ ಭಯದ ನಿರೀಕ್ಷೆ

f. ದಂಡನಾರ್ಹ ಕಾರ್ಯ

g. ದೇವರ ನ್ಯಾಯತೀರ್ಪು

h. ಜೀವಿಸುವ ದೇವರ ಕೈಯೊಳಗೆ ಬೀಳುವದು

8. ವಚನ 32–35 ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರಿಗೆ ಪ್ರೋತ್ಸಾಹವಾಗಿದೆ ಎಂದು ತಿಳಿದುಕೊಳ್ಳಬೇಕು. ಅಲ್ಲಿ ಗ್ರಂಥಕರ್ತನು ಅವರು ಆಗ ತಾನೆ ರಕ್ಷಣೆ ಹೊಂದಿದ ವಿಶ್ವಾಸಿಗಳಗಿದ್ದು ತೀವ್ರವಾದ ಹಿಂಸೆಯನ್ನು ಅನುಭವಿಸುತ್ತಿರುವಾಗ ಪ್ರದರ್ಶಿಸಿದ ಉತ್ತಮವಾದ ಕ್ರಿಸ್ತೀಯ ನಡತೆಯ ಕುರಿತು ಜ್ಞಾಪಿಸುತ್ತಾನೆ. ಅವರು ಅದನ್ನು ಸಹಿಸಿಕೊಂಡರು. ಅವರು ಅವಮಾನಕ್ಕೂ ಮತ್ತು ದೌರ್ಜನ್ಯಕ್ಕೂ ಒಳಗಾದ ಜನರನ್ನು ಪ್ರೋತ್ಸಾಹ ಪಡಿಸಿದರು. ಅವರು ತಮ್ಮ ನಂಬಿಕೆಗಾಗಿ ಸೆರೆಮನೆಯಲ್ಲಿರುವವರ ವಿಷಯದಲ್ಲಿ ಅನುಕಂಪವನ್ನು ತೋರಿಸಿದರು. ಅವರು ತಮ್ಮ ಸಂಪತ್ತಿನ ನಷ್ಟವನ್ನು ಸ್ವೀಕರಿಸಿದರು ಯಾಕಂದರೆ ಅವರು ತಮ್ಮ ನಿಜವಾದ ಸಂಪತ್ತು ಪರಲೋಕದಲ್ಲಿದೆ ಎಂದು ತಿಳಿದಿದ್ದರು.

4. 10:36–39 ನ್ನು ಓದಿರಿ, ಅಲ್ಲಿ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಕಾಯ್ದುಕೊಳ್ಳಬೇಕೆಂದು ಮತ್ತು ಹಿಂತೆಗೆಯಬಾರದೆಂದು ಗ್ರಂಥಕರ್ತನು ಪ್ರಬೋಧಿಸುತ್ತಾನೆ. ಪ್ರಶ್ನೆಗಳಿಗೆ ಉತ್ತರಗಳು:

9. ಯಾರು ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುತ್ತಾರೋ ಅವರಿಗೆ ದೇವರು ಇದನ್ನು ವಾಗ್ದಾನ ಮಾಡಿದ್ದಾನೆ:

a. ಅವರು ಯೇಸುವಿನ ಬರೋಣದಲ್ಲಿ ಜಯಿಸುವರು.

b. ಅವರು ನಿತ್ಯಜೀವವನ್ನು ಹೊಂದುವರು (ಅವರು ತಮ್ಮ ನಂಬಿಕೆಯ ಪರಿಣಾಮವಾಗಿ ಜೀವಿಸುವರು).

c. ಅವರು ದೇವರ ನ್ಯಾಯತೀರ್ಪಿನ ಮೂಲಕ ರಕ್ಷಿಸಲ್ಪಡುವರು.

# ಉತ್ತರಗಳು 15: ತಮ್ಮಲ್ಲಿರುವ ನಂಬಿಕೆಯಿಂದಾಗಿ ಅವರೆಲ್ಲರೂ ಹೊಗಳಿಕೆಗೆ ಪಾತ್ರರಾದರು, 11:1–40

## ಟಿಪ್ಪಣಿ

ಈ ಅಧ್ಯಾಯವು "ನಂಬಿಕೆ ಮತ್ತು ಜೀವವನ್ನು ಹೊಂದಿಕೊಳ್ಳುವದು ಎಂದರೇನು ಎಂಬುದರ ಬಲವಾದ ಸ್ಪಷ್ಟೀಕರಣವಾಗಿದೆ" (ರೇಮಂಡ್ ಬ್ರೌನ್, ಪುಟ 196). ಅದನ್ನು ಮೊದಲಿನ ವಚನದ ಮುಂದಿನ ಸರಣಿಯಾಗಿ ಓದಬೇಕು, ಅಲ್ಲಿ ಕ್ರೈಸ್ತರು *ನಂಬುವವರಾಗಿ ರಕ್ಷಣೆಯನ್ನು ಹೊಂದುವವರಾಗಿದ್ದಾರೆ* ಎಂಬುದನ್ನು ಕಾಣುತ್ತೇವೆ (10:39). ಇಬ್ರಿಯರಿಗೆ ಬರೆದ ಪತ್ರದಲ್ಲಿ ಗ್ರಂಥಕರ್ತನು ಈ ಹಿಂದೆ ನಂಬಿಕೆಯಿಂದ ಪ್ರಾರಂಭಿಸಿ ಅದರಲ್ಲಿ ಮುಂದುವರೆಯದವರ (ಹಿಂಜರಿಯುವವರ ಅಥವಾ ವಚನಭ್ರಷ್ಟರ) ಆತ್ಮಿಕ ಪರಿಸ್ಥಿತಿಯನ್ನು ಚರ್ಚಿಸಿದ್ದಾನೆ. ಆದುದರಿಂದ ಈಗ ಆತನು "ತಾಳ್ಮೆ"ಯಿಂದ (10:36) ಇರಬೇಕೆಂದು ಮತ್ತು "ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಬೇಕೆಂದು" (10:39) ಬಯಸುವ ತನ್ನ ಓದುಗರ ಪರಿಸ್ಥಿತಿಗೆ ಅನುಗುಣವಾಗಿ "ನಂಬಿಕೆ"ಯ ಅರ್ಥವನ್ನು ವಿವರಿಸುವದು ಅವಶ್ಯವಾಗಿದೆ. ಆದುದರಿಂದ ಈ ಅಧ್ಯಾಯವು "ನಂಬಿಕೆ" ಯ ಕುರಿತು ಹೇಳಬಹುದಾದ ಸಂಗತಿಯನ್ನು ಹೊಂದಿಲ್ಲ.

## ಪ್ರಶ್ನೆಗಳಿಗೆ ಉತ್ತರಗಳು

1. 11:1–3 ಓದಿರಿ; ಇಲ್ಲಿ ಪ್ರಶ್ನೆಗಳಿಗೆ ಉತ್ತರಗಳಿವೆ:

    1. ನಂಬಿಕೆಯು ದೇವರ ವಾಕ್ಯವನ್ನು ಸ್ವೀಕರಿಸುತ್ತದೆ ಎಂದು ವಚನ 1 ಹೇಳುತ್ತದೆ. ಅದು ಸತ್ಯದ ಕುರಿತಾದ ದೇವರ ಸಂದೇಶವನ್ನು ಸತ್ಯವೇದದಲ್ಲಿ ಮಂಡಿಸಿರುವಂತೆಯೇ ಗಂಭೀರವಾಗಿ ಪರಿಗಣಿಸುತ್ತದೆ. ದೇವರ ವಾಗ್ದಾನದಿಂದಾಗಿ ನಾವು ಭವಿಷ್ಯತ್ತಿನೆಡೆಗೆ ದೃಷ್ಟಿಸಬಹುದು, ಆತನ ವಾಕ್ಯಗಳಲ್ಲಿ ನಂಬಿಕೆಯನ್ನು ಇಡಬೇಕೆಂದು ಅರಿತವರಾದ ನಾವು, ನಾವು ಕಾಣದೇ ಇರುವ ಅಥವಾ ಅನುಭವಿಸದೇ ಇರುವ ಸಂಗತಿಗಳನ್ನು ನಿಜವೆಂದು ತಿಳಿದುಕೊಳ್ಳಬಹುದು. ಆದರೆ ಇದರ ಅರ್ಥ ವಿಶ್ವಾಸಿಗಳು ಪ್ರಸ್ತುತ ಸಂಗತಿಗಳ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ ಅಂತಲ್ಲ. ಇಲ್ಲ, ಭವಿಷ್ಯತ್ತಿನ ಕುರಿತಾದ ದೇವರ ವಾಗ್ದಾನಗಳು ನಾವು ನಮ್ಮ ಪ್ರಸ್ತುತ ಜೀವಿತವನ್ನು ದೇವರಿಗೆ ಮೆಚ್ಚಿಕೆಯಾಗುವಂತೆ ಹೇಗೆ ಜೀವಿಸಬೇಕೆಂಬುದರ ಸರಿಯಾದ ತಿಳುವಳಿಕೆಯನ್ನು ಕೊಡುತ್ತವೆ.

    2. ಪೂರ್ವಜರು ನಂಬಿಕೆಯುಳ್ಳವರಾಗಿದ್ದದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು (ವ 2). ಅವರು ತಮ್ಮ ಸ್ವಂತ ಸನ್ನಿವೇಶಕ್ಕೆ ದೇವರ ವಾಕ್ಯವನ್ನು ಸ್ವೀಕರಿಸಿದರು ಮತ್ತು ಅದಕ್ಕೆ ದೇವರು ಮೆಚ್ಚುವ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಆದುದರಿಂದ ಈ ವಿಧದ ನಂಬಿಕೆ ದೇವರ ಸಮ್ಮತಿಯನ್ನು ಹೊಂದುತ್ತದೆ. ಒಬ್ಬ ವಿಶ್ವಾಸಿಗೆ ಮನುಷ್ಯರ ಸಮ್ಮತಿಗಿಂತ ದೇವರ ಸಮ್ಮತಿ ಹೆಚ್ಚು ಪ್ರಾಮುಖ್ಯವಾಗಿದೆ.

3. ವಚನ 3 ರಲ್ಲಿ ಗ್ರಂಥಕರ್ತನ ಅಭಿಪ್ರಾಯವೇನಂದರೆ ನಂಬಿಕೆಯು ದೇವರ ಬಲವನ್ನು ಗುರುತಿಸುತ್ತದೆ. ನಂಬಿಕೆಯಿಂದ ಮಾತ್ರ ದೇವರು ಏನೂ ಇಲ್ಲದೇ ಇರುವಾಗ ಲೋಕವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯ. ದೇವರ ಮಾತಿನಿಂದ ಅದು ಅಸ್ತಿತ್ವಕ್ಕೆ ಬಂದಿತು.

2. ಮೂವರು ನೀತಿವಂತ ಪುರುಷರ ಕುರಿತಾಗಿ 11:4–7 ರಲ್ಲಿ ಓದಿರಿ. ಪ್ರಶ್ನೆಗಳಿಗೆ ಉತ್ತರಗಳು:

4. ಹೇಬೆಲನ ನಂಬಿಕೆಯ ಕುರಿತು ನಾನು ಎರಡು ವ್ಯಾಖ್ಯಾನಗಳನ್ನು ಹೀಗೆ ಅರ್ಥೈಸಿಕೊಳ್ಳುತ್ತೇನೆ :

   a. *ನಂಬಿಕೆಯಿಂದಲೇ ಹೇಬೇಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು.* ಇದು ಆತನು ತನ್ನ ಯಜ್ಞವನ್ನು ಪ್ರಾಮಾಣಿಕತೆಯಿಂದ ಅರ್ಪಿಸಿದ್ದನ್ನು ಉಲ್ಲೇಖಿಸುತ್ತದೆ. ದೇವರು ಅದನ್ನು ನೋಡಿದನು ಮತ್ತು ಆತನನ್ನು *ನೀತಿವಂತನೆಂದು* ಪ್ರಕಟಿಸಿದನು.

   b. *ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ* ಎಂಬುದು ಆತನ ಯಜ್ಞದ ಪ್ರವಾದನಾತ್ಮಕ ಅಂಶವನ್ನು ಉಲ್ಲೇಖಿಸುತ್ತದೆ: *ಆದರೆ ಹಾಗೆಯೇ ಹೇಬೆಲನು ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದನು* (ಆದಿಕಾಂಡ 4:4). ಈ ಮೊದಲನೆಯ ಯಜ್ಞವು "ಚೊಚ್ಚಲು ಮಗನ ರಕ್ತವು" ಯೇಸುವಿನ ಮೂಲಕ ಸುರಿಯಲ್ಪಟ್ಟಾಗ, ನೆರವೇರಿತು. ಖಂಡಿತವಾಗಲೂ ಹೇಬೆಲನು ಯೇಸುವನ್ನು ಕಂಡಿರಲಿಲ್ಲ. ಆದುದರಿಂದ ಈ "ನಂಬಿಕೆಯ ಯಜ್ಞವು" ಹೆಬೇಲನು ಸತ್ತು ಹೋಗಿದ್ದರೂ ಸಹ ಇನ್ನೂ ನಮಗೆ ಸಾಕ್ಷಿಕರಿಸುತ್ತದೆ.

5. ಹನೋಕನು ದೇವರೊಂದಿಗೆ ನಂಬಿಗಸ್ತನಾಗಿ ನಡೆದದ್ದರಿಂದ ಆತನು ದೇವರನ್ನು ಮೆಚ್ಚಿಸಿದನು. ಆತನು ದೇವರನ್ನು ನಂಬಿದನು ಮತ್ತು ಆತನಲ್ಲಿ ವಿಶ್ವಾಸವನ್ನು ಇಟ್ಟಿದ್ದನು. ಆದುದರಿಂದ ದೇವರು ಆತನಲ್ಲಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಮೆಚ್ಚಿ ಆತನು ಶಾರೀರಿಕ ಮರಣವನ್ನು ಅನುಭವಿಸದಂತೆ ಆತನನ್ನು ಸನ್ಮಾನಿಸಿದನು.

6. ನೋಹನು ತನ್ನ ನಂಬಿಕೆಯಿಂದಲೇ *ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿದನು* ಎಂಬ ಹೇಳಿಕೆಯು ಈ ಕೆಳಗಿನದ್ದನ್ನು ಉಲ್ಲೇಖಿಸುತ್ತದೆ. ದೇವರ ವಾಕ್ಯದಲ್ಲಿ ಆತನು ನಂಬಿಕೆಯಿಟ್ಟನು (ಅದು ಅವನನ್ನು ನಾವೆಯನ್ನು ಕಟ್ಟಲು ಪ್ರೇರೇಪಿಸಿತು). ಆ ನಂಬಿಕೆಯು ಜಲಪ್ರಳಯ ಬಂದಾಗ ನೆರವೇರಿತು ಮತ್ತು ಆತನ ನಂಬಿಕೆಯಿಂದಾಗಿ ನಾವೆಯಲ್ಲಿ ಎಂಟು ಜನರು ರಕ್ಷಿಸಲ್ಪಟ್ಟರು. ಆದರೆ ಇನ್ನಿತರೆ ಎಲ್ಲಾ ಜನರು *(ಲೋಕದವರು)* ತೀರ್ಪಿಗೆ ಒಳಗಾಗಿದ್ದರಿಂದ ಜಲಪ್ರಳಯದಲ್ಲಿ ನಾಶವಾದರು.

3. ಅಬ್ರಹಾಮ ಮತ್ತು ಅವನ ಕುಟುಂಬದ ಕುರಿತಾಗಿ **11:8–12 ನ್ನು ಓದಿರಿ.** ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ:

7. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಈ ಮೊದಲು ಅಬ್ರಹಾಮನ ಕುರಿತಾಗಿ ಮೂರು ಸಾರಿ ಹೇಳಲ್ಪಟ್ಟಿದೆ. ಆತನ ಕುರಿತಾಗಿ ಇವುಗಳನ್ನು ನಾವು ಅಲ್ಲಿ ಕಲಿಯುತ್ತೇವೆ:

a. ಇಬ್ರಿಯ 2:16: ಅಬ್ರಹಾಮನು (ಯೆಹೂದ್ಯರಿಗೆ ಮಾತ್ರವಲ್ಲ) ಎಲ್ಲಾ ವಿಶ್ವಾಸಿಗಳಿಗೆ (ರೋಮಾ 4:12, 16 ಸಹ ನೋಡಿರಿ) ತಂದೆಯಾಗಿದ್ದಾನೆ.

b. ಇಬ್ರಿಯ 6:13–15: ಅಬ್ರಹಾಮನು ನಂಬಿಕೆ ಮತ್ತು ತಾಳ್ಮೆಯ ಮೂಲಕ ವಾಗ್ದಾನದ ಬಾಧ್ಯತೆಯನ್ನು ಹೊಂದಿದ ವ್ಯಕ್ತಿಗೆ ಉದಾಹರಣೆಯಾಗಿದ್ದಾನೆ.

c. ಇಬ್ರಿಯ 7:1–10: ಅಬ್ರಹಾಮನು (ಲೇವಿಯ ಕುಲದ ಮಹಾಯಾಜಕರ ಪೂರ್ವಜನಂತೆ) ಮೆಲ್ಕಿಜೆದೇಕನಿಗಿಂತ (ಶ್ರೇಷ್ಠ ಮಹಾಯಾಜಕನು ಹಾಗೂ ಯೇಸುವಿನ ತರಹದವನು) ಕನಿಷ್ಠನಾಗಿದ್ದಾನೆ.

8. ಇಬ್ರಿಯ 11:8–12 ರಲ್ಲಿ ಗ್ರಂಥಕರ್ತನು ಅಬ್ರಹಾಮ ಮತ್ತು ಸಾರಳನ್ನು ನಂಬಿಕೆಯ ವಿವಿಧ ಅಂಶಗಳಿಗಾಗಿ ಉದಾಹರಣೆಯಾಗಿ ಉಪಯೋಗಿಸುತ್ತಾನೆ. ಆ ಅಂಶಗಳು ಯಾವವೆಂದರೆ:

a. ವಿಧೇಯತೆಯ ನಂಬಿಕೆ (ವ 8): ಅಬ್ರಹಾಮನು ದೇವರು ತನ್ನನ್ನು ಎಲ್ಲಿಗೆ ನಡೆಸುತ್ತಾನೆ ಎಂಬುದು ತಿಳಿಯದೇ ಇದ್ದಾಗಲೂ ದೇವರ ಕರೆಗೆ ವಿಧೇಯನಾದನು.

b. ತ್ಯಾಗಪೂರ್ವಕವಾದ ನಂಬಿಕೆ (ವ 8–9): ದೇವರಿಗೆ ವಿಧೇಯನಾಗಬೇಕೆಂಬ ಅಬ್ರಹಾಮನ ಇಚ್ಛೆಯು ಆತನು ಅನೇಕ ತ್ಯಾಗಪೂರ್ವಕ ವರ್ಷಗಳನ್ನು ಕಳೆಯುವಂತೆ ಮಾಡಿತು. ಆತನು ತನ್ನ ಸ್ವದೇಶವನ್ನು ಬಿಡಬೇಕಾಯಿತು (ಸಂಬಂಧಿಕರನ್ನು ಮತ್ತು ಸ್ನೇಹಿತರನ್ನು) ಮತ್ತು ತನ್ನ ಅನಕೂಲಕರ ಜೀವಿತವನ್ನು (ಪಟ್ಟಣದ ಜೀವಿತ, ಮನೆ, ಉತ್ತಮವಾದ ಆಹಾರವನ್ನು) ಬಿಟ್ಟು ಅಲೆಮಾರಿ ಜೀವಿತವನ್ನು ಅಪರಿಚಿತ ದೇಶದಲ್ಲಿ ಗುಡಾರಗಳಲ್ಲಿ ಕಳೆಯಬೇಕಾಯಿತು.

c. ಧೈರ್ಯದ ನಂಬಿಕೆ (ವ 8): ದೇವರಿಗೆ ವಿಧೇಯನಾಗಲು ಸಿದ್ಧನಾಗಿರುವ ಅಬ್ರಹಾಮನಿಗೆ ಬಹಳಷ್ಟು ಧೈರ್ಯದ ಅವಶ್ಯಕತೆಯಿತ್ತು. ನೀವು ಎಲ್ಲಿಗೆ ಮುಟ್ಟುತ್ತೀರೀ ಎಂಬುದನ್ನು ಅರಿಯದೇ ನಿಮ್ಮ ಮನೆಯನ್ನು ಬಿಟ್ಟುಹೋಗುವದು ನಿಜವಾಗಲೂ ಅಪಾಯಕಾರಿಯಾಗಿದೆ. ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಬಹಳ ಸಮಯದ ನಂತರ – ಅಂದರೆ ಅವನು ಕಾನಾನಿಗೆ ಪ್ರವೇಶಿಸಿದ ನಂತರ – ನೆರವೇರಿತು ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

d. ಛಲವುಳ್ಳ ನಂಬಿಕೆ (ವ 9, 11–12): ದೇವರು ಅಬ್ರಹಾಮನಿಗೆ ಮಾಡಿದ ಹೆಚ್ಚಾದ ವಾಗ್ದಾನಗಳು ಆತನ ಜೀವಿತಕಾಲದಲ್ಲಿ ನೆರವೇರಲಿಲ್ಲ. ಆತನು 'ವಾಗ್ದಾನದ ಮಗನಿಗಾಗಿ''," ಅಂದರೆ ಇಸಾಕನಿಗಾಗಿ ಅನೇಕ ವರ್ಷಗಳು ಕಾಯಬೇಕಾಯಿತು. ಆತನು ತನ್ನ ಅಸಂಖ್ಯಾತ ಸಂತತಿಯನ್ನು ನೋಡಲೇ ಇಲ್ಲ. ಆತನು ಸ್ವತಃ ಎಂದಿಗೂ ವಾಗ್ದಾನ ದೇಶದಲ್ಲಿ ನೆಲೆಯಾಗಿರಲಿಲ್ಲ. ಆದರೆ ಆತನು ದೇವರ ವಾಗ್ದಾನಗಳಲ್ಲಿ ಅವು ನೆರವೇರುವದನ್ನು ಕಾಣದೇ ಹೋದಾಗ್ಯೂ ನಂಬಿಕೆಯನ್ನಿಟ್ಟಿದ್ದನು.

e. ದೇವರನ್ನು ಅವಲಂಬಿಸಿದ ನಂಬಿಕೆ (ವ 11–12): ಅಬ್ರಹಾಮ ಮತ್ತು ಸಾರಳು ಮಗುವನ್ನು ಹೆರುವದಕ್ಕೆ ದಿನಹೋದವರಾಗಿದ್ದರು, ಆದುದರಿಂದ ಅವರಿಗೆ ಮಗನನ್ನು ನೀಡುವೆನೆಂದು ದೇವರು ಮಾಡಿದ ವಾಗ್ದಾನವನ್ನು ನೆರವೇರಿಸಲು ಒಂದು ಅದ್ಭುತದ

ಅವಶ್ಯಕತೆಯಿತ್ತು. ಹಾಗಾಗಿ ಅವರ ನಂಬಿಕೆಯು 'ಸ್ವಾಭಾವಿಕ ಪರಿಸ್ಥಿತಿಗಳನ್ನು' ಅವಲಂಬಿಸಿರಲಿಲ್ಲ. ಇಲ್ಲ, ಅದು ಸಂಪೂರ್ಣವಾಗಿ ದೇವರನ್ನು ಅವಲಂಬಿಸಿತ್ತು.

4. ನಂಬಿಕೆಯ ಗುಣಲಕ್ಷಣಗಳ ಕುರಿತಾಗಿ **11:13–16 ನ್ನು ಓದಿರಿ**. ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ:

   9. ನಾನು ಈ ವಚನಗಳಲ್ಲಿ ಚಿತ್ರಿಸಲ್ಪಟ್ಟಿರುವ ನಂಬಿಕೆಯ ಗುಣಗಳನ್ನು (ಗುಣಲಕ್ಷಣಗಳನ್ನು) ಈ ರೀತಿಯಾಗಿ ಅರ್ಥೈಸಿಕೊಳ್ಳುತ್ತೇನೆ (ರೇಮಂಡ್ ಬ್ರೌನ್‌ರವರನ್ನು ಆಧರಿಸಿದೆ, ಪುಟ 206–208):

      a. ಈ ನಂಬಿಕೆಯ ಜನರಿಗೆ ದೇವರ ಮೇಲೆ ವಿಶ್ವಾಸವಿತ್ತು: ಅವರು ಯೇಸುವಿನ ಮೂಲಕ ದೇವರ ರಕ್ಷಣೆಯನ್ನು ಅನುಭವಿಸದೇ ಮರಣಹೊಂದಿದರು. ಆದರೆ ಅವರು ಅದನ್ನು ತಮ್ಮ ಆತ್ಮಿಕ ಕಣ್ಣುಗಳಿಂದ ನೋಡಿದ್ದರು ಮತ್ತು ದೇವರು ತನ್ನ ಯೋಜನೆಗಳನ್ನು ನೆರವೇರಿಸುತ್ತಾನೆ ಎಂದು ಅವರು ನಂಬಿದ್ದರು.

      b. ನಂಬಿಕೆಯ ಈ ಜನರು ತಮ್ಮ ಸುತ್ತಲೂ ಇರುವ ಜನರಿಗೆ ಸಾಕ್ಷಿಯಾಗಿದ್ದರು: ಅವರು ತಾವು *ಭೂಲೋಕದಲ್ಲಿ ಪರದೇಶದವರು* ಮತ್ತು *ಅಪರಿಚಿತರು* ಆಗಿದ್ದೇವೆ ಎಂಬುದನ್ನು ಒಪ್ಪಿಕೊಂಡಿದ್ದರು ಮತ್ತು ಅವರ ಜೀವನ ಶೈಲಿಯು ಅವರ ಜೊತೆಯಲ್ಲಿದ್ದ ಮಾನವರಿಗೆ ದೇವರ ಪರಲೋಕದ ಕುರಿತು ಸಾಕ್ಷಿಯಾಗಿತ್ತು.

      c. ನಂಬಿಕೆಯ ಈ ಜನರಿಗೆ ಒಂದು ಗುರಿಯಿತ್ತು: ಅವರು ದೇವರು ತಮಗಾಗಿ ಮೀಸಲಿಟ್ಟಿರುವ ತಮ್ಮ ಸ್ವಂತ ದೇಶವನ್ನು ಹುಡುಕುತ್ತಿದ್ದರು. ಅವರು ಮುಂದೆ ನೋಡುವವರಾಗಿದ್ದರು ಹಿಂದಕ್ಕೆ ಅಲ್ಲ.

      d. ನಂಬಿಕೆಯ ಈ ಜನರು ಈ ಲೋಕದಲ್ಲಿ ಹೇಗೆ ಜೀವಿಸಬೇಕು ಎಂಬುದನ್ನು ತಿಳಿದುಕೊಂಡಿದ್ದರು: ಅವರು ಭೂಲೋಕದಲ್ಲಿ *ಪರದೇಶದವರೂ ಪ್ರವಾಸಿಗಳು* ಆಗಿದ್ದೇವೆ ಎಂಬುದನ್ನು ಅರಿತುಕೊಂಡಿದ್ದರು, ಆದುದರಿಂದ ಅವರು ಈ ಲೋಕದಲ್ಲಿ ಆಳವಾಗಿ ನೆಲೆಗೊಳ್ಳಲಿಲ್ಲ.

      e. ನಂಬಿಕೆಯ ಈ ಜನರು ತಮ್ಮ ಭದ್ರತೆಯನ್ನು ದೇವರಲ್ಲಿ ಇಟ್ಟಿದ್ದರು: ಆದುದರಿಂದ ದೇವರು *ಅವರ ದೇವರೆಂದು ಕರೆಯಲ್ಪಡುವದಕ್ಕೆ ನಾಚಿಕೊಳ್ಳಲಿಲ್ಲ*. ಆತನು ಅವರಿಗಾಗಿ ಮತ್ತು ಯಾರ್ಯಾರು ಅವರ ನಂಬಿಕೆಯ ಹೆಜ್ಜೆಗಳನ್ನು ಅನುಸರಿಸಿದರೋ ಅವರೆಲ್ಲರಿಗೂ ಭದ್ರವಾದ ಪಟ್ಟಣವನ್ನು ಸಿದ್ಧಮಾಡಿದನು.

5. ಎಲ್ಲಾ ವಿಧವಾದ ಪರಿಸ್ಥಿತಿಗಳಲ್ಲಿ ನಂಬಿಕೆಯ ಕುರಿತು **11:17–18 ನ್ನು ಓದಿರಿ;** ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ:

   10. ಅಬ್ರಹಾಮನು ದೇವರ ವಾಗ್ದಾನವನ್ನು ಹೊಂದಿದನು. ಈ ವಾಗ್ದಾನದಲ್ಲಿ ಬರುವ ನಂಬಿಕೆಯು ಅವನ ಸಂತತಿಯೊಂದಿಗೆ ಹೀಗೆ ಮುಂದುವರೆಯಿತು (ವ 17–22)

       a. ಅಬ್ರಹಾಮನು ತನ್ನ "ವಾಗ್ದಾನದ ಪುತ್ರನಾದ" ಇಸಾಕನನ್ನು ಸಮರ್ಪಿಸಲು ಕೇಳಿದಾಗ್ಯೂ ದೇವರ ಮೇಲೆ ವಿಶ್ವಾಸವನ್ನಿಟ್ಟಿದ್ದನು.

b. ಇಸಾಕನು ತನ್ನ ಪುತ್ರರನ್ನು ತಪ್ಪಾದ ಕ್ರಮದಲ್ಲಿ ಆಶೀರ್ವದಿಸಿದಾಗಲೂ ದೇವರ ಯೋಜನೆಯನ್ನು ಅನುಸರಿಸಿದನು. ಆತನ ಕಿರಿಯ ಮಗನಾದ ಯಾಕೋಬನ ಮೂಲಕ ದೇವರ ವಾಗ್ದಾನವು ನೆರವೇರಬೇಕಾಗಿತ್ತು.

c. ಯಾಕೋಬನು ಈಜಿಪ್ಟಿನಲ್ಲಿ ಮರಣ ಹೊಂದುವವುದಕ್ಕಿಂತ ಮುಂಚೆ ತನ್ನ ಮಕ್ಕಳನ್ನು ಆಶೀರ್ವದಿಸಿದನು. ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಅವರ ಮೂಲಕವಾಗಿ ನೆರವೇರುವದು ಎಂಬುದನ್ನು ಆತನು ತಿಳಿದಿದ್ದನು.

d. ಯೋಸೆಫನು ತನ್ನ ಸಂತತಿಯವರಿಗೆ ಅವರು ವಾಗ್ದಾತ್ತ ದೇಶಕ್ಕೆ ಹಿಂತಿರುಗುವಾಗ ತನ್ನ ಎಲುಬುಗಳನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದು ದೇವರ ವಾಗ್ದಾನದ ಮೇಲೆ ಆತನಿಗಿರುವ ನಂಬಿಕೆಯನ್ನು ಸೂಚಿಸುತ್ತದೆ.

11. ಮೋಶೆಯು ಸಿನಾಯಿ ಬೆಟ್ಟದಲ್ಲಿ ಧರ್ಮಶಾಸ್ತ್ರವನ್ನು ಪಡೆದನು ಮತ್ತು ಇಸ್ರಾಯೇಲ್ಯರನ್ನು ವಾಗ್ದಾನ ದೇಶಕ್ಕೆ ಮರಳಿ ನಡೆಸುವ ದೇವರ ಸೇವಕನಾದನು. ಆತನ ಕಥೆಯ ಮೂಲಕ ನಾವು ನಂಬಿಕೆಯ ಕುರಿತಾಗಿ ಐದು ಸಂಗತಿಗಳನ್ನು ಕಲಿಯತ್ತೇವೆ (ವ 23–29) (ರೇಮಂಡ್ ಬ್ರೌನ್‌ರವರನ್ನು ಆಧರಿಸಿದೆ, ಪುಟ 214–219):

a. ನಂಬಿಕೆಯು ನಮ್ಮ ಭಯದ ಮೇಲೆ ಜಯವನ್ನು ಹೊಂದುತ್ತದೆ (ವ 23)

b. ನಂಬಿಕೆಯು ನಮ್ಮ ಆಯ್ಕೆಯನ್ನು ನಿರ್ಧರಿಸುತ್ತದೆ (ವ 24–26)

c. ನಂಬಿಕೆಯು ನಮ್ಮ ದರ್ಶನವನ್ನು ತೀವ್ರಗೊಳಿಸುತ್ತದೆ. (ವ 27)

d. ನಂಬಿಕೆಯು ದೇವರ ಮೇಲೆ ನಮ್ಮ ಅವಲಂಬನೆಯನ್ನು ಗುರುತಿಸುತ್ತದೆ (ವ 28)

e. ನಂಬಿಕೆಯು ನಮ್ಮ ಕಷ್ಟಗಳ ಮೇಲೆ ಜಯವನ್ನು ಸಾಧಿಸುತ್ತಾರೆ (ವ 29)

12. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ನಂತರ ಹಿಂದಿರುಗಿ ವಾಗ್ದಾನ ದೇಶಕ್ಕೆ ಜಿಗಿಯುತ್ತಾ ನಂಬಿಕೆಯ ಈ ಉದಾಹರಣೆಗಳನ್ನು ನೀಡುತ್ತಾನೆ (ವ 30–38):

a. ಯೆರಿಕೋವಿನ ಪತನ: ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿ ನಂಬಿಕೆ

b. ಸೂಳೆಯಾದ ರಾಹಾಬಳು: ಆಕೆಯ ನಂಬಿಕೆಯು ಅವಕಾಶವನ್ನು ಕಂಡಿತು ಮತ್ತು ಅಪಾಯವನ್ನು ಎದುರಿಸಿತು.

c. ನ್ಯಾಯಸ್ಥಾಪಕರು, ಅರಸನಾದ ದಾವೀದನು, ಸಮುವೇಲನು ಮತ್ತು ಇತರ ಪ್ರವಾದಿಗಳು ಮತ್ತು ಹೆಸರಿಸದೇ ಇರುವ ನಂಬಿಕೆಯ ನಾಯಕರು; ಎಲ್ಲಾ ವಿಧದ ಪರಿಸ್ಥಿತಿಗಳಲ್ಲಿ ನಂಬಿಕೆಯನ್ನು ಹೊಂದಿದ್ದರು.

6. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು 11:39–30 ರಲ್ಲಿ ತನ್ನ ಮುಕ್ತಾಯದ ವಾಕ್ಯಗಳನ್ನು ನೀಡುತ್ತಾನೆ, ಅದನ್ನು ಓದಿರಿ; ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ:

13. ಎಲ್ಲಾ 'ನಂಬಿಕೆಯ ನಾಯಕರುಗಳು' ಸಾಮಾನ್ಯವಾಗಿ ಎರಡು ಸಂಗತಿಗಳನ್ನು ಹೊಂದಿದ್ದಾರೆ:

a. ದೇವರು ಅವರ ನಂಬಿಕೆಯನ್ನು ಮೆಚ್ಚಿದನು.

b. ಯಾರೂ ದೇವರ ವಾಗ್ದಾನವನ್ನು (ಯೇಸು ಕ್ರಿಸ್ತನಲ್ಲಿ ದೇವರ ಪ್ರಕಟನೆ) ಹೊಂದಲಿಲ್ಲ.

14. ವಚನ 40 ನ್ನು ನಾವು ಹೀಗೆ ಅರ್ಥೈಸಿಕೊಳ್ಳಬೇಕು:

a. ದೇವರಿಂದ ಯೋಜಿಸಿರುವ 'ಉತ್ತಮವಾದದ್ದು' ಯೇಸು ಕ್ರಿಸ್ತನಲ್ಲಿ ತೋರಿಸಿರುವ ತನ್ನ ಸಂಪೂರ್ಣ ಪ್ರಕಟನೆಯಾಗಿದೆ.

b. ಪರಿಪೂರ್ಣತೆ (ಅಥವಾ ನೆರವೇರಿಕೆ) ಯೇಸುವಿನ ಮತ್ತು ಹೊಸ ಒಡಂಬಡಿಕೆಯಲ್ಲಿರುವ ಆತನ ತ್ಯಾಗಬಲಿಯ ಮೂಲಕ ಮಾತ್ರ ಬರುತ್ತದೆ.

c. 'ದೇವರ ಮನೆಯು' ಹಳೆ ಒಡಂಬಡಿಕೆಯ ನಂಬಿಗಸ್ತ ಮತ್ತು ಹೊಸ ಒಡಂಬಡಿಕೆಯ ಸದಸ್ಯರುಗಳನ್ನು ಒಳಗೊಂಡಿದೆ. ಎಲ್ಲರೂ ಯೇಸು ಕ್ರಿಸ್ತನ ಮೂಲಕ ವಿಮೋಚಿಸಲ್ಪಟ್ಟಿದ್ದಾರೆ, ಆತನೇ ನಮ್ಮ ನಂಬಿಕೆಯನ್ನು ಪರಿಪೂರ್ಣಗೊಳಿಸುವ ಎಕೈಕ ವ್ಯಕ್ತಿ (12:2).

# ಉತ್ತರಗಳು 16: ಯೇಸುವಿನ ಮೇಲೆ ನಮ್ಮ ದೃಷ್ಟಿಯನ್ನಿಡೋಣ, 12:1–3

## ಪ್ರಶ್ನೆಗಳಿಗೆ ಉತ್ತರಗಳು

1. ಹಿಂದಿನ ಅಧ್ಯಾಯ ಮತ್ತು ಈ ವಾಕ್ಯ ಭಾಗದ ನಡುವೆ ಇರುವ ಸಂಬಂಧವನ್ನು ಗ್ರಂಥಕರ್ತನು ಎರಡು ವಿಧದಲ್ಲಿ ತೋರಿಸುತ್ತಾನೆ:

    a. ಆತನು ಹೊಸ ವಾಕ್ಯಭಾಗವನ್ನು 'ಆದಕಾರಣ' ಎಂಬ ಪದದಿಂದ ಪ್ರಾರಂಭಿಸುತ್ತಾನೆ.

    b. ಆತನು 'ಸಾಕ್ಷಿಯವರು ಮೇಘದೋಪಾದಿಯಲ್ಲಿ' ಎಂಬ ಪದಪ್ರಯೋಗವನ್ನು ಹಿಂದಿನ ಅಧ್ಯಾಯದಲ್ಲಿ ಪಟ್ಟಿ ಮಾಡಿರುವ 'ನಂಬಿಕೆಯ ನಾಯಕರನ್ನು' ಉಲ್ಲೇಖಿಸಲು ಉಪಯೋಗಿಸುತ್ತಾನೆ.

2. ವಚನ 1 ರಲ್ಲಿ ಗ್ರಂಥಕರ್ತನು ಓಟ ಎಂಬ ರೂಪಕಾಲಂಕಾರವನ್ನು ಉಪಯೋಗಿಸುತ್ತಾನೆ. ಒಬ್ಬ ವಿಶ್ವಾಸಿಯ ಜೀವಿತವು ಓಟದ ಪಂದ್ಯವಿದ್ದಂತೆ. ಪೌಲನು ಇದೇ ರೂಪಕಾಲಂಕಾರವನ್ನು 1 ಕೊರಿಂಥ 9:24 ಮತ್ತು ಗಲಾತ್ಯ 2:2 ರಲ್ಲಿ ಉಪಯೋಗಿಸುತ್ತಾನೆ. ಹೆಲಿನಿಸ್ಟಿಕ್ ಸಮಯದಲ್ಲಿ ಆಟದಲ್ಲಿ ಭಾಗಿಯಾಗುವವರು ಬಟ್ಟೆಗಳನ್ನು ಧರಿಸುತ್ತಿರಲಿಲ್ಲ. ಆದುದರಿಂದ ರೂಪಕಾಲಂಕಾರವು *ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ತೆಗೆದಿಟ್ಟು* ಎಂದು ಪ್ರಾರಂಭವಾಗುತ್ತದೆ.



3. ಈ ವಾಕ್ಯಭಾಗದಲ್ಲಿ ನಾವು ಈ ಎರಡು ವಿಷಯಗಳನ್ನು ಎಸೆದುಬಿಡಬೇಕೆಂದು ಹೇಳಲಾಗಿದೆ:

    a. ನಮ್ಮ ಓಟಕ್ಕೆ ಅಭ್ಯಂತರ ಉಂಟು ಮಾಡುವ ಎಲ್ಲವನ್ನೂ. ಇದರ ಅರ್ಥ, ನಮ್ಮ ಕ್ರೈಸ್ತ ಸಾಕ್ಷಿಯನ್ನು ಬಲಹೀನಗೊಳಿಸುವ ಮತ್ತು ದೇವರ ಮಹಿಮೆಯನ್ನು ಪ್ರತಿಬಿಂಬಿಸಲು ಅಭ್ಯಂತರವಾಗಿರುವ ಎಲ್ಲವನ್ನೂ ನಾವು ನಮ್ಮಿಂದ ತೊರೆದುಬಿಡಬೇಕು.

    b. ಈ ಲೋಕದ ಎಲ್ಲಾ ಸಾಮಾನ್ಯ ಪಾಪಗಳು ನಮ್ಮ ಕ್ರೈಸ್ತ ಜೀವಿತವನ್ನು ನಾಶಮಾಡುತ್ತವೆ ಮತ್ತು ನಮ್ಮನ್ನು ದೇವರ ರಕ್ಷಣೆಯಿಂದ ದೂರ ನಡೆಸುತ್ತವೆ.

4. ನಮಗೆ ಸ್ಥಿರಚಿತ್ತದ ಅವಶ್ಯಕತೆಯಿದೆ ಇದರಿಂದಾಗಿ ನಮ್ಮ ಜೀವಿತದಲ್ಲಿ ದೇವರ ಯೋಜನೆ (ಆತನು ನಮಗಾಗಿ ನೇಮಿಸಿರುವ ಓಟವು) ನೆರವೇರುವುದು.

5. ವಚನ 2–3ರಲ್ಲಿ ಯೇಸುವನ್ನು ಹೀಗೆ ವರ್ಣಿಸಲಾಗಿದೆ:

c. ಆತನು ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುವವನು: 'ಜನಕ (ಕರ್ತೃ)' ಎಂಬ ಗ್ರೀಕ್ ಪದವನ್ನು NIV ಯಲ್ಲಿ 'ನಾಯಕ' ಮತ್ತು 'ಸಂಸ್ಥಾಪಕ' ಎಂದು ಅನುವಾದಿಸಲಾಗಿದೆ. ಯೇಸು ಕೇವಲ ನಮ್ಮ ಕ್ರಿಸ್ತೀಯ ನಂಬಿಕೆಯ ಮೂಲ (ಪ್ರಾರಂಭ) ಮಾತ್ರವಲ್ಲ, ಆತನು ನಾವು ನಮ್ಮ ಕ್ರಿಸ್ತೀಯ ನಂಬಿಕೆಯನ್ನು ಹೇಗೆ ಜೀವಿಸಬೇಕು ಎಂದು ತೋರಿಸಿಕೊಡುವ ನಾಯಕನೂ ಸಹ ಆಗಿದ್ದಾನೆ.

d. ಆತನು ನಮ್ಮ ನಂಬಿಕೆಯನ್ನು ಪರಿಪೂರ್ಣಗೊಳಿಸುವವನಾಗಿದ್ದಾನೆ: ಆತನು ಪರಲೋಕದಲ್ಲಿ ನಮಗಾಗಿ ವಿಜ್ಞಾಪಿಸುವ ನಮ್ಮ ಮಹಾಯಾಜಕನಾಗಿದ್ದಾನೆ ಮತ್ತು ತನ್ನ ಪವಿತ್ರಾತ್ಮನನ್ನು ನಮಗೆ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಲು ಕಳುಹಿಸುವಾತನಾಗಿದ್ದಾನೆ. ಆತನ ಮೂಲಕ ಮಾತ್ರ ನಮ್ಮ ನಂಬಿಕೆ ಪರಿಪೂರ್ಣವಾಗುತ್ತದೆ. 'ಪರಿಪೂರ್ಣವಾದ ನಂಬಿಕೆಯು' ನಿಜವಾಗಲೂ ಹೇಗೆ ತೋರಿಬರುತ್ತದೆ ಎಂಬುದಕ್ಕೆ ಆತನೇ ನಮ್ಮ ಮಾದರಿಯಾಗಿದ್ದಾನೆ.

e. ಆತನು ಕಷ್ಟಾನುಭವವನ್ನು ಅನುಭವಿಸುವ ಯೇಸುವಾಗಿದ್ದಾನೆ: ಆತನು ನಮ್ಮ ಯಜ್ಞವಾಗಿದ್ದಾನೆ, ನಮಗಾಗಿ ಕಷ್ಟಾನುಭವವನ್ನು ಅನುಭವಿಸಿ ತನ್ನ ಜೀವವನ್ನು ನಮ್ಮ ವಿಮೋಚನೆಗಾಗಿ ಕ್ರೂಜೆಯ ಮೇಲೆ ನೀಡಿದಾತನಾಗಿದ್ದಾನೆ.

f. ಆತನು ಜಯಶಾಲಿಯಾದ ಯೇಸುವಾಗಿದ್ದಾನೆ: ಆತನು ಮರಣದಿಂದ ಜಯವೀರನಾಗಿ ಎದ್ದು ಪರಲೋಕಕ್ಕೆ ಏರಿ ಹೋಗಿ "ಕುಳಿತು ಕೊಂಡಿದ್ದಾನೆ" (ಅದು ಕಾರ್ಯವು ಪೂರ್ಣವಾಗಿ ಸಾಧಿಸಲ್ಪಟ್ಟಿತು ಎಂಬುದರ ಸಂಕೇತವಾಗಿದೆ).

g. ಆತನು ನಮಗೆ ಶ್ರೇಷ್ಠ ಮಾದರಿಯಾಗಿದ್ದಾನೆ: ಆತನು ಅನುಭವಿಸಿರುವದಕ್ಕಿಂತ ಹೆಚ್ಚು ಕಷ್ಟಾನುಭವವನ್ನು ಈ ಲೋಕದಲ್ಲಿ ಯಾರೂ ಅನುಭವಿಸಿಲ್ಲ. ನಾವು ಅನುಭವಿಸುವ ಕಷ್ಟಾನುಭವ ಮತ್ತು ಹಿಂಸೆಯನ್ನು ಆತನು, ದೇವರ ಮಗನು ಅನುಭವಿಸಿರುವದಕ್ಕೆ ಹೋಲಿಸಲು ಸಾಧ್ಯವಿಲ್ಲ, ಮಾನವಕುಲದ ಪಾಪಕ್ಕಾಗಿ ಪಾಪರಹಿತನಾದ ಆತನು ಹಿಂಸೆಯನ್ನು ಅನುಭವಿಸಬೇಕಾಯಿತು.

6. ನಾವು ನಮ್ಮ ಜೀವಿತಗಳನ್ನು ಜೀವಿಸುತ್ತಿರುವಾಗ *(ನಮ್ಮ ಮುಂದೆ ಇಟ್ಟಿರುವ ಓಟವನ್ನು ಓಡುತ್ತಿರುವಾಗ)* 'ಮನಗುಂದಿದವರಾಗಿ ಬೇಸರಗೊಳ್ಳದಂತೆ' ಯೇಸುವನ್ನು ಕುರಿತು 'ಯೋಚಿಸೋಣ' ಮತ್ತು ನಮ್ಮ 'ದೃಷ್ಟಿಯನ್ನು' ಆತನ ಮೇಲಿಡೋಣ. ನಾವು "ಯೇಸುವನ್ನು ಪರಿಗಣಿಸಿದಾಗ" ಮತ್ತು "ಆತನ ಮೇಲೆ ನಮ್ಮ ದೃಷ್ಟಿಯನ್ನು ನೆಲೆಗೊಳಿಸಿದಾಗ ಮಾತ್ರ ನಮ್ಮ ನಂಬಿಕೆ ಸುರಕ್ಷಿತವಾಗಿರುತ್ತದೆ. ಇಲ್ಲವಾದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆ ಬರೆಯಲ್ಪಟ್ಟ ಸಮಯದಲ್ಲಿದ್ದ ಅನೇಕ ವಿಶ್ವಾಸಿಗಳಂತೆ ನಾವು – ನಮ್ಮ ನಂಬಿಕೆಯನ್ನು ಕಳೆದುಕೊಳ್ಳುತ್ತೇವೆ ಮತ್ತು ವಚನಭ್ರಷ್ಟರಾಗುತ್ತೇವೆ.

# ಉತ್ತರಗಳು 17: ಕರ್ತನ ಶಿಸ್ತುಪಾಲನೆ, 12:4–11

## ಪ್ರಶ್ನೆಗಳಿಗೆ ಉತ್ತರಗಳು

1. ಕರ್ತನ ಶಿಸ್ತು ಪಾಲನೆಯ ಮತ್ತು ಹಿಂದಿನ ಯೇಸುವಿನ ಮೇಲೆ ದೃಷ್ಟಿಯನ್ನಿಡೋಣದ ಕುರಿತು (ವ 1–3) ಈ ವಚನಗಳ (ವ 4–11) ಮಧ್ಯದಲ್ಲಿರುವ ತಾರ್ಕಿಕ ಸಂಬಂಧವು, ಯೇಸುವಿನ ಕಷ್ಟಾನುಭವ (ವ 2–3) ಮತ್ತು ನಮ್ಮ ಕಷ್ಟಾನುಭವವಾಗಿದೆ (ವ 4). ಅದಲ್ಲದೆ "ಆತನ ಮುಂದೆ ಇಟ್ಟಿರುವ ಸಂತೋಷ" (ಬಹುಶಃ ಆತನ ಕಷ್ಟಾನುಭವದ ಪರಿಣಾಮವಾಗಿರುವ ಜಯವನ್ನು ಉಲ್ಲೇಖಿಸುವದಾಗಿರಬಹುದು) ಮತ್ತು ನಮ್ಮ ಮುಂದೆ ಇರುವ ಗುರಿಯೂ ಸಹ ಆಗಿದೆ. ದೇವರ ಮಕ್ಕಳಾದ ನಮಗೆ ಆತನೊಂದಿಗೆ ಪರಲೋಕದ ಆತನ ಮಹಿಮೆಯಲ್ಲಿ ನಿತ್ಯವಾದ ಭವಿಷ್ಯವಿದೆ.

2. ಯೇಸು ತನ್ನ ಶಿಷ್ಯರಿಗೆ ಹೇಳಿದಂತೆ (ಮತ್ತಾಯ 10:22) ಬಿದ್ದುಹೋಗಿರುವಂತ ಪಾಪಮಯವಾದ ಈ ಲೋಕದಲ್ಲಿ ಯೇಸುವಿನ ಹಿಂಬಾಲಕರಾಗಿ ನಾವು ಕಷ್ಟಾನುಭವ, ಶೋಧನೆ ಮತ್ತು ಪರೀಕ್ಷೆಯನ್ನು ನಿರೀಕ್ಷಿಸಬೇಕು. ನಾವು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಮಗೆ ಸಂಭವಿಸಲು ದೇವರು ಅನುಮತಿಸುವದಿಲ್ಲ (1 ಕೊರಿಂಥ 10:13). ನಾವು ಕಠಿಣವಾದ ಅನುಭವಗಳನ್ನು ನಿರರ್ಥಕ ವಿಪತ್ತುಗಳೆಂದು ಪರಿಗಣಿಸದಿರುವದು ಪ್ರಾಮುಖ್ಯವಾಗಿದೆ. ದೇವರು ಈ ಕಷ್ಟಗಳನ್ನು ನಮ್ಮನ್ನು ತಿದ್ದುವ ಮತ್ತು ಬೆಳೆಯಲು ಸಹಾಯ ಮಾಡುವ ಮಾರ್ಗಗಳಾಗಿ ಉಪಯೋಗಿಸುತ್ತಾನೆ. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ವಿಪತ್ತುಗಳನ್ನು ಹೇಗೆ ಎದುರಿಸಬೇಕು ಎಂಬುದಕ್ಕೆ ಮೂರ ಸಲಹೆಗಳನ್ನು ನೀಡುತ್ತಾನೆ:

3. ಮೊದಲನೆಯ ಸಲಹೆ ದೇವರ ವಾಕ್ಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ವ 5–6) ಜ್ಞಾನೋಕ್ತಿ 3:11–12ನ್ನು ಉಲ್ಲೇಖಿಸುತ್ತಾನೆ. ಈ ವಚನಗಳಲ್ಲಿ 'ಕರ್ತನ ಶಿಸ್ತುಪಾಲನೆಗೆ' ನಾವು ಮೂರು ವಿಧದಲ್ಲಿ ಪ್ರತಿಕ್ರಿಯಿಸಬಹುದು:

   a. ದೇವರ ಶಿಸ್ತುಪಾಲನೆಯನ್ನು ಹಗುರವಾಗಿ ತೆಗೆದುಕೊಳ್ಳುವದು: ಹೀಗೆ ಮಾಡುವವರು ದೇವರ ಶಿಸ್ತುಪಾಲನೆಯನ್ನು ತಾತ್ಸಾರ ಮಾಡುತ್ತಾರೆ. ಅವರು ಆ ಶಿಸ್ತುಪಾಲನೆ ದೇವರಿಗೆ ನಾವು ಹೆಚ್ಚು ಫಲಕೊಡಲಿಕ್ಕಾಗುವಂತೆ ಮತ್ತು ಆತನ ಸೇವೆಯಲ್ಲಿ ಹೆಚ್ಚು ಉಪಯುಕ್ತವಾಗುವಂತೆ ಶುದ್ಧೀಕರಿಸುವ ಒಂದು ವಿಧವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ (ಯೋಹಾನ 15:2 ನ್ನು ಹೋಲಿಸಿರಿ). ದೇವರ ಶಿಸ್ತುಪಾಲನೆಯನ್ನು ಹಗುರವಾಗಿ ತೆಗೆದುಕೊಳ್ಳುವದು ಕಷ್ಟಾನುಭವಕ್ಕೆ ಪ್ರತಿಕ್ರಿಯಿಸುವ ಮೊದಲನೆಯ ತಪ್ಪಾದ ಮಾರ್ಗವಾಗಿದೆ.

   b. ದೇವರು ಅವರನ್ನು ಶಿಸ್ತುಪಾಲನೆಗೆ ಒಳಪಡಿಸುವಾಗ ಮನಗುಂದುವದು: ಹೀಗೆ ಮಾಡುವವರು ಅಸಮಾಧಾನಕ್ಕೆ ಮತ್ತು ನಿರುತ್ಸಾಹಕ್ಕೆ ಒಳಗಾಗುತ್ತಾರೆ. ಅವರು ದೇವರು ನಮ್ಮನ್ನು ಕೈಬಿಟ್ಟಿದ್ದಾನೆ ಮತ್ತು ಆತನು ಇನ್ನೂ ಮುಂದೆ ತಮ್ಮ ವಿಷಯದಲ್ಲಿ ಕಾಳಜಿವಹಿಸುವದಿಲ್ಲ ಎಂದು ಭಾವಿಸುತ್ತಾರೆ. ಮನಗುಂದುವದು ಕಷ್ಟಾನುಭವಕ್ಕೆ ಪ್ರತಿಕ್ರಿಯಿಸುವ ಎರಡನೆಯ ತಪ್ಪಾದ ಮಾರ್ಗವಾಗಿದೆ.

c. ದೇವರ ಶಿಸ್ತುಪಾಲನೆಯನ್ನು ಸರಿಯಾದ ಮಾರ್ಗದಲ್ಲಿ ತೆಗೆದುಕೊಳ್ಳುವದು: ಅಂದರೆ, ದೇವರು ಶಿಸ್ತುಪಾಲನೆಯನ್ನು ನಾವು ಹೆಚ್ಚು ಫಲಕೊಡಲಿಕ್ಕಾಗುವಂತೆ ಉಪಯೋಗಿಸುತ್ತಾನೆ ಎಂಬುದನ್ನು ತಿಳಿದುಕೊಳ್ಳುವದು (ಮೇಲಿನ ಅಂಶ 'a' ನೋಡಿರಿ) ಮತ್ತು ದೇವರು ಕಷ್ಟದ ಸಮಯದಲ್ಲೂ ಸಹ ನಮ್ಮ ಕುರಿತು ಕಾಳಜಿವಹಿಸುತ್ತಾನೆ (ಮೇಲಿನ ಅಂಶ 'b' ನೋಡಿರಿ). ಹೀಗೆ ಮಾಡುವವರು ತಮ್ಮ ಕಷ್ಟಾನುಭವದ ಸಮಯದಲ್ಲೂ ತಾವು ಮಕ್ಕಳಾಗಿದ್ದೇವೆ ಎಂಬುದನ್ನು ನೆನೆಸಿ ಆನಂದಿಸುತ್ತಾರೆ. ದೇವರ ಶಿಸ್ತುಪಾಲನೆಯು ನಾವು ಆತನ ಮಕ್ಕಳು ಮತ್ತು ನಾವು ಆತನಿಗೆ ಸಂಬಂಧಿಸಿದವರು ಎಂಬುದನ್ನು ತೋರಿಸುತ್ತದೆ. ಇವು ಕಷ್ಟಾನುಭವಕ್ಕೆ ಪ್ರತಿಕ್ರಿಯಿಸುವ ಸರಿಯಾದ ಮಾರ್ಗಗಳಾಗಿವೆ.

4. ಎರಡನೆಯ ಸಲಹೆ ದೇವರ ಪೋಷಣೆಯನ್ನು ಜ್ಞಾಪಿಸಿಕೊಳ್ಳುವದು (ವ 7–9). ದೇವರು ತನ್ನ ಮಕ್ಕಳನ್ನು ಶಿಸ್ತುಪಾಲನಗೆ ಒಳಪಡಿಸುವದರ ಮೂಲಕ ತನ್ನ ಪೋಷಣೆಯನ್ನು ಹೇಗೆ ತೋರಿಸುತ್ತಾನೆ: ದೇವರು ನಿಜವಾಗಿಯೂ ನಮ್ಮ ತಂದೆಯಾಗಿದ್ದಾನೆ ಮತ್ತು ಆತನು ನಾವು ಆತನ ಮಕ್ಕಳಂತೆ ಬೆಳೆಯಬೇಕೆಂದು ಮತ್ತು ಆತ್ಮಿಕವಾಗಿ ಅಭಿವೃದ್ಧಿಯನ್ನು ಹೊಂದಬೇಕೆಂದು ಅಪೇಕ್ಷಿಸುತ್ತಾನೆ. 'ಮಾನವ ತಂದೆಗಳ' ಮತ್ತು 'ಆತ್ಮಗಳ ತಂದೆಯ' ಮಧ್ಯದಲ್ಲಿರುವ ವ್ಯತ್ಯಾಸವನ್ನು ಗಮನಿಸಿರಿ. ನಾವು ನಮ್ಮ ಪರಲೋಕದ ತಂದೆಗೆ ಅಧೀನರಾಗುವದಾದರೆ ನಾವು ಸದಾಕಾಲಕ್ಕೂ ಜೀವಿಸುತ್ತೇವೆ.

5. ಮೂರನೆಯ ಸಲಹೆ ದೇವರ ಉದ್ದೇಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು (ವ 10–11). ಈ ವಚನಗಳು ದೇವರು ತನ್ನ ಮಕ್ಕಳನ್ನು ಶಿಸ್ತುಪಾಲನೆಗೆ ಒಳಪಡಿಸಲು ಹೊಂದಿರುವ ಎರಡು ಉದ್ದೇಶಗಳನ್ನು ಒಳಗೊಂಡಿವೆ:

   a. ಮೊದಲನೆಯ ವಿಷಯವು ಪ್ರಸ್ತುತ: ದೇವರು ನಮ್ಮ ಒಳಿತಿಗಾಗಿ ಈಗ ನಮ್ಮನ್ನು ಶಿಸ್ತುಪಾಲನೆಗೆ ಒಳಪಡಿಸುತ್ತಾನೆ (ಅದು ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುವುದು). ಇದರಿಂದಾಗಿ ನಾವು ಈ ಲೋಕದಲ್ಲಿ ಶುದ್ಧೀಕರಿಸಲ್ಪಟ್ಟ ಜೀವಿತವನ್ನು ಜೀವಿಸಬಹುದು ಮತ್ತು ಈಗ ಆತನ ಪರಿಶುದ್ಧತೆಯಲ್ಲಿ ನಾವು ಪಾಲುಗಾರರಾಗಬಹುದು.

   b. ಎರಡನೆಯ ವಿಷಯವು ಭವಿಷ್ಯತ್ತು: ದೇವರ ಈಗಿನ ಶಿಸ್ತುಪಾಲನೆಯು ನೀತಿವಂತಿಕೆಯು ಮತ್ತು ಸಮಾಧಾನದ ಸುಗ್ಗಿಯನ್ನು ನಿತ್ಯತ್ವಕ್ಕಾಗಿ ಉತ್ಪಾದಿಸುತ್ತದೆ.

# ಉತ್ತರಗಳು 18: ಮುಂದೆ ಸಾಗಿರಿ, 12:12–17

## ಪ್ರಶ್ನೆಗಳಿಗೆ ಉತ್ತರಗಳು

1. ವಚನ 12 "ಆದುದರಿಂದ" ಎಂಬ ಪದದೊಂದಿಗೆ ಪ್ರಾರಂಭವಾಗುತ್ತದೆ. ಅದು ಹಿಂದಿನ ವಚನಗಳ ಮತ್ತು ಈ ವೇದಭಾಗದ ನಡುವೆ ನಿಕಟವಾದ ಸಂಬಂಧವನ್ನು ಸೂಚಿಸುತ್ತದೆ. ನಾವು ದೇವರ ಪ್ರೀತಿಯ ಮತ್ತು ತಂದೆಯ ಶಿಸ್ತುಪಾಲನೆಯ ಕುರಿತು ತಿಳಿದುಕೊಂಡಿರುವುದರಿಂದ ಈಗ ನಮ್ಮ ಕ್ರಿಸ್ತೀಯ ಜೀವಿತದೊಂದಿಗೆ ಮುಂದೆ ಸಾಗಬೇಕು.

2. ಗ್ರಂಥಕರ್ತನು ಈ ವಿಷಯಗಳನ್ನು ಹಳೆ ಒಡಂಬಡಿಕೆಯ ಎರಡು ಉಲ್ಲೇಖಗಳೊಂದಿಗೆ ಪರಿಚಯಿಸುತ್ತಾನೆ (‘*ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಬಲಗೊಳಿಸಿರಿ*’, ಯೆಶಾಯ 35:3; ‘*ನೀನು ನಡೆಯುವ ದಾರಿಯನ್ನು ಸಮಮಾಡು*’, ಜ್ಞಾನೋಕ್ತಿ 4:26) ಈ ರೂಪಕಾಲಂಕಾರಗಳಿಂದ ಗ್ರಂಥಕರ್ತನು ಇದನ್ನು ಹೇಳಲು ಬಯಸುತ್ತಿದ್ದಾನೆಂದು ನಾನು ಯೋಚಿಸುತ್ತೇನೆ:

   a. ನಾವು ಬಲವಾಗಿರಬೇಕು ಎಂದು ಹೇಳುವುದಕ್ಕಾಗಿ ಆತನು ಮೊದಲನೆಯ ಉಲ್ಲೇಖವನ್ನು (‘ಜೋಲುಬಿದ್ದ ಕೈಗಳು’ ಮತ್ತು ‘ನಡುಗುವ ಮೊಣಕಾಲುಗಳು’ ಎಂಬ ರೂಪಕಾಲಂಕರಗಳನ್ನು) ಉಪಯೋಗಿಸುತ್ತಾನೆ. ನಾವು ನಿರುತ್ಸಾಹಗೊಳ್ಳಬಾರದು.

   b. ನಾವು ನೇರವಾಗಿ ನಡೆಯಬೇಕೆಂದು ಹೇಳುವುದಕ್ಕಾಗಿ ಆತನು ಎರಡನೆಯ ಉಲ್ಲೇಖವನ್ನು ("ನೀನು ನಡೆಯುವ ದಾರಿಯನ್ನು ಸಮಮಾಡು") ಉಪಯೋಗಿಸುತ್ತಾನೆ. ನಾವು ದೇವರ ನೀತಿ ಮಾರ್ಗದಿಂದ ಹಿಂತಿರುಗಬಾರದು. ನಾವು ಉಲ್ಲೇಖದ ಸನ್ನಿವೇಶವನ್ನು ನೋಡುವಾಗ ಈ ಅರ್ಥವಿವರಣೆಯು ಸ್ಪಷ್ಟವಾಗುತ್ತದೆ: *ನೀನು ನಡೆಯುವ ದಾರಿಯನ್ನು ಸಮಮಾಡು; ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ. ಎಡಕ್ಕಾಗಲಿ ಬಲಕ್ಕಾಗಲಿ ತಿರುಗಬೇಡ ನಿನ್ನ ಕಾಲನ್ನು ಕೇಡಿಗೆ ದೂರಮಾಡು* (ಜ್ಞಾನೋಕ್ತಿ 4:26–27).

3. ವಚನ 13 ರಲ್ಲಿರುವ ಎರಡು ಭಾಗಗಳ ಮಧ್ಯದಲ್ಲಿರುವ ಜೋಡಣೆಯನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

   a. ನಾನು ವಚನದ ಮೊದನೆಯ ಭಾಗದ ನನ್ನ ತಿಳುವಳಿಕೆಯನ್ನು ನನ್ನ ಮೇಲಿನ ಉತ್ತರ 2 b ಯಲ್ಲಿ ನೀಡಿದ್ದೇನೆ.

   b. ವಚನದ ಎರಡನೆಯ ಅರ್ಧಭಾಗವು ಹೇಳುವುದೇನೆಂದರೆ ನಮ್ಮ ನೀತಿವಂತ ಜೀವಿತಗಳು ಅಪ್ರಬುದ್ಧ ಅಥವಾ ಬಲಹೀನ ವಿಶ್ವಾಸಿಗಳಿಗೆ ಪ್ರೋತ್ಸಾಹದಾಯಕವಾಗುತ್ತದೆ. ಅವರು ನಮ್ಮ ಜೀವಿತವನ್ನು ನೋಡಿ ನಮ್ಮ ಮಾದರಿಯನ್ನು ಅನುಸರಿಸುವಾಗ, ಅವರು ‘ಉಳುಕಿ ಹೋಗದೆ ವಾಸಿಯಾಗುವುದು’.

4. ವಚನ 14 ಎರಡು ಪ್ರಬೋಧನೆಗಳನ್ನು ಒಳಗೊಂಡಿದೆ:

a. ಮೊದಲನೆಯದು: ನಾವು ನಮ್ಮ ಸುತ್ತಲಿರುವ ಜನರೊಟ್ಟಿಗೆ ಸಮಾಧಾನದಿಂದಿರಬೇಕು. ಅಷ್ಟೇ ಅಲ್ಲ, ನಾವು ಕಷ್ಟಪಟ್ಟು ಕೆಲಸವನ್ನು ಮಾಡಬೇಕು ಮತ್ತು ಸಮಾಧಾನದಲ್ಲಿ ಜೀವಿಸಲು ನಮಗೆ ಸಾಧ್ಯವಿರುವದನ್ನೆಲ್ಲಾ ಮಾಡಬೇಕು.

b. ಎರಡನೆಯದು: ನಾವು ಪರಿಶುದ್ಧರಾಗಿ ಜೀವಿಸಲು, ದೇವರಿಗೆ ಮತ್ತು ಆತನ ರಾಜ್ಯಕ್ಕೆ ಮಹಿಮೆಯನ್ನು ತರುವಂತ ಜೀವಿತವನ್ನು ಜೀವಿಸಲು ಪ್ರತಿಯೊಂದು ಪ್ರಯತ್ನವನ್ನು ಮಾಡಬೇಕು. ನಾವು ದೇವರಿಗಾಗಿ ಪ್ರತ್ಯೇಕಿಸಲ್ಪಡದ ಹೊರತು (ಪರಿಶುದ್ಧರಾಗಿ ಮಾಡಲ್ಪಡದ ಹೊರತು) ನಾವು ನಿಜವಾಗಿಯೂ ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಲು (ಆತನನ್ನು ನೋಡಲು) ಸಾಧ್ಯವಿಲ್ಲ.

5. ವಚನ 15 ರಲ್ಲಿ ಗ್ರಂಥಕರ್ತನು 'ದೇವರ ಕೃಪೆ' ಮತ್ತು 'ವಿಶ್ವಾಸಿಗಳ ಕಹಿಭಾವನೆ' ಎರಡರ ಮಧ್ಯದಲ್ಲಿ ತಂದಿರುವ ಸಂಬಂಧವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

a. ಸಮಸ್ಯೆಗಳನ್ನು ಮತ್ತು ಕಷ್ಟವನ್ನು ಅನುಭವಿಸುವ ವಿಶ್ವಾಸಿಗಳಿಗೆ ಕಹಿಭಾವನೆ ಹೊಂದುವ ಅಪಾಯವಿದೆ. ನಂತರ ಕಹಿಭಾವನೆ ಬೆಳೆಯುತ್ತದೆ ಮತ್ತು ಆ ಕಹಿಭಾವನೆ ಆ ವ್ಯಕ್ತಿಯನ್ನು ಮಾತ್ರವಲ್ಲ ಆತನ ಸುತ್ತಲೂ ಇರುವ ಜನರ ಮೇಲೆ ಸಹ ಪರಿಣಾಮವನ್ನು ಬೀರುತ್ತದೆ. ಅದು *ಅಸಮಾಧಾನವನ್ನು ಹುಟ್ಟಿಸಿ ಅನೇಕರನ್ನು ಮಲಿನರಾಗುವಂತೆ ಮಾಡುತ್ತದೆ.*

b. ಬದಲಾಗಿ ನಾವು ಒಬ್ಬರಿಗೊಬ್ಬರು ದೇವರ ಕೃಪೆಯನ್ನು ಜ್ಞಾಪಿಸಿಕೊಳ್ಳಲು ಸಹಾಯ ಮಾಡಬೇಕು. ನಾವು ದೇವರ ಕೃಪೆಯ ಮೇಲೆ ನಮ್ಮ ಜೀವಿತವನ್ನು ಕೇಂದ್ರಿಕರಿಸಿದರೆ. ಕಹಿಭಾವನೆಯನ್ನು ಹೊಂದುವದಿಲ್ಲ.

c. ಅದಲ್ಲದೆ ದೇವರು ನಮ್ಮ ಜೀವಿತದಲ್ಲಿ ಪವಿತ್ರಾತ್ಮನ ಕಾರ್ಯದಿಂದಾಗಿ ನಮ್ಮಲ್ಲಿರುವ ಕಹಿಭಾವನೆಯನ್ನು ತೆಗೆದುಹಾಕುತ್ತಾನೆ ಎಂಬುದನ್ನು ನಾವು ಅದನ್ನು ದೇವರ ಕೃಪೆಯೆಂಬುದಾಗಿ ಸಹ ನಾವು ಕಾಣಬಹುದು. ಆಗ ನಾವು ನಮ್ಮ ಸುತ್ತಲಿರುವ ಜನರಿಗೆ ಅಸಮಾಧಾನವನ್ನು ಹುಟ್ಟಿಸಿ ಅವರಲ್ಲಿ ಕಹಿಭಾವನೆಯನ್ನು ಹರಡುವದಕ್ಕೆ ಬದಲಾಗಿ (ನಮ್ಮ ಕಹಿಭಾವನೆಯಿಂದ ಅವರನ್ನು ಅಶುದ್ಧರಾಗ ಮಾಡದೇ) ದೇವರ ಕೃಪೆಯ ಕಾಲುವೆಗಳಾಗುತ್ತೇವೆ.

6. ಈ ವೇದಭಾಗದಲ್ಲಿರುವ ಉಳಿದ ವಚನಗಳು ಎರಡು ಪ್ರಬೋಧನೆಗಳನ್ನು ಒಳಗೊಂಡಿವೆ. ಅವು ಹೀಗಿವೆ:

a. ದೇವರ ಕೃಪೆಯನ್ನು ಹುಡುಕಿರಿ (ವ 15)!

b. ಮಲಿನತೆಯಿಂದ ದೂರವಿರಿಸುವದು (ವ 15–17)! ಎರಡು ರೀತಿಯ ಅಶುದ್ಧತೆಯ ಉದಾಹರಣೆಗಳನ್ನು ನೀಡಲಾಗಿದೆ:

- ಜಾರತನ

- ಪ್ರಾಪಂಚಿಕತೆ: ಏಸಾವನನ್ನು ಒಂದು ಎಚ್ಚರಿಕೆಯಾಗಿ ಹೆಸರಿಸಲಾಗಿದೆ. ಆತನು ವಾಗ್ದಾನವನ್ನು ಕಡೆಗಣಿಸಿದನು ಮತ್ತು ತಂದೆಯ ಆಶೀರ್ವಾದವನ್ನು ಒಂದು ಸಾಧಾರಣವಾದ ಊಟಕ್ಕೋಸ್ಕರ ಮಾರಿಬಿಟ್ಟನು.

# ಉತ್ತರಗಳು 19: ಎರಡು ಬೆಟ್ಟಗಳು, 12:18–29

## ಪ್ರಶ್ನೆಗಳಿಗೆ ಉತ್ತರಗಳು

1. ಈ ವೇದಭಾಗವು ಇಬ್ರಿಯರಿಗೆ ಬರೆದ ಪತ್ರಿಕೆಯ ಕೊನೆಯ ವಿಭಿನ್ನವಾದ ಚಿತ್ರಣವನ್ನು ಒಳಗೊಂಡಿದೆ. ಮೊದಲಿನ ವಿಭಿನ್ನ ಚಿತ್ರಣಗಳನ್ನು ನೋಡಿರಿ ಮತ್ತು ಅವು ಯಾವುದರ ಕುರಿತಾಗಿವೆ ಎಂಬುದನ್ನು ತುಂಬಿರಿ:

   a. 1:4–14 – ಯೇಸು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ.

   b. 2:1–4 – ಯೇಸುವಿನ ಸಂದೇಶವು ದೇವದೂತರ ಸಂದೇಶಕ್ಕಿಂತ ಶ್ರೇಷ್ಠವಾಗಿದೆ.

   c. 3:1–6 – ಯೇಸು ಮೋಶೆಗಿಂತ ಶ್ರೇಷ್ಠನಾಗಿದ್ದಾನೆ.

   d. 5:1–10 – ಯೇಸು ಹಳೆ ಒಡಂಬಡಿಕೆಯ ಮಹಾಯಾಜಕನಿಗಿಂದ ಶ್ರೇಷ್ಠ ಮಹಾಯಾಜಕನಾಗಿದ್ದಾನೆ.

   e. 7:20–28 – ಯೇಸು ಲೇವಿಯರ ಯಾಜಕತ್ವಕ್ಕಿಂತ ಶ್ರೇಷ್ಠವಾದ ಮಹಾಯಾಜಕನಾಗಿದ್ದಾನೆ.

   f. 8:1–5 – ಪರಲೋಕದ ದೇವಾಲಯವು ಭೂಲೋಕದ ದೇವಾಲಯಕ್ಕಿಂತ ಉತ್ತಮವಾಗಿದೆ.

   g. 8:6–9:14 – ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಉತ್ತಮವಾಗಿದೆ.

   h. 9:23–10:4 – ಯೇಸುವಿನ ಯಜ್ಞವು ಹಳೆ ಒಡಂಬಡಿಕೆಯ ಯಜ್ಞಕ್ಕಿಂತ ಉತ್ತಮವಾಗಿದೆ.

2. ಈ ವೇದಭಾಗದಲ್ಲಿ ಎರಡು ಬೆಟ್ಟಗಳ ಭಿನ್ನತೆಯನ್ನು ತೋರಿಸಲಾಗಿದೆ:

   a. ಸೀನಾಯಿ ಬೆಟ್ಟವು ಹಳೆ ಒಡಂಬಡಿಕೆಯ ಬೆಟ್ಟವಾಗಿದೆ. ಇದು ಪ್ರಾಕೃತಿಕವಾದ ಬೆಟ್ಟವಾಗಿದೆ. ಇದು ಭಯಾನಕವಾದ ಧರ್ಮಶಾಸ್ತ್ರದ ಪ್ರಕಟನೆಯ ಸಂಕೇತವಾಗಿದೆ.

   b. ಚೀಯೋನ್, ಪರಲೋಕದ ಯೆರೂಸಲೇಮಾದ ಹೊಸ ಒಡಂಬಡಿಕೆಯ ಬೆಟ್ಟವಾಗಿದೆ. ಇದು ಆತ್ಮಿಕ ಬೆಟ್ಟವಾಗಿದೆ. ಇದು ಸುವಾರ್ತೆಯ ಸಂತೋಷವಾದ ಪ್ರಕಟನೆಯ ಸಂಕೇತವಾಗಿದೆ.

3. ಈ ವೇದಭಾಗ ಮತ್ತು ಹಿಂದಿನ ವೇದಭಾಗಗಳ ನಡುವಿನ ಸಂಬಂಧವನ್ನು ನಾನು ಹೀಗೆ ಅರ್ಥಮಾಡಿಕೊಂಡಿದ್ದೇನೆ: ವಿಶ್ವಾಸಿಗಳಿಗೆ ಬಲವಾಗಿರಲು ಮತ್ತು ನೇರವಾಗಿ ನಡೆಯಲು (ವ 12–13), ಮತ್ತು ಸಮಾಧಾನದಲ್ಲಿ ಮತ್ತು ಪರಿಶುದ್ಧರಾಗಿ ಜೀವಿಸಲು (ವ 14–16) ಸಾಧ್ಯವಾಗುವದಕ್ಕೆ ಕಾರಣವೇನಂದರೆ ಅವರು ದೇವರ ರಾಜ್ಯಕ್ಕೆ ಸಂಬಂಧಿಸಿದವರಾಗಿದ್ದಾರೆ ('ಚೀಯೋನ್, ಪರಲೋಕದ ಯೆರೂಸಲೇಮ್, ಹೊಸ ಒಡಂಬಡಿಕೆಯ ಬೆಟ್ಟ').

4. ಈ ವೇದಭಾಗದಲ್ಲಿ ನಾವು ಸೇರಿರುವ ದೇವರ ರಾಜ್ಯದ ವರ್ಣನೆಯನ್ನು ನೋಡುತ್ತೇವೆ. ಇಲ್ಲಿ ವರ್ಣಿಸಲ್ಪಟ್ಟಿರುವ ಹಾಗೆ ಅದರ ಗುಣಲಕ್ಷಣಗಳು ಹೀಗಿವೆ:

a. ಅದು ಪ್ರಾಕೃತಿಕವಾದದ್ದಲ್ಲ (ಅದನ್ನು ಸ್ಪರ್ಶಿಸಲು ಸಾಧ್ಯವಿಲ್ಲ, ವ 18) ಬದಲಾಗಿ ಆತ್ಮಿಕವಾದದ್ದು.

b. ಅದು ಭಯವನ್ನು ಹುಟ್ಟಿಸುವಂತದ್ದಲ್ಲ ಅಥವಾ ಅಪಾಯಕಾರಿಯಲ್ಲ ಅಥವಾ ಬೆಂಕಿಯಿಂದ ಉರಿಯುವಂತದಲ್ಲ ಅಥವಾ ಕತ್ತಲು ತುಂಬಿರುವದಲ್ಲ ಅಥವಾ ಮೊಬ್ಬಾಗಿರುವಂತದಲ್ಲ (ವ 18–21).

c. ಅದು ಪರಲೋಕಕ್ಕೆ ಸಂಬಂಧಿಸಿದ್ದು (ವ 22).

d. ಅದರ ಅರಸನು ಜೀವಿಸುವ ದೇವರಾಗಿದ್ದಾನೆ (ವ 22).

e. ಅದು ಆರಾಧನೆ ಮತ್ತು ಸಂತೋಷದಿಂದ ಕೂಡಿದ ದೇವದೂತರಿಂದ ತುಂಬಿದೆ (ವ 22).

f. ಅದು ಹೊಸ ಒಡಂಬಡಿಕೆಯ ಮಧ್ಯವರ್ತಿಯಾದ ಯೇಸುವಿನಿಂದ ಪರಿಪೂರ್ಣರಾಗಿ ಮಾಡಲ್ಪಟ್ಟ ಮತ್ತು ಯೇಸುವಿನ ರಕ್ತದಿಂದ, ನಮ್ಮ ವಿಮೋಚನೆಗಾಗಿ ತನ್ನನ್ನೇ ಅರ್ಪಿಸಿದ ಮಹಾಯಾಜಕನಿಂದ ರಕ್ಷಿಸಲ್ಪಟ್ಟ ನೀತಿವಂತರು ವಾಸಿಸುವ ಸ್ಥಳವಾಗಿದೆ (ವ 23–24).

g. ಅದು ಈಗಿನ ಸೃಷ್ಟಿಯು ಅಳಿದು ಹೋದಾಗಲೂ ಕದಲದೆ ನಿಂತಿರುವುದು (ವ 26–27).

5. ಈ ವೇದಭಾಗದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಎರಡು ಪ್ರಬೋಧನೆಯನ್ನು ನಮಗಾಗಿ ಇಟ್ಟಿದ್ದಾನೆ:

    a. ನಾವು ದೇವರ ವಾಕ್ಯವನ್ನು ಆಲಿಸಲು ನಿರಾಕರಿಸಬಾರದು. ಆದರೆ ನಾವು ದೇವರ ಎಚ್ಚರಿಕೆಗಳಿಗೆ ಸಹ ವಿಧೇಯರಾಗಬೇಕು.

    b. ನಾವು ದೇವರ ವಾಗ್ದಾನದ ರಾಜ್ಯಕ್ಕಾಗಿ ಆತನಿಗೆ ಕೃತಜ್ಞರಾಗಿರಬೇಕು ಮತ್ತು ಆತನನ್ನು ಗೌರವದಿಂದಲೂ ಮತ್ತು ಭಯಭಕ್ತಿಯಿಂದಲೂ ಆರಾಧಿಸಬೇಕು (ವ 28).



# ಉತ್ತರಗಳು 20: ಪ್ರಬೋಧನೆಗಳು ಭಾಗ 1, 13:1–6

## ಪ್ರಶ್ನೆಗಳಿಗೆ ಉತ್ತರಗಳು

1. ಹಿಂದಿನ ಅಧ್ಯಾಯದ ಕೊನೆಯ ಭಾಗದ (12:28–29) ಮತ್ತು ಅಧ್ಯಾಯ 13 ರಲ್ಲಿರುವ ಪ್ರಬೋಧನೆಯ ಮಧ್ಯದಲ್ಲಿರುವ ಸಂಬಂಧವನ್ನು ನಾನು ಹೀಗೆ ಅರ್ಥಮಾಡಿಕೊಳ್ಳುತ್ತೇನೆ:

    a. ನಾವು ದೇವರ ರಾಜ್ಯಕ್ಕೆ ಬಾಧ್ಯರಾಗಿದ್ದೇವೆ ಯೇಸು ತಿರುಗಿ ಬರುವಾಗ ನಾವು ಪೂರ್ಣವಾಗಿ ಅದನ್ನು ಹೊಂದಲಿದ್ದೇವೆ. ಇದು ಯಾರೂ ಕದಲಿಸಲಾರದ ರಾಜ್ಯವಾಗಿದೆ. ಈ ವಾಗ್ದಾನಕ್ಕಾಗಿ ನಾವು ಕೃತಜ್ಞರಾಗಿರಬೇಕು. ನಮ್ಮ ಕೃತಜ್ಞತೆಯು *ದಹಿಸುವ ಅಗ್ನಿಯಾದ* ದೇವರಿಗೆ ಮೆಚ್ಚುವ ರೀತಿಯಲ್ಲಿ ವ್ಯಕ್ತವಾಗಬೇಕು – ಆರಾಧನೆಯಿಂದಲೂ, ಭಕ್ತಿಯಿಂದಲೂ ಮತ್ತು ಭಯದಿಂದಲೂ ಅದನ್ನು ಮಾಡೋಣ (12:28–29).

    b. ದೇವಜನರೂ ಮತ್ತು ದೇವರ ರಾಜ್ಯದ ಪ್ರಜೆಗಳೂ ಆ ನಮ್ಮ ಜೀವನ ಶೈಲಿಯು ದೇವರ ಗುಣಗಳನ್ನು ಮತ್ತು ಆತನ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ ಅಧ್ಯಾಯ 13 ರಲ್ಲಿರುವ ಪ್ರಬೋಧನೆಯು ಆದ ಸಂಗತಿಯನ್ನು ನಮಗೆ ಜ್ಞಾಪಿಸುತ್ತದೆ ಮತ್ತು ಪರಿಶುದ್ಧತೆಯ ನಮ್ಮ ಪ್ರಯತ್ನದಲ್ಲಿ ಮಾರ್ಗದರ್ಶನವನ್ನು ನೀಡುತ್ತದೆ. ಆದುದರಿಂದ ಅಧ್ಯಾಯ 13 ರಲ್ಲಿ ಗ್ರಂಥಕರ್ತನು ನಮಗಾಗಿ ಇಟ್ಟಿರುವ ಸಂದೇಶವೇನೆಂದರೆ: "ನೀವು ದೇವರ ದೃಷ್ಟಿಯಲ್ಲಿ ಪರಿಶುದ್ಧರಾಗಿ ಜೀವಿಸಲು ಬಯಸುವುದಾದರೆ ಇವು ನಿಜವಾಗಿಯೂ ನಿಮಗೆ ಪ್ರಾಮುಖ್ಯವಾದ ಸಂಗತಿಗಳಾಗಿವೆ!"

2. ವಚನ 1 ರಲ್ಲಿ ಪರಿಗಣಿಸಬಹುದಾದ ಪ್ರಾಮುಖ್ಯವಾದ ಸಂಗತಿಗಳು ಹೀಗಿವೆ:

    a. ಕ್ರಿಸ್ತೀಯ ನೈತಿಕತೆಯಲ್ಲಿ ಪ್ರೀತಿಯ ಪ್ರಾಮುಖ್ಯವಾದ ಪಾತ್ರ.

    b. ಕ್ರಿಸ್ತೀಯ ಪ್ರೀತಿಯು ನಮ್ಮ ಜೀವಿತದಲ್ಲಿ ಸ್ಥಿರವಾದ ವಿಷಯವಾಗಿರಬೇಕು. (ಪ್ರೀತಿಯು ಮುಂದುವರೆಯಲಿ).

    c. ಸಹೋದರರಂತೆ: ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ 'ಸಹೋದರರು' ಎಂಬ ಪದವು ಪ್ರಾಮುಖ್ಯವಾದದ್ದು. ಯೇಸುವು ನಮ್ಮನ್ನು ಸಹೋದರರೆಂದು ಕರೆಯಲು ನಾಚಿಕೊಳ್ಳುವದಿಲ್ಲ (2:11–12). ನಾವು ಆತನಂತೆ ಇರಬೇಕು, ಕೇವಲ 'ಪವಿತ್ರ ಸಹೋದರರು' (3:1) ಮಾತ್ರವಲ್ಲ, ಬದಲಾಗಿ"'ಪ್ರೀತಿಸುವ ಸಹೋದರರು' ಸಹ ಆಗಿರಬೇಕು. ವೈಯಕ್ತಿಕ ವಿಶ್ವಾಸಿಗಳಾಗಿ ನಾವು ಆತನ ಕುಟುಂಬಕ್ಕೆ, ಆತನ ಸಭೆಗೆ ಸೇರಿದವರಾಗಿದ್ದೇವೆ. ಆತನ ಮತ್ತು ಆತನ ತಂದೆಯ ಪ್ರೀತಿ ನಮ್ಮಲ್ಲಿ ನಿರಂತರವಾಗಿಯೂ, ಯಾವಾಗಲೂ ಕಂಡುಬರಬೇಕು.

3. ವಚನ 2–3 ರಲ್ಲಿ ನಾವು ಸಹೋದರ ಪ್ರೀತಿಯ ಅಂಶವನ್ನು ಕಾಣುತ್ತೇವೆ:

   a. ಪರಕೀಯರಿಗೆ ಅತಿಥಿ ಸತ್ಕಾರಮಾಡುವದು: ರೋಮನ್ ಸಾಮ್ರಾಜ್ಯದಲ್ಲಿ ಅನೇಕ ಜನರಿಗೆ ಹೆಚ್ಚು ಪ್ರಯಾಣ ಮಾಡುವ ವೃತ್ತಿಗಳಿದ್ದವು. ಆದರೆ ಪ್ರವಾಸಿ ಗೃಹಗಳು ಅನೈತಿಕ, ಶುಚಿಯಿಲ್ಲದ, ಅಪಾಯಕಾರಿ ಮತ್ತು ವೆಚ್ಚದಾಯಕ ಸ್ಥಳವಾಗಿದ್ದವು. ಆದುದರಿಂದ ಸಹೋದರ ಪ್ರೀತಿ ಸಂಚಾರಮಾಡುವ ಸಹೋದರರಿಗೆ, ನೀವು ಅವರ ಕುರಿತಾಗಿ ತಿಳಿಯದಿದ್ದರೂ ಸಹ ವಾಸ್ತವ್ಯವನ್ನು ಒದಗಿಸುವದು ಪ್ರಾಮುಖ್ಯವಾದ ಅಭಿಪ್ರಾಯವಾಗಿತ್ತು.

   b. ಅವಶ್ಯಕತೆಯಿರುವವರಿಗೆ ಪ್ರಾಯೋಗಿಕ ಜವಾಬ್ದಾರಿಗಳು: ಅವಶ್ಯಕತೆಯಿರುವ ಎರಡು ವಿಧದ ಜನರನ್ನು ಹೆಸರಿಸಲಾಗಿದೆ. ಮೊದಲನೆಯದಾಗಿ "ಸೆರೆಯಲ್ಲಿರುವವರು", ಬಹುಶಃ ನಂಬಿಕೆಗಾಗಿ ಸೆರೆಯಲ್ಲಿರುವ ವಿಶ್ವಾಸಿಗಳ ಕುರಿತಾಗಿ ಉಲ್ಲೇಖಿಸಿರಬಹುದು. ಎರಡನೆಯದಾಗಿ, "ಅನ್ಯಾಯವನ್ನು ಅನುಭವಿಸುವವರು", ಬಹುಶಃ ಹಿಂಸೆಯ ಸಮಯದಲ್ಲಿ ಏಟುಗಳನ್ನು ತಿಂದ ವಿಶ್ವಾಸಿಗಳನ್ನು ಉಲ್ಲೇಖಿಸಿರಬಹುದು.

4. –

5. –

6. ವಚನ 5–6 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಹಳೆ ಒಡಂಬಡಿಕೆಯ ಎರಡು ಉಲ್ಲೇಖಗಳನ್ನು ತನ್ನ ಪ್ರಬೋಧನೆಗೆ ಬೆಂಬಲವಾಗಿ ಉಪಯೋಗಿಸುತ್ತಾನೆ *(ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ,* ಯೆಹೋಶುವ 1:5; *ಯೆಹೋವನು ನನಗಿದ್ದಾನೆ; ಭಯಪಡೆನು; ಮನುಷ್ಯನು ನನಗೆ ಏನು ಮಾಡಾನು?* ಕೀರ್ತನೆ 118:6). ಅದು ಹೀಗಿದೆ:

   a. ಆತನ ಮುಂದಿನ ಪ್ರಬೋಧನೆಯು ಹೀಗಿದೆ: ಹಣದಾಸೆಯಿಂದ ದೂರವಿರಿ; ಬದಲಾಗಿ ನಿಮಗಿರುವವುಗಳಲ್ಲಿ ತೃಪ್ತರಾಗಿರ್ರಿ.

   b. ಆತನು ತನ್ನ ಓದುಗರಿಗೆ ದೇವರ ವಾಗ್ದಾನಗಳನ್ನು ನೆನಪು ಮಾಡಲು ಹಳೆ ಒಡಂಬಡಿಕೆಯ ಎರಡು ಉಲ್ಲೇಖಗಳನ್ನು ಉಪಯೋಗಿಸುತ್ತಾನೆ: ದೇವರು ತನಗೆ ಸಂಬಂಧಿಸಿದವರನ್ನು ತೊರೆಯುವದಿಲ್ಲವೆಂದು ವಾಗ್ದಾನ ಮಾಡಿದ್ದಾನೆ. ಆತನು ನಮ್ಮ ಸಹಾಯಕನಾಗಿರುವದಾಗಿ ವಾಗ್ದಾನ ಮಾಡಿದ್ದಾನೆ. ಹಾಗಾಗಿ ನಾವು ನಮ್ಮ ಪ್ರತಿನಿತ್ಯ ಜೀವಿತಕ್ಕಾಗಿ ಮನುಷ್ಯರ ಮೇಲಾಗಲಿ ಅಥವಾ ನಮ್ಮ ಸುತ್ತಲೂ ಇರುವ ಸನ್ನಿವೇಶಗಳ ಮೇಲಾಗಲಿ ಅವಲಂಬಿಸುವ ಅವಶ್ಯಕತೆಯಿಲ್ಲ.

   c. ಹಾಗಾಗಿ ನಾವು ದೇವರು ನಮಗೆ ಒದಗಿಸಿರುವದರಲ್ಲಿ ಸಂಪೂರ್ಣ ವಿಶ್ವಾಸವನ್ನಿಡಬಹುದು ಮತ್ತು ನಿಮಗಿರುವವುಗಳಲ್ಲಿ ತೃಪ್ತರಾಗಬಹುದು. ಹಣದ ಮೋಹವು"ಸಂಪೂರ್ಣವಾಗಿ ಅನಾವಶ್ಯಕವಾಗಿದೆ (ಅಲ್ಲದೇ, ಇದು ವಿಗ್ರಹಾರಾಧನೆಯ ಇನ್ನೊಂದು ವಿಧವಾಗಿದೆ, ಮತ್ತಾಯ 6:24 ನ್ನು ನೋಡಿರಿ).

7. –

8. –

# ಉತ್ತರಗಳು 21: ಪ್ರಬೋಧನೆಗಳು ಭಾಗ 2, 13:7–22

## ಪ್ರಶ್ನೆಗಳಿಗೆ ಉತ್ತರಗಳು

1. "ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (13:8) ಎಂಬ ಚಿರಪರಿಚಿತವಾದ ವಚನವು "ದೇವ ಸೇವಕರ" ಜೀವಿತ ಮತ್ತು ಬೋಧನೆಯಾಗಿದೆ:

    a. ವಚನ 7 ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರನ್ನು *ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಿರಿ* ಎಂದು ಪ್ರಬೋಧಿಸುತ್ತದೆ. ಅವರು ಈಗ ಜೀವದಿಂದಿಲ್ಲ. ಆದರೆ ಅವರು ದೇವರಿಗೆ ಪ್ರಾಮಾಣಿಕವಾಗಿ ಸೇವೆಯನ್ನು ಮಾಡಿದ್ದಾರೆ. ನಾವು ಅವರನ್ನು ಅನುಸರಿಸೋಣ.

    b. ವಚನ 9 ಓದುಗರನ್ನು *ನಾನಾ ವಿಧವಾದ ಅನ್ಯೋಪದೇಶಗಳನ್ನು ನಂಬಬೇಡಿರಿ ಮತ್ತು ಅನುಸರಿಸಬೇಡಿರಿ* ಎಂದು ಎಚ್ಚರಿಕೆಯನ್ನು ನೀಡುತ್ತದೆ. ಇಂತಹ ಬೋಧನೆಗಳು ಅವರನ್ನು ಹಾದಿತಪ್ಪುವಂತೆ ಮಾಡುತ್ತದೆ.

    c. ಈ ಎರಡು ವಚನಗಳ ಮಧ್ಯದಲ್ಲಿ ನಾವು *ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ ನಿರಂತರವೂ ಹಾಗೆಯೇ ಇರುವನು* ಎಂಬ ಹೇಳಿಕೆಯನ್ನು ನೋಡುತ್ತೇವೆ. ದೇವಸೇವಕರು" ನಂಬಿಗಸ್ತರಾಗಿಲ್ಲದೇ ಹೋದರು ಯೇಸು ನಂಬಿಗಸ್ತನಾಗಿದ್ದಾನೆ. ಯೇಸು ತನ್ನ ನಂಬಿಗಸ್ತ ಸೇವಕರೊಂದಿಗೆ ಹಿಂಸೆ ಮತ್ತು ಕಷ್ಟಗಳ ಮಧ್ಯದಲ್ಲಿ ಸೇವೆಮಾಡುವ ಸಮಯದಲ್ಲಿ ಅವರೊಂದಿಗೆ ಇದ್ದನು. ಅವರು ತಮ್ಮ ದೃಷ್ಟಿಯನ್ನು ಆತನ ಮೇಲೆ ಕೇಂದ್ರಿಕರಿಸಿದ್ದರು ಮತ್ತು ಆತನು ಅವರ ಸೇವೆಯನ್ನು ಆಶೀರ್ವದಿಸಿದನು. ಯೇಸು ಯಾವಾಗಲೂ ಏಕರೀತಿಯಾಗಿ ಇದ್ದಾನೆ. ಆತನು ಇಂದು ತನ್ನ ಸೇವಕರೊಂದಿಗೆ ಇದ್ದಾನೆ, ಅವರು ಆತನನ್ನು ಆಲಿಸಿದರೆ ಮತ್ತು ಸುವಾರ್ತೆಯನ್ನು ನಂಬಿಗಸ್ತಿಕೆಯಿಂದ ಸಾರಿದರೆ ಆತನು ಅವರೊಂದಿಗೆ ತನ್ನ ಮಹಿಮೆಯ ನಿತ್ಯತ್ವದವರೆಗೆ ಅವರೊಂದಿಗೆ ಇದ್ದಾನೆ.

2. 13:9 ರಲ್ಲಿ 'ವಿಚಿತ್ರವಾದ ವಿವಿಧ ಬೋಧನೆಯು' ವಿರುದ್ಧ ಓದುಗರಿಗೆ ಎಚ್ಚರಿಕೆಯನ್ನು ನೀಡಲಾಗಿದೆ.

    a. ಅವುಗಳ ವಿರುದ್ಧವಾಗಿ 'ಕೃಪೆಯನ್ನು' ಹೋಲಿಸಿರುವುದರಿಂದ ಅದು 'ಕ್ರಿಯೆಗಳ ಮೂಲಕ ನಂಬಿಕೆ' ಎಂಬ ಸಿದ್ಧಾಂತದ ಕುರಿತಾಗಿರಬಹುದು.

    b. ಅವುಗಳು 'ಆಚರಣೆ' ಮತ್ತು ಆಹಾರಕ್ಕೆ ಸಂಬಂಧಪಟ್ಟಿದ್ದವು. ಅನ್ನಪಾನಗಳ ನಿರ್ಬಂಧಗಳು ಮತ್ತು ಉಪವಾಸ ವ್ರತಗಳು ಧಾರ್ಮಿಕವಾಗಿ ಉನ್ನತಿಯನ್ನು ತರುತ್ತದೆ ಎಂದು ಯೆಹೂದ್ಯರು ಹಾಗೂ ಅನ್ಯಜನರು ಬೋಧಿಸುತ್ತಿದ್ದರ ಮಾಹಿತಿಯನ್ನು ಇತರೆ ಮೂಲಗಳಿಂದಲೂ ಕೇಳಿದ್ದೇವೆ. ಹಾಗಾಗಿ ಈ ರೀತಿಯ ದುರ್ಬೋಧನೆಯಲ್ಲಿ ಕ್ರೈಸ್ತ ಪ್ರಸಂಗಿಗಳು ಬೀಳುವುದು ಸುಲಭವಾಗಿತ್ತು.

c. ಈ ಪಾಠವು ನಮಗೆ (ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರಿಗಿದ್ದಂತೆ) ರಕ್ಷಣೆಯನ್ನು ನಮ್ಮ ಸ್ವಂತ ಪ್ರಯತ್ನದಿಂದ "ಹೊಂದಿಕೊಳ್ಳಲು" ಸಾಧ್ಯವಿಲ್ಲ ಎಂದು ಹೇಳುತ್ತದೆ. ನಮ್ಮ ಹೃದಯಕ್ಕೆ ರಕ್ಷಣೆಯನ್ನು ತರುವಂತಹ ಏಕೈಕ 'ಆಹಾರವು' ಕ್ರೂಜೆಯ ಮೇಲೆ ಯೇಸು ಮಾಡಿದ ವಿಮೋಚನೆಯ ಕಾರ್ಯದ ಮೂಲಕ ದೊರಕುವ ದೇವರ ಕೃಪೆ ಮಾತ್ರವಾಗಿದೆ.

3. ವಚನ 10–12 ರಲ್ಲಿ ಇಬ್ರಿಯ ಗ್ರಂಥಕರ್ತನು ಹಳೆ ಒಡಂಡಿಕೆಯ ಯಜ್ಞದ ಪದ್ಧತಿ, ಪ್ರಾಣಿಗಳ ಸಮರ್ಪಣೆಯೊಂದಿಗೆ, ಪವಿತ್ರ ಭೋಜನ ಮತ್ತು ಅದರ ಯಾಜಕತ್ವ ಮತ್ತು ದೇವದರ್ಶನ ಗುಡಾರವು ಕ್ರೂಜೆಯ (ವ. 10 ರಲ್ಲಿರುವ 'ವೇದಿಯ') ಮೇಲೆ ಯೇಸುವಿನ ತ್ಯಾಗಪೂರ್ವಕವಾದ ಮರಣದ ಮೂಲಕ ಸ್ಥಾನಪಲ್ಲಟಗೊಳಿಸಲ್ಪಟ್ಟಿದೆ ಎಂಬ ವಿಷಯವನ್ನು ಸೂಚಿಸುತ್ತಾನೆ. ಆದರೆ 'ವಿಚಿತ್ರವಾದ ವಿವಿಧ ಬೋಧನೆಗಳ' (ವ 9) ಪರಿಣಾಮವಾಗಿ ಈ ಬೋಧಕರು (*ದೇವದರ್ಶನ ಗುಡಾರದಲ್ಲಿ ಸೇವೆ ಮಾಡುವವರು*, ವ 10) ಇನ್ನೂ ಹಳೆ ಒಡಂಬಡಿಕೆಯ ಅಡಿಯಲ್ಲಿದ್ದಾರೆ ಅದು ರಕ್ಷಣೆಯನ್ನು ನೀಡುವದಿಲ್ಲ (*ಅವರಿಗೆ ತಿನ್ನುವದಕ್ಕೆ ಹಕ್ಕಿಲ್ಲ*) ಹಳೆ ಒಡಂಬಡಿಕೆಯ ಅಡಿಯಲ್ಲಿ ಯಾಜಕನು (ಮತ್ತು ಇತರರು) ಯಜ್ಞವಾಗಿ ಅರ್ಪಿಸಲ್ಪಟ್ಟ ಪ್ರಾಣಿಯ ಮಾಂಸವನ್ನು ತಿನ್ನಬಹುದಾಗಿತ್ತು. ಆದರೆ ದೋಷಪರಿಹಾರಕ ಯಜ್ಞದ ದಿನದಂದು ಆ ಪಶುಗಳ ದೇಹಗಳನ್ನು ಪಾಳೆಯದ ಹೊರಗೆ ಸುಡುತ್ತಿದ್ದರು (ವ 11). ಈ ಯಜ್ಞದ ಪದ್ಧತಿ ರಕ್ಷಣೆಯನ್ನು ನೀಡುವದಿಲ್ಲ. ಆದರೆ ಯೇಸುವಿನ ಯಜ್ಞದೊಂದಿಗೆ ಪರಿಪೂರ್ಣವಾಯಿತು: *ಆತನು ತನ್ನ ಸ್ವಂತ ರಕ್ತದಿಂದ ನಮ್ಮನ್ನು ಪವಿತ್ರಪಡಿಸುತ್ತಾನೆ* (ವ 12).

4. *ಪಾಳೆಯದ ಆಚೆಗೆ ಹೊರಟುಹೋಗೋಣ* (ವ 13) ಎಂಬ ಪ್ರಬೋಧನೆಯ ನಿಜವಾದ ಅರ್ಥ 'ಧೈರ್ಯವಾಗಿರ್ರಿ'! ನಾವು ಯೇಸುವಿನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕು. ಆತನು ತನ್ನನ್ನು ಸಮರ್ಪಿಸಿಕೊಳ್ಳುವದಕ್ಕೆ ಸಿದ್ಧನಾಗಿದ್ದನು ('ಪಾಳೆಯದಿಂದ ಆಚೆಗೆ" ಹೋಗುವದಕ್ಕೆ') ಮತ್ತು ನಿಂದೆಯನ್ನು ನಮಗೋಸ್ಕರ ತಾಳಿಕೊಂಡನು. ಅದರಂತೆ ನಾವು ಕಷ್ಟವನ್ನು ಎದುರಿಸಲು ಮತ್ತು ಸುವಾರ್ತೆಗಾಗಿ ನಮ್ಮ ಜೀವಿತಗಳನ್ನು ಅಪಾಯಕ್ಕೆ ಗುರಿಮಾಡಲು ಸಿದ್ಧರಾಗಿರಬೇಕು. ನಾವು ಇಹಲೋಕದವರಲ್ಲ ಆದರೆ ಪರಲೋಕಕ್ಕೆ ಸಂಬಂಧಿಸಿದವರು (ವ 14).

5. ವಚನ 15–16 ರಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಓದುಗರು ಎರಡು ವಿಧದ ಯಜ್ಞಗಳನ್ನು ಸಮರ್ಪಿಸಲು ಪ್ರಬೋಧಿಸಲಾಗಿದೆ. ಅವು ಹೀಗಿವೆ:

   a. ಸ್ತುತಿ, ದೇವರಲ್ಲಿ ನಮ್ಮ ನಂಬಿಕೆಯ ಅರಿಕೆಯಾಗಿದೆ ಎಂದು ತಿಳಿದುಕೊಳ್ಳಬೇಕು (ವ 15).

   b. ಒಳ್ಳೇದನ್ನು ಮಾಡುವದು ಮತ್ತು ಸುವಾರ್ತೆಯನ್ನು ಸಾರುವದು (ವ 16).

6. ಅಧ್ಯಾಯ 13 ರಲ್ಲಿ ವಿಶ್ವಾಸಿಗಳು ತಮ್ಮ ಸಭಾ ನಾಯಕರೊಂದಿಗೆ ಹೇಗೆ ಸಂಬಂಧವನ್ನು ಹೊಂದಿರಬೇಕು ಎಂಬುದರ ಕುರಿತಾಗಿ ಮೂರು ಪ್ರಬೋಧನೆಗಳಿವೆ. ಅವು ಹೀಗಿವೆ:

   a. ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಿರಿ, ಅವರನ್ನು ಗೌರವಿಸಿರಿ ಮತ್ತು ಅನುಕರಿಸಿರಿ (ವ 7).

   b. ನಿಮ್ಮ ನಾಯಕರಿಗೆ ವಿಧೇಯರಾಗಿರಿ ಮತ್ತು ಅವರ ಅಧಿಕಾರಕ್ಕೆ ಅಧೀನರಾಗಿರಿ (ವ 17).

   c. ನಿಮ್ಮ ಎಲ್ಲಾ ನಾಯಕರನ್ನು ವಂದಿಸಿರಿ (ವ 24).

7. ವಚನ 17–21 ರಲ್ಲಿ ಸಭಾಪಾಲಕರ ನಾಯಕತ್ವದ ಕುರಿತಾಗಿ ನಾವು ಈ ನಾಲ್ಕು ಸಂಗತಿಗಳನ್ನು ಕಲಿಯುತ್ತೇವೆ:

   a. ಸಭಾಪಾಲಕರು ಮತ್ತು ಹಿರಿಯರು ವಿಶ್ವಾಸಿಗಳನ್ನು ಕಾಯುವವರಾಗಿದ್ದಾರೆ (ವ 17).

   b. ಸಭಾಪಾಲಕರು ಮತ್ತು ಹಿರಿಯರು ತಮ್ಮ ನಾಯಕತ್ವದ ಕುರಿತಾಗಿ ದೇವರಿಗೆ ಲೆಕ್ಕ ಒಪ್ಪಿಸುವವರಾಗಿದ್ದಾರೆ (ವ 17).

   c. ಸಭಾಪಾಲಕರಿಗೆ ಮತ್ತು ಹಿರಿಯರಿಗೆ ವಿಶ್ವಾಸಿಗಳ ಪ್ರಾರ್ಥನೆಯ ಅಗತ್ಯವಿದೆ (ವ 18–19) ಆದುದರಿಂದ ಅವರು ನಿಜವಾಗಿಯು ವಿಶ್ವಾಸಿಗಳ ಆತ್ಮಿಕ ಬೆಂಬಲದ ಮೇಲೆ ಅವಲಂಬಿತರಾಗಿದ್ದಾರೆ.

   d. ಸಭಾಪಾಲಕರು ಮತ್ತು ಹಿರಿಯರು ವಿಶ್ವಾಸಿಗಳಿಗಾಗಿ ಪ್ರಾರ್ಥಿಸಬೇಕು ಮತ್ತು ಅವರನ್ನು ಆಶೀರ್ವದಿಸಬೇಕು. ಸಭಾಪಾಲಕರು ಮತ್ತು ಹಿರಿಯರು ವಿಶ್ವಾಸಿಗಳು ಆತ್ಮಿಕವಾಗಿ ಬೆಳೆಯಬೇಕು ಮತ್ತು ದೇವರು ಅವರನ್ನು ಕರೆದಿರುವ ಕಾರ್ಯವನ್ನು ನೆರವೇರಿಸಲು ಶಕ್ತರಾಗಬೇಕೆಂಬ ದಾಹವುಳ್ಳವರಾಗಿರುತ್ತಾರೆ (ವ 20–21).

8. ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು *ಈ ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಿರಿ* (ವ 22) ಎಂಬ ಈ ಬೇಡಿಕೆಯೊಂದಿಗೆ ತನ್ನ ಮುಖ್ಯವಾದ ಬೋಧನೆಯನ್ನು ಉಲ್ಲೇಖಿಸುತ್ತಾನೆ ಎಂದು ನಾನು ಯೋಚಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ ಆತನು ತನ್ನ 'ಸಂಕ್ಷಿಪ್ತವಾದ ಪತ್ರವನ್ನು' ಎಂದು ಅದೇ ವಚನದಲ್ಲಿ ಉಲ್ಲೇಖಿಸುತ್ತಾನೆ.

   ಹಾಗಿದ್ದಲ್ಲಿ ಆತನ ಪ್ರಬೋಧನೆ ಏನು? ತನ್ನ ಓದುಗರು ಯೇಸುವಿನ ಕುರಿತಾದ ಸುವಾರ್ತೆಗೆ ಮತ್ತು ಆತನ ತ್ಯಾಗಪೂರ್ವಕವಾದ ಮರಣಕ್ಕೆ ನಂಬಿಗಸ್ತರಾಗಿರಬೇಕು ಎಂಬುದೇ. ಇದರಿಂದಾಗಿ ಅವರು ವಚನ ಭ್ರಷ್ಟರಾಗಿ ತಮ್ಮ ಯೆಹೂದಿ ನಂಬಿಕೆಗೆ ಹಿಂತಿರುಗುವದಿಲ್ಲ (ಅಂದರೆ ಹಳೆ ಒಡಂಬಡಿಕೆಯ ಶ್ರೇಷ್ಟವಾದ ಸಂದೇಶ, ಮಹಾಯಾಜಕರು ಮತ್ತು ಪಾಪದ ಅಪರಾಧವನ್ನು ತೆಗೆದು ಹಾಕಲಾರದ ಯಜ್ಞಕ್ಕೆ ಹಿಂತಿರುಗುವುದಿಲ್ಲ).

# ಶಿಕ್ಷಕರಿಗಾಗಿ

# ಸಾಮಾನ್ಯ ಸಲಹೆಗಳು

## ವಿದ್ಯಾರ್ಥಿಗಳ ಐದು ಗುರಿಗಳು

1. ವಿದ್ಯಾರ್ಥಿಗಳು ತಮ್ಮ ಓದುವ ಮತ್ತು ತಿಳಿದುಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು.
2. ವಿದ್ಯಾರ್ಥಿಗಳು ತಾವು ಏನು ಓದಿದ್ದೇವೆ ಎಂಬುದರ ಮತ್ತು ತಾವು ತಿಳಿದುಕೊಂಡಿರುವದರ ಮೇಲೆ ನಿರ್ಧಾರಕ್ಕೆ ಬರುವದರ ಕುರಿತು ಯೋಚಿಸಲು ನಿರಂತರವಾಗಿ ಪ್ರೋತ್ಸಾಹಿಸಲ್ಪಡಬೇಕು.
3. ವಿದ್ಯಾರ್ಥಿಗಳು ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಉತ್ತಮವಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು.
4. ವಿದ್ಯಾರ್ಥಿಗಳಿಗೆ ತಾವು ಕಲಿತಿರುವದನ್ನು ತಮ್ಮ ಸ್ವಂತ ದಕ್ಷಿಣ ಭಾರತದ ಸಾಮಕಾಲೀನ ಸನ್ನಿವೇಶಕ್ಕೆ ಅಳವಡಿಸಿಕೊಳ್ಳಲು ಪಂಥಾಹ್ವಾನ ನೀಡಬೇಕು.
5. ವಿದ್ಯಾರ್ಥಿಗಳನ್ನು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಪಠ್ಯವನ್ನು ಧ್ಯಾನಕ್ಕಾಗಿ, ಸತ್ಯವೇದ ಅಧ್ಯಯನಕ್ಕಾಗಿ ಮತ್ತು ಪ್ರಸಂಗಳಿಗಾಗಿ ಉಪಯೋಗಿಸಲು ಪ್ರೋತ್ಸಾಹಿಸಬೇಕು.

## ಶಿಕ್ಷಕರಿಗೆ ಕೆಲವು ಸಾಮಾನ್ಯ ಸಲಹೆಗಳು

1. ಉಪನ್ಯಾಸ ಮತ್ತು "ಬೋಧನೆ" ಸಾಧ್ಯವಾದಷ್ಟು ಕಡಿಮೆ.
2. ನಿಮ್ಮ ಬೋಧನೆಯನ್ನು ಗುಂಪು ಕಾರ್ಯದ ಕೌಶಲ್ಯದ ಮೇಲೆ ಆಧರಿಸಿರಿ. ಈ ಪುಸ್ತಕವು ನಿಮಗೆ ಹೀಗೆ ಮಾಡುವುದಕ್ಕಾಗಿ ರಚಿಸಲ್ಪಟ್ಟಿದೆ.
3. ವರ್ಗಕೋಣೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಚಟುವಟಿಕೆಯಿಂದ ಇರುವ ಹಾಗೆ ಖಚಿತಪಡಿಸಿಕೊಳ್ಳಿರಿ. ಯಾರು ಮೌನವಾಗಿ, ನಾಚಿಕೆ ಅಥವಾ ಬಲಹೀನರಾಗಿರುತ್ತಾರೋ ಅಂತವರನ್ನು ಪ್ರೋತ್ಸಾಹಿಸಿರಿ.
4. ವಿದ್ಯಾರ್ಥಿಗಳನ್ನು ಎಂದಿಗೂ ಪರಿಹಾಸ್ಯಮಾಡಬೇಡಿರಿ. ಯಾವಾಗಲೂ ಪ್ರೋತ್ಸಾಹಿಸಿರಿ.
5. ಪ್ರಶ್ನೆ ಕೇಳುವದನ್ನು ಪ್ರೋತ್ಸಾಹಿಸಿರಿ, ಒಂದು ವೇಳೆ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾಗದಿದ್ದಲ್ಲಿ ಪೇಚಾಟಕ್ಕೆ ಒಳಗಾಗಬೇಡಿರಿ. ಸತ್ಯವೇದ ಬೋಧಕ ಯಾರೇ ಆಗಿರಲಿ ಎಲ್ಲಾ ಉತ್ತರಗಳನ್ನು ತಿಳಿದಿರುವದಿಲ್ಲ.
6. ವಿದ್ಯಾರ್ಥಿಗಳು ಮೂರ್ಖ ಮತ್ತು ಅಸಮಂಜಸವಾದ ಪ್ರಶ್ನೆಗಳನ್ನು ಕೇಳುವದರ ಮೂಲಕ ನಿಮ್ಮನ್ನು ಮತ್ತು ನಿಮ್ಮ ವರ್ಗವನ್ನು ಮಾರ್ಗ ತಪ್ಪಿಸುವದಕ್ಕೆ ಆಸ್ಪದ ಕೊಡಬೇಡಿರಿ. ತರಗತಿಯ ಸಮಯ ಅಮೂಲ್ಯವಾದದ್ದು ಅದನ್ನು ವ್ಯರ್ಥಗೊಳಿಸಬಾರದು.

## ನಾಲ್ಕು ಹಂತಗಳಲ್ಲಿ ಅಧ್ಯಯನವನ್ನು ಹೇಗೆ ಪೂರ್ತಿಗೊಳಿಸುವದು

1. ನೀವು ಅಧ್ಯಯನವನ್ನು ಪರಿಚಯಿಸಿ
2. ವಿದ್ಯಾರ್ಥಿಗಳು ಸತ್ಯವೇದದ ಪಠ್ಯವನ್ನು ಓದಲಿ ಮತ್ತು ಮೂರು ಅಥವಾ ನಾಲ್ಕು ಜನರ ಗುಂಪಿನಲ್ಲಿ ಪ್ರಶ್ನೆಗಳ ಮೂಲಕ ಕಾರ್ಯಮಾಡಲಿ.
3. ವರ್ಗದಲ್ಲಿ ಉತ್ತರಗಳನ್ನು ಓದಲಿ. ಸಮಯವನ್ನು ವ್ಯರ್ಥಮಾಡಬೇಡಿರಿ. ಸರಳ ಪ್ರಶ್ನೆಗಳನ್ನು ಹಾರಸಿಬಿಡಿರಿ ಮತ್ತು ವಿದ್ಯಾರ್ಥಿಗಳಿಗೆ ಕಷ್ಟವಾಗಿರುವ ಪ್ರಶ್ನೆಗಳ ಮೇಲೆ ಕೇಂದ್ರಿಕರಿಸಿರಿ. ತಪ್ಪು ತಿಳುವಳಿಕೆಗಳನ್ನು ಸ್ಪಷ್ಟೀಕರಿಸಿರಿ.
4. ಮುಗಿಯದೇ ಇರುವ ಕಾರ್ಯವನ್ನು ಗ್ರಂಥಾಲಯದ ಸಮಯದಲ್ಲಿ ಮುಗಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿರಿ. ಅವರು ಪ್ರತಿದಿನವು ಪುನರಾವಲೋಕನ ಮಾಡಲು ಸಮಯವನ್ನು ತೆಗೆದುಕೊಳ್ಳಲಿ.

# ಮೊದಲ ದಿನದ ಯೋಜನೆ

## ಶಿಕ್ಷಕರಿಗಾಗಿ ಯೋಜನಾ ಸಲಹೆಗಳು – ಸೋಮವಾರ (ಈ ವಿಷಯದ ಮೊದಲನೆಯ ದಿನ)

1. ನೀವು ವಾರದ ನಿಮ್ಮ ಯೋಜನೆಯನ್ನು ಮಾಡಬೇಕು (20 ಪಾಠಗಳು ಮತ್ತು ನಾಲ್ಕು ದಿವಸಗಳ ಗ್ರಂಥಾಲಯದ ಸಮಯ/ಮನೆಗೆಲಸ) ಪುಸ್ತಕ/ತರಬೇತಿ ಸರಿಯಾದ ಸಮಯದಲ್ಲಿ ಮುಗಿಯುವಂತೆ, ಗುರುವಾರ ಮತ್ತು ಶುಕ್ರವಾರ ಹೆಚ್ಚು ಒತ್ತಡವಿರದಂತೆ.
2. ಆದುದರಿಂದ ನಿಮ್ಮ ಮೊದಲನೆಯ ದಿವಸವನ್ನು (ಸೋಮವಾರವನ್ನು) ಈ ರೀತಿಯಾಗಿ ಉಪಯೋಗಿಸಬೇಕೆಂದು ನಾನು ಸಲಹೆ ನೀಡುತ್ತೇನೆ:
    a. ಪಾಠ 1: "ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ". "ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು" ಕುರಿತು ಮಾರ್ಗದರ್ಶಿಸಿರಿ. ವಿದ್ಯಾರ್ಥಿಗಳು ಸಣ್ಣ ಗುಂಪುಗಳಾಗಿ ಚದುರಿ ಓದಲು ಪ್ರಾರಂಭಿಸಲಿ.
    b. ಪಾಠ 2: ವಿದ್ಯಾರ್ಥಿಗಳು ಸಣ್ಣ ಗುಂಪುಗಳಲ್ಲಿ "ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು" ಎಂಬುದರ ಕುರಿತು ಚರ್ಚಿಸಲಿ.
    c. ಪಾಠ 3: ಅಧ್ಯಯನ 1 ಮತ್ತು 2 ನ್ನು ತರಗತಿಯಲ್ಲಿ ಮುಗಿಸಿರಿ (ಹೆಚ್ಚು ಸಮಯವನ್ನು ವ್ಯಯ ಮಾಡಬೇಡಿರಿ).
    d. ಪಾಠ 4: ಅಧ್ಯಯನ 3 ಮತ್ತು 4 ನ್ನು ತರಗತಿಯಲ್ಲಿ ಮುಗಿಸಿರಿ (ಹೆಚ್ಚು ಸಮಯವನ್ನು ವ್ಯಯ ಮಾಡಬೇಡಿರಿ).
    e. ಗ್ರಂಥಾಲಯದ ಸಮಯ/ಮನೆಗೆಲಸ:
        - ವಿದ್ಯಾರ್ಥಿಗಳು "ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು" ಭಾಗವನ್ನು ಮುಗಿಸುತ್ತಾರೆ.
        - ವಿದ್ಯಾರ್ಥಿಗಳು ಅಧ್ಯಯನ 1 ಮತ್ತು 2 ನ್ನು ಮುಗಿಸುತ್ತಾರೆ.
        - ಸಮಯವಿದ್ದಲ್ಲಿ ವಿದ್ಯಾರ್ಥಿಗಳು "ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ" ಭಾಗವನ್ನು ಓದಲಿ.
    f. ಮರುದಿನ ಮುಂಜಾನೆ (ಮೊದಲನೆಯ ಪಾಠದ ಅರ್ಧವನ್ನು ಮಾತ್ರ ಇದಕ್ಕಾಗಿ ಉಪಯೋಗಿಸಿ ಮತ್ತು ಸಮಯವನ್ನು ವ್ಯರ್ಥಮಾಡಬೇಡಿರಿ.):
        - ಎಲ್ಲಾ ವಿದ್ಯಾರ್ಥಿಗಳು 'ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು' ಭಾಗವನ್ನು ಪೂರ್ತಿಗೊಳಿಸಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಿರಿ.

- ವಿದ್ಯಾರ್ಥಿಗಳು ಪ್ರಶ್ನೆಗಳು 1–3 ನ್ನು ಮುಗಿಸಿದ್ದಾರೋ ಎಂದು ಬೇಗನೇ ಪರಿಶೀಲಿಸಿರಿ.
- ಪ್ರಶ್ನೆ 4 ಕ್ಕೆ ವಿದ್ಯಾರ್ಥಿಗಳು ಕಂಡುಕೊಂಡಿರುವ ಉತ್ತರವನ್ನು ಓದಿರಿ.

- ವಿದ್ಯಾರ್ಥಿಗಳು ಅಧ್ಯಯನ 1–4 ನ್ನು ಪೂರ್ತಿಗೊಳಿಸಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಿರಿ.

## ಗ್ರಂಥಾಲಯದ ಸಮಯ/ಮನೆಗೆಲಸದ ಕುರಿತು ಸಲಹೆಗಳು – ಸೋಮವಾರ (ಈ ವಿಷಯದ ಮೊದಲನೆಯ ದಿನ)

1. 'ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು' ಭಾಗವನ್ನು ಮುಗಿಸಿರಿ.
2. ಅಧ್ಯಯನ 1–4 ನ್ನು ಮುಗಿಸಿರಿ.
3. ನಿಮಗೆ ಸಮಯವಿದ್ದಲ್ಲಿ: 'ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವುದು ಭಾಗದ ಉತ್ತರಗಳು' ಎಂಬುದನ್ನು ಓದಿರಿ.
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ಒಂದು ವೇದಭಾಗವನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನವನ್ನು ಸಿದ್ಧಪಡಿಸಿರಿ.

# 'ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನ'ಗಳನ್ನು ಹೇಗೆ ಉಪಯೋಗಿಸುವದು

ಬಹುತೇಕ ಅಧ್ಯಯನಗಳಲ್ಲಿ ನಾನು ಸತ್ಯವೇದ ಅಧ್ಯಯನ ಅಥವಾ ಪ್ರಸಂಗ ಅಥವಾ ಧ್ಯಾನಕ್ಕಾಗಿ ಒಂದು ಅಥವಾ ಹೆಚ್ಚು ವಿಷಯಗಳ ಕುರಿತು ಸಲಹೆಗಳನ್ನು ಸೂಚಿಸಿದ್ದೇನೆ. ವಿದ್ಯಾರ್ಥಿಗಳು ಸತ್ಯವೇದದ ಭಾಗಗಳ ತಮ್ಮ ಅಧ್ಯಯನವನ್ನು ನಿಜಜೀವನಕ್ಕೆ ಅಳವಡಿಸಿಕೊಳ್ಳಲು ಕಲಿಯುವದು ಬಹಳ ಪ್ರಾಮುಖ್ಯವಾಗಿದೆ. ಆ ಕಾರಣದಿಂದಾಗಿ ನಾನು ಈ ವಿಭಾಗವನ್ನು ಅಧ್ಯಯನಗಳಲ್ಲಿ ಸೇರಿಸಿದ್ದೇನೆ.

ಆದರೆ ಅವರ ಶಿಕ್ಷಕರಾಗಿ ನೀವು ಎಲ್ಲಾ ವಿದ್ಯಾರ್ಥಿಗಳು ಈ ಎಲ್ಲಾ ಸತ್ಯವೇದ ಅಧ್ಯಯನ ಅಥವಾ ಪ್ರಸಂಗ ಅಥವಾ ಧ್ಯಾನವನ್ನು ಮಾಡಬೇಕೆಂದು ಹೇಳಬೇಡಿರಿ. ಅದಕ್ಕೆ ಸಮಯ ಸಾಲದು. ಸಮಯದ ಅಭಾವವನ್ನು ಹೊರತುಪಡಿಸಿ, ಕೆಲವು ವಿದ್ಯಾರ್ಥಿಗಳಿಗೆ ಈ ರೀತಿಯ ನಿಬಂಧಗಳು ಕಷ್ಟಕರವಾಗಿ ತೋರಬಹುದು. ಆದಕಾರಣ ನೀವು ನಿಮ್ಮ ವಿವೇಚನೆಯನ್ನು ಉಪಯೋಗಿಸಿರಿ. ಜಾಣರಾದ ಮತ್ತು ವೇಗವಾಗಿ ಕಲಿಯುವ ವಿದ್ಯಾರ್ಥಿಗಳು ಅನೇಕ ಸಂಗತಿಗಳನ್ನು ಮಾಡಲು ಶಕ್ತರಾಗಿರುತ್ತಾರೆ. ನಿಧಾನವಾಗಿ ಕಲಿಯುವ ವಿದ್ಯಾರ್ಥಿಗಳು ಒಂದು ಅಥವಾ ಎರಡು ನಿಬಂಧಗಳನ್ನು ಮಾತ್ರ ಮಾಡಲು ಸಾಧ್ಯವಾಗಬಹುದು.

ಆದರೆ ಈ ಕಾರ್ಯವನ್ನು ಅಲಕ್ಷಿಸಬೇಡಿರಿ. ಬದಲಾಗಿ ನೀವು ನಿಮ್ಮ ವಿದ್ಯಾರ್ಥಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಸತ್ಯವೇದ ಅಧ್ಯಯನ, ಪ್ರಸಂಗ, ಧ್ಯಾನಗಳನ್ನು ಮಾಡಲು ಪ್ರೋತ್ಸಾಹಿಸಿರಿ. ಅದಲ್ಲದೆ ಮುಂದೆ ಸೇವೆಗೆ ಹೋಗುವಾಗಲೂ ಈ ಸಂಪನ್ಮೂಲಗಳನ್ನು ಉಪಯೋಗಿಸುವದನ್ನು ಮರೆಯಬೇಡಿರಿ ಎಂದು ಸಹ ನಿಮ್ಮ ವಿದ್ಯಾರ್ಥಿಗಳಿಗೆ ನೀವು ಹೇಳಿರಿ. ಅವರು ಭವಿಷ್ಯತ್ತಿನಲ್ಲಿ ಉಪದೇಶಿಸುವಾಗ ಮತ್ತು ಬೋಧಿಸುವಾಗ ಈ ಸಂಪನ್ಮೂಲಗಳಿಗೆ (ಈ ಪಠ್ಯಪುಸ್ತಕದಲ್ಲಿರುವ ಮಾಹಿತಿಗಳಿಗೆ) ಹಿಂತಿರುಗುವ ಅನೇಕ ಸನ್ನಿವೇಶಗಳು ಬರುತ್ತವೆ ಎಂದು ನಾನು ಮನದಟ್ಟುಮಾಡಿಕೊಂಡಿದ್ದೇನೆ.

# “ಪರಿಚಯ...” ಮತ್ತು “ಓದುವದು...” ಎಂಬ ಭಾಗಗಳ ಯೋಜನೆ

## ಇಬ್ರಿಯರಿಗೆ ಬರೆದ ಪತ್ರಿಕೆಯ ಪರಿಚಯ

1. ಈ ಪರಿಚಯದ ಮೇಲೆ ಹೆಚ್ಚು ಸಮಯವನ್ನು ಕಳೆಯಬೇಡಿರಿ. ಮೊದಲನೆಯ ಪಾಠದ ಅರ್ಧ ಭಾಗ ಸಾಕು. ಆದರೆ ಅವಶ್ಯವಿರುವ ಅಂಶಗಳನ್ನು ಅರಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಕಷ್ಟು ಸಮಯವನ್ನು ನೀಡಿರಿ.
2. ವಿದ್ಯಾರ್ಥಿಗಳು ಎಲ್ಲಾ ವಿವರಗಳನ್ನು ಬಾಯಿಪಾಠಮಾಡಬೇಕೆಂದು ಹೇಳಬೇಡಿರಿ. ಅವರು ಈ ಪುಸ್ತಕದ ಸಾಮಾನ್ಯ ಹಿನ್ನೆಲೆಯಾಗಿ ತಮ್ಮ ಅಧ್ಯಯನಕ್ಕೆ ಬೇಕಾಗುವ ಕೆಲವು ಸಂಗತಿಗಳನ್ನು ಕಲಿತರೆ ಅಷ್ಟೇ ಸಾಕು. ಅವರು ನಂತರ ಈ ಪಾಠಕ್ಕೆ ಮತ್ತೆ ಹಿಂತಿರುಗಬಹುದು, ಬಹುಶಃ ಈ ತರಬೇತಿಯ ಅಂತ್ಯದಲ್ಲಿ.
3. ನೀವು ವಿದ್ಯಾರ್ಥಿಗಳೊಟ್ಟಿಗೆ ಸಂಭಾಷಿಸುತ್ತಿರುವಾಗಲೇ ಇದನ್ನು ಮುಗಿಸಲು ಪ್ರಯತ್ನಿಸಿ. ಇದರಿಂದಾಗಿ ವಿದ್ಯಾರ್ಥಿಗಳು ನಿಮ್ಮೊಟ್ಟಿಗಿನ ಈ ಸಂಭಾಷಣೆಯಲ್ಲಿ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಿ. ಉಪನ್ಯಾಸ ನೀಡುವದು ಅಥವಾ “ಬೋಧಿಸುವದು” ಬೇಡ!
4. ನೀವು ವಿದ್ಯಾರ್ಥಿಗಳ ಕಲಿಯುವಿಕೆಯನ್ನು ಅವರಿಗೆ ಸಂಪೂರ್ಣ ಪರಿಚಯವನ್ನು ಗ್ರಂಥಾಲಯದ ಸಮಯದಲ್ಲಿ ಮತ್ತೊಮ್ಮೆ ಓದುವದರ ಮೂಲಕ ಉತ್ತೇಜಿಸಬಹುದು.

## ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಓದುವದು

1. ಮೊದಲಿನ ಮೂರು ಪ್ರಶ್ನೆಗಳ ಉತ್ತರಗಳನ್ನು ‘ಬೋಧಿಸಬೇಡಿರಿ’! ಅದು ಸಮಯವನ್ನು ವ್ಯರ್ಥಗೊಳಿಸುವದಾಗಿದೆ, ಯಾಕೆಂದರೆ ಇದರಲ್ಲಿನ ಅನೇಕ ಅಂಶಗಳನ್ನು ಹೆಚ್ಚು ಕ್ರಮಬದ್ಧವಾಗಿ ಮುಂದಿನ ಅಧ್ಯಯನಗಳಲ್ಲಿ ವಿವರಿಸಲಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತಮವಾಗಿ ಬರೆಯಲು ಪ್ರಯತ್ನಿಸಿದ್ದಾರೋ ಇಲ್ಲವೋ ಅಷ್ಟು ಮಾತ್ರ ಪರೀಕ್ಷಿಸಿರಿ. ಎಲ್ಲಾ ಅಂಶಗಳನ್ನು ಓದುವ *ಅವಶ್ಯಕತೆಯಿಲ್ಲ!*
2. ಬದಲಾಗಿ ನೀವು ನಾಲ್ಕನೆಯ ಪ್ರಶ್ನೆಯ ಮೇಲೆ ಹೆಚ್ಚು ಸಮಯವನ್ನು ಕಳೆಯಬಹುದು. ತರಗತಿಯಲ್ಲಿ ವಿದ್ಯಾರ್ಥಿಗಳೊಟ್ಟಿಗೆ ಉತ್ತರಗಳನ್ನು ಒಟ್ಟಾಗಿ ಓದಿರಿ. ಏನಾದರೂ ತಪ್ಪು ತಿಳುವಳಿಕೆಯಿದ್ದಲ್ಲಿ ಸ್ಪಷ್ಟಪಡಿಸಿರಿ.

# ಎರಡನೆಯ ದಿನದ ಯೋಜನೆ

## ಶಿಕ್ಷಕರಿಗಾಗಿ ಯೋಜನಾ ಸಲಹೆಗಳು – ಮಂಗಳವಾರ (ಈ ವಿಷಯದ ಎರಡನೆಯ ದಿನ)

ನೀವು ಎರಡನೆಯ ದಿನವನ್ನು (ಮಂಗಳವಾರ) ಹೀಗೆ ಉಪಯೋಗಿಸಬೇಕೆಂದು ನಾನು ನಿಮಗೆ ಸಲಹೆಯನ್ನು ನೀಡುತ್ತೇನೆ:

1. ಪಾಠ 1 ರ ಪ್ರಾರಂಭದ ಅರ್ಧಭಾಗ: ವಿದ್ಯಾರ್ಥಿಗಳು ಹಿಂದಿನ ದಿನದ ಗ್ರಂಥಾಲಯ ಸಮಯ/ಮನೆಗೆಲಸವನ್ನು ಮಾಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.
2. ಪಾಠ 1 ರ ಉಳಿದ ಅರ್ಧಭಾಗ: ಅಧ್ಯಯನ 5 ನ್ನು ತರಗತಿಯಲ್ಲಿ ಮುಗಿಸಿರಿ (ಅವಶ್ಯವಿದ್ದಲ್ಲಿ, ವಿದ್ಯಾರ್ಥಿಗಳು ಗ್ರಂಥಾಲಯದ ಸಮಯದಲ್ಲಿ ಅದನ್ನು ಪೂರ್ತಿಗೊಳಿಸಲಿ).
3. ಪಾಠ 2: ಅಧ್ಯಯನ 6 ನ್ನು ತರಗತಿಯಲ್ಲಿ ಮುಗಿಸಿರಿ.
4. ಪಾಠ 3: ಅಧ್ಯಯನ 7 ನ್ನು ತರಗತಿಯಲ್ಲಿ ಮುಗಿಸಿರಿ.
5. ಪಾಠ 4:
    a. ತರಗತಿಯಲ್ಲಿ ಅಧ್ಯಯನ 8 ನ್ನು ಮುಗಿಸಿರಿ
    b. ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಸಮಯ/ಮನೆಗೆಲಸದ ಕುರಿತು ಸ್ಪಷ್ಟವಾದ ಸೂಚನೆಗಳನ್ನು ನೀಡಿರಿ.

## ಗ್ರಂಥಾಲಯದ ಸಮಯ/ಮನೆಗೆಲಸದ ಸಲಹೆಗಳು – ಮಂಗಳವಾರ (ಈ ವಿಷಯದ ಎರಡನೆಯ ದಿನ)

1. ಈ ದಿನ ನೀವು ಮಾಡಿದ ಅಧ್ಯಯನದ ಕಾರ್ಯಗಳನ್ನು ಪೂರ್ತಿಗೊಳಿಸಿರಿ (5–8).
2. ಹಿಂದಿನ ಅಧ್ಯಯನಗಳ ಕುರಿತು ನೀವು ಬರೆದುಕೊಂಡಿರುವ ಅಂಶಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ): ಅಧ್ಯಯನ 9 ನ್ನು ಮುಗಿಸಿರಿ ('ನಮ್ಮ ಅಪ್ರಬುದ್ಧತೆ ಮತ್ತು ದೇವರ ನಂಬಿಗಸ್ತಿಕೆ').
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ಒಂದು ವೇದಭಾಗವನ್ನು ಆದರಿಸಿ ಒಂದು ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನವನ್ನು ಸಿದ್ಧಪಡಿಸಿರಿ.

# ಮೂರನೆಯ ದಿನದ ಯೋಜನೆ

## ಶಿಕ್ಷಕರಿಗಾಗಿ ಯೋಜನಾ ಸಲಹೆಗಳು – ಬುಧವಾರ (ಈ ವಿಷಯದ ಮೂರನೆಯ ದಿನ)

ಎರಡನೆಯ ದಿನವನ್ನು (ಬುಧವಾರ) ಹೀಗೆ ಉಪಯೋಗಿಸಬೇಕೆಂದು ನಾನು ನಿಮಗೆ ಸಲಹೆಯನ್ನು ನೀಡುತ್ತೇನೆ:

1. ಪಾಠ 1 ರ ಪ್ರಾರಂಭದ ಅರ್ಧಭಾಗ: ವಿದ್ಯಾರ್ಥಿಗಳು ಹಿಂದಿನ ದಿನದ ಗ್ರಂಥಾಲಯ ಸಮಯ/ಮನೆಗೆಲಸವನ್ನು ಮಾಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.
2. ಪಾಠ 1 ರ ಉಳಿದ ಅರ್ಧಭಾಗ: ಅಧ್ಯಯನ 10 ನ್ನು ತರಗತಿಯಲ್ಲಿ ಮುಗಿಸಿರಿ (ಅವಶ್ಯವಿದ್ದಲ್ಲಿ, ವಿದ್ಯಾರ್ಥಿಗಳು ಗ್ರಂಥಾಲಯದ ಸಮಯದಲ್ಲಿ ಪೂರ್ತಿಗೊಳಿಸಲಿ)
3. ಪಾಠ 2: ಅಧ್ಯಯನ 11 ನ್ನು ತರಗತಿಯಲ್ಲಿ ಮುಗಿಸಿರಿ.
4. ಪಾಠ 3: ಅಧ್ಯಯನ 12 ನ್ನು ತರಗತಿಯಲ್ಲಿ ಮುಗಿಸಿರಿ.
5. ಪಾಠ 4:
    a. ತರಗತಿಯಲ್ಲಿ ಅಧ್ಯಯನ 13 ನ್ನು ಮುಗಿಸಿರಿ
    b. ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಸಮಯ/ಮನೆಗೆಲಸದ ಕುರಿತು ಸ್ಪಷ್ಟವಾದ ಸೂಚನೆಗಳನ್ನು ನೀಡಿರಿ.

## ಗ್ರಂಥಾಲಯದ ಸಮಯ/ಮನೆಗೆಲಸದ ಸಲಹೆಗಳು – ಬುಧವಾರ (ಈ ವಿಷಯದ ಮೂರನೆಯ ದಿನ)

1. ಈ ದಿನ ನೀವು ಮಾಡಿದ ಅಧ್ಯಯನದ ಕಾರ್ಯಗಳನ್ನು ಪೂರ್ತಿಗೊಳಿಸಿರಿ (10–13).
2. ಹಿಂದಿನ ಅಧ್ಯಯನಗಳ ಕುರಿತು ನೀವು ಬರೆದುಕೊಂಡಿರುವ ಅಂಶಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ): ಅಧ್ಯಯನ 14 ನ್ನು ಮುಗಿಸಿರಿ ('ನಮ್ಮ ನಿರೀಕ್ಷೆಯ ಅರಿಕೆಯನ್ನು ನಿಶ್ಚಂಚಲದಿಂದ ಬಿಗಿಯಾಗಿ ಹಿಡಿಯೋಣ').
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ಒಂದು ವೇದಭಾಗವನ್ನು ಆದರಿಸಿ ಒಂದು ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನವನ್ನು ಸಿದ್ಧಪಡಿಸಿರಿ.

# ನಾಲ್ಕನೆಯ ದಿನದ ಯೋಜನೆ

## ಶಿಕ್ಷಕರಿಗಾಗಿ ಯೋಜನಾ ಸಲಹೆಗಳು – ಗುರುವಾರ (ಈ ವಿಷಯದ ನಾಲ್ಕನೆಯ ದಿನ)

ನಾಲ್ಕನೆಯ ದಿನವನ್ನು (ಗುರುವಾರ) ಹೀಗೆ ಉಪಯೋಗಿಸಬೇಕೆಂದು ನಾನು ನಿಮಗೆ ಸಲಹೆಯನ್ನು ನೀಡುತ್ತೇನೆ:

1. ಪಾಠ 1 ರ ಪ್ರಾರಂಭದ ಅರ್ಧಭಾಗ: ವಿದ್ಯಾರ್ಥಿಗಳು ಹಿಂದಿನ ದಿನದ ಗ್ರಂಥಾಲಯ ಸಮಯ/ಮನೆಗೆಲಸವನ್ನು ಮಾಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.
2. ಪಾಠ 1 ರ ಉಳಿದ ಅರ್ಧಭಾಗ: ಅಧ್ಯಯನ 15 ನ್ನು ತರಗತಿಯಲ್ಲಿ ಮುಗಿಸಿರಿ (ಅವಶ್ಯವಿದ್ದಲ್ಲಿ, ವಿದ್ಯಾರ್ಥಿಗಳು ಗ್ರಂಥಾಲಯದ ಸಮಯದಲ್ಲಿ ಪೂರ್ತಿಗೊಳಿಸಲಿ)
3. ಪಾಠ 2: ಅಧ್ಯಯನ 16 ನ್ನು ತರಗತಿಯಲ್ಲಿ ಮುಗಿಸಿರಿ.
4. ಪಾಠ 2: ಅಧ್ಯಯನ 17 ನ್ನು ತರಗತಿಯಲ್ಲಿ ಮುಗಿಸಿರಿ.
5. ಪಾಠ 2: ಅಧ್ಯಯನ 18 ನ್ನು ತರಗತಿಯಲ್ಲಿ ಮುಗಿಸಿರಿ.
6. ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಸಮಯ/ಮನೆಗೆಲಸದ ಕುರಿತು ಸ್ಪಷ್ಟವಾದ ಸೂಚನೆಗಳನ್ನು ನೀಡಿರಿ.

## ಗ್ರಂಥಾಲಯದ ಸಮಯ/ಮನೆಗೆಲಸದ ಸಲಹೆಗಳು _ ಗುರುವಾರ (ಈ ವಿಷಯದ ನಾಲ್ಕನೆಯ ದಿನ)

1. ಈ ದಿನ ನೀವು ಮಾಡಿದ ಅಧ್ಯಯನದ ಕಾರ್ಯಗಳನ್ನು ಪೂರ್ತಿಗೊಳಿಸಿರಿ (15–18).
2. ಹಿಂದಿನ ಅಧ್ಯಯನಗಳ ಕುರಿತು ನೀವು ಬರೆದುಕೊಂಡಿರುವ ಅಂಶಗಳನ್ನು ಓದಿರಿ.
3. ಸಣ್ಣ ಗುಂಪುಗಳಲ್ಲಿ (ಅಥವಾ ವೈಯಕ್ತಿಕವಾಗಿ): ಅಧ್ಯಯನ 19 ನ್ನು ಮುಗಿಸಿರಿ ('ಎರಡು ಬೆಟ್ಟಗಳು').
4. ನಿಮಗೆ ಸಮಯವಿದ್ದಲ್ಲಿ: ನೀವು ಈಗ ತಾನೇ ಅಧ್ಯಯನ ಮಾಡಿದ ಒಂದು ವೇದಭಾಗವನ್ನು ಆದರಿಸಿ ಒಂದು ಸತ್ಯವೇದ ಅಧ್ಯಯನ/ಪ್ರಸಂಗ/ಧ್ಯಾನವನ್ನು ಸಿದ್ಧಪಡಿಸಿರಿ.

# ಐದನೆಯ ದಿನದ ಯೋಜನೆ

## ಶಿಕ್ಷಕರಿಗಾಗಿ ಯೋಜನಾ ಸಲಹೆಗಳು – ಶುಕ್ರವಾರ (ಈ ವಿಷಯದ ಐದನೆಯ ದಿನ)

ಐದನೆಯ ದಿನವನ್ನು (ಶುಕ್ರವಾರ) ಹೀಗೆ ಉಪಯೋಗಿಸಬೇಕೆಂದು ನಾನು ನಿಮಗೆ ಸಲಹೆಯನ್ನು ನೀಡುತ್ತೇನೆ:

1. ಪಾಠ 1 ರ ಪ್ರಾರಂಭದ ಅರ್ಧಭಾಗ: ವಿದ್ಯಾರ್ಥಿಗಳು ಹಿಂದಿನ ದಿನದ ಗ್ರಂಥಾಲಯ ಸಮಯ/ಮನೆಗೆಲಸವನ್ನು ಮಾಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.
2. ಪಾಠ 1 ಮತ್ತು 2 ರ ಉಳಿದ ಅರ್ಧಭಾಗ: ಅಧ್ಯಯನ 20–21 ನ್ನು ತರಗತಿಯಲ್ಲಿ ಮುಗಿಸಿರಿ.
3. ಪಾಠ 3 ಮತ್ತು 4: ಪರೀಕ್ಷೆಯ ಪ್ರಶ್ನೆ ಪತ್ರಿಕೆ

## ಪ್ರಶ್ನೆ ಪತ್ರಿಕೆ

ಪ್ರಶ್ನೆ ಪತ್ರಿಕೆಯ ಮುಖ್ಯ ಉದ್ದೇಶವು ವಿದ್ಯಾರ್ಥಿಗಳಿಗೆ ಪುನರಾವಲೋಕನ ಮಾಡಲು ಮತ್ತು ಸಂಕ್ಷಿಪ್ತಗೊಳಿಸಲು ಸಹಾಯಮಾಡುವದಾಗಿದೆ. ಹಾಗಿರುವುದರಿಂದ ಅವರಿಗೆ ತಮ್ಮ ಎಲ್ಲಾ ಸಂಪನ್ಮೂಲಗಳನ್ನು – ಅಂದರೆ ಅವರ ಸತ್ಯವೇದ, ಪಠ್ಯಪುಸ್ತಕ ಮತ್ತು ನೋಟ್ಸ್‌ಗಳನ್ನು ಉಪಯೋಗಿಸಲು ಅನುಮತಿಸಬೇಕು.

ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವಾಗ ಸಾಧ್ಯವಾದಷ್ಟು ತಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಬೇಕು. ನಕಲು ಮಾಡುವದನ್ನು ಪ್ರೋತ್ಸಾಹಿಸಬೇಡಿರಿ. ಅವರು ಕೇವಲ ಸತ್ಯವೇದದಿಂದ ವಚನಗಳನ್ನು ಇದ್ದಂತೆಯೇ ಉಲ್ಲೇಖಿಸುವದು ಬೇಡ. ಅವರು ತಮ್ಮ ಪಠ್ಯಪುಸ್ತಕದಿಂದಾಗಲಿ ಅಥವಾ ತಮ್ಮ ನೋಟ್ಸ್‌ಗಳಿಂದಾಗಲಿ ವಾಕ್ಯಗಳನ್ನು ನಕಲು ಮಾಡುವದು ಬೇಡ.

ವಿದ್ಯಾರ್ಥಿಗಳು ಬಯಸಿದ್ದಲ್ಲಿ (ಅಥವಾ ಅವಶ್ಯವಿದ್ದಲ್ಲಿ), ಅವರಿಗೆ ಇಬ್ಬಿಬ್ಬರಾಗಿ ಅಥವಾ ಮೂರು ಜನರ ಗುಂಪಿನಲ್ಲಿ ಕಾರ್ಯಮಾಡಲು ಅನುಮತಿಸಬೇಕು. ಇದು ಬಲಹೀನ ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಮತ್ತು ಹೆಚ್ಚು ಕಲಿಯಲು ಸಹಾಯಕವಾಗುತ್ತದೆ.

ಶಿಕ್ಷಕರು ಬಯಸಿದ್ದಲ್ಲಿ, ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಮಾಡುವ ಸಾಧನವಾಗಿ ಪ್ರಶ್ನೆ ಪತ್ರಿಕೆಯನ್ನು ಉಪಯೋಗಿಸಬಹುದು. ಆದರೆ ಮೌಲ್ಯಮಾಪನ ಮಾಡುವುದೇ ಪ್ರಶ್ನೆ ಪತ್ರಿಕೆಯ ಮುಖ್ಯ ಉದ್ದೇಶವಲ್ಲ.

# ಪ್ರಶ್ನೆ ಪತ್ರಿಕೆ

## ಸೂಚನೆಗಳು

1. ನೀವು ನಿಮ್ಮ ಸತ್ಯವೇದ, ಪಠ್ಯಪುಸ್ತಕ ಮತ್ತು ನೋಟ್ಸ್‌ಗಳನ್ನು ಉಪಯೋಗಿಸಬಹುದು.
2. ನೀವು ಉತ್ತರಗಳನ್ನು ಬರೆಯುವಾಗ ನಿಮ್ಮ ಸ್ವಂತ ವಾಕ್ಯಗಳನ್ನು ಉಪಯೋಗಿಸಿರಿ. ಪಠ್ಯಪುಸ್ತಕದಿಂದ ನಕಲು ಮಾಡಬೇಡಿರಿ. ಸತ್ಯವೇದಲ್ಲಿದ್ದಂತೆಯೇ ವಚನಗಳನ್ನು ಉಲ್ಲೇಖಿಸಬೇಡಿರಿ. ಅದನ್ನು ವಿವರಿಸಿರಿ.
3. ಸಮಯ: ಎರಡು ತಾಸು (ಅಥವಾ ನಿಮ್ಮ ಶಿಕ್ಷಕರ ಸೂಚನೆಗೆ ಅನುಸಾರವಾಗಿ)
4. ಶ್ರೇಣಿಯನ್ನು ನೀಡಲು/ಮೌಲ್ಯಮಾಪನ ಮಾಡಲು ನಿಮ್ಮ ಶಿಕ್ಷಕರಿಗೆ ನಿಮ್ಮ ಉತ್ತರ ಪತ್ರಿಕೆಯನ್ನು ನೀಡಿರಿ.

## ಪ್ರಶ್ನೆಗಳು

1. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಕಂಡುಬರುವ 'ಯೇಸುವಿನ ಸಿದ್ಧಾಂತವನ್ನು' ಸಾರಾಂಶಗೊಳಿಸಿರಿ.
2. ಇಬ್ರಿಯರಿಗೆ ಬರೆದ ಪತ್ರಿಕೆಯ ಮೂಲ ಓದುಗರ ಹಿನ್ನೆಲೆ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಅದರ ಸಂದೇಶವನ್ನು ಹೇಗೆ ಅಳವಡಿಸಲಾಗಿದೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡಿರಿ.
3. ಕಳೆದ ವಾರದಲ್ಲಿ ಇಬ್ರಿಯರಿಗೆ ಬರೆದ ಪತ್ರಿಕೆಯ ಅಧ್ಯಯನದಿಂದ ನೀವು ಕಲಿತ ಅತೀ ಪ್ರಾಮುಖ್ಯವಾದ ಸಂಗತಿ ಯಾವುದು? ವಿವರಿಸಿರಿ!
4. ಇಂದು ದಕ್ಷಿಣ ಭಾರತದಲ್ಲಿರುವ ಸಭೆಗೆ ಅವಶ್ಯವಿರುವ ಯಾವ ಪ್ರಮುಖ ಪಾಠಗಳು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿವೆ ಪಟ್ಟಿ ಮಾಡಿರಿ. ನೀವು ಈ ಆಯ್ಕೆಯನ್ನು ಏಕೆ ಮಾಡಿದ್ದೀರಿ ಎಂಬುದನ್ನು ವಿವರಿಸಿರಿ!
5. ನಿಮಗೆ ಸಮಯವಿದ್ದಲ್ಲಿ: ಇಂದು ದಕ್ಷಿಣ ಭಾರತದಲ್ಲಿರುವ ಸಭೆಗಳಿಗೆ ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿರುವ ಅಪಾಯಗಳು ಯಾವವು? ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ: ಇಂದು ದಕ್ಷಿಣ ಭಾರತದಲ್ಲಿರುವ ಒಬ್ಬ ಸತ್ಯವೇದ ಬೋಧಕನು ಇಬ್ರಿಯರಿಗೆ ಬರೆದ ಪತ್ರಿಕೆಯ ಪಠ್ಯವನ್ನು ಹೇಗೆ ದುರುಪಯೋಗಪಡಿಸಿಕೊಳ್ಳಬಹುದು?

# ಪದಸೂಚಿ

ಆರೋನ: 34, 35, 89, 99, 100, 108

ಹೇಬೇಲ ಮತ್ತು ಕಾಯಿನ: 46, 120

ಅಬ್ರಾಮ/ಅಬ್ರಹಾಮ: 28, 46, 47, 80, 90, 97–100, 106, 120–123

ದೇವದೂತರು: 16–18, 24, 72–75, 77, 80, 132, 133

ಧರ್ಮಭ್ರಷ್ಟತೆ: 96, 117

ಮಂಜೂಷ: 70, 90

ನಂಬಿಕೆಯ ಕರ್ತೃ/ಜನಕ: 126

ರಕ್ಷಣೆಯ ಕರ್ತೃ/ಜನಕ: 20, 65, 77–78

(ವಿಶ್ವಾಸಿಗಳ) ನಡತೆ/ಜೀವನಶೈಲಿ: 43, 117

ರಕ್ತ: 37, 38, 68, 80, 90, 105, 108, 110, 111, 117, 120, 133, 137

ಸಹೋದರ/ಸಹೋದರ ಪ್ರೀತಿ: 43, 56, 67, 79, 82, 84, 87, 134, 135

ಕ್ರೈಸ್ತ ನಂಬಿಕೆ: 10, 63

ಸಭೆಯ ಯುಗ: 112, 114, 115

ಸಭಾನಾಯಕರು/ಹಿರಿಯರು: 67, 136, 137, 138

ಸಭಾಪಾಲಕರು: 56, 58, 59, 97, 138

ಪರದೆ: 90–91

ಮರಣ: 11, 22, 37, 63, 64, 68, 76, 80, 85, 103, 105, 109–117, 120, 123, 126, 137, 138

ಸೈತಾನ: 22, 23, 65, 80, 96

ಕಷ್ಟಗಳು/ಶೋಧನೆಗಳು: 50, 52, 103, 123, 127, 128, 130, 136, 137/ 10, 26, 50, 62, 63, 84, 87, 103, 127

ಶಿಸ್ತು: 50, 52, 127–129

ಹನೋಕ: 46, 120

ನಿತ್ಯತ್ವ: 11, 26, 75, 85, 94, 128, 136

ದೇವರ ಮನೆ: 83–85, 124

ಪರಲೋಕ: 28, 35, 40, 58, 82, 83, 87, 89, 95, 102, 103, 107, 109, 111, 112, 116, 117, 122, 126, 127, 128, 132, 133, 137

ಮಹಾಯಾಜಕ: 11, 22–24, 28, 29, 31, 36, 40, 65–68, 80, 83–82, 89, 90, 93, 101, 103, 107, 108, 112–116, 121, 126, 132, 133, 138

ಹಿಬ್ರೂ: 99, 114

ಪವಿತ್ರ: 41, 111, 134, 137

ನಿರೀಕ್ಷೆ: 31, 66, 82, 85, 94, 95, 97, 100

ಅತಿಥಿ ಸತ್ಕಾರ: 67, 135

ಬಾಧ್ಯತೆ: 40, 66, 95, 109, 110, 121

ನರಾವತಾರ: 17, 22, 80, 81, 90

ಯೆರುಸಲೇಮಿನ ದೇವಾಲಯ: 10, 23, 27, 63, 79, 90, 91, 102, 116

ಪರಲೋಕದ ದೇವಾಲಯ: 102, 103, 107, 112, 116, 132

ಯೆಹೂದಿ ನಂಬಿಕೆ: 10, 17, 63, 138

ದೇವರ ರಾಜ್ಯ: 58, 77, 88, 132, 134

ಧರ್ಮಶಾಸ್ತ್ರ: 34, 47, 69, 70, 75, 76, 100, 102, 104, 106, 110, 115, 123, 132

ಪ್ರೀತಿ: 17, 56, 66, 67, 96, 97, 103, 116, 119, 134

ಹಣದಾಸೆ: 67, 135

ಅಪ್ರಬುದ್ಧತೆ: 31, 93, 129

ಪ್ರಬುದ್ಧತೆ: 31, 50

ಮಧ್ಯವರ್ತಿ: 18, 112, 133

ರೂಪಕಾಲಂಕಾರ: 31, 38, 93, 110, 125, 129

ಮೋಶೆ: 13, 24, 37, 67, 74, 83, 84, 86, 88, 100, 103, 104, 106, 110, 117, 123

ಅತಿ ಪರಿಶುದ್ಧ ಸ್ಥಳ: 89, 90, 107, 116

ಬೆಟ್ಟ: 47, 70, 103, 106, 123, 132

ಹೊಸದಾದ ಒಡಂಬಡಿಕೆ: 103–109

ನೋಹ: 46, 106, 120

ವಿಧೇಯತೆ: 74, 87, 103

ಹಳೆಯದಾದ ಒಡಂಬಡಿಕೆ: 103, 104, 110

ಹಿಂಸೆ: 10, 11, 62, 63, 126, 135, 136

ತಾಳ್ಮೆ: 44, 66, 98, 117, 119, 121

ಯಾಜಕತ್ವ: 7, 11, 29, 33–35, 63, 68, 74, 91, 92, 99, 100, 107, 137

ಯೇಸುವಿನ ಯಾಜಕತ್ವ: 35, 74, 91, 92, 99, 100, 101

ವಾಗ್ದಾನ: 16, 24, 31, 35, 47, 66, 85, 88, 91, 97, 98, 100, 104, 105, 109, 118, 119, 121–123, 131, 134, 135

ವಾಗ್ದಾನ ದೇಶ: 47, 86, 121, 123

ಪ್ರವಾದಿ: 16, 20, 69, 72, 74, 79, 123

ದಂಗೆ: 26, 86, 87

ಸಬ್ಬತ್: 26

ರಕ್ಷಣೆ: 11, 17, 19, 22, 31, 66, 68, 70, 75, 76, 78, 80, 83, 84, 92, 94, 95, 96, 112, 114, 117, 119, 122, 125, 137

ಶುದ್ಧೀಕರಣ: 79, 115

ಸೆಪ್ಟುವಾಜಿಂಟ್: 16, 18, 114

ಸೇವಕ: 47, 72, 73, 84, 113, 123, 136

ಪಾಪ: 22, 28, 32, 37, 41, 44, 66, 68, 78, 80, 86, 87, 92, 94, 96, 101, 103–105, 107, 108, 115, 117, 125, 128, 138

ಪಾಪಿ: 28, 101

ಸಿನಾಯಿ: 13, 70, 103, 104, 106, 109, 132

ಮಗ: 16, 65, 69, 70, 77, 84, 93, 96, 97, 120, 121, 126

ದೇವದರ್ಶನ ಗುಡಾರ: 23, 37–39, 70, 90, 102, 107, 108, 116, 137

ಕೃಪಾಸನ: 29, 90, 91

ಆರಾಧನೆ: 26, 37, 63, 67, 73, 133, 134